
ಕನ್ನಡ ಛಂದಸ್ ಶಾಸ್ತ್ರ

(ಸಾರ ಸಂಗ್ರಹ)

ಪ್ರೊ. ಎಸ್.ಆರ್.ಮಳಗಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಕನ್ನಡ ಛಂದಸ್-ಶಾಸ್ತ್ರ

(ಸಾರಸಂಗ್ರಹ)

ಪ್ರೊ. ಎಸ್. ಆರ್. ಮಳಗಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

KANNADA CHANDAS-SHASTRA (Saara sangraha)
by : **Prof. S. R. Malagi**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 128 Price : Rs. **45=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತೈದು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಡಾ. ಮಧು ವೆಂಕಾರೆಡ್ಡಿ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಡಾ. ಕಮಲಾ ಹಂಪನಾ

ಸಮ್ಮೇಳನಾಧ್ಯಕ್ಷರು
೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಮೊದಲ ಮಾತು

ನನ್ನ ಸುಮಾರು ನಲವತ್ತು ವರ್ಷಗಳ ಅಧ್ಯಾಪನ ಕಾರ್ಯದಲ್ಲಿ ಕನ್ನಡ ಬಿ.ಎ. ಆನರ್ಸ್ ಹಾಗೂ ಎಂ.ಎ. ವಿದ್ಯಾರ್ಥಿಗಳಿಗಾಗಿ ಕನ್ನಡ ಸಾಹಿತ್ಯ ಹಾಗೂ ಬಗೆ ಬಗೆಯ ಶಾಸ್ತ್ರಗಳ ಬಗ್ಗೆ ಆಗಾಗ ಬರೆದಿಡುತ್ತಿದ್ದೆ. ಈ ಬರವಣಿಗೆಯ ಮುಖ್ಯ ಉದ್ದೇಶವೆಂದರೆ, ವಿದ್ಯಾರ್ಥಿಗಳಿಗೆ ಗಡುಚಾದ ವಿಷಯಗಳು ಸುಲಭವಾಗಿ ಅರ್ಥವಾಗಲೆಂಬುದು. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯದಲ್ಲಿಯ ಗದ್ಯ-ಪದ್ಯಗಳ ಚರಿತ್ರೆಯನ್ನು ರಚಿಸಿದೆ. ಶಾಸ್ತ್ರಗಳಲ್ಲಿ ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ, ಭಾಷಾಶಾಸ್ತ್ರ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ ಇತ್ಯಾದಿಗಳನ್ನು ಕುರಿತು ಬರೆದೆ. ನಾನು ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನಿಂದ ನಿವೃತ್ತನಾದ ಮೇಲೆ ಅನೇಕ ವಿದ್ಯಾರ್ಥಿಗಳು ನನ್ನ ಬಳಿಗೆ ಅಧ್ಯಯನಕ್ಕೋಸುಗ ಬರುತ್ತಿದ್ದರು. ಅವರಿಗೆ ವಿವಿಧ ವಿಷಯಗಳನ್ನು ಕುರಿತು ಪಾಠ ಹೇಳುವುದರ ಜೊತೆಗೆ ಅವುಗಳ ಬಗ್ಗೆ ನಾನು ಬರೆದಿಟ್ಟಿದ್ದ ವಿವರಣೆಗಳ ಲೇಖನಗಳನ್ನು ಕೊಡುತ್ತಿದ್ದೆ. ಇದರಿಂದ ವಿದ್ಯಾರ್ಥಿ ಸಮುದಾಯಗಳಿಗೆ ತುಂಬ ಪ್ರಯೋಜನವಾಗುತ್ತಿತ್ತು.

ಛಂದಸ್-ಶಾಸ್ತ್ರಕ್ಕೆ ಸಂಬಂಧಪಟ್ಟ ನನ್ನ ಲೇಖನಗಳನ್ನು ಸುಸಂಬದ್ಧ ರೀತಿಯಲ್ಲಿ ಹೊಂದಿಸಿ ಸಿದ್ಧಪಡಿಸಿದ ಕಿರುಪುಸ್ತಕವಿದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಪ್ರೊ. ಚಂದ್ರಶೇಖರ ಪಾಟೀಲರು ಬರಲಿರುವ ಎಪ್ಪತ್ತೆರಡನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆ ಮಾಡಲು ಎಪ್ಪತ್ತೆರಡು ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯೊಂದನ್ನು ಹಮ್ಮಿಕೊಂಡಿದ್ದಾರೆ. ಅವರ ಕೋರಿಕೆಯಂತೆ ಈ ಯೋಜನೆಗೆ ತಕ್ಕಂತೆ ನನ್ನ ಈ ಛಂದಸ್-ಶಾಸ್ತ್ರವನ್ನು ಅಳವಡಿಸಿ ಅವರ ಕೈಗಿತ್ತೆ. ಅವರು ಇದನ್ನು ಸಂತೋಷದಿಂದ ಸ್ವೀಕರಿಸಿದ್ದಕ್ಕೆ ಅವರಿಗೆ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕಿರುಪುಸ್ತಕವು ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾದೀತೆಂದು ನನ್ನ ನಂಬುಗೆ. ಛಂದಸ್-ಶಾಸ್ತ್ರದ ಸಾರ ಸಂಗ್ರಹವುಳ್ಳ ಇದು ಈ ವಿಷಯದ ಬಗೆಗೆ ಆಸಕ್ತರಾದವರಿಗೂ ಪ್ರಯೋಜನಕಾರಿಯಾದಲ್ಲಿ ನಾನು ಪಟ್ಟಶ್ರಮ ಸಾರ್ಥಕ.

ಒಂದು ಕಾಲಕ್ಕೆ ನನ್ನ ಲೇಖನ ಸಾಮಗ್ರಿಯನ್ನು ಬೆರಳಚ್ಚಿನ ರೂಪದಲ್ಲಿ ಸಿದ್ಧಪಡಿಸಿ, ಎಂ.ಸಿ.ಸಿ. ವಿದ್ಯಾರ್ಥಿಗಳಿಗೂ ನನ್ನ ವಿದ್ಯಾರ್ಥಿಗಳಿಗೂ ಒದಗಿಸಿಕೊಡುತ್ತಿದ್ದ ನನ್ನ ಮಿತ್ರ ದಿ. ಶ್ರೀ ಜಿ. ರಮೇಶ ಕಾಮತರ ಆತ್ಮಕ್ಕೂ ನನ್ನ ಹಾರ್ದಿಕ ಧನ್ಯವಾದಗಳನ್ನು ಅರ್ಪಿಸದಿರಲಾರೆ. ಜೊತೆಗೆ ಈ ಪುಸ್ತಕದ ಅಚ್ಚಿನ ಕರಡು ತಿದ್ದುವಲ್ಲಿ ಶ್ರಮವಹಿಸಿದ ಸಿಬ್ಬಂದಿ ವರ್ಗದ ಸದಸ್ಯರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಸ್.ಆರ್. ಮಳಗಿ

ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ : ೧

(ಅ) ಛಂದಸ್ಸಿನ ಪ್ರೌಢ ಅಧ್ಯಯನ

ಛಂದಸ್ಸಿನ ಮೂಲ ತತ್ತ್ವಗಳು

ಮುಖ್ಯಾಂಶಗಳು : ೧. ಛಂದಸ್ಸು ಪದದ ನಿಷ್ಪತ್ತಿ, ಉಗಮ ಇತ್ಯಾದಿ
೨. ನಾದಲಯ
೩. ಛಂದಸ್ಸು : ಶಾಸ್ತ್ರ ಮತ್ತು ಕಲೆ
೪. ಲಯದ ವಿವಿಧ ಪ್ರಕಾರಗಳು
೫. ಗಣವಿಚಾರ
೬. ಮಾತ್ರೆಯ ವಿಚಾರ
೭. ಪ್ರಾಸ ವಿಚಾರ
೮. ಯತಿ ವಿಚಾರ
೯. ವಡಿ ವಿಚಾರ

★★★

೧. ಛಂದಸ್ಸು ಪದದ ನಿಷ್ಪತ್ತಿ, ಉಗಮ ಇತ್ಯಾದಿ

ಛಂದಸ್ಸಿನ ವ್ಯುತ್ಪತ್ತಿಯನ್ನು 'ಛದ್' ಮತ್ತು 'ಛಂದ್' ಈ ಎರಡೂ ಧಾತುಗಳಿಂದ ಸಾಧಿಸುತ್ತಾರೆ. ಛದ್ ಎಂದರೆ ಆಚ್ಛಾದಿಸು, ಹೊದಿಸು, ಆವರಿಸು, ಹಾಸುಹೊಕ್ಕಾಗಿರು. ಛಂದ್ ಎಂದರೆ ಆಹ್ಲಾದವನ್ನುಂಟು ಮಾಡು. ಈ ಎರಡೂ ಬಗೆಯ ಅರ್ಥಗಳು ಛಂದಸ್–ಛಂದಸ್ಸು ಎಂಬ ಪದಕ್ಕೆ ಅನ್ವಯಿಸುತ್ತವೆ.

ಛಂದಸ್ಸು ಬಹು ಪ್ರಾಚೀನವಾದ ಶಾಸ್ತ್ರ. ವೇದಮಂತ್ರಗಳೊಂದಿಗೇ ಛಂದಸ್ಸು ಹುಟ್ಟಿತು. ವೇದವೆಂದರೆ ಛಂದಸ್ಸು ಎಂಬರ್ಥವೂ ಇದೆ. ವೇದ ಮಂತ್ರಗಳ ಪ್ರತಿಯೊಂದು ಅಕ್ಷರವೂ ಉದಾತ್ತ, ಅನುದಾತ್ತ, ಸ್ವರಿತ ಮತ್ತು ಕಂಪಿತ – ಎಂಬ ನಿರ್ದಿಷ್ಟ ಸ್ವರಗಳಲ್ಲಿ ಉಚ್ಚರಿಸಲ್ಪಡಬೇಕೆಂಬ ಕಟ್ಟುನಿಟ್ಟಾದ ನಿಯಮಗಳಿವೆ. ಈ ಸ್ವರ ಸಂಯೋಜನೆಗಳಲ್ಲಿ ಆರೋಹ, ಅವರೋಹಗಳಿಂದ ಸಮನ್ವಿತವಾದ ಸ್ವರಾಂದೋಲನವಿರುತ್ತದೆ. ಇದನ್ನು 'ಲಯ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ವೇದಮಂತ್ರಗಳ ವಿಶಿಷ್ಟವಾದ ಸ್ವರಾಂದೋಲನ ಅಥವಾ ಲಯದ ಕಾರಣದಿಂದ ವೇದಘೋಷವೆಂಬುದು ಗಂಭೀರವಾಗಿ ಕೇಳಿಬರುತ್ತದೆ. ಈ ಪ್ರಾಚೀನ ಋಷಿಗಳು ಸಮಾಧಿಸ್ಥಿತಿಯಲ್ಲಿದ್ದಾಗ ವೇದಮಂತ್ರಗಳು 'ತನ್ನ ತಾನೆ' ಉದಯಿಸಿದವೆಂಬ ಕಾರಣದಿಂದ

ವೇದಗಳನ್ನು 'ಅಪೌರುಷೇಯ' ಎಂದು ಕರೆಯಲಾಗುತ್ತದೆ. ಆದ್ದರಿಂದ ವೇದಗಳು ದಿವ್ಯಜ್ಞಾನ ಅಥವಾ ಬ್ರಹ್ಮ ಜ್ಞಾನಭರಿತವೆಂದು ನಂಬುಗೆಯಿದೆ. ವೇದ ಪದದ ವ್ಯುತ್ಪತ್ತಿ ವಿದ್–ಅರಿ ಎಂಬ ಧಾತುವಿನಿಂದ ಆದುದು. ಆದ್ದರಿಂದ ವೇದ ಎಂದರೆ ಜ್ಞಾನ, – ಬ್ರಹ್ಮಜ್ಞಾನ. ವೇದ ಮಂತ್ರಗಳೊಂದಿಗೇ ಛಂದಸ್ಸು ಅವಿನಾಭಾವಿಯಾಗಿ ಹೊಂದಿಕೊಂಡೇ ಹುಟ್ಟಿದ್ದರಿಂದ ವೇದವೆಂದರೆ ಛಂದಸ್, ಛಂದಸ್ಸೆಂದರೆ ವೇದ ಎಂದಾಯಿತು. ಅನಂತರ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್, ಜ್ಯೋತಿಷ – ಎಂಬ ವೇದದ ಷಡಂಗಗಳಲ್ಲಿ ಅದು ಒಂದಾಯಿತು. ಮೊದಲ ಛಂದಶ್ಶಾಸ್ತ್ರಕಾರನಾಗಿದ್ದ ಪಿಂಗಳನ ಛಂದಸ್ಸೂತ್ರಗಳಿಗೆ ವೃತ್ತಿಯನ್ನು ಬರೆದಿರುವ ಹಲಾಯುಧನು ಛಂದಸ್ಸು ವೇದದ ಪ್ರಥಮಾಂಗವೆಂದು ಹೇಳಿದ್ದು ಅರ್ಥ ಪೂರ್ಣವಾಗಿದೆ. ಛಂದಸ್ಸು ಕವಿಗಳ ಕಣ್ಣು ಎಂದೂ ಹೇಳುತ್ತಾರೆ.

ಮೇಲೆ ತಿಳಿಸಿದಂತೆ ಛದ್ ಎಂದರೆ ಆಚ್ಛಾದಿಸು, ಆವರಿಸು, ಹಾಸು ಹೊಕ್ಕಾಗಿರು ಎಂಬ ಅರ್ಥದಲ್ಲಿ ವೇದ ಮಂತ್ರಗಳೊಂದಿಗೇ ಹೊಂದಿಕೊಂಡಿರುವ ಛಂದಸ್ಸು ವೇದಜ್ಞಾನದಲ್ಲಿ ಹಾಸುಹೊಕ್ಕಾಗಿರುತ್ತದೆ. ಗಾಳಿ ಒಳಹೊರಗೂ ಆವರಿಸಿರುವಂತೆ ಛಂದಸ್ಸು ವೇದಗಳ ಒಳಹೊರಗೂ ಹಾಸು ಹೊಕ್ಕಾಗಿ ಆವರಿಸಿರುತ್ತದೆ. ಸ್ವರಾಂದೋಲನ ಅಥವಾ ಲಯದಿಂದ ಆವೃತವಾದ ಛಂದಸ್ಸು ವೇದ ಮಂತ್ರಗಳ ಜೀವಾಳವೇ ಆಗಿದೆ. ಸ್ವರಾಂದೋಲನ ಅಥವಾ ಲಯವು ಛಂದಸ್ಸಿನ ಜೀವಾಳವಾದರೆ ಛಂದಸ್ಸು ವೇದಗಳ ಜೀವಾಳ. ಲಯಾನ್ವಿತ ಛಂದಸ್ಸು ಆಹ್ಲಾದವುಂಟು ಮಾಡುವುದು.

ವೇದಗಳಲ್ಲಿ ಗೋಚರಿಸುವ ಛಂದಸ್ಸು ವೈದಿಕ ಛಂದಸ್ಸು, ಲೌಕಿಕ ಕಾವ್ಯಗಳಲ್ಲಿಯ ಛಂದಸ್ಸು ಲೌಕಿಕ ಛಂದಸ್ಸು, ವೈದಿಕ ಛಂದಸ್ಸು ಲೌಕಿಕ ಛಂದಸ್ಸಿಗೆ ಮೂಲವಾದದ್ದು.

ಈ ಜಗತ್ತೆಲ್ಲವೂ ಛಂದೋಮಯ. ಜಗತ್ತು ರೂಪಮಯವಾಗಿರುವಂತೆ ನಾದಮಯವಾಗಿದೆ. ಜಗದ ರೂಪಜಾಲದ ಹಿಂದೆ ನಾದಲೀಲೆಯ ಅಗಾಧತೆಯಿದೆ. 'ಓಂಕಾರ ಅಥವಾ ಪ್ರಾಣದಿಂದ ಜಗದ ಸೃಷ್ಟಿಯಾಯಿತೆಂಬ ಮಾತು ಇದೆ. Music of the pheres ಎಂಬ ಪಾಶ್ಚಾತ್ಯರ ಕಲ್ಪನೆಯೂ ಭಾರತೀಯ ದೃಷ್ಟಿಗೆ ಪೂರಕವಾಗಿದೆ. ನಾದ ಅಥವಾ ಶಬ್ದಕ್ಕೆ ಆಕಾಶತತ್ತ್ವವು ಆಧಾರ. ಆಕಾಶವಿರುವಲ್ಲೆಲ್ಲ ನಾದವಿದೆ. ನಾದಮಯಂ ಜಗತ್ ಎಂಬ ಮಾತು ಸತ್ಯ. ಸೃಷ್ಟಿ, ಸ್ಥಿತಿ, ಲಯಗಳು ಪರಬ್ರಹ್ಮನ ಕಾವ್ಯವೇ ಆಗಿರುವುದರಿಂದ ಈ ಮೂರಕ್ಕೂ ನಾದ ಲಯವೇ ಮೂಲ. ಇಂಗ್ಲಿಷಿನಲ್ಲಿ Rhythm ಎಂಬ ಪದವೂ ನಾದಲಯಕ್ಕೆ ಬಹುಮಟ್ಟಿಗೆ ಸಂವಾದಿ ಪದವಾಗಿದೆಯೆಂದು ಹೇಳುವುದುಂಟು.

ನಾದವು ಸ್ಥೂಲ ಹಾಗೂ ಸೂಕ್ಷ್ಮ ಎಂದು ಎರಡು ವಿಧ. ಹೊರಗಿವಿಗೆ ಕೇಳುವಂಥದು ಸ್ಥೂಲನಾದ, ಒಳಗಿವಿಗೆ ಎಂದರೆ ಅಂತರಂಗಕ್ಕೆ ವೇದ್ಯವಾಗುವುದು ಸೂಕ್ಷ್ಮನಾದ. ಈ ಜಗನ್ನಾದದ ಕೇಂದ್ರವು ಜೀವ ಎನ್ನುತ್ತಾರೆ. ರೂಪ, ರಸ, ಗಂಧ, ಶಬ್ದ ನಾನಾಸ್ಪರ್ಶಗಳೆಂಬ ಪಂಚೇಂದ್ರಿಯಗಳ ವಿಷಯಗಳಿಂದ ಜೀವನದಲ್ಲಿ ಸೂಕ್ಷ್ಮ ಸಂವೇದನೆಗಳು ಉಂಟಾಗುತ್ತವೆ. ಹೃದಯವು ಈ ಸಂವೇದನೆಗಳ ಸ್ಥಾನ. ಈ

ಸಂವೇದನೆಗಳು ಭಾವತರಂಗಗಳು. ಇವು ನಾದದ ಸೂಕ್ಷ್ಮ ರೂಪಗಳು. ಈ ಅವ್ಯಕ್ತ ನಾದತರಂಗಗಳು ಸ್ವರ ಸಹಿತವಾದಾಗ ಹೊರಗಿವಿಗೆ ಕೇಳಬರುತ್ತವೆ. ಆಗ ಮನಸ್ಸಿಗೆ ಮತ್ತು ಕಿವಿಗೆ ಆಹ್ಲಾದವೀಯುತ್ತವೆ.

ನಾದದ ಉಗಮ ಸ್ಥಾನವಾವುದು ? ಜಗನ್ನಾದದ ಕೇಂದ್ರ ಜೀವವೆಂದಾದ ಮೇಲೆ ಜೀವಿಯಲ್ಲೂ ಅದರ ಹುಟ್ಟುದಾಣವಿರಬೇಕು. ಶಬ್ದಮಣಿದರ್ಪಣಕಾರ ಕೇಶಿರಾಜನು ಶಬ್ದದ (–ನಾದದ) ಹುಟ್ಟು ನಾಭಿಯಲ್ಲಿ ಎಂದು ಹೇಳಿದ್ದಾನೆ.

ಅನುಕೂಲಪವನನಿಂ ಜೀ – ।
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ – ॥
ಗಿನವೊಲ್ ಶಬ್ದದ್ರವ್ಯಂ ।
ಜನಿಯಿಸುಗುಂ, ಶ್ವೇತಂ, ಅದರ ಕಾರ್ಯಂ ಶಬ್ದಂ ॥

– ರತ್ನಾಕರವರ್ಣಿಯೂ ನಾದ ಅಥವಾ ರಾಗದ ಉಗಮಸ್ಥಾನ ನಾಭಿಯೆಂದೇ ಹೇಳಿದ್ದಾನೆ.

ನಾಭಿಯಿಂದೇಳಿಸಿ ಎದೆಯೊಳೋಲಾಡಿಸಿ ।
ಶೋಭೆಯ ಮಾಡಿ ಕಂಠದೊಳು ॥
ಆ ಭೂಪ ಮೆಚ್ಚಿರ್ದಾಗಿಸಿದರು ಶ್ರೀದೇವಿ ।
ಶೋಭನವನು ಪಾಡುವಂತೆ

– ನಾಭಿಯಲ್ಲಿ ಹುಟ್ಟುವ ನಾದವು ಅವ್ಯಕ್ತವಾಗಿದ್ದು ಅದೇ ಹೃದಯಸ್ಥಾನದಲ್ಲಿ ಭಾವತರಂಗರೂಪ ತಳೆದು ಊರ್ಧ್ವಗಾಮಿಯಾಗಿ ಜೀವನ ಇಷ್ಟದಿಂದ, ಅನುಕೂಲದ್ರವ್ಯವು ಮುಖದ್ವಾರವಾಗಿ ಶಬ್ದರೂಪ ತಳೆದು ಹೊರಹೊಮ್ಮುತ್ತದೆ. ಹೊರಜಗದ ನಾದವು ಜೀವಿಯ ಒಳಜಗದ ನಾದವೂ ಸೇರಿ ಸಜೀವ ಸಂಬಂಧವೇರ್ಪಡುತ್ತದೆ. ಈ ಸಂಬಂಧವೇ ಭಾಷೆಯ ಹುಟ್ಟಿಗೂ ಕಾರಣ.

೨. ನಾದಲಯ

ಹಾಡಿನ ಹುಟ್ಟಿಗೆ ಹಿಗ್ಗೇ ಕಾರಣ. ಹಿಗ್ಗಿಗೆ ನಾದಲಯವೇ ಮೂಲ. ನಾದವೇ ಭಾವ, ಭಾಷೆಗಳ ರೂಪು ತಳೆದು ಹಾಡಾಗುವುದು. ಭಾವ, ರಸಗಳು ಕಾವ್ಯದ ಜೀವಾಳ. ನಾದ ಮತ್ತು ಭಾಷೆಗಳು ಆ ಜೀವಾಳದ ಅಭಿವ್ಯಕ್ತಿಗೆ ಸಾಧಕವಾಗುತ್ತವೆ. ಭಾವ, ನಾದ, ಭಾಷೆಗಳ ಸಾಮರಸ್ಯದಲ್ಲಿ ಕಾವ್ಯದ ಅಭಿವ್ಯಕ್ತಿ. ವೇದದೊಂದಿಗೆ ಛಂದಸ್ಸು ಹೇಗೆ ಹೊಂದಿಕೊಂಡೇ ಹೊರಬಂದಿತೊ ಹಾಗೆಯೇ ಕಾವ್ಯ ಹೊಮ್ಮುವುದೂ ಛಂದದೊಂದಿಗೇ. ಈ ಛಂದದ ಮುಖ್ಯ ಅಂಗವೇ ನಾದಲಯ ಅಥವಾ ಸ್ವರಾಂದೋಲನ. ಪದ್ಯದಲ್ಲಿ ನಾದಲಯದ ಲೀಲೆ ನಿಯತವಾಗಿರುವುದರಿಂದ ಭಾವ, ರಸಗಳ ಉತ್ಪತ್ತಿಗೆ ಅದು ಸಾಧಕವಾಗುತ್ತದೆ. ಗದ್ಯದಲ್ಲೂ ನಾದಲಯವಿಲ್ಲದಿಲ್ಲ, ಆದರೆ ಅದು ಅನಿಯತಲಯ. ಅನಿಯತಲಯಕ್ಕೂ ಒಂದು ಸೊಗಸಿದೆ. ಅಂತೇ ಗದ್ಯ ಕಾವ್ಯಗಳೂ ಉಂಟು. ಇಂದಿನ ನವ್ಯ ಕಾವ್ಯಗಳೂ ಹಿಂದಿನ ಶರಣರ ವಚನಗಳೂ ದಾಸರ

ಸುಳಾದಿ–ಉಗಾಭೋಗಗಳೂ ಗದ್ಯದ ನಡೆಯಲ್ಲಿದ್ದರೂ ವೃತ್ತಗಂಧಿಯಾಗಿ ಅನಿಯತ ಲಯದಲ್ಲೂ ರಸ–ಭಾವಗಳನ್ನು ಹೊಮ್ಮಿಸುತ್ತವೆ. ನಿಯತ ಸ್ವರಾಂದೋಲನ ಅಥವಾ ಲಯವು ಪದ್ಯದಲ್ಲೂ ಅನಿಯತಲಯವು ಗದ್ಯದಲ್ಲೂ ಇರುವುದರಿಂದ ಪದ್ಯ ನರ್ತಿಸುತ್ತದೆ. ಗದ್ಯ ನಡೆಯುತ್ತದೆ ಎಂದು ಹೇಳುವುದುಂಟು. ವಿಚಾರ ಆಲೋಚನೆಗಳು ಗದ್ಯದಲ್ಲಿ ಭಾವ–ರಸಗಳು ಪದ್ಯದಲ್ಲಿ ಹೆಚ್ಚು ಸುಗಮವಾಗಿ ಹೊಮ್ಮುತ್ತವೆ. ಹೀಗೆ ಹೇಳಿದ ಮಾತ್ರಕ್ಕೆ ಗದ್ಯದ ಅನಿಯತಲಯವು ಕಾವ್ಯಕ್ಕೆ ಸಾಧಕವಲ್ಲ ಎಂದು ಹೇಳಲಾಗದು. ಹಾಗೆಯೆ ಪದ್ಯವೂ ಶಾಸ್ತ್ರ ಗ್ರಂಥಗಳಿಗೆ ಬಳಕೆಯಾದುದೂ ಉಂಟು. ಆದರೆ ಭಾವತರಂಗಗಳು ನಿಯತ ನಾದಲಯದಲ್ಲಿ ಹೊಮ್ಮುವಷ್ಟು ಪರಿಣಾಮಕಾರಿಯಾಗಿ ಅನಿಯತನಾದಲಯದಲ್ಲಿ ಹೊಮ್ಮಲಾರವು. ಭಾವಮಯವಾದ ನಾದಲಯಕ್ಕೆ ಭಾಷೆಯ ಜತೆಯೊಂದಿದ್ದರೆ ಅಲ್ಲಿ ಕಾವ್ಯದ ಹುಟ್ಟು.

ನಿಯತವಾದ ನಾದಲಯವೆಂದರೆ ಸ್ವರ ಸಂಯೋಜನೆಗಳ ನಿಯತವಾದ ಆವರ್ತನೆಯಿಂದುಂಟಾಗುವ ಆಂದೋಲನ ಎಂದು ರಾಬರ್ಟ್ ಬ್ರಿಜಿಸ್ ಎಂಬ ಕಾವ್ಯತಜ್ಞನು ಹೇಳಿದ್ದಾನೆ.

ಪದ್ಯದ ಲಯವು ನಿಯತವಾಗಿರುವುದರಿಂದ ಪದ್ಯದ ಪಂಕ್ತಿಗಳನ್ನು ನೆನಪಿನಲ್ಲಿರಿಸಿಕೊಳ್ಳುವುದು ಸುಲಭ. ಆದರೆ ಛಂದಸ್ಸಿನ ಈ ಪ್ರಯೋಜನ ಬಾಹ್ಯವಾದುದು. ಆಂತರಿಕ ಪ್ರಯೋಜನವೆಂದರೆ ಛಂದಸ್ಸು ಭಾವನೆಯ ಹಾಸುಹೊಕ್ಕಾಗಿರುವುದು. ಹಲವು ಛಂದಸ್ಸುಗಳಲ್ಲಿ ಹಲವು ಬಗೆಯ ಲಯಗಳುಂಟು. ಒಂದೊಂದು ಲಯಕ್ಕೂ ಒಂದೊಂದು ಭಾವದ ಛಾಯೆಯಿರುತ್ತದೆ. ಆದ್ದರಿಂದ ಕವಿಯ ಹೃದಯದಲ್ಲಿ ಹುಟ್ಟಿದ ಭಾವವು ತನಗೆ ಯುಕ್ತವೆನಿಸುವ ಲಯವನ್ನೇ ಹುಡುಕಿಕೊಂಡು ಅದನ್ನು ತೊಡುತ್ತದೆ. ವಾಲ್ಮೀಕಿ ಕವಿ ತಮಸಾ ನದಿಯ ದಂಡೆಯ ಮೇಲೆ ಕಂಡ ಕ್ರೌಂಚ ಪಕ್ಷಿಯ ಹತ್ಯೆಯಿಂದ ಆತನಲ್ಲುಂಟಾದ ಭಾವವು ಅನುಷ್ಟುಭ್ ಛಂದಸ್ಸನ್ನು ತೊಟ್ಟಿತು. ಅಂದಿನ ಆ ಕವಿಯ ಶೋಕವು ಶ್ಲೋಕವಾದುದಕ್ಕೆ ಆ ಭಾವಸ್ಪಂದನದ ವಿಶಿಷ್ಟ ಸ್ವರಾಂದೋಲನವೇ ಮೂಲವಾಯ್ತು. ಛಂದಸ್ಸು ಕಾವ್ಯದ ಸಹಜ ಸುಂದರ ಸ್ವರಾಂದೋಲನ.

೩. ಛಂಧಸ್ಸು : ಶಾಸ್ತ್ರ ಮತ್ತು ಕಲೆ

ಹೀಗೆ ಛಂದಸ್ಸು ಕಾವ್ಯದ ಒಂದು ಅನಿವಾರ್ಯವಾದ ಅಂಗ. ಕಾವ್ಯದ ಪ್ರಾಣ ಮತ್ತು ಆತ್ಮಗಳಿಗೆ ತೀರ ಹತ್ತಿರದ ಅಂಗ. ಇದರ ಒಳತಿರುಳನ್ನು ತಿಳಿಸುವ ಶಾಸ್ತ್ರವಾಗಿಯೂ ಛಂದಸ್ಸು ಎಂಬ ಪದದ ಬಳಕೆಯಾಗುತ್ತಿದೆ. ಆದ್ದರಿಂದ ಛಂದಸ್ಸು ಒಂದು ಶಾಸ್ತ್ರವೂ ಆಗಿದೆ. ಭಾವೋನ್ಮೇಷಕ್ಕೆ ಸಾಧಕವಾಗುವ ಛಂದಸ್ಸು ಒಂದು ಕಲೆಯೆಂದೂ ಹೇಳಬಹುದು. ಛಂದಸ್ಸಿನ ಜೀವಾಳವಾದ ನಾದಲಯವು ಸಂಗೀತ ಕಲೆಗೂ ಹತ್ತಿರವಾದುದು. ಇತ್ತ ಕಾವ್ಯದ ಭಾವರಸಗಳ ಉದ್ದೀಪನಕ್ಕೂ ನಾದ ಲಯದ ಸಂಬಂಧ

ನಿಕಟವಾಗಿರುವುದಿಂದ ಛಂದಸ್ಸು ಭಾವಾನುಸಾರಿಯಾಗಿ ಕಾವ್ಯದೊಂದಿಗೂ ರಾಗಾನುಸಾರಿಯಾಗಿ ಸಂಗೀತದೊಂದಿಗೂ ನಿಕಟ ಸಂಬಂಧವುಳ್ಳುದಾಗಿದೆ. ಹೀಗೆ ಭಾವ, ರಾಗ, ತಾಳಗಳನ್ನು ಅನುಸರಿಸುವ ಛಂದಸ್ಸು ಒಂದು ಕಲೆ ಎಂದೂ ಹೇಳಬಹುದಾಗಿದೆ.

ಆದ್ದರಿಂದ ಛಂದಸ್ಸು ಎರಡು ದೃಷ್ಟಿಗಳಿಂದಲೂ ಪ್ರಯೋಜನಕಾರಿ : ಒಂದು ಅದರ ಸೌಂದರ್ಯದೃಷ್ಟಿ ; ಇನ್ನೊಂದು ಪ್ರಯೋಜನದೃಷ್ಟಿ. ಒಂದು ಕಾವ್ಯದ ಸೌಂದರ್ಯಕ್ಕೆ ಕಳೆಕಟ್ಟಿ ಆಹ್ಲಾದವುಂಟು ಮಾಡುವುದಾದರೆ, ಇನ್ನೊಂದು ಕಾವ್ಯದ ಅಂತರಂಗ ಹಾಗೂ ಬಹಿರಂಗಗಳೆರಡನ್ನೂ ಆವರಿಸಿ ಭಾವಗಳನ್ನು ನೆನಪಿಡಲು ನೆರವಾಗುತ್ತದೆ. ಕಾವ್ಯ, ಸಂಗೀತ, ನೃತ್ಯಕಲೆಗಳ ನಿಕಟ ಸಂಪರ್ಕದಿಂದಾಗಿ ಕಲೆಯ ಛಾಯೆಯುಳ್ಳುದೆಂಬುದು ಅದರ ಸೌಂದರ್ಯ ದೃಷ್ಟಿ ಮಾತ್ರೆ, ಗಣ, ಚರಣ, ಯತಿ, ಪ್ರಾಸ ಇತ್ಯಾದಿಗಳ ಲೆಕ್ಕಾಚಾರದಿಂದ ಇದೊಂದು ಶಾಸ್ತ್ರ ಎಂಬುದು ಇದರ ಪ್ರಯೋಜನದೃಷ್ಟಿ.

ಛಂದದ ನೃತ್ಯವಿನ್ಯಾಸವನ್ನರಿಯದವನು ಕವಿಯಾಗಲಾರ. ಕಾವ್ಯಕ್ಕೆ ಛಂದದಿಂದ ಹೃದ್ಯತೆಯೊದಗುತ್ತದೆ. 'ಪದ್ಯಂ ಸಮಸ್ತಜನತಾಹೃದ್ಯಂ' ಎಂದು ಕವಿರಾಜಮಾರ್ಗಕಾರನು ಹೇಳುವಲ್ಲಿ ಪದ್ಯದ ಛಂದೋಲಯವನ್ನು ಗುರುತಿಸಿದ್ದಾನೆ. ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ –

ಛಂದಮನರಿಯದೆ ಕವಿತೆಯ
ದಂದುಗದೊಳ್ ತೊಳಲಿ ಸುಳಿವ ಕುಕವಿಯೆ ಕುರುಡಂ ॥

– ಎಂದು ಹೇಳಿ ಕವಿಯ ಕಣ್ಣಿನ ಬೆಳಕೇ ಛಂದಸ್ಸು ಎಂದು ಅಭಿಪ್ರಾಯಪಟ್ಟಿದ್ದಾನೆ. ಇನ್ನೊಂದೆಡೆಯಲ್ಲಿ ಕವಿರಾಜಮಾರ್ಗಕಾರನು ಮಾತರಿವವನನ್ನು ಕುರಿತು ಹೇಳುತ್ತ

ನುಡಿಯಂ ಛಂದದೊಳೊಂದಿರೆ
ತೊಡರ್ಚಲರಿವಾತನಾತನಿಂದಂ ಜಾಣಂ ॥

– ಎಂಬಲ್ಲಿ ಛಂದದ ಮೇಲ್ಮೆಯನ್ನು ಎತ್ತಿ ಸಾರಿದ್ದಾನೆ.

ಛಂದಸ್ಸಿಗೆ ಇಂಥ ಒಂದು ಮಹತ್ತ್ವವುಂಟಾಗುವುದಕ್ಕೆ ಅದರ ಜೀವಾಳವೆನಿಸುವ ನಾದಲಯವೇ ಮೂಲವೆಂಬುದನ್ನು ಲಕ್ಷಿಸಬೇಕು. ಲಯದ ವಿಶ್ಲೇಷಣೆ ದುಸ್ತರವಾದುದು. ಛಂದಸ್ಸಿನ ಜೀವಾಳವು ಲಯ, ಕಾವ್ಯದ ಜೀವಾಳವು ಛಂದಸ್ಸು ಎಂದು ಈ ಮೊದಲೆ ತಿಳಿಸಲಾಗಿದೆಯಷ್ಟೆ ? ಆದರೆ ಲಯವು ಕಾವ್ಯ, ಛಂದಸ್ಸು ಎರಡನ್ನೂ ಮೀರಿದ ಒಂದು ಸೂಕ್ಷ್ಮ ಅಂಗ. ಅದು ಇಡಿಯ ವಿಶ್ವವನ್ನೇ ವ್ಯಾಪಿಸಿರುವಂಥದು. ಋತುಮಾನಗಳ ಚಲನೆಯಲ್ಲಿ, ಹೊಳೆ–ಹಳ್ಳಗಳ ಜುಳುಜುಳುನಾದದಲ್ಲಿ, ಹಗಲಿರುಳುಗಳ ಮೂಡು–ಮುಳುಗುಗಳಲ್ಲಿ ಲಯದ ಕುರುಹು ಕಂಗೊಳಿಸುತ್ತದೆ. ಅದನ್ನು ಕಾಣುವ ಕಣ್ಣನ್ನು ಮಾತ್ರ ನಾವು ಪಡೆದಿರಬೇಕು. ಅಷ್ಟೆ ಎಲ್ಲ ಕಲೆಗಳಲ್ಲಿಯ ಸಾಂಗತ್ಯ, ಸಾಮರಸ್ಯಗಳಲ್ಲೂ ಲಯವಿರುತ್ತದೆ. ಚಿತ್ರ, ಶಿಲ್ಪಗಳಂಥ ಅಚಲ ಕಲೆಗಳಲ್ಲೂ ಲಯದ ಹೊಳವು ಕಂಗೊಳಿಸುತ್ತದೆ. ಈ ಲಯವು ಕಾವ್ಯದಲ್ಲಿ ಹೇಗೆ ಪ್ರಕಟವಾಗುವುದೆಂಬು

ದನ್ನರಿಯುವುದೇ ಪ್ರಸ್ತುತ ಕಾರ್ಯ. ಕಾವ್ಯದಲ್ಲಿಯ ಲಯವು ನಾದಮಯವಾಗಿರುವುದರಿಂದ ಅದನ್ನು ನಾದಲಯ ಎನ್ನುವರು. ಈ ನಾದಲಯವು ಕೇವಲ ಅನುಭವವೇದ್ಯ. ಈ ಮೊದಲೆ ತಿಳಿಸಿದಂತೆ ಈ ನಾದಲಯಕ್ಕೆ ಸಂವಾದಿ ಪದವಾಗಿರುವ Rhythmನ್ನು ಕುರಿತು ಡೌನಿ ಎಂಬ ತಜ್ಞನ ಈ ಮಾತನ್ನು ಗಮನಿಸಬೇಕು. "Rhythm is one of the basal experience of which even the child has intimate acquantance, but the secret of which even the most profound of scientists has difficulty in penetrating it".............ಚಿಕ್ಕಮಗುವಿಗೂ ಲಯದ ಪರಿಚಯವಿರುವುದಂತೆ. ಆದರೆ ಅದರ ರಹಸ್ಯವು ಮಾತ್ರ ಎಂಥ ಶ್ರೇಷ್ಠ ವಿಜ್ಞಾನಿಗೂ ತಿಳಿಯಲಸಾಧ್ಯ. ಈಗ ಒಂದೆರಡು ಪದ್ಯಪಂಕ್ತಿಗಳನ್ನು ಹಾಡಿ ನೋಡುವ :

ನನ್ನ । ಹರಣ । ನಿನಗೆ । ಶರಣ
ಸಕಲ । ಕಾರ್ಯ । ಕಾರ ।ಣ
ನಿನ್ನ । ಮನನ । ದಿಂದ । ತನನ ।
ವೆನುತಿ । ದೆಹನು । ಪಾವನ ॥ – (ಬೇಂದ್ರೆ)

ಇಲ್ಲಿ ಮೂರು ಮೂರು ಮಾತ್ರೆಯ ಗಣಗಳು ಇವೆ. ಒಂದೊಂದು ಗಣವನ್ನು ಉಚ್ಚರಿಸುತ್ತ ಸ್ವಲ್ಪ ಸ್ವಲ್ಪ ಬಿಡುವಿಗೆ ಎಡೆಗೊಡುತ್ತೇವಷ್ಟೆ ? ಉಚ್ಚರಿಸುವ ಗಣವು 'ದುಡಿಮೆ' ಯನ್ನು ಸೂಚಿಸುತ್ತದೆ. ನಡುನಡುವೆ ಬರುವ ಅತಿ ಸೂಕ್ಷ್ಮ ಬಿಡುವುಗಳನ್ನು ಉದ್ದಗೀಟುಗಳಿಂದ ಸೂಚಿಸಲಾಗಿದೆ. ಕವಿಯ ಹೃದಯದಲ್ಲಿ ಸ್ಪಂದಿಸುವ ನಾದವು ಭಾವದೊಂದಿಗೆ ಸೇರಿಕೊಂಡು ಈ 'ದುಡಿಮೆ'–'ಬಿಡುವು' ಗಳಲ್ಲಿ ಲಯವನ್ನು ಸಾಧಿಸಿದೆ. ಭಾವಗಳು ಹೊಮ್ಮುವುದೇ ತರಂಗ ತರಂಗವಾಗಿ. ಅಲ್ಲಿಯೇ ಲಯದ ಹುಟ್ಟು.

ಈ ಲಯವನ್ನು ಡಾ.ಕರ್ಕಿಯವರು 'ಸಮವಿಸ್ತಾರದ ಅಥವಾ ಸಮಭಾರದ ಗಣಗಳ ಎಂದರೆ ಸ್ವರಸಂಯೋಜನೆಗಳ ಆವರ್ತನೆಯು ಲಯಕ್ಕೆ ಕಾರಣವಾಗುತ್ತದೆ.' ಎನ್ನುತ್ತಾರೆ. ಎಂದರೆ ಮೇಲೆ ತಿಳಿಸಿದ ದುಡಿಮೆ, ಬಿಡುವುಗಳು ಮತ್ತೆ ಮತ್ತೆ ಬರುವುದೇ ಲಯಕ್ಕೆ ಕಾರಣ. ಲಯದ ಈ ಪ್ರವೃತ್ತಿ ಸಕಲ ಪ್ರಾಣಿಗಳಲ್ಲೂ ಸಹಜವಾದುದು. ಮನುಷ್ಯನಲ್ಲಿಯ ಬುದ್ಧಿ ಈ ಲಯವನ್ನು ಬಲು ಬೇಗನೆ ಕಂಡುಹಿಡಿದು ಆನಂದಪಡುತ್ತದೆ. ಹೀಗೆ ಗಣಗಳ ಆವರ್ತನೆಯ ಅಪೇಕ್ಷೆ ಪ್ರತಿಯೊಂದು ಮಾನವ ಜೀವಿಯಲ್ಲೂ ಇರುತ್ತದೆ. ಈ ನಾದಲಯದ ಗುಟ್ಟನ್ನು ಹೋಮರ್ ಎಂಬ ತಜ್ಞನು 'Verse leads us to expect some kind of recurrence and fulfils the expectation'.............ಎಂದು ಅರ್ಥಪೂರ್ಣವಾಗಿ ಹೇಳಿದ್ದಾನೆ. ಪದ್ಯದಲ್ಲಿಯ ಗಣಗಳು ನಿಯತವಾದ ರೀತಿಯಲ್ಲಿ ಒಂದಾದ ಮೇಲೊಂದು ಬರುವಾಗ ಕೇಳುವವನ ಹೃದಯದ ಸಹಜ ಅಪೇಕ್ಷೆಯೊಂದು ಪೂರೈಸುತ್ತಿರುತ್ತದೆ. ಆಗಲೇ ಆತನಿಗೊಂದು ಸಮಾಧಾನ, ಆಹ್ಲಾದ.

ಲಯವು ದುಡಿಮೆ (effort) ಬಿಡುವು (rest) ಗಳ ನಿಯತವಾದ ಸಂತತ ಶ್ರೇಣಿ. ಲಯದಲ್ಲಿರುವ ಬಿಡುವು ಸೂಕ್ಷ್ಮ ಯತಿಯೇ ಆಗಿದೆ. ಅದಿಲ್ಲದೆ ಲಯಕ್ಕೆ

ಸ್ವಾರಸ್ಯವಿಲ್ಲ. ಅಂತೇ ಲಯಕ್ಕೂ ಈ ಬಗೆಯ ಸೂಕ್ಷ್ಮ ಯತಿಗೂ ಬಹು ಹತ್ತಿರದ ಸಂಬಂಧವುಂಟು. ಈ ಪದ್ಯವನ್ನು ಗಮನಿಸಬಹುದು.

ಅಡಿಯ ಗೆಜ್ಜೆ। ನಡುಗೆ ಹೆಜ್ಜೆ। ಇಡುತ ಸುಗ್ಗಿ। ಬರುವುದು. ಈ ಪಂಕ್ತಿಯಲ್ಲಿ ಗೀಟು ಹಾಕಿದೆಡೆಗಳಲ್ಲಿ ಹಾಡುವ ದನಿ ನಿಂತೂ ನಿಲ್ಲದಂತೆ ಚರಣದ ಕೊನೆಯವರೆಗೆ ಸಾಗುವುದಷ್ಟೆ ? ಇಲ್ಲಿಯ ನಡುನಡುವೆ ಬರುವ ಬಿಡುವುಗಳು ಲಯವನ್ನು ಎತ್ತಿ ತೋರಿಸುತ್ತವೆ. ದುಡಿಮೆ – ಬಿಡುವುಗಳ ಸಾಂಗತ್ಯ – ಸಾಮರಸ್ಯಗಳಲ್ಲೇ ಲಯದ ಸ್ವಾರಸ್ಯ ಅಡಗಿದೆ.

ಕವಿಯ ಭಾವವು ಭಾಷೆಯ ಮೂಲಕ ಸಹೃದಯನ ಹೃದಯದಲ್ಲಿ ಪಡಿಮೂಡುವಂತೆ ಅದು ಲಯದ ಉಯ್ಯಾಲೆಯಲ್ಲಿ ಜೀಕಿ ಬಂದು ಆತನ ಹೃದಯದಲ್ಲಿ ಭಾವ ಸ್ಪಂದನವನ್ನುಂಟು ಮಾಡುತ್ತದೆ. ಕುಣಿತದಲ್ಲಿ ಹುಟ್ಟಿದ ಕವಿಯ ಭಾವವು ಸಹೃದಯನಲ್ಲೂ ಕುಣಿತವನ್ನು ಪ್ರೇರಿಸುವುದಕ್ಕೆ ಹಾಡಿನಲ್ಲಿಯ ಲಯವೇ ಮೂಲ ಕಾರಣ.

೪. ಲಯದ ವಿವಿಧ ಪ್ರಕಾರಗಳು

ಲಯದಲ್ಲಿ ವೈವಿಧ್ಯವುಂಟು : ವೇದ ಮಂತ್ರಗಳಲ್ಲಿ ಅಕ್ಷರ ಅಕ್ಷರಕ್ಕೆ ಸ್ವರ ಲಯವುಂಟು. ಲೌಕಿಕ ಛಂದಸ್ಸಿನ ವರ್ಣ ವೃತ್ತಗಳಲ್ಲಿ ಆರೋಹ – ಅವರೋಹ ಲಯವುಂಟು. ಮಾತ್ರಾಛಂದಸ್ಸಿನಲ್ಲಿ ತಾಳಲಯವುಂಟು. ದ್ರಾವಿಡ ಮೂಲ ಅಂಶ ಛಂದಸ್ಸಿನಲ್ಲಿ ರಾಗಲಯವುಂಟು ಎಂದು ಡಾ. ಕರ್ಕಿ ಹೇಳಿದ್ದಾರೆ.

ವೈದಿಕ ಛಂದಸ್ಸಿನಲ್ಲಿ ಬರುವ 'ಗಾಯತ್ರಿ' ಯ ಈ ಪಂಕ್ತಿಗಳ ಲಯವನ್ನು ಪರಿಶೀಲಿಸುವ :

ಅಗ್ನಿಮೀಳೆ । ಪುರೋಹಿತಂ ।
ಯಜ್ಞಸ್ಯದೇ । ವಮೃತ್ವಿಜಂ ।
ಹೋತಾರಂರ । ತ್ನಧಾತಮಂ ॥

ಇಲ್ಲಿ ಎಂಟು ಅಕ್ಷರಗಳುಳ್ಳ ಮೂರು ಪಾದಗಳಿವೆ. ಪ್ರತಿ ಪಾದದಲ್ಲಿ ನಾಲ್ಕು ನಾಲ್ಕು ಅಕ್ಷರಗಳ ಎರಡೆರಡು ಗಣಗಳಿವೆ. ಇಲ್ಲಿ ಪ್ರತಿ ಅಕ್ಷರಕ್ಕೂ ಉದಾತ್ತ, ಅನುದಾತ್ತಾದಿ ಸ್ವರಗಳಲ್ಲಿ ಲಯವು ಹುಟ್ಟುತ್ತದೆ. ಆದ್ದರಿಂದ ಇಲ್ಲಿ ಸ್ವರಲಯ ಅಥವಾ ಅಕ್ಷರಲಯವಿದೆ ಎನ್ನಬಹುದಾಗಿದೆ. ಸ್ವರ ಪುರಸ್ಸರವಾಗಿ ಹಾಡಿ ನೋಡಿದಾಗಲೇ ಇಲ್ಲಿ ಲಯ ಗೋಚರಿಸುತ್ತದೆ. ವೈದಿಕ ಛಂದಸ್ಸನ್ನು ಅಕ್ಷರ (ಕ್ಷರವಲ್ಲದ ಎಂದರೆ ಶಾಶ್ವತ)ಛಂದಸ್ಸು ಎನ್ನಬಹುದು. ಈ ಸ್ವರಲಯದಲ್ಲೂ ಆರೋಹ – ಅವರೋಹಗಳ ಗತಿ ಗೋಚರಿಸುವುದಾದರೂ ಸ್ವರಲಯವೇ ಬಹು ಮಹತ್ವದ ಅಂಶ. ಸ್ವರ ಸಂಗೀತವು ವೇದಮಂತ್ರಗಳ ತಳಹದಿ ಎನ್ನುತ್ತಾರೆ.

ಇನ್ನು ಲೌಕಿಕ ಛಂದಸ್ಸಿನ ವರ್ಣವೃತ್ತಗಳ ಆರೋಹ – ಅವರೋಹಗಳ ಲಯವನ್ನು ಪರಿಶೀಲಿಸುವ : ಶಾರ್ದೂಲವಿಕ್ರೀಡಿತದ ಈ ಪಂಕ್ತಿಯನ್ನು ರಾಗಬದ್ಧವಾಗಿ ಹಾಡಿ ನೋಡುವ :

ಕಲ್ಲೊಳ್ ತೋರ್ಪ ಪೊಗರ್ ಸುವರ್ಣದ ಗುಣಂ । ಕಾಷ್ಠಂಗಳೊಳ್ ತೋರ್ಪ ಕಿ

ಚ್ಚೆಲ್ಲಾ ಕಿಚ್ಚಿನ ಚಿಪ್ಪಮಾ ಕನೆಯಿರಲ್ । ಪಾಲೊಳ್ ಘೃತಚ್ಛಾಯೆಯುಂ ॥
ದೆಲ್ಲರ್ ಬಣ್ಣಿಪರಂತುಟೀ ತನುವಿನೊಳ್ । ಚೈತನ್ಯಮುಂ ಬೋಧಮುಂ ।
ಸೊಲ್ಲುಂ ಜೀವಗುಣಂಗಳೆಂದರಿಪಿದಯ್ । ರತ್ನಾಕರಾಧೀಶ್ವರಾ ॥

ಇಲ್ಲಿ ಪ್ರತಿ ಪಂಕ್ತಿಯ ಹನ್ನೆರಡನೆಯ ವರ್ಣದ ಮುಂದೆ ಗೀಟು ಹಾಕಿದಲ್ಲಿ ಯತಿಯಿದೆ. ಅಲ್ಲಿಯವರೆಗೆ ಎಂದರೆ ಹನ್ನೆರಡು ವರ್ಣಗಳನ್ನು ಹಾಡಿನ ಲಯದಲ್ಲಿ ಉಚ್ಚರಿಸುವವರೆಗೆ ಆರೋಹ ಲಯವಿದ್ದು ಆ ಮುಂದೆ ಪಾದದ ಕೊನೆಯವರೆಗೆ ಅವರೋಹ ಲಯವಿರುತ್ತದೆ. ವರ್ಣಛಂಧಸ್ಸಿನಲ್ಲಿ ಇಂತಿಷ್ಟು ವರ್ಣಗಳಿಗೆ ಯತಿಯುಂಟೆಂಬ ನಿರ್ಬಂಧವಿದೆ. ಈ ಯತಿಯೇ ಇಲ್ಲಿಯ ಆರೋಹ–ಅವರೋಹಗಳ ಲಯವನ್ನು ಎತ್ತಿ ತೋರಿಸುತ್ತದೆ. ವೈದಿಕ ಛಂದಸ್ಸಿನಲ್ಲಿ ಪ್ರತಿ ಅಕ್ಷರದಲ್ಲಿ ಸ್ವರಲಯವಿದ್ದರೆ ಲೌಕಿಕ ಛಂದಸ್ಸಿನ ವರ್ಣವೃತ್ತಗಳಲ್ಲಿ ಪ್ರತಿಪಾದದಲ್ಲಿ ಯತಿ ಎತ್ತಿ ತೋರುವ ಆರೋಹ – ಅವರೋಹ ಲಯವಿರುತ್ತದೆ. ಕನ್ನಡ ಕವಿಗಳು ಸಂಸ್ಕೃತದ ಇಂಥ ವರ್ಣ ವೃತ್ತಗಳನ್ನು ರಚಿಸುವಾಗ ಯತಿವಿಲಂಘನೆ ಮಾಡುವುದೇ ಹೆಚ್ಚಾಗಿ ರೂಢಿಯಲ್ಲಿದೆ. ಆದರೂ ಈ ಸ್ವಚ್ಛಂದ ಯತಿಯ ಗತಿಯಲ್ಲೂ ಆರೋಹ–ಅವರೋಹಲಯವನ್ನು ಸ್ಫುಟವಾಗಿ ಗುರುತಿಸ ಬಹುದಾಗಿದೆ. ವರ್ಣ ಛಂದಸ್ಸಿನ ತಳಹದಿ ವರ್ಣಸಂಗೀತ ಎನ್ನುತ್ತಾರೆ.

ಇನ್ನು ದ್ರಾವಿಡ ಮೂಲ ಅಂಶಗಣಗಳುಳ್ಳ ಪಿರಿಯಕ್ಕರದ ರಾಗ ಲಯವನ್ನು ಪರಿಶೀಲಿಸುವ : ಇದು ಪಂಪನ ಆದಿಪುರಾಣದ ಒಂದು ಪಿರಿಯಕ್ಕರದ ಮಟ್ಟು :

ಈಗಳ್ । ನೀನಿರ್ದ । ನ್ನೋನಿಸೆ । ನೋಂತು ಮ । ಹಾಬಳಂ । ಲಲಿತಾಂಗಂ ।
ವಜ್ರಜಂಘಂ ।
ಭೋಗ । ಭೂಮಿಜಂ । ಶ್ರೀಧರ । ದೇವಂ । ಸುವಿಧಿನ । ರಾಧಿಪ । ನಚ್ಯುತೇಂದ್ರಂ ॥
ನಾಗ । ರಾಂತಂ । ನೆಲನೆನಿ । ತನಿತುಮಂ । ಚಕ್ರದಿಂ । ಬೆಸಕೆಯ್ದು । ವಜ್ರನಾಭಿ – ।
ಯಾಗಿ । ಸರ್ವಾರ್ಥ । ಸಿದ್ಧಿಯೊಳ್ । ಪುಟ್ಟಿ । ಭರತದೊ । ಳಿನ್ನಾದಿ । ದೇವನಪ್ಪಂ ॥

ಪಿರಿಯಕ್ಕರದ ಈ ಮಟ್ಟು ಬ್ರಹ್ಮ , ವಿಷ್ಣು ರುದ್ರಗಣಗಳಿಂದ ಘಟಿತವಾಗಿದೆ. ಈ ತ್ರಿಮೂರ್ತಿ ಗಣಗಳ ಸ್ವರೂಪವನ್ನು ಮುಂದೆ ವಿವರಿಸಲಾಗುವುದು. ಇಲ್ಲಿ ಲಯದ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇಕಾಗಿದೆ. ಪಿರಿಯಕ್ಕರದ ಈ ಪಂಕ್ತಿಗಳಲ್ಲಿ ಮೇಲೆ ತೋರಿಸಿದಂತೆ ತ್ರಿಮೂರ್ತಿಗಣಗಳ ವಿಭಜನೆಯನ್ನು ಮಾಡಲಾಗಿದೆ. ಪ್ರತಿ ಪಾದದ ಮೊದಲ ಗಣವು ಬ್ರಹ್ಮ, ಅನಂತರ ಐದು ವಿಷ್ಣುಗಣಗಳು ಹಾಗೂ ಕೊನೆಗೊಂದು ರುದ್ರಗಣ ಇವೆ – ಇದು ಪಿರಿಯಕ್ಕರದ ಲಕ್ಷಣ. ಇಲ್ಲಿಯ ಪ್ರತಿಯೊಂದು ಗಣವನ್ನು ಗುರುಲಘು ವಿನ್ಯಾಸದಂತೆ ಲಘುವನ್ನು ಒಂದು ಮಾತ್ರೆಯ ಕಾಲಾವಕಾಶದಲ್ಲಿ ಉಚ್ಚರಿಸದೆ,

ಪ್ರತಿ ಗಣದಲ್ಲಿಯ ಎರಡನೆಯ ಇಲ್ಲವೆ ಮೂರನೆಯ ಸ್ಥಾನದ ಲಘುವನ್ನು ಹಿಗ್ಗಿಸಿ ರಾಗವಾಗಿ ಎಳೆದು ಹಾಡಬೇಕಾಗುತ್ತದೆ. ಹಾಗೆ ಹಾಡಿದಾಗಲೆ ಪಿರಿಯಕ್ಕರದ ಧಾಟಿ ಲಯಬದ್ಧವಾಗಿ ಸೊಗಸು ನೀಡುತ್ತದೆ. ದ್ರಾವಿಡ ಛಂದವು ರಾಗಲಯದ್ದು ಎಂದು ಡಾ. ಕರ್ಕಿಯವರು ಹೇಳುವುದು ಸೂಕ್ತ. ಪಂಪನ ಈ ಪಿರಿಯಕ್ಕರದಲ್ಲಿ ಅಲ್ಲಲ್ಲಿ ವಿಷ್ಣುವಿಗೆ ಬದಲಾಗಿ ಬ್ರಹ್ಮಗಣವೂ ಬಂದುದನ್ನು ಗಮನಿಸಬೇಕು. ಹಾಗೆ ಬರುವುದರಿಂದ ರಾಗಲಯವು ಹೆಚ್ಚುವುದನ್ನು ಅರಿಯಬೇಕು. ಅಂಶಛಂದಸ್ಸಿನ ತಳಹದಿ ರಾಗಸಂಗೀತ ಎನ್ನುತ್ತಾರೆ.

ಮಾತ್ರಾಬಂಧಗಳ ತಾಳಲಯವನ್ನು ಈ ಮೊದಲೆ ಗಮನಿಸಲಾಗಿದೆ. ಈಗ ಒಂದು ವಾರ್ಧಕಷಟ್ಪದಿಯ ಪಂಕ್ತಿಗಳಲ್ಲಿಯ ತಾಳಲಯವನ್ನು ಗಮನಿಸಬಹುದಾಗಿದೆ :

u u- u - u - u u - u - u -
ವರವರ್ಣ । ದಿಂದೆಸೋ । ಭಿತಮಾಗಿ । ರೂಪವಿ –
uu - u - - u u u uuu uuu -
ಸ್ತರದಿಂದೆ । ಚೆಲ್ವಾಗಿ । ಮಧುರತರ । ನವರಸೋ ।
uuuuu - uuu uu - u u u - u - u -
ದರಭರಿತ । ದಿಂದೆವಿಲ । ಸಿತಮಾಗಿ । ಸುಮನೋನು । ರಾಗದಿಂ ।
u u u - -
ಪ್ರಚುರಮಾ । ಗಿ ॥

u uu - u u- u - uuu - - u
ನಿರುತಮಂ । ಜುಳಶಬ್ದ । ದಿಂದೆಕಿವಿ । ಗಿಂಪಾಗಿ ।
uuuu u u uu - uuuuu uuu -
ಚರಿಸುವ ಸು । ಲಲಿತಷಟ್ । ಪದಿಗಳೆಡೆ । ವಿಡದೆ ಝೇಂ ।
uuu - u u - u uuu - - u - - - u
ಕರಿಸದಿ । ರ್ಪುವೆಬಂದು । ನೆರೆದವಿ । ದ್ವತ್ಸಭಾ । ನೀರೇರು ।
- uuu -
ಹಾಕರದೊ । ಳು ॥

ಇಲ್ಲಿ ಐದೈದು ಮಾತ್ರೆಗಳ ಗಣಗಳು ಕಿರಿಯ ಪಾದಗಳಲ್ಲಿ (೧, ೨, ೪, ೫) ನಾಲ್ಕು ನಾಲ್ಕು, ಹಿರಿಯ ಪಾದಗಳಲ್ಲಿ (೩. ಮತ್ತು ೬) ಆರಾರು ಗಣಗಳು ಮತ್ತು ಮೇಲೊಂದು ಗುರು ಹೀಗೆ ಇರುತ್ತದೆ. ೩. ಮತ್ತು ೬ ನೆಯ ಪಾದಗಳ ಕೊನೆಯ ವರ್ಣವು ಇಲ್ಲಿ ಲಘುವಾಗಿದ್ದರೂ ಮುಕ್ತಾಯದ ಧ್ವನಿಗನುಗುಣವಾಗಿ ಅದನ್ನು ಗುರುವಾಗಿ ಎಳೆದು ಉಚ್ಚರಿಸಬೇಕು. ಇಲ್ಲಿಯ ಲಯದ ಮುಖ್ಯ ಲಕ್ಷಣವೆಂದರೆ ಐದೈದು ಮಾತ್ರೆಗಳ ಪ್ರತಿಯೊಂದು ಗಣಕ್ಕೂ ತಾಳ ಬೀಳುವುದು. ಸಮಭಾರದ ಎಂದರ ಸಮವಿಸ್ತಾರದ ಸ್ವರಸಂಯೋಜನೆ (– ಗಣ) ಗಳ ಆವರ್ತನೆ (ಮತ್ತೆ ಮತ್ತೆ ಬರುವುದು)ಗಳಲ್ಲಿ ಲಯದ ಸ್ವಾರಸ್ಯವಿರುವುದೆಂಬ ಮಾತು ಮಾತ್ರಾಗಣಘಟಿತ ಛಂದೋಬಂಧಗಳಿಗೆ ಹೆಚ್ಚು ಉಚಿತವಾಗಿ ಅನ್ವಯಿಸುವುದನ್ನು ಗಮನಿಸಬೇಕು. ಮಾತ್ರಾಛಂದಸ್ಸಿನ ತಳಹದಿ ತಾಳಸಂಗೀತ ಎನ್ನುತ್ತಾರೆ.

೫. ಗಣ ವಿಚಾರ

ಲಯದ ವಿಚಾರವನ್ನು ತಿಳಿದುಕೊಂಡ ಮೇಲೆ 'ಗಣ' ವೆಂದರೇನೆಂಬುದನ್ನು ಅರಿತುಕೊಳ್ಳಬೇಕು. ಗಣವೆಂದರೆ ಕೆಲವು ನಿಯಮಗಳಿಗನುಗುಣವಾಗಿ ವಿಭಜಿಸಿದ ವರ್ಣಗಳ ಅಥವಾ ಸ್ವರ ಸಂಯೋಜನೆಗಳ ಗುಂಪು. ಇದು ಕನ್ನಡದಲ್ಲಿ ಮೂರು ವಿಧವಾಗಿದೆ. (೧) ವರ್ಣಗಣ (೨) ಮಾತ್ರಾಗಣ (೩) ಅಂಶಗಣ ಎಂದು. ವರ್ಣಗಣ ನಿಯಮಕ್ಕೆ ಒಳಪಟ್ಟುದು ವರ್ಣವೃತ್ತ ; ಮಾತ್ರಾ ಗಣನಿಯಮಕ್ಕೆ ಒಳಪಟ್ಟುದು ಮಾತ್ರಾವೃತ್ತ ಮತ್ತು ಅಂಶಗಣನಿಯಮಕ್ಕನುಸಾರವಾದುದು ಅಂಶವೃತ್ತ ಅಥವಾ 'ಮಟ್ಟು'

ವರ್ಣಗಣವನ್ನು ಲಘು ಮತ್ತು ಗುರುಗಳಿಂದ ಗುರುತಿಸಬೇಕು : (೧) ಹ್ರಸ್ವ ಸ್ವರಗಳಿಗೆ ಲಘುವೆಂದೂ ದೀರ್ಘಸ್ವರ, ಪ್ಲುತಸ್ವರ, ಅನುಸ್ವಾರ, ವಿಸರ್ಗಗಳಿಂದ ಕೂಡಿದ ವರ್ಣ, ಸಂಯುಕ್ತಾಕ್ಷರ ಅಥವಾ ಒತ್ತಕ್ಷರದ ಹಿಂದಿರುವ ವರ್ಣ ಇವು ಗುರುವೆಂದೂ ಸಂಜ್ಞೆಯುಂಟು. ಅರ್ಧವ್ಯಂಜನದ ಹಿಂದಿರುವ ವರ್ಣವೂ ಗುರುವೆನಿಸುವುದು.

(೨) ವ್ಯಾಕರಣದಲ್ಲಿ ಹೇಳಿರುವ ಶಿಥಿಲದ್ವಿತ್ವದ ಹಿಂದೆ ಇರುವ ಹ್ರಸ್ವಕ್ಕೆ ಗುರುತ್ವವಿಲ್ಲ

ಉದಾ :

uu u u u u uuu u u u u u u u u
ಅಲರ್ದ, ಬೆಮರ್ವ, ನೆಗಳ್ಗೆ, ಎರ್ದೆ, ಅಮರ್ದು, ಗರ್ದುಗ – ಇತ್ಯಾದಿ.

(೩) ಒಂದು ವರ್ಣವು ಗುರುವಾಗಲು ಹಲವು ಕಾರಣಗಳಿದ್ದರೂ ಆ ವರ್ಣವನ್ನು ಒಂದೇ ಗುರುವೆಂದು ತಿಳಿಯಬೇಕು.

- u - u - - u u - - u u
ಉದಾ : ಶಾಂತಿ, ಇಂದ್ರ, ಸಂಕ್ಷೋಭ, ಪುನಃಪ್ರಾರ್ಥನೆ.

(೪) ಪದ್ಯದ ಪಾದಾಂತದ ಲಘು ವಿಕಲ್ಪವಾಗಿ ಗುರು ಎನಿಸುವುದು. ಮಾತ್ರಾಗಣಘಟಿತ ಷಟ್ಪದಿಗಳಲ್ಲಿ ೩ ಮತ್ತು ೬ನೆಯ ಪಾದಾಂತದಲ್ಲಿ ಮುಕ್ತಾಯದ ಧ್ವನಿಗಾಗಿ ಕೊನೆಯ ಲಘು ವರ್ಣವನ್ನು ಗುರುವಾಗಿ ಎಳೆದು ಹೇಳಬೇಕೆಂದು ಈ ಮೊದಲೆ ತಿಳಿಸಿದ್ದಾಗಿದೆ.

ಕನ್ನಡದಲ್ಲಿ ಮುಖ್ಯವಾಗಿರುವ ಗಣಗಳು ಮೂರು ಪ್ರಕಾರದವು : ವರ್ಣಗಣ, ಮಾತ್ರಾಗಣ ಮತ್ತು ಅಂಶಗಣ ಎಂದು.

೧) ವರ್ಣಗಣ :

ಇವು ಎಂಟು ಪ್ರಕಾರದವು – ಮ, ಯ, ರ, ಸ, ತ, ಜ, ಭ, ನ ಎಂದು ಇವುಗಳ ಸ್ವರೂಪವನ್ನು – ಯಮಾತಾರಾಜಭಾನಸಲಗಂ ಸೂತ್ರದಿಂದ ತಿಳಿದುಕೊಳ್ಳುವುದುಂಟು. ಮೂರು ಮೂರು ವರ್ಣಗಳಿಂದ ವರ್ಣಗಣಗಳು ಹುಟ್ಟುತ್ತವೆ :–

u - -
೧. ಯಗಣದ ಸ್ವರೂಪವನ್ನು ಯಮಾತಾ ದಿಂದ

೨. ಮಗಣದ ಸ್ವರೂಪವನ್ನು		- - - ಮಾತಾರಾ	''
೩. ತಗಣದ	'' ''	- - u ತಾರಾಜ	''
೪. ರಗಣದ	'' ''	- u - ರಾಜಭಾ	''
೫. ಜಗಣದ	'' ''	u - u ಜಭಾನ	''
೬. ಭಗಣದ	'' ''	- u u ಭಾನಸ	''
೭. ನಗಣದ	'' ''	uuu ನಸಲ	''
೮. ಸಗಣದ	'' ''	uu - ಸಲಗಂ	'' ಅರಿತುಕೊಳ್ಳಬಹುದಾಗಿದೆ.

ಮೂರು ಮೂರು ವರ್ಣಗಳಿಂದಾಗುವ ಈ ವರ್ಣಗಣಗಳನ್ನು ಕೆಳಗಿನ ಈ ಕಂದ ಪದ್ಯದಿಂದಲೂ ತಿಳಿದುಕೊಳ್ಳಬಹುದು :

ಗುರುಲಘು ಮೂರಿರೆ ಮ–ನ–ಗಣ ।
ಗುರುಲಘು ಮೊದಲಲ್ಲಿ ಬರಲು ಭ–ಯ–ಗಣಮಕ್ಕುಂ ॥
ಗುರುಲಘು ನಡುವಿರೆ ಜ–ರ–ಗಣ ।
ಗುರುಲಘು ಕಡೆಯಲ್ಲಿ ಬರಲು ಸ–ತ–ಗಣಮಕ್ಕುಂ ॥
ಲಘುವಿಗೆ u ಈ ಚಿಹ್ನೆ ಗುರುವಿಗೆ – ಈ ಚಿಹ್ನೆ ರೂಢಿಯಲ್ಲಿವೆ.

೨) ಮಾತ್ರಾಗಣ :

ಮಾತ್ರಾಗಣವನ್ನು ಮಾತ್ರೆಗಳಿಂದ ಅರಿತುಕೊಳ್ಳಬೇಕು. ಒಂದು ಲಘುವಿಗೆ ಒಂದು ಮಾತ್ರೆ, ಒಂದು ಗುರುವಿಗೆ ಎರಡು ಮಾತ್ರೆಗಳು. ಮಾತ್ರಾಗಣಗಳು ಒಟ್ಟು ಆರು ಪ್ರಕಾರದವು ಪ್ರಚಲಿತವಾಗಿವೆ : ೩ ಮಾತ್ರೆಯ ಗಣ , ೪ ಮಾತ್ರೆಯ ಗಣ, ೫ ಮಾತ್ರೆಯ ಗಣ, ೬ ಮಾತ್ರೆಯ ಗಣ (೨+೪ ಇಲ್ಲವೆ ೪+೨), ೭ ಮಾತ್ರೆಯ ಗಣ (೩+೪), ೮ ಮಾತ್ರೆಯ ಗಣ (೩+೫) – ಹೀಗೆ ಆರು ಬಗೆಗಳು. ಇವುಗಳಿಗೆ ಉದಾಹರಣೆಗಳನ್ನು ಮುಂದೆ ಕೊಡಲಾಗುವುದು.

೩) ಅಂಶಗಣ :

ಇದರಲ್ಲಿ ಬ್ರಹ್ಮ ವಿಷ್ಣು ರುದ್ರ, ಎಂಬ ಮೂರು ತ್ರಿಮೂರ್ತಿಗಣಗಳಿವೆ. ಬ್ರಹ್ಮಗಣವು ಎರಡು ಅಂಶಗಳುಳ್ಳುದು, ವಿಷ್ಣುಗಣವು ಮೂರು ಅಂಶಗಳುಳ್ಳುದು, ರುದ್ರಗಣವು ನಾಲ್ಕು ಅಂಶಗಳುಳ್ಳುದು. ಈ ಮೂರರಲ್ಲಿ ಪ್ರತಿಯೊಂದರಲ್ಲೂ ಉಪಪ್ರಭೇದಗಳಿವೆ. ಅವುಗಳನ್ನು ಹೀಗೆ ಪ್ರಸ್ತಾರ ಮೂಲಕ ವಿಶದಪಡಿಸಬಹುದು:–

ಬ್ರಹ್ಮಗಣ : ಎರಡು ಅಂಶಗಳನ್ನು ಎರಡು ಗುರುಗಳಿಂದ ಆರಂಭಿಸಬೇಕು.

ಉದಾ :

- -
೧. - . - ಬ್ರಹ್ಮಂ
UU -
೨. U U . - ಸುರಪಂ
- U
೩. - U ಪ್ರೀತಿ
UUU
೪. U U . U ಕರಿಗೆ

– ಹೀಗೆ ಬ್ರಹ್ಮಗಣಗಳು ನಾಲ್ಕು ಪ್ರಕಾರದವು

ವಿಷ್ಣುಗಣ : ಮೂರು ಅಂಶಗಳನ್ನು ಮೂರು ಗುರುಗಳಿಂದ ಆರಂಭಿಸಬೇಕು.

ಉದಾ : - - -
೧. - . - . - ಗೋವಿಂದಂ
U U - -
೨. U U. - . - ಹೃದಯೇಶಂ
- U -
೩. - U - ನಾಕಿಗಂ
UUU -
೪. U U . U - ಕೆಲವರುಂ
- - U
೫. - . - U ಮಾಕಾಳಿ
UU - U
೬. U U. -. U ತ್ರಿಪುರಾರಿ
- U U
೭. - . U . U ಶ್ರೀಗುರು
UUUU
೮. U U.U.U ಅಜಗರ

– ಹೀಗೆ ವಿಷ್ಣು ಗಣಗಳು ಎಂಟು ಪ್ರಕಾರದವು

ರುದ್ರಗಣ : ನಾಲ್ಕು ಅಂಶಗಳನ್ನು ನಾಲ್ಕು ಗುರುಗಳಿಂದ ಅರಂಭಿಸಬೇಕು.

- - - -

೧. - . - . - . - ಗಂಗಾಧೀಶಂ

UU - - -

೨. U U. - . - . - ಗಿರಿಜಾನಾಥಂ

- U - -

೩. -. U. -. - ನೀಲಕಂಠಂ

U UU - -

೪. U U. U . - . - ವೃಷಭಲಕ್ಷ್ಯಂ

- - U -

೫. - . - . U . - ಕಾಮಾಂತಕಂ

U U - U -

೬. U U . - .U . - ಪ್ರಮಥಾಧಿಪಂ

- UU -

೭. - . U . U . - ಶೂಲಧರಂ

U UU U -

೮. U U. U U.- ಪುರಮಥನಂ

- - - U

೯. -. -. -. U ಕಂದರ್ಪಾರಿ

U U - - U

೧೦. U U. - .- .U ಮದನಧ್ವಂಸಿ

- U - U

೧೧. - . U. -. U ಚಂದ್ರಮೌಳಿ

U UU - U

೧೨. U U .U .-. U ಭುಜಗಧಾರಿ

- - U U

೧೩. - . - . U . U ಭೂತಾಗ್ರಣಿ

UU - U U

೧೪. U U . - . U . U ತ್ರಿಜಗದ್ಗುರು

- U U U

೧೫. - . U . U . U ಕಾಮರಿಪು

U UUUU

೧೬. U U . U . U . U ಮದನರಿಪು

– ಹೀಗೆ ರುದ್ರಗಣಗಳು ಹದಿನಾರು ಪ್ರಕಾರದವು.

೬. ಮಾತ್ರೆಯ ವಿಚಾರ

'ಮಾತ್ರೆ ' ಎಂಬ ಪದವು ವೈದ್ಯಶಾಸ್ತ್ರದಲ್ಲಿ ದ್ರವ್ಯವನ್ನು ಸೂಚಿಸುವುದಾದರೆ, ಛಂದಸ್ಸಿನಲ್ಲಿ ಕಾಲಪರಿಮಾಣವನ್ನು ಸೂಚಿಸುವುದಾಗಿದೆ. (ಮಾ = ಅಳತೆಮಾಡು) ಅದರ ಸ್ವರೂಪವನ್ನು ಛಂದಶ್ಶಾಸ್ತ್ರಕಾರರು ಹೀಗೆ ವಿವರಿಸುತ್ತಾರೆ.

೧) ನಿಮೇಷೋನ್ಮೇಷ ಕಾಲೇನ ಸಮಂ ಮಾತ್ರಾ ತು ಸಾ ಸ್ಮೃತಾ ।

ಕಣ್ಣನ್ನು ಸಹಜವಾಗಿ ಮುಚ್ಚಿ ತೆರೆಯುವ ಕ್ರಿಯೆಗೆ ಬೇಕಾಗುವ ಕಾಲ ಪರಿಮಾಣವನ್ನು ಒಂದು ಮಾತ್ರೆಗೆ ಸಮವೆಂದು ಹೇಳುತ್ತಾರೆ. ದೀರ್ಘ ಕಾಲದಲ್ಲಿ ಉಚ್ಚರಿಸಲ್ಪಡುವ ವರ್ಣವನ್ನು ದೀರ್ಘವೆನ್ನುತ್ತಾರೆ. ಕಾಲದ ಹ್ರಸ್ವತೆ, ದೀರ್ಘತೆಗಳನ್ನು ಅಳತೆಮಾಡಿ ತೋರಿಸುವುದಕ್ಕೆ 'ಮಾತ್ರೆ ' ಎಂಬ ಪರಿಭಾಷೆಯುಂಟು. ಹ್ರಸ್ವಾಕ್ಷರವನ್ನು ಒಂದು ಮಾತ್ರೆಯ ಕಾಲದಲ್ಲಿ, ದೀರ್ಘಾಕ್ಷರವನ್ನು ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲಾಗುತ್ತದೆ. ಒಂದು ಮಾತ್ರೆಯ ಹ್ರಸ್ವಾಕ್ಷರವು ಹ್ರಸ್ವಸ್ವರ ಇಲ್ಲವೆ ಯಾವುದೇ ಹ್ರಸ್ವಸ್ವರ ಕೂಡಿದ ವ್ಯಂಜನ, ಇಲ್ಲವೆ ಯಾವುದೇ ಹ್ರಸ್ವಸ್ವರ ಕೂಡಿದ ಸಜಾತೀಯ, ವಿಜಾತೀಯ ವ್ಯಂಜನಗುಚ್ಛವೂ ಆಗಿರಬಹುದು. ಈ ಮೂರು ಸಂದರ್ಭಗಳಲ್ಲೂ ಅಕ್ಷರ ಉಚ್ಚರಣೆಯ ಕಾಲ ಪ್ರಮಾಣವು ಒಂದೇ ಮಾತ್ರೆಯದಾಗಿರುತ್ತದೆ. ಉದಾ : ಅ, ಇ, ಎ, ಕ, ಕಿ, ಕೆ, ಕ್ಕ, ಕ್ಕಿ, ಕ್ಕೆ, ಕ್ರ, ಕ್ರಿ, ಕ್ರೆ, ಕ್ಷ್ಮ, ಕ್ಷ್ಮಿ, ಕ್ಷ್ಮೆ, ಇತ್ಯಾದಿ....

೨) ದೀರ್ಘಾಕ್ಷರದ ಉಚ್ಚರಣೆಯ ಕಾಲಪ್ರಮಾಣವು ಹ್ರಸ್ವಾಕ್ಷರದ ಕಾಲ ಪ್ರಮಾಣಕ್ಕೆ ಹಿಡಿಯುವ ಕಾಲಕ್ಕಿಂತ ಎರಡರಷ್ಟು ಇರುತ್ತದೆ. ಯಾವುದೇ ದೀರ್ಘಸ್ವರ ಇಲ್ಲವೆ ದೀರ್ಘಸ್ವರ ಕೂಡಿದ ಯಾವುದೇ ವ್ಯಂಜನ ಇಲ್ಲವೆ ದೀರ್ಘಸ್ವರ ಕೂಡಿದ ಯಾವುದೇ ಸಜಾತೀಯ, ವಿಜಾತೀಯ ವ್ಯಂಜನಗುಚ್ಛವಾಗಿರಬಹುದು. ಈ ಮೂರು ಸಂದರ್ಭಗಳಲ್ಲೂ ಅಕ್ಷರದ ಕಾಲ ಪ್ರಮಾಣವು ಎರಡು ಮಾತ್ರೆಗಳದ್ದು ಮತ್ತು ಸ್ವತಂತ್ರವಾದ ಸ್ವರವೋ ವ್ಯಂಜನವೋ ಸಜಾತೀಯ, ವಿಜಾತೀಯ ವ್ಯಂಜನಗುಚ್ಛವೋ ಕೂಡಿದ ಹ್ರಸ್ವಸ್ವರಕ್ಕಾಗಲಿ, ದೀರ್ಘಸ್ವರಕ್ಕಾಗಲಿ ಪರದಲ್ಲಿ ಅರ್ಧವ್ಯಂಜನ ಬಂದಾಗಲೂ ಅವು ಎರಡು ಮಾತ್ರೆಗಳುಳ್ಳವೆಂದು ಹೇಳಲಾಗುತ್ತದೆ. ಉದಾ : ಆ, ಈ, ಏ, ಕಾ, ಕೀ, ಕೇ, ಪ್ಪಾ, ಪ್ಪೀ, ಪ್ಪೇ,ಕ್ರೀ, ಕ್ರೇ, ಕ್ಷ್ಮಾ, ಕ್ಷ್ಮೀ, ಕ್ಷ್ಮೇ, ಇನ್, ಊರ್, ಕಳ್, ದಲ್, ತೀರ್, ಕ್ಕರ್, ನ್ದೋನ್, ಇತ್ಯಾದಿ...

ಮೇಲೆ ವಿವರಿಸಿದ ಒಂದು ಮಾತ್ರೆಯ ಹ್ರಸ್ವಾಕ್ಷರಕ್ಕೆ 'ಲಘು' ವೆಂದೂ ಎರಡು ಮಾತ್ರೆಗಳ ದೀರ್ಘಾಕ್ಷರಕ್ಕೆ 'ಗುರು' ಎಂದು ಹೇಳಲಾಗುವುದನ್ನು ತಿಳಿಸಲಾಗಿದೆ. ಹ್ರಸ್ವ–ದೀರ್ಘಗಳು ಛಂದಸ್ಸಿನಲ್ಲಿ ಗಣಗಳಲ್ಲಿ ಲಯದ ಕನಿಷ್ಠ ಅಂಶಗಳಾಗಿವೆ.

ಹ್ರಸ್ವವು ಒಂದು ಮಾತ್ರೆಯದು, ದೀರ್ಘವು ಎರಡು ಮಾತ್ರೆಯದು, ಪ್ಲುತವು ಮೂರು ಮಾತ್ರೆಯದು ಮತ್ತು ಅರ್ಧವ್ಯಂಜನವು ಅರ್ಧಮಾತ್ರೆಯದು ಎಂದು ಛಂದಶ್ಯಾಸ್ತ್ರಕಾರರು ಹೇಳುತ್ತಾರೆ. 'ವ್ಯಂಜನಂಗಳರೆ ಮಾತ್ರಿಕೆಗಳ್' ಎಂದು ಕನ್ನಡದ 'ಕಾವ್ಯಾವಲೋಕನಕಾರನು' 'ಶಬ್ದಸ್ಮೃತಿ' ಯಲ್ಲಿ ಹೇಳಿದ್ದಾನೆ. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ 'ಹ್ರಸ್ವಂ ಅದು 'ಏಕಮಾತ್ರಕಂ, ಧೀರ್ಘಂ ಉಭಯಮಾತ್ರಕಂ, ತ್ರಿಮಾತ್ರಕಂ ಪ್ಲುತಂ ಅಕ್ಕುಂ ಎಂದು ಹೇಳಿದ್ದಾನೆ. ಗುಬ್ಬಿಯ ಚಿಂವ್ಗುಟ್ಟುವಿಕೆ ಒಂದು ಮಾತ್ರೆಯದೆಂದೂ ಕಾಗೆಯ ಕಾಕಾ ಎಂಬ ಧ್ವನಿ ದ್ವಿಮಾತ್ರಕವೆಂದೂ ನವಿಲಿನ ಕೂಗು ತ್ರಿಮಾತ್ರಕವೆಂದೂ ಹೇಳಲಾಗುತ್ತದೆ. ಮುಂಗುಸಿ ಕಿಚಿಗುಟ್ಟುವಿಕೆ ಅರ್ಧಮಾತ್ರಕ. ಬೆಳಗಿನಲ್ಲಿ ಕೋಳಿಯ ಕೂಗು : ಕು, ಕೂ, ಕೂ – ಎಂಬವು ಕ್ರಮವಾಗಿ ಹ್ರಸ್ವ, ದೀರ್ಘ, ಪ್ಲುತಗಳೆಂದೂ ಗಣಿಸಲಾಗುತ್ತದೆ.

ಕ್, ಗ್, ಪ್ ಮುಂತಾದ ಅರ್ಧವ್ಯಂಜನಗಳು ಅರ್ಧಮಾತ್ರಕಗಳೆಂದು ಗಣಿಸಲಾಗಿದ್ದರೂ ಪದ್ಯಪಾದಗಳಲ್ಲಿ ಬರುವ ದಲ್, ಕಲ್ ಇತ್ಯಾದಿಗಳಲ್ಲಿ ಅರ್ಧವ್ಯಂಜನದ ಹಿಂದಿನ ಹ್ರಸ್ವಕ್ಕೆ ಗುರು ಚಿಹ್ನೆಯನ್ನು ಕೊಟ್ಟು ಅದು ಒಟ್ಟಿನಲ್ಲಿ ಎರಡು ಮಾತ್ರೆಗಳದ್ದೇಂದೇ ಪರಿಗಣಿಸಲಾಗುತ್ತದೆ. ಮತ್ತು ಕಾಲ್, ಪಾಲ್ ಇತ್ಯಾದಿಗಳಲ್ಲಿಯ ಅರ್ಧ ವ್ಯಂಜನದ ಹಿಂದಿನ ದೀರ್ಘಕ್ಕೂ ಗುರು ಚಿಹ್ನೆ ಒದಗಿ ಒಟ್ಟಿನಲ್ಲಿ ಅದೂ ಎರಡು ಮಾತ್ರಾಪ್ರಮಾಣದ್ದೆಂದೇ ಪರಿಗಣಿಸಲಾಗುತ್ತದೆ ಎಂಬುದನ್ನು ಗಮನಿಸಬೇಕು. ಪ್ಲುತಾಕ್ಷರಕ್ಕೆ ಗುರು ಚಿಹ್ನೆಯನ್ನು ಕೊಟ್ಟು ಮೇಲೆ '೩ ಮಾ' ಎಂದು ಬರೆಯುವುದೂ ಉಂಟು . ಉದಾ : U - ೩ ಮಾ

ಕು–ಕ್ಕೂ–ಕೂ

೭. ಪ್ರಾಸ ವಿಚಾರ

ಪದ್ಯದ ಪ್ರತಿಪಾದದಲ್ಲಿಯೂ ಮೊದಲಲ್ಲಿ ಒಂದನೆಯ ಮತ್ತು ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರುವುದು ಪ್ರಾಸದ ಸಾಮಾನ್ಯ ಲಕ್ಷಣವು. ಇದನ್ನು ಆದಿಪ್ರಾಸ ಇಲ್ಲವೆ ಖಂಡಪ್ರಾಸ ಎನ್ನುತ್ತಾರೆ. ಇದರಲ್ಲಿ ಸಿಂಹ, ಗಜ, ವೃಷಭ, ಅಜ, ಶರಭ ಮತ್ತು ಹಯ ಎಂದು ಆರು ಮುಖ್ಯ ಪ್ರಾಸ ಪ್ರಕಾರಗಳಿವೆ. ಈ ಬಗೆಯ ಪ್ರಾಸಗಳು ಸಾಮಾನ್ಯವಾಗಿ ಕಂಡು ಬಂದರೂ ಕೆಲವೆಡೆಗಳಲ್ಲಿ ಕವಿಗಳು ಮೇಲಿನ ನಿಯಮವನ್ನು ಮೀರಿದ್ದೂ ಉಂಟು. ಲ–ಳ ಪ್ರಾಸವನ್ನು ಶರಟ – ರೇಫ ಪ್ರಾಸವನ್ನೂ ಶಕಟರೇಫದಿಂದ ಕೂಡಿದ ಒತ್ತಕ್ಷರದೊಡನೆ ರೇಫೆಕೂಡಿದ ಒತ್ತಕ್ಷರವನ್ನೂ ಕೆಲವು ಕವಿಗಳು ಬಳಸಿದ್ದುಂಟು. ಶ–ಸ ಕಾರ ಪ್ರಾಸವೂ ಕೆಲವೆಡೆ ಕಂಡುಬರುವುದು. ಅಲ್ಲದೆ ವರ್ಗಪ್ರಾಸದ ಬಳಕೆಯೂ ಆಗಿದೆ. ಮೇಲೆ ಹೇಳಿದವು ಸಮೀಪ ಪ್ರಾಸಗಳು (ಉದಾ : ಲ–ಳ, ಶಕಟರೇಫ–ರೇಫ ಇ). ಹೀಗೆ ಅಕ್ಷರಗಳ ಉಚ್ಚರಣೆಯ ಅಲ್ಪ ಸಾದೃಶ್ಯವಿದ್ದಲ್ಲೆಲ್ಲ ಪ್ರಾಸವಿಡುವ ನಿಯ ಮಬಾಹಿರತೆ

ಕಂಡುಬಂದುದುಂಟು. ಅವೆಲ್ಲವೂ ಕವಿಯ ಪ್ರತಿಭಾದೌರ್ಬಲ್ಯದ ಇಲ್ಲವೆ ಆಲಸ್ಯದ ಕುರುಹು ಎನ್ನಬಹುದಾಗಿದೆ.

ಪ್ರಾಸದಲ್ಲಿ ಆದಿಪ್ರಾಸವಲ್ಲದೆ, ಮಧ್ಯಪ್ರಾಸ, ಅಂತ್ಯಪ್ರಾಸಗಳೆಂಬುವೂ ಇವೆ. ಮಧ್ಯಪ್ರಾಸಕ್ಕೆ ಅಚ್ಚಗನ್ನಡದ ತ್ರಿಪದಿಯನ್ನು ಉದಾಹರಣೆಯಾಗಿ ಕೊಡಬಹುದಾಗಿದೆ.

'ಸಾಲವ ಕೊಂಬಾಗ ಹಾಲೋಗರುಂಬಂತೆ '
'ಲಿಂಗಕ್ಕೆ ತೋರದ ನುಂಗಿದಡೆ ಏನಹುದು '
'ಮಲಯಜದ ಮರದೊಳಗೆ ಸಲೆ ಗಂಧವಿರ್ಪಂತೆ '

ತ್ರಿಪದಿಯ ಮೊದಲ ಪಾದಗಳಿವು. ಇಲ್ಲಿ ಪ್ರತಿಪಾದದ ಮಧ್ಯದಲ್ಲಿ ಯತಿಯ ಮುಂದೆ ಮಧ್ಯಪ್ರಾಸವಿದೆ.

ಅಂತ್ಯ ಪ್ರಾಸಕ್ಕೆ ರಗಳೆಯ ಪಾದಗಳನ್ನು ಉದಾಹರಿಸಬಹುದು.

ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ
ದೆಸೆಯ ನಿಚ್ಚೆಯಿಂದೆ ನೋಡಿ
ಸೊಗಯಿಪಂಚೆಯಂತಿರಾಡಿ.

– ಈ ಉತ್ಸಾಹ ರಗಳೆಯ ಪಾದಗಳಲ್ಲಿ ಆದಿ ಪ್ರಾಸವಿಲ್ಲ ; ಅಂತ್ಯಪ್ರಾಸವಿದೆ. ಇಲ್ಲಿ ಕಡೆಯ ವ್ಯಂಜನದ ಮೇಲಿನ ಸ್ವರವು ಒಂದೇ ಆಗಿ, ಹಿಂದೆ ದೀರ್ಘ ಹ್ರಸ್ವಗಳಲ್ಲಿ ಸಾಮ್ಯವಿರಬೇಕು. ಪಾಡಿ, ಕೂಡಿ, ನೋಡಿ ಎಂಬವುಗಳಿಗೆ ನೋಡು, ಕುಡಿ, ಪಿಡಿ ಇತ್ಯಾದಿ ಪದಗಳು ಪ್ರಾಸವಾಗಲಾರವು.

೮. ಯತಿ ವಿಚಾರ

ಪದ್ಯಗಳನ್ನು ಓದುವಾಗ ಅರ್ಥವು ಕೆಡದಂತೆ ಪದ್ಯ–ಪಾದದ ನಿಯತವಾದ ಒಂದೊಂದೆಡೆಯಲ್ಲಿ ನಿಲ್ಲಿಸುವುದು ಯತಿ. ಹಾಗೆ ನಿಲ್ಲಿಸುವಾಗ ಪದವು ಒಡೆದು ಅರ್ಥಸ್ಫೂರ್ತಿ ಕೆಡುವಂತಾದರೆ ಅದು ಯತಿಭಂಗ ಎನಿಸಿಕೊಳ್ಳುವುದು. ಕನ್ನಡದ ಕವಿಗಳು ಸಂಸ್ಕೃತದ ವರ್ಣವೃತ್ತಗಳಲ್ಲಿ ಯತಿಯ ಉಲ್ಲಂಘನೆ ಮಾಡುವುದೇ ಹೆಚ್ಚು. ಇಲ್ಲಿ ಕೆಲವು ವರ್ಣವೃತ್ತಗಳ ಪಾದಗಳನ್ನು ಪರಿಶೀಲಿಸುವ :

ಹರಿಣೀವೃತ್ತ :

ಗ್ರಥಿತಪದಪೀ । ತಾಗ್ರಂ ಕೇಯೂ । ರಮಂ ತಳೆವಂದದಿಂ

ಮಂದಾಕ್ರಾಂತವೃತ್ತ :

ಲಂಕಾರಂಗಳ್ ನಯನ ಸುಖಮಂ ಮಾಡೆ ಬಂದರ್ಘ್ಯಮಂ ಯ ।
ಕ್ಕಂ ಕೊಟ್ಟಂ ರಾ। ಘವನ ಚರಣ । ಕ್ಕಿನ್ನರಾರ್ ಧ್ವಜಸ್ತ್ರರ್ ॥

ಮಾಲಿನೀ ವೃತ್ತ :

ಅಮಲಕನಕದುದ್ಯ । ದ್ವೇದಿಸುತ್ತಿರ್ಪುದೊಪ್ಪು ।
ತ್ತಮೆ ರಜತ ಚತುರ್ದ್ವಾ । ರಂಗಳಿಂ ಮಂಗಳಾದ್ಯು ।
ತ್ತಮನವನಿಧಿ..............................

– ಹರಿಣೀವೃತ್ತದ ಪಾದದಲ್ಲಿ 'ಪೀಠ ', 'ಕೇಯೂರ' ಪದಗಳು ಯತಿಸ್ಥಾನದಲ್ಲಿ ಒಡೆಯುವುದರಿಂದ ಯತಿಭಂಗವಾಗಿದೆ. ಮಂದಾಕ್ರಾಂತವೃತ್ತದ ಪಾದದಲ್ಲಿ 'ಯಕ್ಷ', 'ರಾಘವ ' ಪದಗಳೂ ಅದೇ ರೀತಿಯಲ್ಲಿ ಒಡೆದಿವೆ. ಮಾಲಿನೀವೃತ್ತದ ಪಾದದಲ್ಲಿ 'ದ್ವಾರ ' ಮತ್ತು 'ಉತ್ತಮ' ಪದಗಳೂ ಯತಿಸ್ಥಾನದಲ್ಲಿ ಅರ್ಥಸ್ಫೂರ್ತಿ ಕೆಡುವಂತೆ ಛೇದಗೊಂಡಿವೆ. ಕನ್ನಡ ಕವಿಗಳು ಈ ಮೊದಲೆ ಸೂಚಿಸಿದಂತೆ ಸಂಸ್ಕೃತ ಕವಿಗಳಂತೆ ಯತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ. ಯತಿಯ ವಿಚಾರದಲ್ಲಿ ಕವಿರಾಜಮಾರ್ಗಕಾರನು

............ಪೂರ್ವಾಚಾರ್ಯರ್
ದೇಸಿಯೆನೆ ಸಿರಿಸಿ ಖಂಡ
ಪ್ರಾಸ ಮನತಿಶಯಮಿದೆಂದು ಯತಿಯಂ ಮಿಕ್ಕರ್ ॥

ಎಂದಿದ್ದಾನೆ. ಎಂದರೆ ಕನ್ನಡದ 'ಪೂರ್ವಾಚಾರ್ಯರು ಕನ್ನಡ ಕಾವ್ಯಗಳಲ್ಲಿ ಖಂಡಪ್ರಾಸವು 'ದೇಸಿ' ಎಂದರೆ ಶೋಭೆಯುಂಟು ಮಾಡುವಂಥದು ಎಂದು ಅದನ್ನಿರಿಸಿಕೊಂಡು ಯತಿ 'ಅತಿಶಯ' ಎಂದರೆ ಹೆಚ್ಚಿನದು (Super fluous) ಎಂದು ಅದನ್ನು ಮೀರಿದರು ಎನ್ನುತ್ತಾನೆ. ಛಂದೋಂಬುಧಿಯ ನಾಗವರ್ಮನು –

ಯತಿಯೆಂಬುದು ಗಣನಿಯಮ ।
ಪ್ರತೀತಮೆಂದರೆ ಬ ರೊ ಲ್ವ ರಂ ತ ದ ನೆ ಕೆ ಲ ರ್ ॥
ಶ್ರುತಿಸುಭಗಂ ಸ್ವಚ್ಛಂದಂ ।
ಯತಿಯೆಂದಾ ಕಪಿಲ ಪಿಂಗಳಾದಿಗಳೊಲ್ಲರ್ ॥

ಎಂದಿದ್ದಾನೆ. ಯತಿಯೆಂಬುದು ಗಣನಿಯಮದಂತೆ ವೇದ್ಯವಾಗುವಂಥದು ಎಂದು ಕೆಲವರು ಅದನ್ನು ಮೆಚ್ಚಿ ಪಾಲಿಸುತ್ತಾರೆ. ಕಪಿಲ ಪಿಂಗಳಾದಿ ಇನ್ನು ಕೆಲವರು ಯತಿ ಶ್ರುತಿಸುಭಗವೂ ಸ್ವಚ್ಛಂದವೂ ಆಗಿರುವುದೆಂದು ಅದನ್ನು ಉಲ್ಲಂಘಿಸುತ್ತಾರೆ ಎನ್ನುತ್ತಾನೆ. ಈ ಉಕ್ತಿಯ ಬೆಂಬಲದಿಂದ ಬಹುಶಃ ಕನ್ನಡ ಕವಿಗಳು ಪಾಲಿಸುವ ಯತಿ 'ಅರ್ಥಯತಿ', 'ಸುಭಗಯತಿ', 'ಸಹಜಯತಿ', 'ಸ್ವಚ್ಛಂದಯತಿ' ಎಂದು ಮೊದಲಾಗಿ ಹೇಳುತ್ತ ಸಂಸ್ಕೃತ ಛಂದಸ್ಸಿನ ಯತಿ ನಿಯಮವನ್ನು ಉಲ್ಲಂಘಿಸುತ್ತಾರೆ. ಕನ್ನಡದಲ್ಲಿ ರಚಿತವಾದ ವರ್ಣವೃತ್ತಗಳ ಪಾದಗಳನ್ನು ಸರಾಗವಾಗಿ ಆರೋಹ – ಅವರೋಹ ಲಯದಲ್ಲಿ ಹಾಡುವಾಗ ನಡುನಡುವೆ ಬರುವ ಯತಿಸ್ಥಾನಗಳಲ್ಲಿ ನಿಂತರೆ ಲಯಕ್ಕೇ ಭಂಗ ಬರುವ ಸಂಭವವುಂಟಾದ್ದರಿಂದ ಪದ್ಯ ಪಾದದ ಕೊನೆಯವರೆಗೆ ಉಸಿರು ತಡೆದುಕೊಳ್ಳುವುದರಿಂದ ಮಧ್ಯದ ಯತಿಯ ಉಲ್ಲಂಘನೆ ಮಾಡುವುದೇ ಕನ್ನಡದ ಲಕ್ಷಣವಾಗಿದೆ ಎನ್ನುವವರೂ ಇದ್ದಾರೆ. ಕೇಶಿರಾಜನು ಕನ್ನಡ ಭಾಷೆಯ ಅಸಾಧಾರಣ

ಲಕ್ಷಣಗಳನ್ನು ಹೇಳುವಾಗ ಒಂಭತ್ತನೆಯದು 'ಯತಿವಿಲಂಘನ' ಎಂದಿದ್ದಾನೆ.

'ಯತಿ ವಿಲಂಘನದಿಂದರಿದಲ್ತೆ ಕನ್ನಡಂ'

– ಎಂಬುದು ಆತನ ಘೋಷಣೆಯಾಗಿದೆ. ಒಟ್ಟಿನಲ್ಲಿ ಕನ್ನಡದಲ್ಲಿ ಯತಿ ಐಚ್ಛಿಕ, ನಿಯತವಲ್ಲ, ಸಂಸ್ಕೃತದ ವರ್ಣವೃತ್ತಗಳಲ್ಲಿ ಹೀಗೆ ಯತಿ ಐಚ್ಛಿಕವೆನಿಸಿದರೂ ತ್ರಿಪದಿ ಮುಂತಾದ ಅಚ್ಚಗನ್ನಡದ ಮಟ್ಟುಗಳಲ್ಲಿ ಯತಿ ಉಲ್ಲಂಘನೆಯಾಗದೆ ಸುಭಗ ರೀತಿಯಲ್ಲಿ ಗೋಚರಿಸುತ್ತದೆ :

ಉದಾ :

'ಸಜ್ಜನರ ಸಂಗವದು । ಹೆಜ್ಜೇನು ಸವಿದಂತೆ '
'ಜ್ವರವಾದ ಮನುಜಂಗೆ । ನೊರೆವಾಲು ಕಹಿಯಕ್ಕು '
'ಕೊಲುವ ಧರ್ಮವನೊಯ್ದು । ಒಲೆಯೊಳಗಿಕ್ಕುವುದು '
'ಮಂಡೆ ಬೋಳಾದವರ । ಕಂಡಿನ್ನು ನಂಬದಿರು'

– ಇಲ್ಲೆಲ್ಲ ಪ್ರಾಸವೇ ಯತಿಯನ್ನು ಎತ್ತಿ ತೋರಿಸುವುದನ್ನು ಗಮನಿಸಬಹುದಾಗಿದೆ.

೯. ವಡಿ ವಿಚಾರ

'ವಡಿ' ಯ ಪ್ರಸ್ತಾಪ ಮೊದಲು ಕಂಡುಬರುವುದು ಈಶ್ವರಕವಿ (ಕ್ರಿ.ಶ. ೧೫೦೦) ಯ 'ಕವಿಜಿಹ್ವಾಬಂಧನ' ದಲ್ಲಿ. ವಡಿಯೆಂಬ ಛಂದೋವಿಷಯದ ಪ್ರಕ್ರಿಯೆ ತೆಲುಗು ಕವಿತ್ವಕ್ಕೆ ಹೆಚ್ಚಾಗಿ ಸಂಬಂಧಿಸಿದ್ದು ಎಂದು ಈಶ್ವರಕವಿ ಆರಂಭದಲ್ಲಿಯೇ ಹೇಳಿ ಆಂಧ್ರ ಮಾರ್ಗದಲ್ಲಿ ಹೇಳಿದ್ದನ್ನು ವಿಶದಪಡಿಸುವುದಾಗಿ ಹೇಳುತ್ತಾನೆ. ಅವನು ಹೇಳುವುದರ ಸಾರವಿಷ್ಟು : ಹಾಡುಗಬ್ಬದ ಮಟ್ಟುಗಳಲ್ಲಿ ಪಾದದ ಮೊದಲನೆಯ ವರ್ಣವನ್ನು ಪಾದದ ನಡುವೆ ಬರುವ ಯತಿಸ್ಥಾನದಲ್ಲಿಯೂ ತಂದರೆ ಅದನ್ನು ಭೀಮಣಾದ್ಯರು ಎಂಬುವರು ಐದನ್ನು ಹೇಳುತ್ತಾರೆ. ಸ್ವರವಡಿ, ಸರಸದವಡಿ, 'ಎಕವರ್ಣಸಂಧಿಪವಡಿ, ಸಂಯುಕ್ತಾಕ್ಷರ ಬೆರಸಿದವಡಿ ಮತ್ತು ವರ್ಗವಡಿ ಎಂದು. ಈಶ್ವರ ಕವಿಯ ಈ ಪದ್ಯವನ್ನು ಪರಿಶೀಲಿಸಿದಾಗ ಭೀಮಣಾದ್ಯರು ಹೇಳುವ ವಡಿ ಪ್ರಕಾರಗಳೇ ಅಲ್ಲಿಯೂ ಕಂಡುಬರುವುದನ್ನು ನೋಡಬಹುದು.

ಸ್ವರವಡಿಯೆಂದುಂ ಮತ್ತುಂ ।
ಸರಸದ ವಡಿ, 'ಏಕವರ್ಣ । ಸಂಧಿಪ ವಡಿಯುಂ ॥
ನಿರುತಂ ಸಂಯುಕ್ತಾಕ್ಷರ ।
ಬೆರಸಿದ ವಡಿ ವರ್ಗವಡಿಯ । ಭೇದಗಳೈದುಂ ॥

(ಕ.ಜಿ.ಬಂ – ೨–೨೧)

ಈ ಕಂದಪದ್ಯದಲ್ಲಿ ಮೇಲೆ ಹೇಳಿರುವ ಐದು ಪ್ರಕಾರದ ವಡಿಗಳೇ ಉಕ್ತವಾಗಿವೆ. ಈ ಕಂದ ಪದ್ಯದಲ್ಲಿ ಈಶ್ವರ ಕವಿಯ ಲಕ್ಷ್ಯ–ಲಕ್ಷಣ ಪದ್ಧತಿಯ ರಚನೆ ಕಂಡುಬರುತ್ತದೆ. ಈ ಪದ್ಯದ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ 'ಸ–ಸ, ಬೆ–ಭೇ ವರ್ಣಗಳು ಯತಿಸ್ಥಾನದ

ಮುಂದೆ ಬಂದಿವೆ. ಇಲ್ಲಿ ಯತಿಸ್ಥಾನಗಳನ್ನು । ಈ ಗುರುತಿನಿಂದ ಸೂಚಿಸಲಾಗಿದೆ. ವರ್ಣವೃತ್ತಗಳಲ್ಲಿ ವಡಿ ಪಾದಪಾದಗಳಲ್ಲಿಯೂ ಕಂಡುಬರುತ್ತಿದೆ. ಈಚಿನ 'ನಂದಿ ಛಂದೋರ್ಣವ' ವೆಂಬ ಗ್ರಂಥದಿಂದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಕೆಳಗಿನ ಈ ಪದ್ಯವನ್ನು ಉದಾಹರಿಸಿದ್ದಾರೆ.

ಬುಧವರಗಣಯುಗ್ಮಂ । ಮುಂತೆ ಭೂವರಿ ಯುಗ್ಮಂ ।
ವಿಧಿ ಪದದಿ ಬರಲ್ಕಾ । ವಿಶ್ರಮಂ ಮಾಲಿನೀ ಕೇಳ್ ।
ಬುಧ ಜನ ನಿವಹಕ್ಕಂ । ಭೂರಿ ಸಂತೋಷಮಕ್ಕುಂ ।
ವಿಧುಮುಖಿ ನಿನಗೆಂದುಂ । ಪೇಳ್ವುದೇಂ ಕೇಳ್ವುದೆಂದುಂ ॥

ಈ ಮಾಲಿನೀ ವೃತ್ತದಲ್ಲಿ ಪ್ರತಿಪಾದದಲ್ಲಿ ಎಂಟನೆಯ ಮತ್ತು ಏಳನೆಯ ವರ್ಣಕ್ಕೆ (ಎಂದರೆ ಪಾದದ ಕೊನೆಗೆ) ಯತಿ ಬರುತ್ತದೆ. ಇಲ್ಲಿ ವಡಿಯನ್ನು ಪಾಲಿಸಿದ್ದನ್ನು ಕಾಣಬಹುದಾಗಿದೆ. ಬ–ಮು, ವಿ–ವಿ, ಬು–ಭೂ, ಇವು ವಡಿಗೆ ಉದಾಹರಣೆಗಳು. ಮೇಲಿನ ಈ ಉದಾಹರಣೆಗಳಿಂದ ಕಂದ ಪದ್ಯದಲ್ಲಿ ಮತ್ತು ಸಮವೃತ್ತಗಳಲ್ಲಿ ಯತಿಸ್ಥಾನದ ಬಳಿಕ ಪಾದದ ಆದಿಯ ವರ್ಣವು ಅಥವಾ ಅದರ ಸವರ್ಣವು ಪುನರಾವರ್ತನಗೊಳ್ಳುವುದು. ಇದೇ ವಡಿಯ ನಿಯಮ. ಪಾದದ ಮೊದಲ ವರ್ಣ ಹೀಗೆ ಯತಿ ಸ್ಥಾನದ ಬಳಿಕ ಮತ್ತೆ ಕಾಣಿಸಿಕೊಂಡರೆ ಆ ಮೊದಲ ವರ್ಣ ವಡಿ ಎನಿಸಿ ಕೊಳ್ಳುತ್ತದೆ ಮತ್ತು ಆವರ್ತನಗೊಂಡ ವರ್ಣವನ್ನೂ ವಡಿ ಎನ್ನುವ ರೂಢಿಯಿದೆ.

'ವಡಿ' ಪದದ ನಿಷ್ಪತ್ತಿ ಅಥವಾ ಮೂಲವನ್ನು ಕುರಿತು ಅಭಿಪ್ರಾಯ ಭೇದವಿದೆ. ಇದು ಸಂಸ್ಕೃತೇತರ ಪದವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ತೆಲುಗಿನ 'ವಡು' (–ಮಾರ್ಗ) ಎಂಬುದರಿಂದ ವಡಿ ಹುಟ್ಟಿದೆ ಎಂಬವರೂ ಇದ್ದಾರೆ. ವಡಿ ಎಂದರೆ ವೇಗ ಎಂಬರ್ಥ ತೆಲುಗಿನಲ್ಲುಂಟು. ಪಾದದಲ್ಲಿ ಯತಿಯ ಕಾರಣದಿಂದ ಪೂರ್ವೋತ್ತರಾರ್ಧಗಳು ವಿಭಜನೆಗೊಂಡಾಗ ಅವುಗಳ ನಡುವೆ ಆ ವಿಭಜನೆ ಆಗದಂತೆ ವೇಗವನ್ನು ಸಾಧಿಸುವುದಕ್ಕೆಂದು ಪೂರ್ವಾರ್ಧದ ಮೊದಲ ವರ್ಣವನ್ನೇ ಬಳಸುವ ಕ್ರಮವುಂಟಾಯ್ತು. ಆದ್ದರಿಂದ ಇದಕ್ಕೆ ವಡಿ ಎಂಬ ಹೆಸರಾಯ್ತು ಎನ್ನುವವರೂ ಇದ್ದಾರೆ. ವಳಿ ಎಂದರೆ ಹೆಣ್ಣುಮಕ್ಕಳ ಹೊಟ್ಟೆಯ ಮಡಿಕೆ. ಇದು ಹೆಂಗಸರ ಸಹಜಾಲಂಕಾರವೆಂಬ ಕಲ್ಪನೆಯಿದೆ. ಅದು ಹೇಗೆ ವಿಭಜನೆಗೊಂಡಂತೆ ಚೆಲುವಾಗಿ ಕಾಣುವುದೋ ಹಾಗೆಯೆ ಪದಾದಿಯಲ್ಲಿಯೂ ಯತಿಸ್ಥಾನದ ಬಳಿಕವೂ ವಡಿಯನ್ನು ಸಹಜಾಲಂಕಾರವಾಗಿ ಕಾಣುತ್ತೇವೆ. ಲಡ–ಳಗಳ ಅಭೇದದಿಂದ ವಳಿ ವಡಿ ಎಂದಾಗಿದೆ. ಇವೆಲ್ಲ ನಿಷ್ಪತ್ತಿ ವಿಚಾರಗಳು ತುಂಬ ಕ್ಲಿಷ್ಟವೆನ್ನ ಬಹುದಾಗಿದೆ.

ಕನ್ನಡ ವಿದ್ವಾಂಸರಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳು, ಚೆನ್ನಕೇಶವ ಅಯ್ಯಂಗಾರರು, ಎಚ್.ಶೇಷಅಯ್ಯಂಗಾರರು, ಆರ್.ಎಸ್. ಪಂಚಮುಖಿಯವರು ವಡಿಯ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದುಂಟು. ಒಬ್ಬರು ಈ ಪದ ತಮಿಳಿನದೆಂದರೆ ಇನ್ನೊಬ್ಬರು ತೆಲುಗಿನದೆಂದಿದ್ದಾರೆ. ಶೇಷ ಅಯ್ಯಂಗಾರರು ಇದು 'ವಡ ವೇಷ್ಟೇ ವಿಭಾಗೇ' ಎಂದು ನಿಷ್ಪತ್ತಿ ಹೇಳಿ ಇದು ಸಂಸ್ಕೃತದ್ದೆಂದು ಸಾಧಿಸಲು ಯತ್ನಿಸಿದ್ದಾರೆ. ಇದಕ್ಕೆ ಸುತ್ತಿಕೊಳ್ಳುವುದು,

ವಿಭಾಗ ಎಂಬರ್ಥಗಳಿವೆ ಎಂದಿದ್ದಾರೆ. ಆದ್ದರಿಂದ ಸಂಸ್ಕೃತದ ವಡ ಧಾತುವಿನಿಂದ ವಡಿ ಆಗಿದೆ; ಪಾದದ ಮೊದಲ ವರ್ಣದ ಆವೃತ್ತಿ ಎಂಬರ್ಥ ಇಲ್ಲಿದೆ ಇತ್ಯಾದಿಯಾಗಿ ಹೇಳುತ್ತಾರೆ.

ಕನಕದಾಸರು ತಮ್ಮ ಮೋಹನ ತರಂಗಿಣಿ ಕಾವ್ಯದಲ್ಲಿ –

"ವಡಿ ಪ್ರಾಸ ಗು(ಗ)ಣ ನೇಮವುಚಿತಾರ್ಥ ಲಕ್ಷಣ ।

ವಿಡಿಕಿರಿದಿಹ ಭಾವಚಿತ್ರ........

(ಮೋ.ತ. ೧-೧೯)

– ಎಂದು ಹೇಳಿರುವುದರಿಂದ ವಡಿಯನ್ನು ಅವರು ಬಲ್ಲವರಾಗಿದ್ದರೆನ್ನ ಬಹುದಾಗಿದೆ. ಆದರೆ ವಡಿಯನ್ನು ಉದ್ದೇಶಪೂರ್ವಕವಾಗಿ ಬಳಸಿರುವುದು ತುಂಬ ವಿರಳ. ವಡಿ ಎಂದರೆ ಯತಿ ಎಂಬ ಸಾಮಾನ್ಯಾರ್ಥ ಅವರದಾಗಿರಬಹುದೆಂದೂ ಕೆಲವರ ಅಭಿಪ್ರಾಯ.

ಕನ್ನಡ ವಿದ್ವಾಂಸರು ಕೆಲವರು ಪ್ರಾಚೀನ ಕವಿಗಳಾದ ಪಂಪನಂಥವರೂ ವಡಿಯನ್ನು ಬಳಸಿರುವಂತೆ ಕೆಲವು ಉದಾಹರಣೆಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ.

ಪುರುಪರಮೇಶ್ವರ ಪುತ್ರಂ ।
ಭರತೇಶ್ವರ ಚಕ್ರವರ್ತಿ ಬಂದಿರ್ದಂ ತ – ॥
ದ್ಧರಣಿ ನಿವಾಸಿಗಳುಂ ವ್ಯಂ ।
ತರಾಮರರ್ಬಂದು ಕಾಣ್ಬುದವನತಮಕುಟರ್ ॥

(ಆ. ಪು. ೧೨-೭೯)

– ಇಲ್ಲಿ ಪು – ಭ, ತ–ದ ಗಳು ವಡಿಗೆ ಉದಾಹರಣೆಗಳೆಂದು ಹೇಳುವವರಿದ್ದಾರೆ. ವಡಿ ಎಂಬುದು ಪ್ರಾಸ ವೈಚಿತ್ರ್ಯವೊ ಯತಿವೈಚಿತ್ರ್ಯವೋ ಎಂಬ ಬಗ್ಗೆಯೂ ತೆಲುಗು ಪಂಡಿತರಲ್ಲಿ ವಾದವಿದೆ. ಪ್ರಾಸಾಕ್ಷರದ ಆವೃತ್ತಿಯಾದ್ದರಿಂದ ಪ್ರಾಸ ವೈಚಿತ್ರ್ಯವೆಂದೂ ಯತಿಸ್ಥಾನದ ಬಳಿಕ ಬರುವುದರಿಂದ ಯತಿವೈಚಿತ್ರ್ಯವೆಂದೂ ಹೇಳಬಹುದಾಗಿದೆ. ಛಂದೋಂಬುಧಿಯಲ್ಲಿಯ 'ಲಲಿತ ವೃತ್ತ' ದ ಈ ಪಾದವನ್ನು ನೋಡಬಹುದು.

ತಾನೆ ಶಶಿ ಸೂರ್ಯಪವ । ಮಾನ ಸುರ ಶೀತಕರ । ಭಾನು ಮರು
ದಿಂದ್ರ ವಿಧು । ತೋಯದೆ ವಿರಾಮ
ಸ್ಥಾನ ಮೆಸೆಗುಂ...

– ಇಲ್ಲಿ ಯತಿ ಸ್ಥಾನದ ಬಳಿಕ ಪ್ರಾಸಾಕ್ಷರ ಬಂದಿದೆ. ಇದೂ ಒಂದು ಬಗೆಯ ಪ್ರಾಸವೈಚಿತ್ರ್ಯಕ್ಕೆ ಅಥವಾ ಯತಿ ವೈಚಿತ್ರ್ಯಕ್ಕೆ ಉದಾಹರಣೆ.

ಅಚ್ಚಗನ್ನಡ ಮಟ್ಟುಗಳಾದ ತ್ರಿಪದಿ, ಅಕ್ಕರ, ಸಾಂಗತ್ಯ ಮುಂತಾದವುಗಳಲ್ಲಿ ವಡಿ ತೋರುವುದನ್ನು ಗಮನಿಸಬಹುದಾಗಿದೆ. ಉದಾ :

ಆಡಿ ಬಾ ಎನಕಂದ : ಅಂಗಾಲ ತೊಳೆದೇನು
ತೆಂಗೀನ ಕಾಯಿ ತಿಳಿನೀರ । ತಕ್ಕೊಂಡು

ಬಂಗಾರ ಮಾರಿ ತೊಳದೇನ

– ಇಲ್ಲಿ ಆ – ಅ, ತೆ – ತ ಗಳಲ್ಲಿ ವಡಿ ಗೋಚರಿಸಿದೆ.

ಪಂಪನ ಈ ಪಿರಿಯಕ್ಕರವನ್ನು ಪರಿಶೀಲಿಸಬಹುದು ;

ಪಿರಿಯ ಮರಂಗಳೆ ಮಾಡಮಾಗೆ । ಪೊಳೆವೆಳದಳಿರ್ಗಳೆ ಸೆಜ್ಜೆಯಾಗೆ
ಪಿರಿಯ ಮಡುಗಳೆ ಮಜ್ಜನಮಾಗೆ । ಪೊಸ ನಾರೆ ದೇವಾಂಗವಸ್ತ್ರಮಾಗೆ
ಪರೆದ ತರಗೆಲೆಯೆ ಪರಿಯಣಮಾಗೆ । ಪಣ್ಗಲ ಮೆತ್ತಿದ ಬೋನಮಾಗೆ
ಪಿರಿಯ ಮಹಿಮೆಯಂ ಮೆರೆಯಲೇನಾರ್ತುದೊ । ಬನದೊಳಿರ್ಪ
ರವಾ ಪಾಂಡವರಾ ॥

(ಪಂ. ಭಾ. ೭–೨೮)

– ಇಲ್ಲಿ ಕೆಳಗೆ ಗೆರೆ ಹಾಕಿದ ವರ್ಣಗಳ ಆವೃತ್ತಿಯಲ್ಲಿ ವಡಿ ಗೋಚರಿಸುತ್ತಿದೆ.

ಚಿಕ್ಕದೇವರಾಜ ಒಡೆಯರ 'ಗೀತ ಗೋಪಾಲ' ದ ಈ ಪದ್ಯವನ್ನೂ ನೋಡಬಹುದು.

ಆರಯ್ಯೆ ಮುಗ್ಗಿಸುವಂಥನ ತಪ್ಪೋ
ದಾರಿದೋರುವ ದಂಡ ಧಾರನ ತಪ್ಪೋ
ಮೇರೆಯರಿಯದೆನ್ನ ಮೇಲಣ ತಪ್ಪೋ
ನಾರಾಯಣ ನಿನ್ನ ನಟನೆಯ ತಪ್ಪೋ.

– ಇಲ್ಲಿಯೂ ಕೆಳಗೆ ಗೆರೆಯೆಳೆದ ವರ್ಣಗಳ ಆವೃತ್ತಿಯಲ್ಲಿ ವಡಿ ಇದೆ. ಇಲ್ಲೆಲ್ಲ ಪ್ರಾಸ, ವಡಿ, ಯತಿಗಳ ಸಾಮರಸ್ಯ ಕಂಗೊಳಿಸುತ್ತಿದೆ. ಕನ್ನಡದ ಜನಪದ ಸಾಹಿತ್ಯದಲ್ಲಿ ವಡಿ ಸ್ವಯಂಸ್ಫೂರ್ತವಾಗಿ ಗೋಚರಿಸಿದ್ದನ್ನೂ ಒಪ್ಪಬಹುದಾಗಿದೆ. ಆದರೆ ಪ್ರಾಚೀನ ಕವಿಗಳಲ್ಲಿ ಆಕಸ್ಮಿಕವೆಂಬಂತೆ ಕಾಣಬರುವ ವಡಿಯ ನಿದರ್ಶನಗಳನ್ನು ನೋಡಿದಾಗ ಅವರು ಖಂಡಪ್ರಾಸಕ್ಕೆ ಕೊಟ್ಟ ರೀತಿಯಲ್ಲಿ ವಡಿಗೆ ಮಹತ್ವವೀಯಲಿಲ್ಲ ಎನ್ನಬೇಕು.

ಒಟ್ಟಿನಲ್ಲಿ ತೆಲುಗಿನ ಲಕ್ಷಣಕಾರರನ್ನು ಅನುಸರಿಸಿ ಈಶ್ವರ ಕವಿಗಳಂಥವರು ವಡಿ ವಿಚಾರವನ್ನು ತಮ್ಮ ಶಾಸ್ತ್ರ ಗ್ರಂಥಗಳಲ್ಲಿ ಹೇಳಿದ್ದಾರೆ. ಪ್ರಾಚೀನ ಕನ್ನಡ ಕವಿಗಳು ವಡಿಯನ್ನು ಉದ್ದೇಶಪೂರ್ವಕವಾಗಿ ಪಾಲಿಸುತ್ತ ಬಂದಿದ್ದರೆ ಪ್ರಾಚೀನ ಲಕ್ಷಣಕಾರರು ಈ ಬಗ್ಗೆ ಹೇಳುವುದನ್ನು ಬಿಡುತ್ತಿರಲಿಲ್ಲ ಎನ್ನಬಹುದಾಗಿದೆ.

★★★

ಅಧ್ಯಾಯ : ೨

ವರ್ಣಛಂದಸ್ಸು – ವರ್ಣ ವೃತ್ತಗಳು

ಮುಖ್ಯಾಂಶಗಳು :

೧. ವರ್ಣವೃತ್ತ, ಮಾತ್ರಾವೃತ್ತಗಳಲ್ಲಿಯ ಭೇದ

೨. ವೈದಿಕ ಛಂದಸ್ಸು : ಹಿನ್ನೆಲೆ.
(೧) ಗಾಯತ್ರಿ (೨) ಅನುಷ್ಟುಪ್ಪು (೩) ಶ್ಲೋಕ
(೪) ತ್ರಿಷ್ಟುಪ್ಪು

೩. ವರ್ಣವೃತ್ತ ಪ್ರಕಾರಗಳು

೪. ಖ್ಯಾತ ಕರ್ಣಾಟಕ ವೃತ್ತಗಳು

೫. ವರ್ಣವೃತ್ತಗಳ ಸಾಮಾನ್ಯ ವೈಲಕ್ಷಣ್ಯಗಳು :
ಕೆಲವು ವರ್ಣ ವೃತ್ತಗಳು :
(೧) ಉಪೇಂದ್ರವಜ್ರ (೨) ಇಂದ್ರವಜ್ರ (೩) ಭುಜಂಗಪ್ರಯಾತ (೪) ವಸಂತತಿಲಕ (೫) ಮಾಲಿನೀವೃತ್ತ (೬) ಉತ್ಸವವೃತ್ತ (೭) ಹರಿಣಿವೃತ್ತ (೮) ಶಿಖರಿಣಿವೃತ್ತ (೯) ಮಲ್ಲಿಕಾಮಾಲೆ (೧೦) ತರಳವೃತ್ತ
(೧೧) ಶಾರ್ದೂಲವಿಕ್ರೀಡಿತ (೧೨) ಉತ್ಪಲ ಮಾಲೆ
(೧೩) ಸ್ರಗ್ಧರಾ
(೧೪) ಮತ್ತೇಭವಿಕ್ರೀಡಿತ (೧೫) ಚಂಪಕಮಾಲೆ
(೧೬) ಮಹಾಸ್ರಗ್ಧರಾವೃತ್ತ

೬. ಖ್ಯಾತ ಕರ್ಣಾಟಕ ವೃತ್ತಗಳ ಪ್ರಭಾವ : ಭಾಷಾಶೈಲಿ

೭. ಕೆಲವು ವರ್ಣವೃತ್ತಗಳು ಮಾತ್ರಾ ವೃತ್ತಗಳಾಗಿ ಪರಿಣಮಿಸುತ್ತವೆ

೮. ಖ್ಯಾತ ಕರ್ಣಾಟಕ ವೃತ್ತಗಳ ಬಳಕೆ ಹಾಗೂ ಭಾವ ಮೌಲ್ಯ

೯. ಅರ್ಧಸಮವೃತ್ತಗಳು.

★★★

೧. ವರ್ಣವೃತ್ತ ಮಾತ್ರಾವೃತ್ತಗಳಲ್ಲಿಯ ಭೇದ

ಸಂಸ್ಕೃತದಲ್ಲಿ ಲೌಕಿಕ ಛಂದಸ್ಸು ವರ್ಣವೃತ್ತಗಳಿಂದಾದುದು. ಈ ವೃತ್ತಗಳು ವರ್ಣಗಣಗಳಿಂದ ಘಟಿತವಾದುವು. ಮಾತ್ರಾ ಛಂದಸ್ಸಿನಿಂದ ವರ್ಣಛಂದಸ್ಸು ಭಿನ್ನವೆಂಬುದಕ್ಕೆ ಇವೆರಡರಲ್ಲಿಯ ಲಯದ ಭೇದವೇ ಮೂಲ ಕಾರಣ. ಮಾತ್ರಾ ಛಂದಸ್ಸಿನ ಪಾದಗಳಲ್ಲಿ ಸ್ವರ ಪರಿಮಾಣವನ್ನುಳ್ಳ ಗಣಗಳು ಆವರ್ತನೆ ಹೊಂದುತ್ತವೆ. ಹಾಗೆ ವರ್ಣವೃತ್ತಗಳಲ್ಲಿಯ ವರ್ಣಗಣಗಳು ಆವರ್ತನೆ ಹೊಂದುವುದಿಲ್ಲ, ಇದರಿಂದ ಮಾತ್ರಾವೃತ್ತಗಳಲ್ಲಿ ತಾಳಲಯವು ಸ್ಫುಟವಾಗಿರುವಂತೆ ವರ್ಣವೃತ್ತಗಳಲ್ಲಿ ಇರುವುದಿಲ್ಲ. ವರ್ಣವೃತ್ತಗಳಲ್ಲಿ ಪದ್ಯದ ಪ್ರತಿ ಚರಣದಲ್ಲಿ ಅಷ್ಟಷ್ಟೇ ವರ್ಣಗಳಿರುತ್ತವೆ. ಮತ್ತು ಇಷ್ಟನೆಯ ಸಂಖ್ಯೆಯ ಅಕ್ಷರಕ್ಕೆ ಯತಿ ಇದ್ದು ಅಲ್ಲಿಯವರೆಗೆ ಆರೋಹ ರೀತಿಯಲ್ಲಿ ಲಯವು 'ಏರಿ, ಆ ಮುಂದೆ' ಅವರೋಹದಲ್ಲಿ ಇಳಿಯುವುದು. ಈ ಆರೋಹ – ಅವರೋಹ ಲಯವು ಪ್ರತಿಪಾದದಲ್ಲಿ ಸಮನಾಗಿರುವುದು. ಆದ್ದರಿಂದ ವರ್ಣವೃತ್ತಗಳ ಪಾದಗಳಲ್ಲಿಯ ವರ್ಣಗಣಗಳಿಗೂ ಇಲ್ಲಿಯ ಆರೋಹ–ಅವರೋಹ ಲಯಕ್ಕೂ ಸಜೀವ ಸಂಬಂಧವಿರುವುದಿಲ್ಲ. ಆದರೆ ಪ್ರತಿ ವರ್ಣವೂ ಅಲ್ಲಿಯ ಲಯಕ್ಕೆ ಪೋಷಕವಾಗಿರುತ್ತದೆ. ಅಲ್ಲಿ ವರ್ಣಗಳು ಲಯವನ್ನುಂಟು ಮಾಡುವ ಕ್ರಮದಲ್ಲಿ ಪ್ರತಿಪಾದದಲ್ಲಿ ಸಮನಾಗಿ ಆವರ್ತನೆ ಹೊಂದುತ್ತವೆ. ಆದ್ದರಿಂದ ವರ್ಣವೃತ್ತಗಳ ಛಂದಸ್ಸನ್ನು 'ವರ್ಣಗಣ ಛಂದಸ್ಸು' ಎನ್ನುವುದಕ್ಕಿಂತ 'ವರ್ಣ ಛಂದಸ್ಸು ' ಎನ್ನುವುದೇ ಲೇಸು. ವರ್ಣಗಳ ಸಂಖ್ಯೆಯನ್ನವಲಂಬಿಸಿದ ವೃತ್ತಗಳಿವು. ಲಯದ ಗತಿಯಲ್ಲಿ ಇಲ್ಲಿಯ ವರ್ಣಗಣಗಳು ಆವರ್ತನೆ ಹೊಂದುವುದಿಲ್ಲವಾದುದರಿಂದ ಇವುಗಳನ್ನು 'ಅನಾವರ್ತನೀಯ' ವೃತ್ತಗಳೆಂದೂ ಕರೆಯುವುದುಂಟು. ಅಂತೇ 'ವೃತ್ತ ಮಕ್ಷರಸಂಖ್ಯಾತಂ' – ಅಕ್ಷರ ಸಂಖ್ಯೆಯ ಮೇಲಿಂದ, ಛಂದಸ್ಸು ಬೇರೆ ಬೇರೆ ಆಗುತ್ತಿರುತ್ತದೆ.

2. ವೈದಿಕ ಛಂದಸ್ಸು : ಹಿನ್ನೆಲೆ

ಈ ವರ್ಣಛಂದಸ್ಸಿಗೆ ವೈದಿಕ ಛಂದಸ್ಸೇ ಮೂಲ. ಸಂಸ್ಕೃತ ವೃತ್ತಗಳ ಲಯವು ವರ್ಣಸಂಖ್ಯೆಯನ್ನು ಅವಲಂಬಸಿದ ಲಯವೆಂಬುದು ಪ್ರಾಚೀನ ವೈದಿಕ ಛಂದಸ್ಸಿನಿಂದಲೆ ಬಂದ ಲಕ್ಷಣ. ವೇದ ಮಂತ್ರಗಳನ್ನು ಹಾಡಿದ ಆರ್ಯರು ತಮ್ಮ ಅಪೌರುಷೇಯವೆಂಬ ಭಾವಗಳನ್ನು ವ್ಯಕ್ತ ಮಾಡುವಲ್ಲಿ ಶಬ್ದಗಳಿಗಿಂತ ಶಬ್ದದಲ್ಲಿಯ ಅಕ್ಷರಗಳನ್ನು ಗಟ್ಟಿಯಾಗಿ, ಸ್ಫುಟವಾಗಿ, ಸ್ವರಸಹಿತವಾಗಿ, ಲಯಬದ್ಧವಾಗಿ ಉಚ್ಚರಿಸುತ್ತಿದ್ದರು. ಆ ಪ್ರಾಚೀನ ವೇದ ಕಾಲದಲ್ಲಿ, ಹಾಡುತ್ತಿದ್ದ ರೀತಿಯಲ್ಲಿಯೇ ಎಷ್ಟೂ ವ್ಯತ್ಯಾಸವಿಲ್ಲದೆ ಉದಾತ್ತಾನುದಾತ್ತ ಸ್ವರಿತ ಕಂಪಿತ ಸ್ವರಗಳ 'ಏರಿಳಿತದ ಗಂಭೀರ ಲಯದಲ್ಲಿ ಇಂದಿಗೂ ವೈದಿಕ ಪಂಡಿತರು ಹಾಡುತ್ತಿರುವುದನ್ನು ನಾವು ನೋಡುತ್ತೇವೆ. ಆ ವೇದ ಘೋಷದ ಗಂಭೀರ ಲಯ ಅಕ್ಷರ (ಅ–ಕ್ಷರ = ಶಾಶ್ವತ) ಲಯ. ಅಲ್ಲಿ ತಾಳವು ಸ್ಫುಟವಾಗಿ ಗೋಚರಿಸದು. ಸ್ವರದ ಜೀಕಾಟದಲ್ಲಿ ಲಯ ಗೋಚರಿಸುತ್ತದೆ. ವೈದಿಕ ಛಂದಸ್ಸಿನಲ್ಲಿ ಗಾಯತ್ರಿ, ಅನುಷ್ಟುಪ್ಪು, ತ್ರಿಷ್ಟುಪ್ಪು, ಜಗತೀ, ಪ್ರಗಾಥ ಎಂದು ಐದು ಮುಖ್ಯ ಪ್ರಕಾರಗಳಿವೆಯೆಂದು ಹೇಳುತ್ತಾರೆ.

ಲೌಕಿಕ ಸಂಸ್ಕೃತದ ವರ್ಣಛಂದಸ್ಸಿಗೆ ಮೇಲೆ ವಿವರಿಸಿದ ವೈದಿಕ ಛಂದಸ್ಸುಗಳೇ ತಳಹದಿಯಾದ್ದರಿಂದ ವೈದಿಕ ಛಂದಸ್ಸಿನ ಮೂಲಭೂತ ವೈಲಕ್ಷಣ್ಯಗಳು ಲೌಕಿಕ ಛಂದಸ್ಸಿನ ವರ್ಣ ವೃತ್ತಗಳಲ್ಲಿ ಕಂಡುಬರುತ್ತಿರುವುದು ಸಹಜ. ವರ್ಣಗಳ ಮೇಲಿನ ಜೋರು, ಜೀಕುವ ಲಯ, ಉದಾತ್ತ ಅನುದಾತ್ತಗಳನ್ನನುಸರಿಸಿ 'ಏರಿಳಿವ ಎಂದರೆ ಆರೋಹಾವರೋಹ ಲಯಕ್ಕೆ ಆವಶ್ಯಕವಾದ ಯತಿ – ಇವು ವೈದಿಕ ಛಂದಸ್ಸಿನಿಂದ ಸಂಸ್ಕೃತ ಲೌಕಿಕ ಛಂದಸ್ಸಿಗೆ ಆನುವಂಶಿಕವೆಂಬಂತೆ ಕೊಡುಗೆಯಾಗಿ ಬಂದ ಲಕ್ಷಣಗಳು. ಆದರೆ ಲೌಕಿಕ ಛಂದಸ್ಸು ವೈದಿಕ ಛಂದಸ್ಸಿನ ನಾಲ್ಕು ಅಕ್ಷರಗಳ ಗಣ ಪದ್ಧತಿಯನ್ನು ತ್ಯಜಿಸಿ, ಮೂರು ವರ್ಣಗಳ ಗಣಪದ್ಧತಿಯನ್ನು ರೂಢಿಗೆ ತಂದುಕೊಂಡಿತು.

1) ಗಾಯತ್ರಿ :

ವೈದಿಕ ಛಂದಸ್ಸಿನ 'ಗಾಯತ್ರಿ' ಯಲ್ಲಿ ಎಂಟು ಅಕ್ಷರಗಳುಳ್ಳ ಮೂರು ಪಾದಗಳಿವೆ. ಪ್ರತಿ ಪಾದದಲ್ಲಿ ನಾಲ್ಕು ಅಕ್ಷರದ ಎರಡೆರಡು ಗಣಗಳಿವೆ. ಉದಾ:–

- U -   U - U -
ಅಗ್ನಿಮೀಳೇ । ಪುರೋಹಿತಂ ।
- - U -   U - U -
ಯಜ್ಞಸ್ಯ ದೇ । ವಮೃತ್ವಿಜಂ ।
- - - -   U - U -
ಹೋತಾರಂರ । ತ್ನಧಾತಮಂ ।

– ಇಲ್ಲಿ ಪ್ರತಿಪಾದದ ಕೊನೆಯ ಗಣ 'ಲಗದ್ವಯ' ಅಥವಾ 'ದ್ವಿಲಗ' **(U-U-)** ವಿರುವುದನ್ನು ಗಮನಿಸಬೇಕು.

ವಿಶ್ವಾಮಿತ್ರನಿಂದ ಉದ್ಭವಿಸಿದ ಗಾಯತ್ರಿ ಮಂತ್ರವನ್ನು ಪರಿಶೀಲಿಸಬಹುದು.

- U U -   U - U -
ತತ್ಸವಿತುರ್ । ವರೇಣಿಯಂ ।
- - - -   U - U -
ಭರ್ಗೋದೇವ । ಸ್ಯಧೀಮಹೀ ।
U - - -   U - U -
ಧಿಯೋ ಯೋನ ಃ । ಪ್ರಚೋದಯಾತ್ ।

– ಇಲ್ಲಿಯೂ ಕೊನೆಯ ಗಣವು 'ಲಗದ್ವಯ' ವಾಗಿದೆ

(೨) ಅನುಷ್ಟುಪ್ಪು :

ಗಾಯತ್ರಿಯೇ ಅನುಷ್ಟುಪ್ಪು ಛಂದಸ್ಸಾಗಿ ಪರಿಣಮಿಸಿದೆ. ಗಾಯತ್ರಿಯ ಮೂರು ಪಾದಗಳು ಇಲ್ಲಿ ನಾಲ್ಕು ಪಾದಗಳಾಗಿವೆ :

ಉದಾ : - - U -   U - U -
ಅತೂನ ಇಂ । ದ್ರ ಕೌಶಿಕಂ ।
- U - U   U - U -
ಮಂದಸಾನ : । ಸುತಂ ಪಿಬ ।
- U - -   U - U -
ನವ್ಯಮಾಯು ಃ । ಪ್ರಸೂತಿರ ।
U - U - U - U -
ಕೃಧೀಸಹ । ಪ್ರಸಾಮೃಷಿಂ ।

– ಇಲ್ಲಿಯೂ ಕೊನೆಯ ಗಣವು 'ದ್ವಿಲಗ' ವಾಗಿದೆ.

(೩) ಶ್ಲೋಕ :

ವೈದಿಕ ಛಂದಸ್ಸಿನ ಅನುಷ್ಟುಪ್ಪು ಎರಡು ಪಾದಗಳಾಗಿ ಮೊದಲನೆಯ ಮತ್ತು ಮೂರನೆಯ ಪಾದಗಳ ಕೊನೆಯ ಗಣದ 'ಲಗದ್ವಯ' ವು ಮಾರ್ಪಟ್ಟು ಲೌಕಿಕ ಛಂದಸ್ಸಿನ ಶ್ಲೋಕವಾಯಿತು.

ಉದಾ : U - U -   U - - U - - - U   U - U -
ಹಿರಣ್ಮಯೇ । ನ ಪಾತ್ರೇಣ ಸತ್ಯಸ್ಯಾಪಿ । ಹಿತಂ ಮುಖಂ ।
- -   - -   U - U -   - U - -   U - U -
ತತ್‌ತ್ವಂ ಪೂಷ । ನ್ನಪಾವೃಣು । ಸತ್ಯಧರ್ಮಾ । ಯದೃಷ್ಟಯೇ ।

– ವೈದಿಕದ ಅನುಷ್ಟುಪ್ ನಾಲ್ಕು ಪಾದಗಳಲ್ಲಿದ್ದುದು ಎರಡು ಪಾದಗಳಾಗಿ ಶ್ಲೋಕವಾಗುವಾಗ, ಮೊದಲನೆಯ ಮತ್ತು ಮೂರನೆಯ ಪಾದಗಳ ಕೊನೆಯ ಗಣದ 'ಲಗದ್ವಯ' ಹೇಗೆ ಮಾರ್ಪಟ್ಟಿದೆಯೆಂಬುದನ್ನಿಲ್ಲಿ ನೋಡಬಹುದಾಗಿದೆ. ಆದರೆ ಎರಡನೆಯ ಮತ್ತು ನಾಲ್ಕನೆಯ ಪಾದಗಳ ಕೊನೆಯ ಗಣದ ಲಗದ್ವಯ (U-U-) ಹಾಗೆಯೇ ಉಳಿದು ಬಂದಿದೆಯೆಂಬುದನ್ನೂ ಗಮನಿಸಬೇಕು.

ಶ್ಲೋಕವು ಸಂಸ್ಕೃತ ಕಾವ್ಯಗಳಲ್ಲೆಲ್ಲ ವಿಶೇಷವಾಗಿ ಬಳಕೆಯಲ್ಲಿದೆ. ಇತಿಹಾಸ ಪುರಾಣ – ಕಾವ್ಯ – ಶಾಸ್ತ್ರಗಳಲ್ಲೆಲ್ಲ ಅಲ್ಲದೆ ನಿಘಂಟುಗಳಲ್ಲೂ ಕೂಡ ಶ್ಲೋಕದ್ದೇ ಪ್ರಚುರತೆ. ಕನ್ನಡ ಕವಿಗಳೂ ಮೊದಮೊದಲು ಶ್ಲೋಕವನ್ನು ಬಳಸಿಕೊಂಡಿರಬಹುದು. ಕವಿರಾಜಮಾರ್ಗದಲ್ಲಿ ಇದರ ಸುಳಿವು ಕಂಡುಬರುತ್ತದೆ. ಯಾವುದೋ ಕನ್ನಡ ರಾಮಾಯಣದ ಶ್ಲೋಕರೂಪದ ಪದ್ಯಗಳು ಅಲ್ಲಿವೆ.

ಉದಾ : U U - -   U - -   U U - UU - U -
ಪೆರನಾವನ್ ಧರಾಚಕ್ರ । ಕ್ಕರೆಯಂ ಕೆಳೆಯಪ್ಪವಂ
U U - U U - - U   U - U U - U -
ಎನಗಾರೆಣೆಯೆಂಬನ್ನಂ । ಕುರಿತಬ್ಬಿಗೆ ಬನ್ನಮಂ

- - - U U - - U - - U UU- U -
ತಾರಾ ಜಾನಕಿಯಂ ಪೋಗಿ । ತಾರಾ ತರಳನೇತ್ರೆಯಂ ॥
- - UUU - - U - - U UU - U -
ತಾರಾಧಿಪತಿ ತೇಜಸ್ವಿ । ತಾರಾದಿ ವಿಜಯೋದಯಾ ॥

– ಸೂತ್ರಗಳಲ್ಲೂ ಕೆಲವೆಡೆಗಳಲ್ಲಿ ಶ್ಲೋಕವು ಬಳಸಲ್ಪಟ್ಟಿದೆ

U - U -
ಇವು ದುಷ್ಕರ ಕಾವ್ಯಂಗಳ್ । ಸವಿಶೇಷವರ್ತಿಗಳ್ ।
- U - U -
ಸುವಿಚಾರಿತ ಮೀತೋರ್ಪೆ । ಮಿವರಾ ಲಕ್ಷ್ಯಭೇದಮಂ
U - U -
ಯಮಕಂ ಪದಪಾದಾರ್ಥಂ । ಸಮಶ್ಲೋಕ ಮಗೋಚರಂ ।
U -U-
ಪ್ರಮಿತಾದ್ಯಂತದೂಷ್ಯೇಪ । ಕ್ರಮಾನೇಕಪ್ರಕಲ್ಪಿತಂ ॥

ಶ್ಲೋಕದ ಲಕ್ಷಣ :

೧) ಎಂಟೆಂಟು ಅಕ್ಷರಗಳುಳ್ಳ ನಾಲ್ಕು ಪಾದಗಳಿರಬೇಕು (೨) ಪ್ರತಿ ಪಾದದ ಮೊದಲಕ್ಷರದ ಮುಂದೆ ನಗಣ, ಸಗಣಗಳು ಬರಕೂಡದು (೩) ಸಮಪಾದಗಳಲ್ಲಿ ಏಳನೆಯಕ್ಷರವು ಲಘುವಾಗಿರಬೇಕು (೪) ವಿಷಮಪಾದಗಳಲ್ಲಿ ನಾಲ್ಕನೆಯಕ್ಷರದ ಮುಂದೆ ಯಗಣವು ಬರಬೇಕು.

ಶ್ಲೋಕದ ಲಕ್ಷಣವನ್ನು ಈ ರೀತಿಯಲ್ಲೂ ಹೇಳುತ್ತಾರೆ. (೧) ಎಂಟೆಂಟು ಅಕ್ಷರಗಳುಳ್ಳ ನಾಲ್ಕು ಪಾದಗಳು (೨) ಪ್ರತಿ ಪಾದದ ೫ನೆಯ ಅಕ್ಷರವು ಲಘು, ೬ನೆಯದು ಗುರು ಮತ್ತು ೭ನೆಯಕ್ಷರವು ೧, ೩ನೆಯ ಪಾದಗಳಲ್ಲಿ ಗುರು, ೨, ೪ನೆಯ ಪಾದಗಳಲ್ಲಿ ಲಘು. ಸಾಮಾನ್ಯವಾಗಿ ಸಂಸ್ಕೃತ ಸಾಹಿತ್ಯದಲ್ಲಿ ಶ್ಲೋಕವು ಈ ಸಾಮಾನ್ಯ ಲಕ್ಷಣಕ್ಕೆ ಅನುಗುಣವಾಗಿರುತ್ತದೆ.

ಕನ್ನಡ ಕವಿಗಳು ಶ್ಲೋಕವನ್ನು ಸ್ವೀಕರಿಸಿ ಅದಕ್ಕೆ ಕನ್ನಡದ ಆದಿ ಪ್ರಾಸದ ದೀಕ್ಷೆ ಕೊಟ್ಟುದನ್ನು ಇಲ್ಲಿ ಗಮನಿಸಬಹುದಾಗಿದೆ. ಸಂಸ್ಕೃತದ ಶ್ಲೋಕದ ಎಲ್ಲ ಲಕ್ಷಣಗಳೂ ಇಲ್ಲಿವೆ. ಎರಡೂ ಪಾದಗಳ ಕೊನೆಯಲ್ಲಿ 'ಲಗದ್ವಯ' (U-U-) ವನ್ನು ಪಾಲಿಸಿದ್ದೂ ಉಂಟು.

ಬಹುಶಃ ಶ್ಲೋಕವು ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದಿಕೆಯಾಗಲಿಲ್ಲ ವೆಂದು ಅನಂತರ ಅದರ ಬಳಕೆ ತಪ್ಪಿಹೋಗಿರಬೇಕು.

(೪) ತ್ರಿಷ್ಟುಪ್ :

ತ್ರಿಷ್ಟುಪ್ ಛಂದಸ್ಸೂ ಗಮನಾರ್ಹವಾದ ವೈದಿಕ ಛಂದಸ್ಸು – ಇದರಲ್ಲಿ

ಹನ್ನೊಂದು ಅಕ್ಷರದ ನಾಲ್ಕು ಪಾದಗಳು. ಒಂದು ಪಾದಕ್ಕೆ ಮೂರು ಗಣಗಳಿದ್ದು ಕೊನೆಯದು ಮೂರು ಅಕ್ಷರದ ಗಣವು – ಅದೂ 'ಯಗಣ'ವಿರುವುದನ್ನು ಗಮನಿಸಬೇಕು.

U - -
ಉದಾ : ಕಸ್ಯನೂನಂ । ಕತಮಸ್ಯಾ । ಮೃತಾನಾಂ ।
U - -
ಮನಾಮಹೇ । ಚಾರುದೇವ । ಸ್ಯನಾಮ ।
U - -
ಕೋನೋಮಹ್ಯಾ । ಆದಿತಯೇ । ಪುನರ್ದಾತ್
U - U
ಪಿತರಂಚ । ದೃಶೇಯಂ ಮಾ । ತರಂಚ

– ಇಲ್ಲಿ ಕೊನೆಯ 'ಲಗದ್ವಯ' (U - U -)ಕ್ಕೆ ಬದಲಾಗಿ ಯಗಣ (U - -) ಬಂದಿರುವುದು ಒಂದು ವೈಶಿಷ್ಟ್ಯ. ವೈದಿಕ ಛಂದಸ್ಸಿನ ನಾಲ್ಕು ಅಕ್ಷರದ ಗಣವು ಲೌಕಿಕದ ಮೂರಕ್ಷರಕ್ಕೆ ಪರಿವರ್ತನ ಹೊಂದಿರುವುದರ ಆರಂಭ ತ್ರಿಷ್ಟುಪ್ಪಿನ ಈ ಕೊನೆಯ 'ಯಗಣ' ದಿಂದಲೇ ಪ್ರೇರಿತವಾಯಿತೇನೋ ಎನಿಸುವಂತಿದೆ. 'ಯಮಾತಾರಾ ಜಭಾನಸಲಗಂ' ಸೂತ್ರದ ಮೊದಲಲ್ಲಿ 'ಯಗಣ' ಕ್ಕೇ ಅಗ್ರಸ್ಥಾನ ದೊರೆತಿರುವುದೂ ಅರ್ಥಪೂರ್ಣವಾಗಿದೆ.

ವೈದಿಕ ಛಂದಸ್ಸು ಮಾರ್ಪಾಟುಗೊಂಡು ಲೌಕಿಕ ಛಂದಸ್ಸಾಗಿ ಪರಿಣಮಿಸಿದ್ದಕ್ಕೆ ಮೇಲಿನ ವಿವರಣೆಯಲ್ಲಿ ಅಲ್ಪಮಟ್ಟಿಗೆ ಆಧಾರ ದೊರೆಯುವುದೆಂದು ಹೇಳಬಹುದು. ಲೌಕಿಕ ಛಂದಸ್ಸಿನಲ್ಲಿ ಉಕ್ತೆಯಿಂದ ಉತ್ಕೃತಿಯವರೆಗೆ ಒಟ್ಟು ಇಪ್ಪತ್ತಾರು ಛಂದಃ ಪ್ರಕಾರಗಳಿದ್ದು ಅವುಗಳಲ್ಲಿ ಕೆಲವು ಗಾಯತ್ರಿ, ಅನುಷ್ಟುಪ್ಪು, ತ್ರಿಷ್ಟುಪ್ಪು, ಜಗತಿ – ಮುಂತಾದ ವೈದಿಕ ಛಂದಸ್ಸಿನ ಹೆಸರುಗಳಿಂದಲೇ ಪ್ರಸಿದ್ಧವಾಗಿವೆಯೆಂಬುದೂ ಗಮನಾರ್ಹ ಸಂಗತಿ.

೩. ವರ್ಣವೃತ್ತ ಪ್ರಕಾರಗಳು

ವರ್ಣವೃತ್ತವು ಸಮ, ಅರ್ಧಸಮ, ವಿಷಮ ಎಂದು ಸಾಮಾನ್ಯವಾಗಿ ಮೂರು ವಿಧ. ಇವುಗಳಿಗೆ ಪಾದಗಳು ನಾಲ್ಕು : (೧) ನಾಲ್ಕು ಪಾದಗಳಿಗೂ ಒಂದೇ ಲಕ್ಷಣವಿರುವುದು ಸಮವೃತ್ತ (೨) ಒಂದು ಮೂರನೆಯ ಪಾದಗಳೂ ಎರಡು ನಾಲ್ಕನೆಯ ಪಾದಗಳೂ ಸಮಾನವಾಗಿರುವುದು ಅರ್ಧಸಮವೃತ್ತ (೩) ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣಗಳಿಂದ ಕೂಡಿರುವುದು ವಿಷಮ ವೃತ್ತ. ವಿಷಮವೃತ್ತವು ಕನ್ನಡದಲ್ಲಿಲ್ಲ.

ಸಮವೃತ್ತಗಳು :

ಇವುಗಳಲ್ಲಿ ಪ್ರತಿಪಾದದಲ್ಲಿ ಒಂದರಿಂದ ಇಪ್ಪತ್ತಾರರವರೆಗೆ ವರ್ಣಗಳಿರುವ ಛಂದಸ್ಸುಗಳಿವೆ. ಹೀಗೆ ಪ್ರತಿಪಾದದ ವರ್ಣಸಂಖ್ಯೆಯನ್ನನುಸರಿಸಿ ಸಮವೃತ್ತಗಳು

ಇಪ್ಪತ್ತಾರು ಗುಂಪುಗಳಾಗಿವೆ. ಈ ಒಂದೊಂದು ಗುಂಪಿಗೂ ಛಂದಸ್ಸು ಎಂಬ ಸಂಜ್ಞೆಯುಂಟು. ಈ ಛಂದಸ್ಸುಗಳು (೧) ಉಕ್ತೆ (೨) ಅತ್ಯುಕ್ತೆ (೩) ಮಧ್ಯೆ (೪) ಪ್ರತಿಷ್ಠೆ (೫) ಸುಪ್ರತಿಷ್ಠೆ (೬) ಗಾಯತ್ರಿ (೭) ಉಷ್ಣಿಕ್ಕು (೮) ಅನುಷ್ಟುಪ್ಪು (೯) ಬೃಹತಿ (೧೦) ಪಂಕ್ತಿ (೧೧) ತ್ರಿಷ್ಟುಪ್ಪು (೧೨) ಜಗತಿ (೧೩) ಅತಿಜಗತಿ (೧೪) ಶಕ್ವರಿ (೧೫) ಅತಿಶಕ್ವರಿ (೧೬) ಅಷ್ಟಿ (೧೭) ಅತ್ಯಷ್ಟಿ (೧೮) ಧೃತಿ (೧೯) ಅತಿಧೃತಿ (೨೦) ಕೃತಿ (೨೧) ಪ್ರಕೃತಿ (೨೨) ಆಕೃತಿ (೨೩) ವಿಕೃತಿ (೨೪) ಸಂಕೃತಿ (೨೫) ಅಭಿಕೃತಿ (೨೬) ಉತ್ಕೃತಿ – ಹೀಗೆ ಸಂಜ್ಞೆಯುಳ್ಳ ಇಪ್ಪತ್ತಾರು ಛಂದಸ್ಸುಗಳಿವೆ.

೪. 'ಖ್ಯಾತ ಕರ್ಣಾಟಕ' ವೃತ್ತಗಳು

ಈ ಇಪ್ಪತ್ತಾರು ಛಂದಸ್ಸುಗಳಲ್ಲಿ ಉಂಟಾಗುವ ವೃತ್ತಗಳ ಸಂಖ್ಯೆ ಹದಿಮೂರು ಕೋಟಿ ನಲವತ್ತೆರಡು ಲಕ್ಷ ಹದಿನೇಳು ಸಾವಿರದ ಏಳುನೂರಾ ಇಪ್ಪತ್ತಾರು (೧೩೪೨೧೭೭೨೬) ಎಂದು ಕನ್ನಡ ಕೈಪಿಡಿಯಲ್ಲಿ ಲೆಕ್ಕ ಮಾಡಿ ಹೇಳಲಾಗಿದೆ. ಇದನ್ನು ಅಸಂಖ್ಯಾತವೆಂದೇ ಹೇಳಬಹುದು. ಈ ಅಸಂಖ್ಯ ವೃತ್ತಗಳಲ್ಲಿ ಸರಾಗವಾಗಿ ಹಾಡಲೂ, ಉಚ್ಚರಿಸಲೂ ಯೋಗ್ಯವೆನಿಸುವ ಸುಮಾರು ಮುನ್ನೂರಷ್ಟನ್ನು ಸಂಸ್ಕೃತ ಕವಿಗಳು ಬಳಸುತ್ತ ಬಂದಿದ್ದರೆ, ಕನ್ನಡ ಕವಿಗಳು ಅವುಗಳಲ್ಲಿ ಸುಮಾರು ನೂರೈವತ್ತು ವೃತ್ತಗಳನ್ನು ಸ್ವೀಕರಿಸಿ ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆಂದು ಹೇಳಲಾಗುತ್ತದೆ. ಹಳಗನ್ನಡ ಚಂಪೂ ಕೃತಿಗಳಲ್ಲಿ ಈ ವರ್ಣವೃತ್ತಗಳ ವೈವಿಧ್ಯ ಕಂಡುಬರುತ್ತದೆ. ಆದರೆ ಚಂಪೂ ಕೃತಿಗಳ ಛಂದಃಪ್ರಕಾರಗಳನ್ನು ಪರಿಶೀಲಿಸಿದಾಗ ಪ್ರತಿಯೊಂದು ಚಂಪೂ ಕೃತಿಯಲ್ಲಿಯ ಪದ್ಯಗಳಲ್ಲಿ ಮುಕ್ಕಾಲು ಪಾಲು ಕಂದಪದ್ಯಗಳು, ಒಕ್ಕಾಲು ಪಾಲು ಮಾತ್ರ ವರ್ಣವೃತ್ತಗಳು. ಈ ವರ್ಣವೃತ್ತಗಳಲ್ಲಿ ಮುಕ್ಕಾಲು ಪಾಲು 'ಖ್ಯಾತ ಕರ್ಣಾಟಕ' ಗಳೆಂದು ಹೇಳಲಾಗುವ ಉತ್ಪಲಮಾಲೆ, ಶಾರ್ದೂಲವಿಕ್ರೀಡಿತ, ಸ್ರಗ್ಧರೆ ಚಂಪಕಮಾಲೆ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ – ಈ ಆರು ವರ್ಣವೃತ್ತಗಳು ಗೋಚರಿಸುತ್ತವೆ. ಉತ್ಪಲಮಾಲೆ, ಶಾರ್ದೂಲವಿಕ್ರೀಡಿತ, ಸ್ರಗ್ಧರಾವೃತ್ತಗಳೇ ಮೂಲ ವೃತ್ತಗಳೆಂದೂ ಅವುಗಳ ಪಾದಗಳ ಮೊದಲ ಗುರುವನ್ನು ಎರಡು ಲಘುಗಳಿಗೆ ಪರಿವರ್ತಿಸಿ, ಕ್ರಮವಾಗಿ ಚಂಪಕಮಾಲೆ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರಾವೃತ್ತಗಳನ್ನು ಕನ್ನಡ ಕವಿಗಳು ಸೃಷ್ಟಿಸಿಕೊಂಡಿರಬೇಕೆಂದೂ ಸಾಮಾನ್ಯ ತಿಳಿವಳಿಕೆ ಇದೆ. ಈ ಆರು ವೃತ್ತಗಳು ಕನ್ನಡಕ್ಕೆ ಬಂದಾಗ ಆದಿ ಪ್ರಾಸದ ದೀಕ್ಷೆ ಪಡೆದುವಲ್ಲದೆ ಸಂಸ್ಕೃತದ ಅಕ್ಷರಯತಿಯನ್ನು ಉಲ್ಲಂಘಿಸಿದವು. ಇದೇ ನಿದ್ದರೂ ಸಂಸ್ಕೃತದ ಈ ವರ್ಣವೃತ್ತಗಳ ಭಾಷಾಶೈಲಿ ಸಂಸ್ಕೃತಭೂಯಿಷ್ಠವಾಗಿ ಕನ್ನಡದ ಗ್ರಾಂಥಿಕಭಾಷೆಯ ಸ್ವರೂಪವು ಸಂಸ್ಕೃತಮಯವಾಯ್ತು.

೫. ವರ್ಣವೃತ್ತಗಳ ಸಾಮಾನ್ಯ ವೈಲಕ್ಷಣ್ಯಗಳು

ಕನ್ನಡದಲ್ಲಿ ಬಳಸಲಾಗಿರುವ ಸಂಸ್ಕೃತದ ಈ ವರ್ಣವೃತ್ತಗಳಲ್ಲಿ ಕೆಲವು ವೃತ್ತಗಳ ಲಕ್ಷಣಗಳನ್ನೂ, ಸ್ವರೂಪವನ್ನೂ ಪರಿಶೀಲಿಸುವ ಮೊದಲು ಈ ವರ್ಣವೃತ್ತಗಳ ಸಾಮಾನ್ಯ ಲಕ್ಷಣಗಳನ್ನು ಹೀಗೆ ವಿವರಿಸಬಹುದಾಗಿದೆ :–

೧) ಈ ವೃತ್ತಗಳಲ್ಲಿ ವೈದಿಕ ಛಂದಸ್ಸಿನಿಂದ ಇಳಿದು ಬಂದ ಪ್ರಮುಖ ಲಕ್ಷಣವೆಂದರೆ – ಪ್ರತಿಯೊಂದು ವರ್ಣದ ಸ್ಫುಟವಾದ ಉಚ್ಚರಣೆಗೆ ಪ್ರಾಶಸ್ತ್ಯವಿರುವುದು. ಇದಕ್ಕೆಂದೇ 'ವರ್ಣ ಛಂದಸ್ಸು', 'ವರ್ಣವೃತ್ತ' ಎಂಬ ಹೆಸರು ಈ ವರ್ಗದ ಛಂದಸ್ಸಿಗೂ ವೃತ್ತಗಳಿಗೂ ಉಚಿತವೆನಿಸಿದೆ.

೨) ವರ್ಣವೃತ್ತಗಳ ಲಯವು ತಾಳವನ್ನು ಅನುಸರಿಸುವ ಲಯವಲ್ಲ, ಕಾಲವನ್ನು ಅನುಸರಿಸುವ ಲಯ. ಮಾತ್ರಾವೃತ್ತಗಳು ತಾಳಲಯದವು, ವರ್ಣವೃತ್ತಗಳು ಕಾಲ ಲಯದವು ಎನ್ನಬಹುದು.

೩.) ವರ್ಣವೃತ್ತಗಳಲ್ಲಿ 'ಏರಿಳಿತದ ಲಯಕ್ಕೆ ಎಂದರೆ ಆರೋಹ–ಅವರೋಹದ ಲಯಕ್ಕೆ ಹೆಚ್ಚಿನ ಪ್ರಾಧಾನ್ಯ. ಲಯದಲ್ಲಿ ತೆರೆಗಳ ಏರಿಳಿತದ ಘೋಷದ ಅನುಭವವಾಗುತ್ತದೆ. ಇದೂ ವೈದಿಕಛಂದಸ್ಸಿನ ಕೊಡುಗೆ.

೪) ವರ್ಣವೃತ್ತಗಳಲ್ಲಿ ಯತಿಗೆ ಹೆಚ್ಚಿನ ಪ್ರಾಧಾನ್ಯತೆ. ಜೀಕುವ ಲಯಕ್ಕೆ ಉಸಿರ್ದಾಣದಂತಿರುವ ಯತಿಯ ಅವಶ್ಯಕತೆ ಬಹಳ. ಯತಿ ಭೇದದಿಂದ ವೃತ್ತ ಭೇದವುಂಟಾಗುವುದೂ ವರ್ಣವೃತ್ತಗಳಲ್ಲಿ ಒಂದು ವಿಶೇಷಾಂಶ. ಉದಾ – ಲಲಿತಪದ, ವಿಚಿತ್ರಲಲಿತ, ವನಮಯೂರ – ಇವು ಮೂರು ಒಂದೇ ಲಯವನ್ನು ಹೊಂದಿದ್ದರೂ ಯತಿಯ ದೃಷ್ಟಿಯಿಂದ ಅವುಗಳನ್ನು ಬೇರ್ಪಡಿಸಿ ಹೇಳಲಾಗಿದೆ. (ಛಂದೋಂಬುಧಿಯ ೧೪೯, ೧೫೮ ಮತ್ತು ೧೬೦ ಈ ಪದ್ಯಗಳನ್ನು ನೋಡಬಹುದು)

೫) ವರ್ಣವೃತ್ತಗಳು ಹೆಚ್ಚಾಗಿ ಸಮವೃತ್ತಗಳೇ ಆಗಿರುವುವು. ಇವು ನಿಯತವಾದ ಲಘು–ಗುರು ವಿನ್ಯಾಸವುಳ್ಳ ನಾಲ್ಕು ಪಾದಗಳುಳ್ಳ ಪದ್ಯಗಳು.

೬) ವರ್ಣವೃತ್ತಗಳಲ್ಲಿ ಪ್ರತಿಪಾದದ ವರ್ಣಗಳ ಸಂಖ್ಯೆ ಸಮ ಹಾಗೂ ನಿಯತವಾದುದು ಮತ್ತು ಪ್ರತಿಪಾದದ ವರ್ಣಗಳ ವಿನ್ಯಾಸವೂ ಸಮ ಹಾಗೂ ನಿಯತವಾದುದು.

ಕನ್ನಡ ಕವಿಗಳ ಮನಸ್ಸೆಳೆದ ಕೆಲವು ವರ್ಣವೃತ್ತಗಳ ಹಾಗೂ 'ಖ್ಯಾತ ಕರ್ಣಾಟಕ' ವೃತ್ತಗಳ ಸ್ವರೂಪ – ಲಕ್ಷಣಗಳನ್ನು ಪರಿಶೀಲಿಸುವ :

೧೧ನೆಯ ತ್ರಿಷ್ಟುಪ್ಪು ಛಂದಸ್ಸಿನಲ್ಲಿ (೧) 'ಉಪೇಂದ್ರವಜ್ರ' ವೃತ್ತ :

ಲಕ್ಷಣ ಸೂತ್ರ :

ಜ ತ ಜ ಗಗ
U - U - - U U - U - -
ಉಪೇಂದ್ರ । ವಜ್ರಂ ಜ । ತಜಂಗ । ಯುಗ್ಮಂ

ಉದಾ :

ಜ ತ ಜ ಗ ಗ ಜ ತ
U - U - - U U - U - - U - U - - U
ಅವರ್ಣ । ವಾದ । ಕ್ಕೆ ಡೆಯಾಗ ದೊಳ್ಪಿಂ । ದವರ್ಣೆ ಕಾಮರ್ । ಗು ।
ಜ ಗ ಗ
U - U - -
ಣ ವೃದ್ಧಿ । ಧಾಮರ್ ॥

ದಿವಾಕರರ್ ವ್ಯಾಕೃತಿ ನಾಮಿಗಳ್ಪೊಲ್ । ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್ ॥

ಸೂತ್ರದಲ್ಲಿ । ಈ ಗುರುತಿನಿಂದ ಯತಿಸ್ಥಾನವನ್ನು ಸೂಚಿಸಲಾಗಿದೆ. ಐದನೆಯ ವರ್ಣಕ್ಕೆ ಯತಿಯಿದೆಯೆಂದೂ ಅದೇ ಆರೋಹಲಯವನ್ನು ಎತ್ತಿ ತೋರುವುದೆಂದೂ ಹಾಡಿ ನೋಡಿ ತಿಳಿದುಕೊಳ್ಳಬೇಕು. ಹನ್ನೊಂದು ವರ್ಣಗಳು ಪ್ರತಿ ಪಾದದಲ್ಲಿರುವ ಉಪೇಂದ್ರವಜ್ರವೆಂಬೀ ವೃತ್ತವು ನಾಲ್ಕು ಸಮಪಾದಗಳುಳ್ಳುದು. ಮೇಲೆ ಪ್ರಸ್ತಾರ ಹಾಕಿ ತೋರಿಸಿದಂತೆ ಪ್ರತಿ ಪಾದದಲ್ಲಿ ಜಗಣ, ತಗಣ, ಜಗಣಗಳೂ ಮೇಲೆರಡು ಗುರುಗಳೂ (ಜತಜಂಗಯುಗ್ಮಂ) ಬಂದಿವೆ. ಇಲ್ಲಿ ಸೂತ್ರಕ್ಕೆ ಮತ್ತು ಮೊದಲೆರಡು ಪಾದಗಳಿಗೆ ಮಾತ್ರ ಪ್ರಸ್ತಾರ ಹಾಕಿ ಗಣಗಳ ಹೆಸರುಗಳನ್ನು ಸೂಚಿಸಲಾಗಿದೆ. ಉಳಿದೆರಡು ಪಾದಗಳಿಗೆ ಪ್ರಸ್ತಾರ ಹಾಕಿ, ಗಣವಿಭಜನೆ ಮಾಡಿ ಇವೇ ಗಣಗಳು ಬರುವುದನ್ನು ಸ್ವಂತ ಪ್ರಯತ್ನದಿಂದ ಕಂಡುಕೊಳ್ಳಬೇಕು. ಇದೇ ಪದ್ಧತಿಯನ್ನು ಈ ಮುಂದಿನ ವೃತ್ತಗಳ ವಿವರಣೆಯಲ್ಲಿಯೂ ಅನುಸರಿಸಲಾಗಿದೆ. ಲಘುವಿಗೆ 'ಲ' ಮತ್ತು ಗುರುವಿಗೆ 'ಗ' ಎಂಬ ಸಂಜ್ಞೆಗಳಿವೆ.

(೨) 'ಇಂದ್ರವಜ್ರ' ವೃತ್ತ :

ತ ತ ಜ ಗ ಗ
ಲಕ್ಷಣ ಸೂತ್ರ : ತಾನಿಂದ್ರ । ವಜ್ರಂ । ತತಜಂಗಯುಗ್ಮಂ ॥

ಉದಾ : - - U - - U U - U - -
ಆಗಳ್ಜ । ಸಂ ಕೈ । ದುವನಿಕ್ಕಿ ವೀರ –
- - U - - U U - U - -
ಶ್ರೀಗಾಣ್ಮ । ನಯ್ ಪಾ ।ಣ್ಬ ತನಕ್ಕೆಳಪ್ಪಯ್ ॥
ಪೋಗೇಕೆ ನಿಮ್ಮೆಯ್ಗಿರೆದಿರ್ಪೆಯೆಂದಾ ।
ಭೋಗೀಶ್ವರಂಗಂದು ವಿನಮ್ರನಾದಂ ॥

– ಇಂದ್ರ ವಜ್ರವೃತ್ತದಲ್ಲಿ ತಗಣ, ತಗಣ, ಜಗಣಗಳೂ ಮೇಲೆರಡು ಗುರುಗಳೂ (ತತಜಂಗಯುಗ್ಮಂ) ಇರುತ್ತವೆ. ಐದನೆಯ ವರ್ಣಕ್ಕೆ ಯತಿ.

೧೨ನೆಯ ಜಗತಿ ಛಂದಸ್ಸಿನಲ್ಲಿ– 'ಭುಜಂಗ ಪ್ರಯಾತಂ' ವೃತ್ತ :

ಲಕ್ಷಣ ಸೂತ್ರ :

U - - U - - U - - U - -
ಭುಜಂಗ । ಪ್ರಯಾತಂ । ಬರಲ್ ನಾ । ಲ್ಕು ಯಂಗಳ್ ॥
U - - U - - U - - U - -
ಚಿದಾಕಾ । ರ ಲಿಂಗಾಂ ಪ್ರ । ಯೊಳ್ ಚೇತನಾಗ್ರಂ
U - - U - - U - - U - -
ಸದಾನಂ । ದದಿಂಬೆ । ಚ್ಚಿರಲ್ ಭ ಕ್ತಿಯಿಂದಂ
ಮದಾನೀಕಮಂ ಮೆಟ್ಟಿ ಮಾಂಗಲ್ಯರೂಪಂ
ಮುದಂಬೆತ್ತು ಮೇಣುದ್ಘಟಂ ಕಣ್ಗೊಳಿಪ್ಪಂ

– 'ಭುಜಂಗಪ್ರಯಾತ' ದಲ್ಲಿ ನಾಲ್ಕು ಯಗಣಗಳು (ನಾಲ್ಕುಯಂಗಳ್) ಬರುತ್ತವೆ. 'ಏಳನೆಯ ಅಕ್ಷರಕ್ಕೆ ಯತಿ.

೧೪ನೆಯ ಶಕ್ವರಿ ಛಂದಸ್ಸಿನಲ್ಲಿ – 'ವಸಂತ ತಿಲಕ' ವೃತ್ತ :

ಲಕ್ಷಣ ಸೂತ್ರ :

ತ ಭ ಜ ಜ ಗ ಗ
- - U - U UU - U U- U - -
ಅಕ್ಕುಂ ವಸಂತ ತಿಲಕಂ । ತಭಜಂಜಗಂಗಂ ॥
- - U - U UU - U U - U - -
ಚೆಂಗಾವಿಯಂ ಶುಕದಿನು ಜ್ವಲಮಾಗಿಯಾಗಳ್ ।
- - U - UU U - U U - U - -
ತಾಂಗೆಯ್ದ ನೀರೆರೆತದಿಂ ಸ್ಫು ಟಮಾಗಿ ಕಾಣೆ ॥
ಪ್ಪಂಗಂಗಳಿಂ ಪವಳವಳ್ಳಿಯ ಬೊಂಬೆಯೊಲ್ ಸಾ
ರಂಗಾಕ್ಷಿಯಂಗಜನನರ್ಚನೆಗೆಯ್ಗು ಮೀಗಳ್ ॥

– ವಸಂತತಿಲಕವೃತ್ತವು ಪ್ರತಿಪಾದಕ್ಕೆ ಹದಿನಾಲ್ಕು ವರ್ಣಗಳುಳ್ಳ ಶಕ್ವರಿ ಛಂದಸ್ಸಿನದು. ಎಂಟನೆಯ ವರ್ಣಕ್ಕೆ ಯತಿ. ಪ್ರತಿ ಪಾದದಲ್ಲಿ ತಗಣ, ಭಗಣ, ಜಗಣ, ಜಗಣ ಗಳಿದ್ದು ಮೇಲೆರಡು ಗುರುಗಳುಂಟು (ತಭಜಂಜಗಂಗಂ)

೧೫. ನೆಯ ಅತಿಶಕ್ವರಿ ಛಂದಸ್ಸಿನಲ್ಲಿ (೧) ಮಾಲಿನೀವೃತ್ತ :

ಸೂತ್ರ :
ನ ನ ಮ ಯ ಯ
U U U U U U - - - U - - U - -
ನನಮ ಯಯಗ ಣಂಗಳ್ । ಮಾಲಿನೀವೃ ತ್ತಮಕ್ಕುಂ

ಉದಾ :
UUU UUU - - - U - - U - -
ಬಿಡದೆ ಸೆಪಲ ರಿಂದಂ । ಪೊಣ್ಮು ತಿರ್ಪ ಚ್ಚಗಂಪಂ
UUU U U U - - - U - - U - -
ಪಿಡಿದಲರ್ಗಳ ಜೊಂಪಂ ಜೋ ಲ್ದು ಚೆಲ್ವಾ ಗೆ ಬಿಣ್ಪಿಂ ॥
ದಿಡಿದ ಮರಗಳಿಂದಂ ಬೆಳ್ವಿವೆಟ್ಟಕ್ಕೆ ನಿಚ್ಚಂ ।

ಪಡಿಯೆನಿಸುವುದೆತ್ತಂ ರನ್ನಗಲ್ಲೆಂಬ ಬೆಟ್ಟಂ ॥

– ಮಾಲಿನೀವೃತ್ತವು ಅತಿಶಕ್ವರಿ ಛಂದಸ್ಸಿನಲ್ಲಿ ಪ್ರತಿಪಾದಕ್ಕೆ ಹದಿನೈದು ವರ್ಣಗಳುಳ್ಳುದು. ಎಂಟನೆಯ ವರ್ಣಕ್ಕೆ ಯತಿಯಿರುವ ಈ ವೃತ್ತದಲ್ಲಿ ಪ್ರತಿ ಪಾದದಲ್ಲಿ ನಗಣ, ನಗಣ, ಮಗಣ, ಯಗಣ, ಯಗಣಗಳು (ನನಮಯಯಗಣಂಗಳ್) ಇರುವವು. ಈ ಪದ್ಯದ ಎರಡನೆಯ ಪಾದದಲ್ಲಿ 'ಅಲರ್ಗಳ್' ಎಂಬ ಪದವು ಶಿಥಿಲದ್ವಿತ್ವವುಳ್ಳುದನ್ನು ಗಮನಿಸಬೇಕು.

(೨) ಇದೇ ಛಂದಸ್ಸಿನಲ್ಲಿ 'ಉತ್ಸವ' ವೃತ್ತ :

- U - U - U - U - U - U - U -

ಸೂತ್ರ : ರಂಜ ರಂಜ ರಂಬರಲ್ ವಿ । ರಾಜಿಸಿರ್ಪುದುತ್ಸವಂ

ಉದಾ : - U - U - U - U - U - U - U -

ಭಾಸುರೇಭ ವಾಜಿವಾಹಿ । ನೀಸಮೇತನಾಗಿ ತಾಂ ।

- U - U - U - U - U - U - U -

ಸಾಸದಿಂ ದಿದಿರ್ಚಿದಾ ಬರೀದ ಬಾದಷಾಹನಂ ॥

ಗಾಸಿ ಮಾಡಿ ಗೆಲ್ದು ಯುದ್ಧರಂಗದೊಳ್ ತುರುಷ್ಕಸೇ ।

ನಾಸಮುದ್ರಮಂ ಕಲಂಕಿದಂ ಸದಾ ಶಿವೋರ್ವಿಪಂ ॥

– 'ಉತ್ಸವ' ವೃತ್ತವು ಹದಿನೈದು ವರ್ಣಗಳು ಪ್ರತಿ ಪಾದದಲ್ಲಿ ಉಳ್ಳುದು. ಎಂಟನೆಯ ವರ್ಣಕ್ಕೆ ಯತಿ. ಪ್ರತಿ ಪಾದದಲ್ಲಿ ರಗಣ, ಜಗಣ, ರಗಣ, ಜಗಣ, ರಗಣಗಳು (ರಂಜರಂಜರಂ) ಬರುತ್ತವೆ.

ಈ ವೃತ್ತವು ವರ್ಣಛಂದಸ್ಸಿನದಾಗಿದ್ದರೂ ಮೂರು ಮಾತ್ರೆಯ 'ಏಳು ಗಣಗಳೂ ಮೇಲೊಂದು ಗುರುವು ಇರುವ ಮಾತ್ರಾವೃತ್ತವೂ ಆಗಿದೆ. ಅಲ್ಲದೆ 'ಕರ್ಣಾಟಭಾಷಾಜಾತಿ'ಯ ಹತ್ತು ಅಂಶಗಣಘಟಿತ ಮಟ್ಟುಗಳಲ್ಲೂ ಇದೊಂದಾಗಿದೆ. ಇದರಿಂದ ತಾಳಲಯವುಳ್ಳ ವರ್ಣವೃತ್ತಗಳೂ ದ್ರಾವಿಡ ಛಂದಸ್ಸಿನ ಅಚ್ಚಗನ್ನಡ ಮಟ್ಟುಗಳೂ ಕೆಲವು ಮಾತ್ರಾ ಛಂದಸ್ಸಿಗೆ ಪರಿವರ್ತನ ಹೊಂದುವುವೆಂಬುದಕ್ಕೆ 'ಉತ್ಸವ' ವು ಒಂದು ವಿಶೇಷ ಉದಾಹರಣೆಯಾಗಿದೆ. 'ಉತ್ಸವ' ಎಂಬೀ ವರ್ಣವೃತ್ತವು ಮಾತ್ರಾ ಛಂದಸ್ಸಿನಲ್ಲೂ 'ಉತ್ಸವ' ವೆಂಬ ಹೆಸರಿನಲ್ಲೆ ಇದ್ದು, 'ಕರ್ಣಾಟ ಭಾಷಾ ಜಾತಿಯಲ್ಲಿ 'ಉತ್ಸಾಹ' ವೆಂಬ ಹೆಸರಿನಲ್ಲಿ ನಾಗವರ್ಮನು ಇದನ್ನು ವಿವರಿಸಿದ್ದಾನೆ. ಆದರೆ ಜಯಕೀರ್ತಿ ಮಾತ್ರ ತನ್ನ 'ಛಂದೋನುಶಾಸನ' ದಲ್ಲಿ 'ಕರ್ಣಾಟ ವಿಷಯ ಭಾಷಾ ಜಾತಿ ಯಲ್ಲಿ ಇದನ್ನು ಸೇರಿಸದೆ, 'ಮಾತ್ರಾ–ವರ್ಣ' ವೃತ್ತಗಳ ಮಿಶ್ರಾಧಿಕಾರದಲ್ಲಿ ಸೇರಿಸಿ ವಿವರಿಸಿದ್ದಾನೆಂಬುದು ಗಮನಾರ್ಹ ಸಂಗತಿ.

೧೭ನೆಯ ಅತ್ಯಷ್ಟಿ ಛಂದಸ್ಸಿನಲ್ಲಿ – (೧) 'ಹರಿಣೀ' ವೃತ್ತ :

ಸೂತ್ರ : ನ ಸ ಮ ರ ಸ ಲ ಗ

UU UI U U - - - - - I - U - I UU - U -
ಹರಿಣಿಯೆನಿಪಾ । ವೃತ್ತಂ ತೋರಲ್ । ನಸಂಮರಸಂಲಗಂ ॥
U UUI UU - I - - - - U - U U - U-
ಅಳಿದರಧಿಕರ್ । ಭೀಷ್ಮದ್ರೋಣಾಂ । ಗ ನಾಯಕರೀಗಳಿ ।
U U UI U U - - - - - U - UU - U -
ನ್ನುಳಿದರವರಿಂ ಮೇಲೆಂಬನ್ನರ್ ಮಹಾರಥರಲ್ತೆ ಮುಂ ॥
ಕಳಿದುದರೊಳೇಂ ನಷ್ಟಂ ನಷ್ಟಂ ಮೃತಂ ಮೃತಮೆಂಬುದಿ ।
ನ್ನಳಲದಿರಿದೇಕಿಲ್ಲಿಂ ಮೇಲಪ್ಪುದಂ ಬಗೆ ಭೂಪತೀ ॥

– ಹರಿಣೀವೃತ್ತದ ಪ್ರತಿ ಪಾದದಲ್ಲಿ ಹದಿನೇಳು ವರ್ಣಗಳು. ಆರನೆಯ ಮತ್ತು ನಾಲ್ಕನೆಯ ವರ್ಣಗಳಲ್ಲಿ ಯತಿ ಪ್ರತಿಪಾದದಲ್ಲಿದೆ. ಇದರಲ್ಲಿ ನಗಣ, ಸಗಣ, ಮಗಣ, ರಗಣ, ಸಗಣಗಳೂ ಮೇಲೆ ಒಂದು ಲಘು ಮತ್ತು ಒಂದು ಗುರುವು (ನಸಂಮರಸಂಲಗಂ) ಬಂದಿವೆ.

(೨) ಇದೇ ಛಂದಸ್ಸಿನಲ್ಲಿ – 'ಶಿಖರಿಣೀ' ವೃತ್ತ :

ಸೂತ್ರ : U - - - - - UUU U U - - U U U -
ಯಮಂನಂಸಂತೋರಲ್ । ಶಿಖರಿಣಿಯದೊಂದಲ್ । ಭಲಗಮುಂ

ಉದಾ : U - - - - - U U U U - - U U U -
ಕಳಾರುಂದ್ರಂಚಂದ್ರಂ । ಬೆಳಗೆನಭಮಂ ಕಾಂತಿ ವಿಸರಂ
U - - - - - U U U U U - - - U U -
ಗಳಿಂ ನೆಯ್ದಿಲ್ಗೆಯ್ದಲ್ ಮೊಗಸಿ ನಳಿನೀಬೃಂದದಳಿನೀ
ಕುಳಂ ಕೋಕಂ ಶೋಕಂಬಡೆಯೆ ಮನದೊಳ್ ಪುಟ್ಟೆಜನದೊಳ್
ಬಳಾತ್ಕಾರಂ ಮಾರಂಗದಟಿನ ತಿರುಳ್ ರಂಜಿಸಿತಿರುಳ್

– ಶಿಖರಿಣೀವೃತ್ತದ ಪ್ರತಿ ಪಾದದಲ್ಲಿ ಹದಿನೇಳು ವರ್ಣಗಳು. ಆರನೆಯ ಹಾಗು ಏಳನೆಯ ವರ್ಣಗಳಿಗೆ ಯತಿಯಿದೆ. ಆರೋಹಲಯವು ಈ ಎರಡು ಯತಿಗಳಿಂದಲೂ ಗೋಚರಿಸಿ ಅನಂತರ ಪಾದದ ಕೊನೆಯ ನಾಲ್ಕು ವರ್ಣಗಳಲ್ಲಿ ಅವರೋಹದಲ್ಲಿ ಮುಗಿಯುವುದು. ಇದು ಇಲ್ಲಿಯ ಲಯದ ಸ್ವಾರಸ್ಯ. ಇದರಲ್ಲಿ ಯಗಣ, ಮಗಣ, ನಗಣ, ಸಗಣ, ಭಗಣಗಳೂ ಮೇಲೆ ಒಂದು ಲಘು ಒಂದು ಗುರು (ಯಮಂನಂಸಂಭಲಗಂ) ಬಂದಿವೆ.

೧೮ನೆಯ 'ಧೃತಿ' ಛಂದಸ್ಸಿನಲ್ಲಿ 'ಮಲ್ಲಿಕಾಮಾಲೆ' ಎಂಬ ವೃತ್ತ :

ಸೂತ್ರ : ರ ಸ ಜ ಜ ಭ ರ

- U - U U - U - U U - U - U U - U -
ಉದಾ : ಮಲ್ಲಿಕಾಯುತಮಾಲೆಯಪ್ಪುದು । ರಂಸಜಂಜಭರಂಬರಲ್

A

-U- UU-U -UU -U- UU-U-
ನೀರಜೋತ್ಪಲ ವರ್ಣನಾಡಿದ | ನಾಡಿದಂ ಕಮಲೇಕ್ಷಣಂ ।
ಚಾರುಹಾಸ ವಿಲಾಸನಾಡಿದನಾಡಿದಂ ಸುಭಗಂಶುಭಾ ॥
ಕಾರನಾಡಿದನೆಂದು ಗೋಪಿಯರಾಡಿಸುತ್ತು ಮಿರಲ್ಕೆ ಸಂ ।
ಸಾರ ನಾಟಕ ಸೂತ್ರಧಾರಿ ಮುರಾರಿ ಕೈಪರೆಗಾಡಿದಂ ॥

– ಮಲ್ಲಿಕಾಮಾಲೆಯಲ್ಲಿ ಪ್ರತಿಪಾದದಲ್ಲಿ ಹದಿನೆಂಟು ವರ್ಣಗಳು. ಹತ್ತನೆಯ ವರ್ಣಕ್ಕೆ ಯತಿ. ಇದರಲ್ಲಿ ರಗಣ, ಸಗಣ, ಜಗಣ, ಭಗಣ ರಗಣಗಳು (ರಂಸಜಂಜಭರಂ) ಬರುತ್ತವೆ. ಇದರಲ್ಲಿಯ ವಿಶೇಷಾಂಶವೆಂದರೆ – ಇಲ್ಲಿ ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣಗಳು ಬರುತ್ತಿದ್ದು ತಾಳಲಯದ ಸ್ವಾರಸ್ಯವು ಎದ್ದು ಕಾಣುತ್ತದೆ. ವರ್ಣವೃತ್ತಗಳು ಮಾತ್ರಾ ವೃತ್ತಗಳಾಗಿ ಪರಿಣಮಿಸುವುದಕ್ಕೆ ಮಲ್ಲಿಕಾಮಾಲೆಯೂ ಒಂದು ಉದಾಹರಣೆ.

೧೯ನೆಯ 'ಅತಿಧೃತಿ' ಛಂದಸ್ಸಿನ 'ತರಳ'ವೃತ್ತದ ಧಾಟಿಯೂ ಮಲ್ಲಿಕಾಮಾಲೆಯಂತೆಯೇ ಇದ್ದು , ಅದರಲ್ಲಿಯೂ ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣಗಳು ಬರುವ ತಾಳಲಯವು ಎದ್ದು ತೋರುತ್ತದೆ.

ಸೂತ್ರ : UUU-UU|- U- U U-U-UU-U-
ತರಳವೃತ್ತಮೆನಿಪ್ಪುದೊಪ್ಪಿರೆ । ನಂಭರಂಸಜಜಂಗಮುಂ ॥

ಉದಾ : U UU -UU - U -UU -U-UU -U-
ಮದನಮೋಹನ ಮಂತ್ರನಾದಮೊ । ಸೇತುಗಟ್ಟಿದ ಕಾಮಸಂ ।

UU U -U U-U-UU -U-U-U -
ಮದ ಸುಧಾಬ್ಧಿ ತರಂಗನಾದಮೊ ಲೋಕಮೆಲ್ಲಮನಿಕ್ಕಿ ಮೆ ॥
ಟ್ಟಿದ ಮನೋಭವ ಸಿಂಹನಾದಮೊ ಪೇಳೆನಲ್ ರಸಗೀತದೊಳ್ ।
ಪುದಿದು ವಾದ್ಯದೊಳೊಂದಿ ತಳ್ತುದು ಕಿಂಕಿಣೀಕಲಝುಂಕೃತಂ ॥

– ಈ ವೃತ್ತದಲ್ಲಿ ಪ್ರತಿ ಪಾದದಲ್ಲಿ ಹತ್ತೊಂಭತ್ತು ವರ್ಣಗಳಿದ್ದು, ಹನ್ನೊಂದನೆಯ ವರ್ಣಕ್ಕೆ ಯತಿಯಿದೆ ; ಮತ್ತು ನ, ಭ, ರ, ಸ, ಜ, ಜ ಗಣಗಳೂ ಮೇಲೊಂದು ಗುರುವೂ (ನಂಭರಂ ಸಜಜಂಗಮುಂ) ಬಂದಿವೆ.

ಇನ್ನು 'ಖ್ಯಾತ ಕರ್ಣಾಟಕ ವೃತ್ತ' ಗಳನ್ನು ಪರಿಶೀಲಿಸುವ :

(೧) ೧೯ನೆಯ 'ಅತಿಧೃತಿ' ಛಂದಸ್ಸಿನಲ್ಲಿ ಶಾರ್ದೂಲವಿಕ್ರೀಡಿತ ವೃತ್ತ :

ಸೂತ್ರ : - - - UU-U-UU- - - U--U-
ಕಣ್ಗೊಪ್ಪಲ್ ಮಸಜಂಸತಂತಗಮುಮಾ X ಶಾರ್ದೂಲವಿಕ್ರೀಡಿತಂ

ಉದಾ : - - - U U - U - U U - - - U - - U -
ಕ್ರಂದಚ್ಛಂದನ ಜಾತ ನಿರ್ಗತ ಶಿಖಿ ।ಜ್ವಾಳಾ ಸಹಸ್ರಂಗಳಾ ।
- - - UU -U - U UU - - - U - U -
ಟಂದೆತ್ತಂ ಕವಿದಳ್ವೆ ಬೇವ ಶವಸಂಘಾತಂಗಳಂ ಚಕ್ಕುಮೊ ॥
ಕ್ಕೆಂದಾಗಳ್ ಕಡಿದುಗ್ರ ಭೂತನಿಕರಂ ಕೆಯ್ವೇಯೇ ಬಾಯ್ವೇಯೇ ತಿಂ
ಬಂದಂ ತನ್ನ ಮನಕ್ಕಗುರ್ವಿಸುವಿನಂ ದುರ್ಯೋಧನಂ ನೋಡಿದಂ॥

– ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಹತ್ತೊಂಭತ್ತು ವರ್ಣಗಳು ಪ್ರತಿಪಾದದಲ್ಲಿರುತ್ತವೆ. ಹನ್ನೆರಡನೆಯ ವರ್ಣಕ್ಕೆ ಯತಿ. ಇದರಲ್ಲಿ ಮ, ಸ, ಜ, ಸ, ತ, ತ, ಗಣಗಳೂ ಮೇಲೊಂದು ಗುರುವೂ ಪ್ರತಿ ಪಾದದಲ್ಲಿರುತ್ತವೆ.

(೨) ೨೦ನೆಯ 'ಕೃತಿ' ಛಂದಸ್ಸಿನಲ್ಲಿ 'ಉತ್ಪಲಮಾಲೆ' ಎಂಬ ವೃತ್ತ :

ಸೂತ್ರ : - U U - U - U U U - U U - U U - U - U -
ಉತ್ಪಲಮಾಲೆಯಪ್ಪುದು ಭರಂನಭ ಭಂರಲಗಂನೆಗಳ್ದಿರಲ್ ॥

ಉದಾ : - U U - U - U U U - U U - U U - U - U -
ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇಳಿಮೆಂ ।
- UU- U - UUU -UU - U U - U - U -
ದಾನರನಾಥನಂ ತಿಳಿಪೆ ತನ್ಮುನಿ ಭೂಭುಜನೆಯ್ದೆ ನಂಬಿ ಕಾ ।
ನೀನ ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾ
ನೀ ನಯದಿಂದೆ ಪೇರ್ಚಿ ಪೊರೆದಳ್ಕರೊಳಂದೊಡನುಂಡನಲ್ಲನೇ

– ಉತ್ಪಲಮಾಲೆಯಲ್ಲಿ ಪ್ರತಿ ಪಾದದಲ್ಲಿ ಇಪ್ಪತ್ತು ವರ್ಣಗಳು ಯತಿ ಹನ್ನೆರಡನೆಯ ವರ್ಣಕ್ಕೆ ಸ್ಫುಟವಾಗಿ ಬರುತ್ತಿದೆ. ಇದರಲ್ಲಿ ಭ, ರ, ನ, ಭ, ಭ, ರ ಗಣಗಳೂ ಮೇಲೊಂದು ಲಘು ಮತ್ತು ಗುರುವೂ (ಭರಂನಭಭಂರಲಗಂ) ಬರುತ್ತವೆ.

(೩) ೨೧ನೆಯ 'ಪ್ರಕೃತಿ' ಛಂದಸ್ಸಿನಲ್ಲಿ 'ಸ್ರಗ್ಧರಾ' ವೃತ್ತ :

ಸೂತ್ರ : - - - - U - - U U U U U U -
ತೋರಲ್ ಮಂ ರಂಭನಂ ಮೂ ।ಯಗಣಮುಮದೆತಾಂ ।
- U - U - -
ಸ್ರಗ್ಧರಾವೃತ್ತ ಮಕ್ಕುಂ ॥

ಉದಾ :
- - - - U - - - U UU UU - - U - - U - -
ಈ ವಜ್ರಾವರ್ತಕೋದಂ । ಡಮನವಯವದಿಂ । ದೇರಿಸಲ್ ಸಾಲ್ವದೋರ್ದಂ
- - - U - - UUUUU U- - U - - U - -
ಡಾವಷ್ಟಂಭಪ್ರಚಂಡಂ ಜನಕಜೆಗೆ ವರಂ ಬರ್ಪುದೆಂಬೀವ್ಯವಸ್ಥಾ ॥

ಉದಾ : - - - U U - U - U U - - - U - - U -
ಕ್ರಂದಚ್ಚಂದನ ಜಾತ ನಿರ್ಗತ ಶಿಖಿ ।ಜ್ವಾಳಾ ಸಹಸ್ರಂಗಳಾ ।
- - - UU -U - U UU - - - U - U -
ಟಂದೆತ್ತಂ ಕವಿದಳ್ವೆ ಬೇವ ಶವಸಂಘಾತಂಗಳಂ ಚಕ್ಕುಮೊ ॥
ಕ್ಕೆಂದಾಗಳ್ ಕಡಿದುಗ್ರ ಭೂತನಿಕರಂ ಕೆಯ್ಬೇಯೇ ಬಾಯ್ಬೇಯೇ ತಿಂ
ಬಂದಂ ತನ್ನ ಮನಕ್ಕಗುರ್ವಿಸುವಿನಂ ದುರ್ಯೋಧನಂ ನೋಡಿದಂ॥

– ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಹತ್ತೊಂಭತ್ತು ವರ್ಣಗಳು ಪ್ರತಿಪಾದದಲ್ಲಿರುತ್ತವೆ. ಹನ್ನೆರಡನೆಯ ವರ್ಣಕ್ಕೆ ಯತಿ. ಇದರಲ್ಲಿ ಮ, ಸ, ಜ, ಸ, ತ, ತ, ಗಣಗಳೂ ಮೇಲೊಂದು ಗುರುವೂ ಪ್ರತಿ ಪಾದದಲ್ಲಿರುತ್ತವೆ.

(೨) ೨೦ನೆಯ 'ಕೃತಿ' ಛಂದಸ್ಸಿನಲ್ಲಿ 'ಉತ್ಪಲಮಾಲೆ' ಎಂಬ ವೃತ್ತ :

ಸೂತ್ರ : - U U - U - U U U - U U - U U - U - U -
ಉತ್ಪಲಮಾಲೆಯಪ್ಪುದು ಭರಂನಭ ಭಂರಲಗಂನೆಗಳ್ದಿರಲ್ ॥

ಉದಾ : - U U - U - U U U - U U - U U - U - U -
ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇಳಿಮೆಂ ।
- UU- U - UUU -UU - U U - U - U -
ದಾನರನಾಥನಂ ತಿಳಿಪೆ ತನ್ಮುನಿ ಭೂಭುಜನೆಯ್ದೆ ನಂಬಿ ಕಾ ।
ನೀನ ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾ
ನೀ ನಯದಿಂದೆ ಪೆರ್ಚಿ ಪೊರೆದಳ್ಕರೊಳಂದೊಡನುಂಡನಲ್ಲನೇ

– ಉತ್ಪಲಮಾಲೆಯಲ್ಲಿ ಪ್ರತಿ ಪಾದದಲ್ಲಿ ಇಪ್ಪತ್ತು ವರ್ಣಗಳು ಯತಿ ಹನ್ನೆರಡನೆಯ ವರ್ಣಕ್ಕೆ ಸ್ಫುಟವಾಗಿ ಬರುತ್ತಿದೆ. ಇದರಲ್ಲಿ ಭ, ರ, ನ, ಭ, ಭ, ರ ಗಣಗಳೂ ಮೇಲೊಂದು ಲಘು ಮತ್ತು ಗುರುವೂ (ಭರಂನಭಭಂರಲಗಂ) ಬರುತ್ತವೆ.

(೩) ೨೧ನೆಯ 'ಪ್ರಕೃತಿ' ಛಂದಸ್ಸಿನಲ್ಲಿ 'ಸ್ರಗ್ಧರಾ' ವೃತ್ತ :

ಸೂತ್ರ : - - - - U - - U U U U U U -
ತೋರಲ್ ಮಂ ರಂಭನಂ ಮೂ ।ಯಗಣಮುಮದೆತಾಂ ।
- U - U - -
ಸ್ರಗ್ಧರಾವೃತ್ತ ಮಕ್ಕುಂ ॥

ಉದಾ :
- - - - U - - - U UU UU - - U - - U - -
ಈ ವಜ್ರಾವರ್ತಕೋದಂ । ಡಮನವಯವದಿಂ । ದೇರಿಸಲ್ ಸಾಲ್ವದೋರ್ದಂ
- - - U - - UUUUU U- - U - - U - -
ಡಾವಷ್ಟಂಭಪ್ರಚಂಡಂ ಜನಕಜೆಗೆ ವರಂ ಬರ್ಪುದೆಂಬೀವ್ಯವಸ್ಥಾ ॥

ಮುಳುಗುವ ತೀವ್ರ ದೀಧಿತಿವೊಲಾ ಕೊಳದೊಳ್ ಫಣಿರಾಜಕೇತನಂ ।
ಮುಳುಗಿದನಾರ್ಗಮೇಂ ಬಿದಿಯ ಕಟ್ಟಿದುದಂ ಕಳೆಯಲ್ಕೆ ತೀರ್ಗುಮೇ ॥

– ಚಂಪಕ ಮಾಲೆಯ ಪ್ರತಿ ಪಾದದಲ್ಲಿ ಇಪ್ಪತ್ತೊಂದು ವರ್ಣಗಳಿರುತ್ತದೆ. ಹದಿಮೂರನೆಯ ವರ್ಣಕ್ಕೆ ಯತಿ. ಇದರಲ್ಲಿ ನ, ಜ, ಭ, ಜ, ಜ, ಜ, ರ ಗಣಗಳು (ನಜಭಜಜಂಜರಂ) ಪ್ರತಿ ಪಾದದಲ್ಲಿರುತ್ತವೆ.

(೬) ೨೨ನೆಯ ಆಕೃತಿ ಛಂದಸ್ಸಿನಲ್ಲಿ 'ಮಹಾಸ್ರಗ್ಧರಾ' ವೃತ್ತ :

ಸೂತ್ರ : UU - - - U - - - UUUU UU - U - - U - -
ಸತತಂ ನಂ ಸಂರರಂಗಂ । ನೆರೆದೆಸೆಯೆ ಮಹಾ । ಸ್ರಗ್ಧರಾವೃತ್ತಮಕ್ಕುಂ ॥

ಉದಾ : U U - - - U - - UUU UUU - - U - - U - -
ಇದರೊಳ್ ಶ್ವೇತಾತಪತ್ರ । ಸ್ಥಗಿತ ದಶದಿಶಾ । ಮಂಡಲಂ ರಾಜಚಕ್ರಂ ।
UU - - - U- - U U U UU - - U - - U - -
ಪುದಿದಲ್ಕಾಡಿತ್ತಡಂಗಿತ್ತಿದರೊಳೆ ಕುರುರಾಜಾನ್ವಯಂ ಮತ್ತ್ರತಾಪ ॥
ಕ್ಕಿದರಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು ।
ಬ್ಜದಳಾಕ್ಷೀ ಪೇಳ ಸಾಮಾನ್ಯಮೆ ಬಗೆಯೆ ಭವಕ್ಲೇಶ ಪಾಶಪ್ರಪಂಚಂ ॥

– ಮಹಾಸ್ರಗ್ಧರಾವೃತ್ತದ ಪ್ರತಿ ಪಾದದಲ್ಲಿ ಇಪ್ಪತ್ತೆರಡು ವರ್ಣಗಳಿದ್ದು, ಎಂಟನೆಯ ಮತ್ತು 'ಏಳನೆಯ ವರ್ಣಗಳಿಗೆ ಕ್ರಮವಾಗಿ ಎರಡು ಯತಿಗಳಿಂದ ಆರೋಹ ಲಯವು ಉತ್ತರೋತ್ತರವಾಗಿ ಏರುತ್ತ ಅವರೋಹದಲ್ಲಿ ಮುಕ್ತಾಯ ಹೊಂದುತ್ತದೆ. ಲಯದ ನಡೆ ಗಂಭೀರವಾದುದು.

ಇಲ್ಲಿಗೆ ಖ್ಯಾತ ಕರ್ಣಾಟಕ ವೃತ್ತಗಳು ಮುಗಿದುವು. ಈ ಮೊದಲೆ ಸೂಚಿಸಿದಂತೆ ಈ ಆರು ವೃತ್ತಗಳಲ್ಲಿ ಶಾರ್ದೂಲವಿಕ್ರೀಡಿತ, ಉತ್ಪಲಮಾಲೆ, ಸ್ರಗ್ಧರಾವೃತ್ತ – ಇವು ಮೂರು ಮೂಲ ವೃತ್ತಗಳಾಗಿವೆಯೆಂದೂ ಇವುಗಳಿಂದ ಕ್ರಮವಾಗಿ ಮತ್ತೇಭವಿಕ್ರೀಡಿತ, ಚಂಪಕಮಾಲೆ, ಮಹಾಸ್ರಗ್ಧರಾ ವೃತ್ತಗಳನ್ನು ಕನ್ನಡ ಕವಿಗಳು ಸೃಷ್ಟಿಸಿಕೊಂಡಿರ ಬಹುದೆಂದೂ ಹೇಳಲಾಗುತ್ತದೆ. ಸಂಸ್ಕೃತದಿಂದ ಬಂದ ಮೂರು ವೃತ್ತಗಳೇ ಆರು ಖ್ಯಾತ ಕರ್ಣಾಟಕ ವೃತ್ತಗಳಿಗೆ ಮೂಲವಾಗಿವೆ. ಆ ಮೂಲ ವೃತ್ತಗಳ ಪಾದಗಳ ಮೊದಲ ಗುರುವಿಗೆ ಬದಲಾಗಿ ಎರಡು ಲಘುಗಳನ್ನಿರಿಸಿದಾಗ ಅವುಗಳಿಂದ ಇನ್ನಿತರ ಮೂರು ವೃತ್ತಗಳು ಹುಟ್ಟಿವೆ.

ಈ ಮೊದಲೆ ತಿಳಿಸಿರುವಂತೆ ಈ ಆರು ಖ್ಯಾತ ಕರ್ಣಾಟಕ ವೃತ್ತಗಳು ಕನ್ನಡ ಚಂಪೂ ಕೃತಿಗಳಲ್ಲಿ ವಿಶೇಷವಾಗಿ ಪ್ರಚುರವಾದವು. ಚಂಪೂ ಕವಿಗಳೆಲ್ಲರೂ ಸಂಸ್ಕೃತ–ಕನ್ನಡ ಉಭಯ ಭಾ.ಷಾ ವಿಶಾರದರಾಗಿದ್ದರಿಂದಲೂ ಈ ಸಂಸ್ಕೃತ ವೃತ್ತಗಳಿಗೆ ಭಾಷೆ ಸಹಜವಾಗಿ ಹೊಂದಿಕೊಂಡುದರಿಂದಲೂ ಚಂಪೂಶೈಲಿಗೆ ಪ್ರೌಢಿಯನ್ನಿತ್ತವೆಂಬ ಭಾವನೆ ಬೆಳೆಯಿತು.

ಇದರಿಂದ ಬರುಬರುತ್ತ ಚಂಪೂಶೈಲಿ ಸಂಸ್ಕೃತ ಪದಭೂಯಿಷ್ಠವಾಗಿ ಕೃತಕ ಶೈಲಿಗೆ ಎಡೆಯಿತ್ತಿತ್ತು. ಪಂಪನಂಥ ಶ್ರೇಷ್ಠ ಕವಿಗಳು ಮಾತ್ರ ಖ್ಯಾತಕರ್ಣಾಟಕ ವೃತ್ತಗಳನ್ನು ಅಚ್ಚಗನ್ನಡದಲ್ಲೂ ತಿರುಳ್ಗನ್ನಡದಲ್ಲೂ ರಚಿಸಬಲ್ಲವರಾಗಿದ್ದರು. ಆದರೆ ಸಾಮಾನ್ಯವಾಗಿ ಚಂಪೂ ಕಾವ್ಯಗಳ ಸಂಸ್ಕೃತಮಯ ಶೈಲಿ ನಯಸೇನ, ಆಂಡಯ್ಯರಂಥವರಿಂದ ಪ್ರತಿಭಟಿಸಲ್ಪಟ್ಟಿತು. ಆದರೂ ಚಂಪೂಶೈಲಿಯ ಪರಿಣಾಮವಾಗಿ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಬೆಳೆಯುತ್ತ ಬಂದುದನ್ನು ಆಧುನಿಕ ಗ್ರಾಂಥಿಕ ಭಾಷೆಯಲ್ಲಿ ಇಂದೂ ಕಾಣಬಹುದಾಗಿದೆ.

ಸಂಸ್ಕೃತದಿಂದ ಸ್ವೀಕರಿಸಿದ ಈ ಆರು ಖ್ಯಾತ ಕರ್ಣಾಟಕ ವೃತ್ತಗಳು ಕ್ರಿ.ಶ. ೭೦೦-೯೫೦ ರ ಕಾಲದ ಶಾಸನಗಳಲ್ಲೂ ದೊರೆಯುವುದನ್ನು ನೋಡಿದರೆ ಇವುಗಳ ಪ್ರಚುರತೆಯ ಪ್ರಾಚೀನತೆಯ ಕಲ್ಪನೆಯಾಗುವುದು. ಛಂದೋಂಬುಧಿಯಲ್ಲೆ ಇವುಗಳನ್ನು ಕುರಿತ ಮತ್ತೇಭವಿಕ್ರೀಡಿತ ವೃತ್ತದಲ್ಲಿ ರಚಿತವಾದ ಈ ಪದ್ಯವು ಗಮನಾರ್ಹವಾದುದು. ಖ್ಯಾತ ಕರ್ಣಾಟಕ ವೃತ್ತಗಳನ್ನು ನೋಡಿದ ತಕ್ಷಣವೆ ಗುರುತಿಸಲು ಈ ಪದ್ಯ ನೆರವು ನೀಡುತ್ತದೆ :

ಮ॥ ಗುರುವೊಂದಾದಿಯೊಳುತ್ಪಲಂ, ಗುರು ಮೊದಲ್ ಮೂರಾಗೆ ಶಾರ್ದೂಲಮಾ ।
ಗುರು ನಾಲ್ಕಾಗಿರಲಂತು ಸ್ರಗ್ಧರೆ, ಲಘು ದ್ವಂದ್ವಂ ಗುರುದ್ವಂದ್ವಮಾ ॥

ಗಿರೆ ಮತ್ತೇಭ, ಲಘುದ್ವಯತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ ।

ಪರಿಣಾಕ್ಷೀ ಲಘು ನಾಲ್ಕು ಚಂಪಕಮಿವಾರುಂ ಖ್ಯಾತಕರ್ಣಾಟಕಂ ॥

-ಖ್ಯಾತ ಕರ್ಣಾಟಕವೃತ್ತಗಳ ಬಗ್ಗೆ ಈ ಕೆಲವು ಮಾತುಗಳನ್ನೂ ಗಮನಿಸುವುದುಚಿತಃ

೬. ಖ್ಯಾತ ಕರ್ಣಾಟಕ ವೃತ್ತಗಳ ಪರಿಣಾಮ : ಭಾಷಾಶೈಲಿ

೧) ಈ ವೃತ್ತಗಳನ್ನೂ ಇನ್ನಿತರ ಕೆಲ ವರ್ಣವೃತ್ತಗಳನ್ನೂ ಕನ್ನಡಕ್ಕೆ ಸೇರಿಸಿ ಕೊಂಡಾಗ ಅವಕ್ಕೆ ಆದಿಪ್ರಾಸ ಸೇರಿತು; ಯತಿಯನ್ನು ಮೀರಲಾಯಿತು.

೨) ಪಾದಗಳ ಕೊನೆಯಲ್ಲಿ ಸಾಮಾನ್ಯವಾಗಿ ನಿಲುವು (ಯತಿ) ಇಲ್ಲ, ಅಲ್ಲಿ ದೀರ್ಘವಾಗಬಹುದಾದ ಹ್ರಸ್ವಾಕ್ಷರ ಬರಲು ಎಡೆಯಿಲ್ಲ - ಲಯಗ್ರಾಹಿಯಾಗಿ ಮುಂದಕ್ಕೋಡುವುದರಿಂದ.

೩) ವೃತ್ತದ ಧಾಟಿ-ಘೋಷಗಳನ್ನು ಪಾಲಿಸುವುದಕ್ಕೆಂದು ಹೆಚ್ಚು ಹೆಚ್ಚಾಗಿ ಸಂಸ್ಕೃತದ ದೀರ್ಘ ಸಮಾಸಗಳನ್ನು ವೃತ್ತಗಳಲ್ಲಿ ಜೋಡಿಸಲಾಯಿತು. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಕೊನೆಯಲ್ಲಿ ಅರಿಗನ ಆಸ್ಥಾನದಲ್ಲಿಯ ವೈತಾಳಿಕನೊಬ್ಬನ ಘೋಷಣೆಯ ಈ ಪದ್ಯವನ್ನು ಪರಿಶೀಲಿಸುವ :

ಸ್ರ॥ ಆಸೇತೋರಾಮ ಚಾಪಾಟನಿ ತಟಯುಗ ಟಂಕಾಂಕಿತಾಖಂಡ ಖಂಡಾ
ದಾಪೀಯೂಷಾಬ್ಧಿ ದುಗ್ಧಪ್ಲವ ಧವಳ ಕನತ್ಕಂದರಾನ್ಮಂದರಾದ್ರೇಃ ॥
ಆಚಂದ್ರಾರ್ಕ ಪ್ರತೀತೋಭಯ ಗಿರಿಶಿಖರಾತ್ ಸ್ವೋದಯಸ್ಯೈಕ ಹೋತೋ
ಶೈಲೇಳಾ ಕಲ್ಪ ಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತ ತುಂಗಃ ॥

– ಈ ಪದ್ಯ ಕೊನೆಯ ಪಂಕ್ತಿಯ 'ಕ್ಷಿತಿವಲಯಮಿದಂ' ಎಂಬಲ್ಲಿ 'ಇದಂ' ಒಂದು ಕನ್ನಡದ ಹಾಗೆ ಭಾಸವಾಗುತ್ತದೆ. ಉಳಿದೆಲ್ಲ ಪದಗಳೂ ವಾಕ್ಯ ರಚನೆಗಳೂ ಸಂಸ್ಕೃತದವೇ ಆಗಿವೆ. ಇದೊಂದು ವೈತಾಳಿಕನ ಬಾಯಲ್ಲಿ ಹಾಕಿದ ಸಂಸ್ಕೃತ ಪದ್ಯವೆಂದು ಪರಿಗಣಿಸಬಹುದಾದರೂ ಸಂಸ್ಕೃತ ಪ್ರಯೋಗದ ಅತಿರೇಕಕ್ಕೆ ಉತ್ತಮ ಉದಾಹರಣೆಯಾಗಿದೆ. ಆದರೆ ಪಂಪನು ಖ್ಯಾತ ಕರ್ಣಾಟಕ ವೃತ್ತಗಳಲ್ಲಿ ತಿರುಳ್ಗನ್ನಡವನ್ನು ಚೆನ್ನಾಗಿ ಹೆಣೆಯ ಬಲ್ಲ ಕವಿಯಾಗಿದ್ದನೆಂಬುದಕ್ಕೆ ಈ ಪದ್ಯವನ್ನು ಲಕ್ಷಿಸಬಹುದಾಗಿದೆ :–

ಚಂ॥ ಒಡಲೊಳೆ ಜೀವಮಿರ್ದು ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ ।
ಗಡ ಬಳಿಕತ್ತ ಬೇರೆ ಪೆರತೊಂದೊಡಲೊಳ್ ಗಡ ತಾನೆ ನಿಂದೊಡಂ ॥
ಬಡಿವುದು ಧರ್ಮಕರ್ಮ ಫಲಮಂಗಡ ಸತ್ತನೆ ಮತ್ತೆ ಪುಟ್ಟುವಂ ।
ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ ॥

(ಆ.ಪು.೨–೩೮)

೭. ಕೆಲವು ವರ್ಣವೃತ್ತಗಳು ಮಾತ್ರಾವೃತ್ತಗಳಾಗಿ ಪರಿಣಮಿಸುತ್ತವೆ.

ಈವರೆಗೆ ವಿವರಿಸಿದ ವರ್ಣವೃತ್ತಗಳಲ್ಲಿ ಈ ಮೊದಲೆ ಸೂಚಿಸಿದಂತೆ ಕೆಲವು ವೃತ್ತಗಳು ಮಾತ್ರಾವೃತ್ತಗಳಾಗಿ ಪರಿಣಮಿಸುವ ಸಂಭವವಿರುವುದಕ್ಕೆ ಅವುಗಳಲ್ಲಿ ಎದ್ದು ಕಾಣುವ ಮಾತ್ರಾಗಣಗಳ ತಾಳಲಯವೇ ಕಾರಣವೆಂಬುದನ್ನು ನೆನಪಿಡಬೇಕು. ಈ ಕೆಳಗಿನ ವರ್ಣವೃತ್ತಗಳನ್ನು ಈ ದೃಷ್ಟಿಯಿಂದ ಪರಿಶೀಲಿಸುವ :

ಮಲ್ಲಿಕಾ ಮಾಲೆ : 'ರಂಸಜಂಜಭರಂ' ಗಣಗಳು ಇಲ್ಲಿದ್ದರೂ –
- U - U U - - - UU - U - UU - U -
ನೀರ ಜೋತ್ಪಲ ವರ್ಣನಾಡಿದನಾಡಿದಂ ಕಮ ಲೇಕ್ಷಣಂ ।
– ಈ ವೃತ್ತದ ಧಾಟಿ ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣದ ನಡೆ ತಾಳ ಲಯದಲ್ಲಿ ಹೆಚ್ಚು ಎದ್ದು ಕಾಣುತ್ತದೆ. ಮಲ್ಲಿಕಾಮಾಲೆಯ ಮೊದಲ ಗುರುವಿಗೆ ಎರಡು ಲಘುಗಳನ್ನಿಟ್ಟು ಮಾಡಿಕೊಂಡಿರುವ 'ತರಳ' ವೃತ್ತದ ನಡೆಯೂ ಇದೇ ಮಾದರಿಯದಾಗಿದೆ :

ಉದಾ : ತರಳವೃತ್ತ : 'ನಂಭರಂಸಜಜಂಗಮುಂ'

U U U - U U - U - U U - U - U U - U -
ಮದನ । ಮೋಹನ । ಮಂತ್ರ । ನಾದಮೊ । ಸೇತು । ಗಟ್ಟಿದ । ಕಾಮ । ಸಂ

೨೫ನೆಯ 'ಅಭಿಕೃತಿ' ಛಂದಸ್ಸಿನಲ್ಲಿಯ 'ಕ್ರೌಂಚಪದ' ವೃತ್ತದ ಧಾಟಿಯಲ್ಲೂ ೪ ಮಾತ್ರೆಯ ಗಣದ ಗತಿ ಸ್ಫುಟವಾಗಿದೆ :

ಕ್ರೌಂಚ ಪದ : 'ಭಮಸಭನನನನಗಣ ಗಳು'

- U U   - -   - U U   - -   UU UU   UU UU   UU   UU   U U -
ಕೇದಗೆ । ಪೂವಿಂ । ಚಾದಗೆ । ಬಾಯಂ । ಬಿಡೆ ಬಿಡು । ತರೆ ಬಿಡು । ವನಿ ಕಡು । ವಿಸಿಲಂ

ಇಲ್ಲಿ ೪ ಮಾತ್ರೆಯ ಗಣಗಳು ಎಂಟು ಸ್ಫುಟವಾಗಿ ಗೋಚರಿಸುತ್ತವೆ.

೨೬ನೆಯ ಉತ್ಕೃತಿಯಲ್ಲಿ 'ಶಂಭುನಟನ' ವೃತ್ತವೂ ಮಾತ್ರಾಗಣ ಲಯದಲ್ಲಿದೆ

ಶಂಭುನಟನ : 'ಜಸಂನಭಜಸಂನಭಲಗಂ'

U - UU   U - U U   U - UU   U - U U   U - U U   U - U U   U -
ಅಳಿಪ್ರಭ । ಲಲಾಟಗ । ಚಲಾಲಕೆ । ಖಲಾಪಹೆ । ಬಲಾನ್ವಿತೆ । ಮಿಲದ್ಘನ । ಗುಣೇ

ಇಲ್ಲಿಯ ಪಂಚಮಾತ್ರಾಗಣಗಳಲ್ಲಿ ಮತ್ತು ಕೊನೆಯ ತ್ರಿಮಾತ್ರಾಗಣದಲ್ಲಿ ಲಘುವಿನ ಮುಂದೆ ಗುರು ವಿನಿಂದ ಆರಂಭವಾಗುವ ಗಣವಿರುವುದು ನಿಷಿದ್ಧವೆಂಬುದನ್ನು ಗಮನಿಸಬೇಕು.

ಈ ಬಗೆಯ ತಾಳಲಯಕ್ಕೇ ಹೆಚ್ಚಾಗಿ ಒಗ್ಗುವ ವರ್ಣವೃತ್ತಗಳ ಪಾದಗಳನ್ನು ಮ, ಯ, ರ, ಸ, ತ, ಜ, ಭ, ನ – ವರ್ಣಗಣಗಳಲ್ಲಿ ವಿಭಜಿಸಿ ಲಕ್ಷಣ ಹೇಳುವುದು ಅಷ್ಟೊಂದು ಸಹಜವೆನಿಸದು. ಈ ವೃತ್ತಗಳ ನಿಜ ಸ್ವರೂಪವಾಗಲಿ ರಚನೆಯ ರಹಸ್ಯವಾಗಲಿ ವರ್ಣಗಣಪದ್ಧತಿಯಿಂದ ತಿಳಿಯುವುದಿಲ್ಲ ವೆಂಬುದನ್ನೂ ಅರಿತುಕೊಳ್ಳಬೇಕು.

ಚಂಪೂ ಕಾವ್ಯಗಳಲ್ಲಿ ವಿಶೇಷವಾಗಿ ಪ್ರಚುರಗೊಂಡ ವರ್ಣವೃತ್ತಗಳು ಕನ್ನಡ ಭಾಷೆಯ ಮೇಲೆ ಬೀರಿದ ಪ್ರಭಾವವೇನಿದ್ದರೂ ಅದೇನು ಅಷ್ಟೊಂದು ಹಾನಿಕರವಲ್ಲ. ಸಂಸ್ಕೃತದ ಶ್ರೀಮಂತಿಕೆ ಕನ್ನಡಕ್ಕೂ ಅಷ್ಟು ಒದಗಿಬಂತು ಎನ್ನುವವರೂ ಇರಬಹುದು. ಆದರೆ ಅಚ್ಚಗನ್ನಡದ ನುಡಿಯ ಸಹಜತೆ ಸರಳತೆ ಸತ್ತ್ವಗುಣಗಳೂ ಅದರ ಮೂಲ ಧ್ವನಿಯ ಹೊಳಪು – ಝುಳಪುಗಳೂ ಬೆಡಗು ಬಿನ್ನಾಣಗಳೂ ಬಲು ಮಟ್ಟಿಗೆ ಕಣ್ಮರೆಯಾದಂತಾಯಿತೆಂಬ ಬಿ.ಎಂ. ಶ್ರೀಯವರ ಮಾತು ತುಂಬ ಅರ್ಥಪೂರ್ಣವಾದುದು. ಮಾರ್ಗ, ದೇಸಿ ಎಂಬ ಕಾವ್ಯಮಾರ್ಗ, ಶೈಲಿ–ಛಂದಸ್ಸುಗಳ ದೃಷ್ಟಿಯಿಂದಲೂ ಕವಿಗಳು ಚಿಂತನಕ್ಕೆ ತೊಡಗುವಂತಾಯಿತು. ಈ ಕಾರಣದಿಂದಲೆ ಪಂಪನಂಥ ಸಮರ್ಥ ಕವಿಗಳು ಕನ್ನಡದಲ್ಲಿ ರಚನೆ ಮಾಡುವಾಗ 'ಮಾರ್ಗ' ದಲ್ಲಿ, ಮಿಶ್ರವಿಧಾನದಲ್ಲಿ , ಅಚ್ಚ ತಿರುಳ್ಗನ್ನಡದಲ್ಲಿ ಒಮ್ಮೊಮ್ಮೆ ತಮ್ಮ ಪ್ರತಿಭಾ ಕೌಶಲವನ್ನು ಪ್ರದರ್ಶಿಸಿದ್ದುಂಟು. ಇವಕ್ಕೆ ಉದಾಹರಣೆಗಳು ಪಂಪ, ರನ್ನ , ನಾಗಚಂದ್ರ, ರುದ್ರಭಟ್ಟ

ನೇಮಿಚಂದ್ರ, ನಯಸೇನ, ಆಂಡಯ್ಯ ಮೊದಲಾದವರ ಕೃತಿಗಳಲ್ಲಿ ಹೇರಳವಾಗಿ ದೊರೆಯುತ್ತವೆ.

೮. ಖ್ಯಾತ ಕರ್ಣಾಟಕ ವೃತ್ತಗಳ ಬಳಕೆ ಹಾಗೂ ಭಾವ ಮೌಲ್ಯ

ಖ್ಯಾತ ಕರ್ಣಾಟಕ ವೃತ್ತಗಳ ಬಗ್ಗೆ ಇನ್ನೊಂದು ಮಾತನ್ನು ನೆನಪಿಡಬೇಕು. ಕನ್ನಡ ಚಂಪೂ ಕೃತಿಗಳಲ್ಲಿ ಇವು ಆರು ವೃತ್ತಗಳು ಖ್ಯಾತವಾದುದು ನಿಜ. ಇವು ಆರರಲ್ಲಿ ಚಂಪಕ, ಉತ್ಪಲಮಾಲೆಗಳ ಪ್ರಮಾಣ ಅತ್ಯಧಿಕ ; ಶಾರ್ದೂಲ ಮತ್ತು ಮತ್ತೇಭವಿಕ್ರೀಡಿತಗಳ ಪ್ರಮಾಣ ಕಡಿಮೆ; ಸ್ರಗ್ಧರೆಗಳ ಪ್ರಮಾಣವಂತೂ ತೀರ ಕಡಿಮೆ. ಇವುಗಳ ಪ್ರಮಾಣ ಇವು ಕನ್ನಡ ನುಡಿಯ ಜಾಯಮಾನಕ್ಕೆ ಹೊಂದಿಕೊಂಡು ಹೋಗುವ ಗುಣವನ್ನು ಅವಲಂಬಿಸಿದೆ ಎಂದು ಡಾ. ಕರ್ಕಿಯವರು ಹೇಳುವ ಮಾತು ಸರಿಯಾದುದು. ಚಂಪಕಮಾಲೆ ಕನ್ನಡ ಕವಿಗಳಿಗೆ ತುಂಬ ಮೆಚ್ಚಿಕೆಯದಾಯ್ತು. ಅದರ ಲಯವು ಕನ್ನಡಕ್ಕೆ ಒಗ್ಗಿಕೊಂಡು ಸಮನಾಗಿ ಸಾಗುತ್ತದೆ. ಚಂಪಕ, ಉತ್ಪಲ ಮಾಲೆಗಳಲ್ಲಿ ಯತಿಯ ತೊಂದರೆ ಅಷ್ಟಿಲ್ಲ. ಅವುಗಳ ಗತಿ ಸಮನಾಗಿ ಹರಿಯುವ ಹೊನಲಿನಂತೆ. ಇವುಗಳ ವರ್ಣಗಣಗಳು ಆರೋಹಾವರೋಹ ಲಯದಲ್ಲಿ ಒಂದರೊಳಗೊಂದು ಹೊಂದಿಕೊಂಡು ಹೋಗುತ್ತವೆ.

ಚಂಪಕಮಾಲೆಯ ನಡೆ ನಯವುಳ್ಳುದು. ಮೃದುವಾದ ಶೃಂಗಾರ, ಕರುಣ ರಸ–ಭಾವಗಳನ್ನು ಸೊಗಸಾಗಿ ಸೂಸಬಲ್ಲುದು. ಸ್ನೇಹ–ಭಕ್ತಿ–ವಾತ್ಸಲ್ಯ ಮುಂತಾದವುಗಳನ್ನೂ ಉಕ್ಕಿಸಲು ಅದು ಯೋಗ್ಯವಾದುದು. ಕರ್ಣಾವಸಾನ ಸಂದರ್ಭದಲ್ಲಿ ಪಂಪನ ಹೃದಯ ಮಿಡಿದುದು ಚಂಪಕ ಮಾಲೆಯಲ್ಲಿಯೇ ಎಂಬುದು ಸರ್ವವಿದಿತ; ಚಂಪಕಮಾಲೆಯ ಲಯದ ಚೆಲುವೂ ಅಲ್ಲಿ ವ್ಯಕ್ತವಾಗಿರುವ ಭಾವದ ಚೆಲುವೂ ಪರಸ್ಪರ ಪೂರಕವಾಗಿವೆ.

ಚಂ ॥ ನೆನೆಯದಿರಣ್ಣ ಭಾರತದೊಳಿಂ ಪೆರರಾನುಮನೊಂದೆ ಚಿತ್ತದಿಂ ।
ನೆನೆವೊಡೆ ಕರ್ಣನಂ ನೆನೆಯ, ಕರ್ಣನೊಳಾರ್ದೊರೆ ಕರ್ಣನೇರು ಕ ॥
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ ।
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಾಯ್ತು ಭಾರತಂ ॥

(ಪಂ.ಭಾ ೧೨–೨೧೭)

–ಹಲವು ಬಗೆಯ ಭಾವಛಾಯೆಗಳನ್ನು ಹಲವು ಬಗೆಯ ಹೂಗಳನ್ನು ಹೆಣೆಯುವ ಹಾಗೆ ಚಂಪಕ ಮಾಲೆಯಲ್ಲಿ ಪಂಪ ಹೆಣೆದಿದ್ದಾನೆ.

ಉತ್ಪ ಲಮಾಲೆಯ ಲಯವೂ ಚಂಪಕ ಮಾಲೆಯಂತೆಯೆ ಎಂಬುದನ್ನು ಅದರಲ್ಲಿಯ ಗುರು–ಲಘು ವಿನ್ಯಾಸದ ಸಾಮ್ಯದಿಂದಲೇ ಹೇಳಬಹುದಾಗಿದೆ. ಸಂಸ್ಕೃತ ಛಂದೋಗ್ರಂಥಗಳಲ್ಲಿ ಉತ್ಪಲಮಾಲೆಯ ಪ್ರಸ್ತಾಪವಿಲ್ಲ. ಕನ್ನಡ ಕವಿಗಳೇ ಅದನ್ನು ಚಂಪಕಮಾಲೆ(ಸಂಸ್ಕೃತದಲ್ಲಿಯ ಸರಸೀವೃತ್ತ) ಯನ್ನು ಅನುಸರಿಸಿ ಹೊಸತಾಗಿ ರಚಿಸಿಕೊಂಡಿರಬೇಕೆಂಬ ವಾದವೂ ಇದೆ. ನಾಗವರ್ಮನು ಉತ್ಪಲಮಾಲೆಯ ಲಕ್ಷಣವನ್ನು

ವಿವರಿಸುವಾಗ 'ಕವಿರಾಜಹಂಸ' ನಾದ ತನ್ನಿಂದಲೆ ಉತ್ಪಲಮಾಲೆ ನೆಗಳ್ತೆವಡೆದುದು ಎಂದಿದ್ದಾನೆ. ಲಯ ಹಾಗೂ ಭಾವಾಭಿವ್ಯಕ್ತಿಗಳ ದೃಷ್ಟಿಯಿಂದ ಚಂಪಕಮಾಲೆಯ ಬಗ್ಗೆ ಹೇಳಿದುದೆಲ್ಲ ಇದಕ್ಕೂ ಅನ್ವಯಿಸುತ್ತದೆ. ಗುರುವಿನಿಂದ ಆರಂಭವಾಗುವ ಚರಣಗಳುಳ್ಳ ಉತ್ಪಲಮಾಲೆಯ ಲಯವು ಲಘುಗಳಿಂದ ಆರಂಭವಾಗುವ ಚಂಪಕಮಾಲೆಯ ಚರಣಗಳ ಲಯಕ್ಕಿಂತ ತುಸು ಭಿನ್ನ. ಭಾವಾವೇಶ ಉತ್ಪಲಮಾಲೆಯಲ್ಲಿ ಚಂಪಕಕ್ಕಿಂತ ಮಿಗಿಲಾಗಿ ವ್ಯಕ್ತವಾಗಬಲ್ಲುದು :–

ಉ ॥ ಚಾಗದ ಬೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ।
ಳ್ಗಾಗರಮಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ ॥
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥

(ಪಂ.ಭಾ. ೪–೨೯)

ಉತ್ಪಲಮಾಲೆಯಲ್ಲಿ ಹಿಂದಿನ ಚರಣದ ಕೊನೆಯ ಗುರುವಿನೊಡನೆ ಮುಂದಿನ ಚರಣದ ಮೊದಲ ಗುರು ಹೊಂದಿಕೊಳ್ಳುವುದರಿಂದ ಲಯಕ್ಕೊಂದು ಬಿಗುಹು ಉಂಟಾಗಿ ಆವೇಶದ ಪರಿಣಾಮವನ್ನು ಒದಗಿಸುತ್ತದೆ. ಚಂಪಕದ ಪಾದಗಳ ಮೊದಲಲ್ಲಿ ನಾಲ್ಕು ಲಘುಗಳೇ ಬರುವುದರಿಂದ ಈ ಬಿಗುವಾಗಲಿ ಈ ಆವೇಶವಾಗಲಿ ಉಂಟಾಗದು.

ಮತ್ತೇ ಭವಿಕ್ರೀಡಿತವು ಸಂಸ್ಕೃತದಿಂದ ನೇರವಾಗಿ ಬಂದುದೋ ಕನ್ನಡ ಕವಿಗಳು ಶಾರ್ದೂಲದಿಂದ ಹೊಸತಾಗಿ ಮಾಡಿಕೊಂಡುದೋ ಹೇಳಲಾಗದು ಎನ್ನುವವರೂ ಇದ್ದಾರೆ. ಇದರಲ್ಲಿಯ ಯತಿ ಉಸಿರು ತೆಗೆದುಕೊಳ್ಳುವುದಕ್ಕಷ್ಟೇ ಅಲ್ಲ ,ಲಯದ ಬೆಡಗಿಗೂ ಆವಶ್ಯಕ. ಚರಣದ ಕೊನೆ ಹತ್ತಿರ ಬಂದಂತೆ ಉಸಿರು ಸೋಲುವಂತಾಗುತ್ತದೆ. ಇಲ್ಲಿಯ ಗಣಗಳು ಒಂದರೊಳಗೊಂದು ಹೊಂದಿಕೊಂಡಂತೆ ಇರದೆ ಪ್ರತ್ಯೇಕ ಉಚ್ಚರಣೆಯನ್ನು ಅಪೇಕ್ಷಿಸುತ್ತವೆ. ಲಯವು ಮೊದಲಲ್ಲಿ ನಿಧಾನವಾಗಿ ಸಾಗಿ ಮಧ್ಯದಲ್ಲಿ ತುಸು ಶೀಘ್ರಗತಿಯಲ್ಲಿ 'ಓಡಿ ಯತಿಯ ಸ್ಥಳದಲ್ಲಿ ಮುಗ್ಗರಿಸಿದಂತೆ ತಡೆದು ಮತ್ತೆ ನಿಧಾನಗತಿಯಲ್ಲಿ ಸಾಗುತ್ತದೆ. ಚಂಪಕ – ಉತ್ಪಲ ಮಾಲೆಗಳಂತೆ ಕನ್ನಡಕ್ಕೆ ಇದು ಒಗ್ಗದ ಲಯವುಳ್ಳುದು. ಪಿಂಗಳನಿಂದಲೆ ಹೆಸರಾಗಿದ್ದ ಈ ವೃತ್ತ ಬಹಳ ಪ್ರಾಚೀನ ಕಾಲದ್ದು ಎಂದು ತಿಳಿದುಬರುತ್ತದೆ. ಗಂಭೀರ ವಿಷಯಕ್ಕೆ ಅಥವಾ ವಿಚಾರಕ್ಕೆ ಸರಿಹೋಗುವ, ಮಂದಗತಿಯ, ನಿಂತು ನಿಂತು ಸಾಗುವ ವೃತ್ತವಿದು. ತತ್ತ್ವ ವಿಚಾರ, ನೀತಿ, ಭಕ್ತಿ ಇತ್ಯಾದಿಗಳನ್ನು ಪ್ರಕಟಪಡಿಸಲು ತಕ್ಕುದಾದ ವೃತ್ತವಿದು. ಸೋಮೇಶ್ವರಶತಕ, ರತ್ನಾಕರಾಧೀಶ್ವರ ಶತಕಗಳು ಮತ್ತೇಭ–ಶಾರ್ದೂಲ ವಿಕ್ರೀಡಿತಗಳಲ್ಲಿ ಸೊಗಸಾಗಿ ಬಂದಿವೆ. ನಾಗಚಂದ್ರನ 'ರಾಮಚಂದ್ರ ಚರಿತಪುರಾಣ' ದಲ್ಲಿ ರಾಮನು ಸೀತೆಯಿಂದ ಅಗಲಿದಾಗ ಪಟ್ಟ ದುಃಖಭರದ ಅಭಿವ್ಯಕ್ತಿ ಮತ್ತೇಭದಲ್ಲಿ ಹೇಗೆ ವ್ಯಕ್ತವಾಗಿದೆ ನೋಡಬಹುದು :–

ಮ॥ ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯನಿಶ್ವಾಸೆಯಂ ।
ತಳಿರೇತಾವರೆಯೇ ಮದಾಳಿಕುಳಮೇ ಕರ್ಣೆಯ್ದಿಲೇ ಮತ್ತ ಕೋ ॥

ಕಿಳಮೇ ಕಂಡಿರ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ।
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ ॥

– ರಾಮನ ದುಃಖ ಬಿಕ್ಕಳಿಕೆಯಿಂದ ಉಕ್ಕುಕ್ಕಿ ಹರಿದಂತೆ ಇಲ್ಲಿಯ ನಿಧಾನ ಹಾಗೂ ನಿಂತು ನಿಂತು ಸಾಗುವ ಗತಿ ಕರುಣ ರಸಪುಷ್ಟಿಗೆ ಸಹಾಯಕವಾಗಿದೆ. 'ಪಿಕರವಪ್ರಖ್ಯಾತೆಯಂ ಸೀತೆಯಂ' ಎಂಬಲ್ಲಿ ರಾಮನ ಬಿಕ್ಕಳಿಕೆಯ ಅನುಭವವಾಗುತ್ತದೆ !

ಶಾರ್ದೂಲವಿಕ್ರೀಡಿತವು ಧಾಟಿಯಲ್ಲಿ ಮತ್ತೇಭದಂತೆಯೇ ಇದ್ದರೂ ವರ್ಣಗಣಗಳ ಯೋಜನೆ ಭಿನ್ನ. ಮೊದಲಲ್ಲಿ ಇಲ್ಲಿ ಮೂರು ಗುರುಗಳಿದ್ದು ಇಲ್ಲಿಯ ಮೊದಲ ಗುರುವಿಗೆ ಬದಲಾಗಿ ಮತ್ತೇಭದಲ್ಲಿ ಎರಡು ಲಘುಗಳಿರುವುದೊಂದನ್ನುಳಿದರೆ ಉಳಿದೆಲ್ಲ ಲಘು ಗುರುವಿನ್ಯಾಸ ಅದೇ ಆಗಿದೆ. ಈ ಎರಡು ವೃತ್ತಗಳ ಲಯ–ಯತಿಗಳು ಒಂದೇ ಆಗಿರುವುದರಿಂದ ಭಾವಾಭಿವ್ಯಕ್ತಿಯ ದೃಷ್ಟಿಯಿಂದ ಮತ್ತೇಭವಿಕ್ರೀಡಿತದ ಬಗ್ಗೆ ಹೇಳಿದ ಮಾತುಗಳು ಇದಕ್ಕೂ ಅನ್ವಯಿಸುತ್ತವೆ. ಕನ್ನಡದಲ್ಲಿ ಗುರುವಿನಿಂದ ಆರಂಭವಾಗುವ ಪದಗಳ ಸಂಖ್ಯೆಯೇ ಕಡಿಮೆಯಾದ್ದರಿಂದ ಗುರುಗಳು ಆರಂಭದಲ್ಲೆ ಮೂರಾಗಿರುವ ಶಾರ್ದೂಲವಿಕ್ರೀಡಿತದ ಬಳಕೆ ಕನ್ನಡದಲ್ಲಿ ತೀರ ಅಲ್ಪವಾಗಿದೆ.

ಸ್ರಗ್ಧರೆ–ಮಹಾಸ್ರಗ್ಧರೆಗಳೂ ಕನ್ನಡ ಕಾವ್ಯಗಳಲ್ಲಿ ತೀರ ಕಡಮೆಯ ಪ್ರಮಾಣದಲ್ಲಿ ಬಳಕೆಗೊಂಡಿದೆ. ಇವೆರಡರ ಲಯವೂ ಕನ್ನಡ ನುಡಿಯ ಜಾಯಮಾನಕ್ಕೆ ಹೊಂದದಂಥದು. ನಡು ನಡುವೆ ಯತಿಸ್ಥಾನಗಳಿರುವುದರಿಂದ ಗತಿ ಮುಗ್ಗರಿಸುತ್ತ ಸಾಗುತ್ತದೆ. ಆದ್ದರಿಂದ ಕನ್ನಡದಲ್ಲಿ ಸ್ರಗ್ಧರೆಗಳ ಪ್ರಯೋಗವಾದಾಗಲೆಲ್ಲ ಸಂಸ್ಕೃತ ಭೂಯಿಷ್ಠತೆ ಎದ್ದು ಕಾಣುವ ಅಂಶ. ಇವೆರಡೂ ಸ್ರಗ್ಧರೆಗಳಿಗೆ ಈ ಮೊದಲು ಉದಾಹರಣೆಗೆಂದು ಕೊಟ್ಟಿರುವ ಪದ್ಯಗಳನ್ನು ಮತ್ತೊಮ್ಮೆ ಅವಲೋಕಿಸಬೇಕು. ಆಗ ಇವುಗಳ ಸಂಸ್ಕೃತಮಯತೆ – ಕ್ಲಿಷ್ಟತೆಗಳ ಕಲ್ಪನೆ ಮನದಟ್ಟಾಗುವುದು. ಸ್ರಗ್ಧರೆಗಳಲ್ಲಿ ವೇದಮಂತ್ರಗಳ ಘೋಷ ಪ್ರತಿಧ್ವನಿಸುವಂತೆ ಭಾಸವಾಗುತ್ತದೆ. ಉಸಿರನ್ನು ಜಗ್ಗಿ ಜಗ್ಗಿ ಬಿಡುವ ಕಸರತ್ತಿನ ರೀತಿಯೂ ಇಲ್ಲಿದೆ ಎನ್ನಬಹುದು. ಆದರೆ ವೀರಾದ್ಭುತ ರಸಗಳ ಪೋಷಣೆಗೆ ಈ ವೃತ್ತಗಳ ಲಯಗಾಂಭೀರ್ಯ ತಕ್ಕುದಾದುದು. ಚಂಪೂ ಕೃತಿಗಳಲ್ಲಿ ಸ್ರಗ್ಧರೆಗಳ ಬಳಕೆ ತೀರ ಕಡಿಮೆ ಎಂಬುದಕ್ಕೆ ಪಂಪನ ವಿಕ್ರಮಾರ್ಜುನ ವಿಜಯವೇ ಸಾಕ್ಷಿ. ಅಲ್ಲಿಯ ಒಟ್ಟು ೧೬೦೯ ಪದ್ಯಗಳಲ್ಲಿ ಸ್ರಗ್ಧರೆಯ ಪದ್ಯಗಳು 'ಏಳು ಮಾತ್ರ' ಸ್ರಗ್ಧರೆಯ ಯತಿಯ ವೈಶಿಷ್ಟ್ಯ ಗಮನಿಸುವಂಥರು. 'ಏಳು ಅಕ್ಷರಗಳಿಗೊಂದರಂತೆ ಮೂರು ಸಲ ಯತಿಯಿದೆ. ಮೊದಲು ದೀರ್ಘಸ್ವರಗಳಿಂದ ಮಂದ ಮಂದವಾಗಿ ಹರಿದು ನಡುವೆ ಹ್ರಸ್ವಗಳಿಂದ ತ್ವರಿತಗತಿಯಲ್ಲಿ ನಡೆದು ಕೊನೆಯಲ್ಲಿ ಮತ್ತೆ ದೀರ್ಘಸ್ವರಗಳಲ್ಲಿ ಮಂದಗತಿ ಪಡೆದು ಸಾಗುತ್ತದೆ.

ಮಹಾಸ್ರಗ್ಧರೆಯ ಲಯವೂ ಈ ಮೊದಲೆ ಸೂಚಿಸಿದಂತೆ ಸ್ರಗ್ಧರೆಯಂತೆಯೇ. ಸ್ರಗ್ಧರೆಯ ಮೊದಲ ಗುರುವಿಗೆ ಬದಲಾಗಿ ಮಹಾಸ್ರಗ್ಧರೆಯಲ್ಲಿ ಎರಡು ಲಘುಗಳಿರುವುದು. ಉಳಿದೆಲ್ಲ ಲಘು ಗುರು ವಿನ್ಯಾಸ ಸಮಾನವಾಗಿರುವುದು

ಲಯಸಾಮ್ಯಕ್ಕೆ ಕಾರಣವಾಗಿದೆ. ಈ ವೃತ್ತಕ್ಕೆ ಉದಾಹರಿಸಿದ ಪದ್ಯವನ್ನು ಮತ್ತೊಮ್ಮೆ ಪರಿಶೀಲಿಸಿ ವೀರಾದ್ಭುತ ರಸಪೋಷಣೆಗೆ ಸ್ರಗ್ಧರೆಯಂತೆ ಇದೂ ಹೇಗೆ ತಕ್ಕುದೆಂಬುದನ್ನು ಅರಿತುಕೊಳ್ಳಬೇಕು.

ಒಟ್ಟಿನಲ್ಲಿ ಖ್ಯಾತ ಕರ್ಣಾಟಕ ವೃತ್ತಗಳು ಕನ್ನಡ ಭಾಷಾ ಶೈಲಿಗೆ ಕೃತಕತೆಯನ್ನು ತಂದಿತೆಂಬುದನ್ನು ಒಪ್ಪಿದರೂ ಭಾವಾಭಿವ್ಯಕ್ತಿಗೆ ಇವೂ ಮತ್ತು ಇತರ ವರ್ಣವೃತ್ತಗಳೂ ತುಂಬ ಅನುಕೂಲವಾದುವೆಂಬುದನ್ನು ಲಕ್ಷಿಸಬೇಕು. ಛಂದಸ್ಸಿನ ಸಾರ್ಥಕತೆ ಇರುವುದು ಅದರ ಭಾವಾಭಿವ್ಯಕ್ತಿಯಲ್ಲೇ. ವರ್ಣವೃತ್ತಗಳಲ್ಲಿಯ ಆರೋಹಾವರೋಹದ ಎಂದರೆ ಸಮುದ್ರದ ತೆರೆಗಳಂತೆ 'ಏರಿ ಏರಿ' ಇಳಿಯುವ ಸ್ವರಾಂದೋಲನದ ಲಯವು ವಿವಿಧ ಭಾವವಿಲಾಸಗಳ ಪ್ರಕಟನೆಗೆ ಸಮರ್ಥವಾದುದು. 'ವೀಣೆಯ ತಂತಿಯಿಂದಾಗುವ ಸುಂದರ ಸುಸ್ವರ' ಗಳನ್ನು ಹೋಲುವ ವರ್ಣವೃತ್ತಗಳ ಲಯವು ಎದೆಯ ತಂತಿಗಳನ್ನು ವಿಧ ವಿಧವಾಗಿ ಮೀಂಟಬಲ್ಲವೆಂಬ ಡಾ. ಕರ್ಕಿಯವರ ಉದ್ಗಾರವು ಸಮರ್ಪಕವಾದುದು. ಚಂಪೂಕಾವ್ಯಗಳಂಥ ವಿಸ್ತೃತ ಕಾವ್ಯಗಳಲ್ಲಿಯ ಸನ್ನಿವೇಶವೈವಿಧ್ಯ, ಭಾವ–ರಸ ವೈವಿಧ್ಯ, ಪಾತ್ರಸ್ವಭಾವವೈವಿಧ್ಯ ಮುಂತಾದವುಗಳ ಉಚಿತ ಪ್ರಕಾಶನಕ್ಕೆ ವಿವಿಧ ಲಯಗಳುಳ್ಳ ವರ್ಣಛಂದೋಬಂಧಗಳು ನಮ್ಮ ಚಂಪೂ ಕವಿಗಳ ಮನಸ್ಸೆಳೆದುದು ಸಹಜವೇ ಆಗಿದೆ.

೯. ಅರ್ಧಸಮ ವೃತ್ತಗಳು

ಇವೂ ನಾಲ್ಕು ಪಾದಗಳುಳ್ಳುವೇ. ಸಮಚತುಷ್ಪದಿಗಳಂತೆ ಇವನ್ನು ಅರ್ಧಸಮಚತುಷ್ಪದಿಗಳೆಂದು ಹೆಸರಿಸಲಾಗಿದೆ. ಸಮಚತುಷ್ಪದಿಗಳಂತೆಯೇ ಇವು ಕೂಡ ವರ್ಣಸಂಗೀತ–ವರ್ಣಲಯಗಳನ್ನು ಅವಲಂಬಿಸಿದ ವೃತ್ತಗಳು. ಕನ್ನಡದಲ್ಲಿ ಇವುಗಳ ಬಳಕೆ ತೀರ ಕಡಿಮೆಯೆಂದು ಈ ಮೊದಲೇ ಹೇಳಿದ್ದಾಗಿದೆ. ನಾಗ, ವಿಯೋಗಿನಿ, ವಸಂತಮಾಲಿಕೆ, ಪುಷ್ಪಿತಾಗ್ರ, ಮಾಲಭಾರಿಣಿ, ವಿಪರೀತಾ ಖ್ಯಾನಕಿ ಮುಂತಾದ ಅರ್ಧಸಮಚತುಷ್ಪದಿಗಳು ಕನ್ನಡದಲ್ಲಿ ತೀರ ವಿರಳವಾಗಿ ಕಂಡುಬಂದಿದೆ. ಇವುಗಳಲ್ಲಿ ಎರಡನ್ನು ಮಾತ್ರ ಪರಿಶೀಲಿಸುವ :

೧) ವಿಯೋಗಿನಿ : ಇದರ ವಿಷಮ ಪಾದಗಳಲ್ಲಿ 'ಸಸಜ' ಗಣಗಳೂ ಒಂದು ಗುರುವೂ; ಸಮಪಾದಗಳಲ್ಲಿ 'ಸಭರ' ಗಣಗಳೂ ಒಂದು ಲಘುವೂ ಒಂದು ಗುರುವೂ ಇರುವವು :

ಉದಾ : UU - U U - U-U -
ಬಸವಟ್ಟುದು ಚೆನ್ನಪಟ್ಟಣಂ
U U - - U U - U - U -
ಪೊಸತಾಂಧ್ರಂಗೆ ಪೊದಳ್ದುದಿಟ್ಟಣಂ ॥
ಅಸಿದಾದುದವಂಗೆ ಮಂಗಲಂ
ಬೆಸದಿಂ ಪಿಂಗಿತು ನಾಗಮಂಗಲಂ

(ಚಿಕ್ಕದೇವರಾಜವಿಜಯ)

೨) ವಸಂತಮಾಲಿಕೆ : ಇದರ ವಿಷಮ ಪಾದಗಳಲ್ಲಿ 'ಸಸಜ' ಗಣಗಳೂ ಎರಡು ಗುರುಗಳೂ, ಸಮಪಾದಗಳಲ್ಲಿ 'ಸಭರಯ' ಗಣಗಳೂ ಬರುವುವು :

ಉದಾ : UU -U U - U - U - -
ಎಳಗಲ್ಲ। ದೊಳಿಟ್ಟ। ದಿಟ್ಟ ಬಟ್ಟಂ।
UU - - U U -U -U - -
ಕೆಳೆಗೊಂಡೊಪ್ಪುವ ಪಚ್ಚೆಗನ್ನವಚ್ಚಂ ॥
ಮೊಳೆವಲ್ ಮೊಗವಟ್ಟನಂದದಿಂದೊಂ ।
ದೆಳಗಂದಂ ಕಳೆಗುಂ ಜಗಕ್ಕೆ ಕಂದಂ ॥

ವಿಷಮ ವೃತ್ತಗಳು ಕನ್ನಡದಲ್ಲಿ ಪ್ರಯೋಗವಾಗಿಲ್ಲವಾದ್ದರಿಂದ ಅವುಗಳ ವಿವರಣೆಯನ್ನು ಕೈಬಿಡಲಾಗಿದೆ.

★★★

ಅಧ್ಯಾಯ : ೩

ಮಾತ್ರಾ ಛಂದಸ್ಸು – ಮಾತ್ರಾವೃತ್ತಗಳು

ಮುಖ್ಯಾಂಶಗಳು :

೧. ಕಂದಪದ್ಯ – ಹಿನ್ನೆಲೆ, ಕಂದಪದ್ಯದ ಚರಿತ್ರೆ,

೨. ರಗಳೆ : ರಗಳೆಯ ಪ್ರಯೋಗದ ಚರಿತ್ರೆ

೧) ಉತ್ಸಾಹ ರಗಳೆ : ಎರಡು ಪ್ರಕಾರಗಳು

೨) ಮಂದಾನಿಲ ರಗಳೆ : ಎರಡು ಪ್ರಕಾರಗಳು

೩) ಲಲಿತ ರಗಳೆ : ಪಂಪನ ರಗಳೆ

೩. ಮಾತ್ರಾ ಛಂದಸ್ಸಿನ ಇನ್ನಿತರ ಬಂಧಗಳು :

೧) ಲಲಿತವೃತ್ತ (೨) ಉತ್ಸಾಹ ವೃತ್ತ (೩) ಅಕ್ಕರಿಕೆ

೪) ಲಯಗ್ರಾಹಿ ವೃತ್ತ (೫) ಲಯೋತ್ತರ ವೃತ್ತ

೪. ಹಾಡುಗಳಲ್ಲಿಯ ಮಾತ್ರಾ ಬಂಧಗಳು :

೧) ದ್ವಿಪದಿ–ಎರಡು ರೀತಿಯವು (೨) ಚೌಪದಿ :
ಎರಡು ರೀತಿಯವು – ಗೋವಿನ ಕಥೆಯ ಮಟ್ಟು

೫. ಷಟ್ಪದಿಯ ಮಾತ್ರಾ ಬಂಧಗಳು :
ಆರು ಪ್ರಕಾರಗಳು – ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ

೬. ಧವಲದ ಹಾಡು

೭. ಸೀಸ ಪದ್ಯ

೮. ದಂಡಕ.

★★★

೧. ಕಂದಪದ್ಯ : ಹಿನ್ನೆಲೆ

ಇದು ಸಂಸ್ಕೃತದ 'ಆರ್ಯಾಗೀತಿ' ಅಥವಾ ಪ್ರಾಕೃತದ 'ಸ್ಕಂಧಕ' ದ ಮೂಲಕ ಹುಟ್ಟಿದ್ದು ಎನ್ನುತ್ತಾರೆ. ಈ ಬಗ್ಗೆ ಖಚಿತತೆ ಇಲ್ಲ. ಕಂದವೆಂಬ ಹೆಸರು ಸ್ಕಂಧಕದ ಪ್ರಾಕೃತ ರೂಪವಾದ ಖಂದಹ > ಖಂದ > ಕಂದ ಎಂದು ಪರಿವರ್ತನೆಗೊಂಡಿದೆ ಎನ್ನಬಹುದು. ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಅತಿ ಪ್ರಾಚೀನ ಕಾಲದಲ್ಲೆ ಪ್ರಾಚೀನ ಪ್ರಾಕೃತ ಭಾಷಾ–ಸಾಹಿತ್ಯಗಳ ಸಂಪರ್ಕ ಒದಗಿದುದರ ಪರಿಣಾಮವಾಗಿ ಕಂದವು ಕನ್ನಡಕ್ಕೆ ಬಂದಿತು. 'ಸೇತು ಬಂಧ' ಎಂಬುದು ಸ್ಕಂಧಕದಲ್ಲಿರುವ ಪ್ರಾಚೀನ ಪ್ರಾಕೃತ ಮಹಾಕಾವ್ಯ. ಇಂಥ ಕಾವ್ಯಗಳ ಪರಿಚಯ ಪ್ರಾಕೃತವನ್ನು ಬಲ್ಲ ಕನ್ನಡ ಕವಿಗಳಿಗೆ ಇದ್ದಿರಬೇಕು. ಅವರ 'ಖಂದಹ' (ಸ್ಕಂಧಕ > ಖಂದಹ) ಛಂದಸ್ಸನ್ನು ನೇರವಾಗಿ ಪ್ರಾಕೃತ ಕಾವ್ಯಗಳಿಂದ ತೆಗೆದುಕೊಂಡು ಕನ್ನಡದಲ್ಲಿ ಬಹುವಾಗಿ ಪ್ರಚುರಪಡಿಸಿದರೆಂದು ಕಾಣುತ್ತದೆ. ಪ್ರಾಕೃತ ಛಂದಶ್ಶಾಸ್ತ್ರಕಾರನಾದ ಸ್ವಯಂಭೂ ಗಾಥಾವರ್ಗವನ್ನು ಸ್ಕಂಧಕ ಜಾತಿಯೆಂದೇ ಕರೆದಿದ್ದಾನೆ. ನಾಗವರ್ಮನ ಛಂದೋಂಬುಧಿಯಲ್ಲಿ 'ಕಂದಜಾತಿ' (ಪಾಠಾಂತರ ಸ್ಕಂಧಜಾತಿ') ಎಂದು ಹೇಳಲಾಗಿದೆ.

ಕಂದದ ಲಕ್ಷಣ :

೧) ಇದರಲ್ಲಿ ನಾಲ್ಕು ಪಾದಗಳು : ಇವುಗಳಲ್ಲಿ ೧, ೨ ನೆಯ ಪಾದಗಳು ಪೂರ್ವಾರ್ಧ, ೩, ೪ ನೆಯ ಪಾದಗಳು ಉತ್ತರಾರ್ಧ. ೧, ೨ ನೆಯ ಪಾದಗಳಂತೆಯೇ ೩, ೪ನೆಯ ಪಾದಗಳಿರುತ್ತವೆ.

೨) ಇದರ ವಿಷಮ ಪಾದಗಳಲ್ಲಿ (೧, ೩) ಚತುರ್ಮಾತ್ರಾಗಣಗಳು ಮೂರು ಮೂರು. ಸಮಪಾದಗಳಲ್ಲಿ (೨, ೪) ಚತುರ್ಮಾತ್ರಾಗಣಗಳು ಐದೈದು.

(೩) ಎಂದರೆ, ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಎಂಟೆಂಟು ಚತುರ್ಮಾತ್ರಾಗಣಗಳು. ಪೂರ್ವಾರ್ಧದಲ್ಲಿ (೪ಮಾ × ೩ಗಣ=೧೨) ಮಾತ್ರೆಗಳು ೧ನೆಯ ಪಾದದಲ್ಲಿ, ೪ಮಾ × ೫ಗಣ = ೨೦ ಮಾತ್ರೆಗಳು ೨ನೆಯ ಪಾದದಲ್ಲಿ) ಒಟ್ಟು ೩೨ ಮಾತ್ರೆಗಳು. ಹೀಗೆಯೇ ಉತ್ತರಾರ್ಧದಲ್ಲಿ. ಒಟ್ಟು ಕಂದಪದ್ಯದ ನಾಲ್ಕೂ ಪಾದಗಳ ಮಾತ್ರಾ ಸಂಖ್ಯೆ ೬೪.

(೪) ಚತುರ್ಮಾತ್ರಾಗಣಗಳ ಕಟ್ಟು ಕೆಡಬಾರದು : (೧) ವಿಷಮಸ್ಥಾನದಲ್ಲಿ (ಎಂದರೆ ೧, ೩, ೫, ೭ನೆಯ ಗಣಸ್ಥಾನದಲ್ಲಿ) 'ಜಗಣ' (U -U ಎಂದರೆ ಮಧ್ಯ ಗುರುವುಳ್ಳ ಚತುರ್ಮಾತ್ರಾಗಣ) ವು ಬರಕೂಡದು. (೨) ಆರನೆಯ ಗಣವು 'ಜಗಣ' ವಾಗಲಿ ಸರ್ವಲಘುವುಳ್ಳ ಗಣವಾಗಲಿ (U-U ಇಲ್ಲವೆ U U U U)ಬರಬೇಕು (೩) ಕೊನೆಯ ಗಣವು ಎಂದರೆ ೮ನೆಯ ಗಣವು ಕೊನೆಗೆ ಗುರುವುಳ್ಳುದೇ ಆಗಿರಬೇಕು. (UU- ಇಲ್ಲವೆ - -) (೪) ಆರನೆಯ ಗಣದ (ಎಂದರೆ U-U ಇಲ್ಲವೆ U U U U) ಮೊದಲ ಲಘುವಿನ ಮುಂದೆ ಯತಿಯಿರಬೇಕು. (೫) ೭ನೆಯ ಗಣವು ಸರ್ವಲಘುವುಳ್ಳ ಗಣವಾಗಿದ್ದಲ್ಲಿ (U U U U) ಮೊದಲನೆಯ ಹ್ರಸ್ವದಿಂದಲೇ ಹೊಸ ಪದ

ಆರಂಭವಾಗಬೇಕು. ಸರ್ವಲಘುವುಳ್ಳ ಚತುರ್ಮಾತ್ರಾಗಣವನ್ನು 'ನಲ' ಎಂದು ಕರೆಯುತ್ತಾರೆ. (ನಗಣ U U U + ಲಘು U = U U U U). ಪೂರ್ವಾರ್ಧದ ಈ ನಿಯಮಗಳೆಲ್ಲವೂ ಉತ್ತರಾರ್ಧಕ್ಕೂ ಅನ್ವಯಿಸುತ್ತವೆ.

(೫) ಆದಿಪ್ರಾಸವು ಕಂದದಲ್ಲೂ ಸಾಮಾನ್ಯನಿಯಮ. ಪೂರ್ವಾರ್ಧದಲ್ಲಿ ೧ನೆಯ ಮತ್ತು ಎರಡನೆಯ ಪಾದಗಳ ಕೊನೆಯಲ್ಲಿ ಯತಿ ಬರಲೇಬೇಕೆಂಬ ನಿಯಮವಿಲ್ಲ.

ಕನ್ನಡದ ಪ್ರಾಚೀನ ಕವಿಗಳು ಮೇಲೆ ಹೇಳಿದ ಲಕ್ಷಣಗಳಿಗೆ ಅನುಗುಣವಾಗಿ ಕಂದಪದ್ಯಗಳನ್ನು ರಚಿಸಿದ್ದಾರೆ.

ಉದಾ : ೪ಮಾ ೪ಮಾ ೪ಮಾ

- UU U - U U U -
ಶ್ರೀವಿಶ । ದವರ್ಣೆ । ಮಧುರಾ ।
- - UUUU U U UU UUUU UU -
ರಾವೋ । ಚಿತೆಚತು । ರ । ರುಚಿರ । ಪದರಚ । ನೆಚಿರಂ ॥
- U U U -U U - -
ದೇವಿಸ । ರಸ್ವತಿ । ಹಂಸೀ ।
- U U U U - U - U - - U U -
ಭಾವದೆ । ನೆಲೆಗೊ । ಳ್ಗೆ ಕೂರ್ತು । ಮಸ್ಮಾ । ನಸದೊಳ್ ॥

(ಕ.ರಾ.ಮಾರ್ಗ. ೧–೩)

– ಇಲ್ಲಿ ಕಂದದ ಎಲ್ಲ ಲಕ್ಷಣಗಳೂ ಸರಿಯಾಗಿವೆ ಎಂಬುದನ್ನು ಗಮನಿಸಬೇಕು. ಕಂದವನ್ನು ಹಾಡುವ ಧಾಟಿ–ಲಯಗಳು ವಿಶಿಷ್ಟವಾದುವು. ೬ನೆಯ ಗಣ (ಪೂರ್ವಾರ್ಧ ಉತ್ತರಾರ್ಧ ಗಳೆರಡರಲ್ಲೂ)ವು 'ಜಗಣ' (U - U) ಮತ್ತು 'ನಲ' (U U U U) ಬಂದಿದ್ದು ಈ ಗಣಗಳ ಮೊದಲ ಲಘುವಿನ ಮುಂದೆ ಯತಿಯನ್ನು । ಈ ಗುರುತಿನಿಂದ ಸೂಚಿಸಲಾಗಿದೆ. ಕಂದ ಪದ್ಯದಲ್ಲಿ ಈ ಯತಿ ಕಂದದ ಲಯವನ್ನು ಎತ್ತಿ ತೋರಿಸುತ್ತದೆ. ವರ್ಣವೃತ್ತಗಳಲ್ಲಿ ಯತಿಯನ್ನು ಕನ್ನಡ ಕವಿಗಳು ಐಚ್ಛಿಕವೆಂದಿದ್ದರೂ ಕಂದದಲ್ಲಿ ಅದನ್ನು ತಪ್ಪದೆ ಪಾಲಿಸುವುದನ್ನು ನೋಡಬಹುದಾಗಿದೆ. ಕವಿರಾಜಮಾರ್ಗಕಾರನೂ ಕಂದದಲ್ಲಿ ಯತಿಯನ್ನು ಪಾಲಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. 'ಅಂತುಂ ಯತಿಯಂ ಪೇಳ್ಗಾರ್ಗ್ರಂತಾದ್ಯದೊಳಲಸದೆ ಆರ್ಯೆಯೊಳ್ ಕಂದದೊಳಂ' (ಕ.ಮಾ. ೧–೭೭) ಹೀಗಿದ್ದರೂ ಅಲ್ಲಲ್ಲಿ ಕೆಲವು ಅಪವಾದಗಳೂ ಇವೆ. ಕವಿರಾಜಮಾರ್ಗದಲ್ಲೇ ಇಂಥ ಯತಿಯುಲ್ಲಂಘನೆಗೆ ಕಂದದ ಉದಾಹರಣೆಗಳು ದೊರೆಯುತ್ತವೆ.

ಉದಾ : U U - U U - U U -
ಅದರಿಂ । ಪರಮಾ । ಗಮಕೋ

UU-U U - U - U UUU - -
ವಿದನಪ್ಪುದು ಪೂರ್ವಕಾವ್ಯ । ರಚನೆಗ ಳಂ ತಾಂ
U U - - - - UU
ಮೊದಲೊಳ್ ಕಲ್ತಂಗಲ್ಲದೆ
U U - - - U - U U U U U U -
ಪದದೊಳ್ ಜಾಣುಂ ಬೆ । ಡಂಗುಮಕ್ಕುಮೆಕೃತಿಯೊಳ್

– ಇಲ್ಲಿ ಉತ್ತರಾರ್ಧದ ಆರನೆಯ ಗಣವು 'ಬೆಡಂಗು' ಎಂಬುದು ಜಗಣವಾಗಿದೆ. ಅದರ ಮೊದಲ ಹ್ರಸ್ವ 'ಬೆ' ವರ್ಣದ ಮುಂದೆ ಯತಿ ಸ್ಥಾನವಿದ್ದು ಬೆ। ಡಂಗು ಪದದ ಅರ್ಥಸ್ಫೂರ್ತಿ ಕೆಡುವಂತೆ ಪದಚ್ಛೇದವಾಗಿದೆ. ಇಂಥ ಯತಿಯುಲ್ಲಂಘನೆ 'ಜಗಣ' ವಿದ್ದಾಗ ಸ್ವಲ್ಪ ಹೆಚ್ಚಾಗಿಯೂ ಸರ್ವ ಲಘುವಿನ (ನಲ) ಗಣವಿದ್ದಾಗ ತೀರ ಕಡಿಮೆ ಎಂಬುದನ್ನೂ ಅನೇಕ ಕಂದಪದ್ಯಗಳ ಪರಿಶೀಲನೆಯಿಂದ ತಿಳಿದುಕೊಳ್ಳಬಹುದಾಗಿದೆ. ಯತಿಸ್ಥಾನದ ಉಲ್ಲಂಘನೆಗಳಲ್ಲದೆ ಇತರ ನಿಯಮಗಳ ಉಲ್ಲಂಘನೆಗಳೂ ಕೆಲವು ಪ್ರಾಚೀನ ಕಾವ್ಯಗಳಲ್ಲಿ ಕ್ವಚಿತ್ತಾಗಿಯಾದರೂ ಕಂಡುಬರುತ್ತವೆ. ಪಂಪನ ಆದಿ ಪುರಾಣದಲ್ಲಿಯೇ ಇಂಥ ನಿಯಮೋಲ್ಲಂಘನೆಗೆ ಉದಾಹರಣೆಗಳು ದೊರೆಯುತ್ತವೆ.

ಉದಾ : - U UU U U U U U -
ಮುಕ್ಕುಳಿಸಿಯುಗುಳ್ವ ಮಧುವಿಂ
- U UU - UU UU - - U U U U
ಮಿಕ್ಕೆಸೆವಾಮೋದಮಿದರ ತಣ್ಗಂಪಿನೊಳೊಳ
- U U U U U U - -
ಪೊಕ್ಕುವೆನೆ ಮಧುವ ಕಂಪಂ
- U UUU UUU - U - - U U
ಮುಕ್ಕುಳಿಸಿದ ವಕುಳ ಮಾರುಮಂ ಸೋಲಿಸದೆ

(ಆ.ಪು. ೧೧–೧೨೦)

– ಇಲ್ಲಿ ಪೂರ್ವಾರ್ಧದ ೮ನೆಯ ಗಣವು ('ಪಿನೊಳೊಳ') ಕೊನೆಯಲ್ಲಿ ಗುರುವುಳ್ಳುದಿರಬೇಕೆಂಬ ನಿಯಮವನ್ನು ಉಲ್ಲಂಘಿಸಲಾಗಿದೆ.

ಹೀಗೆಯೇ ಚತುರ್ಮಾತ್ರಾಗಣಗಳ ಕಟ್ಟು ಕೆಟ್ಟುದಕ್ಕೂ ಉದಾಹರಣೆಗಳು ದೊರೆಯುತ್ತವೆ.

ಉದಾ : UUU - - U - -
ಗರುಡ ತುಂಡಾಗ್ರದಿಂದಂ
UUUUUUUUU - U -UU U U -
ಧರೆಗುರುಳ್ದಸುಗಳೆದ ಪಾವದಾಗಳೆ ಕಿವಿಯೊಳ್

U UU U U - U - -
ಮೆರೆಯೆ ಫಣಿ ಕುಂಡಲಂಗಳ್
U U - - U U U - U - U U - -
ಗರುಡಾಂಕಾರ್ಚಿತ ಪದಾಬ್ಜಮಾದುವು ಚಿತ್ರಂ

(ಕೆಳದಿ ನೃಪ ವಿಜಯ ೩–೫೮)

– ಇಲ್ಲಿ ಮೊದಲ ಪಾದದಲ್ಲಿ ಚತುರ್ಮಾತ್ರಾಗಣಗಳು ಮೊದಲಲ್ಲೆ ಕೆಟ್ಟಿವೆ. 'ಗರುಡತುಂಡಾಗ್ರ' ಪದದಲ್ಲಿ 'ತುಂ' ಎಂಬುದರ ಗುರುವಿನ ಎರಡು ಮಾತ್ರೆಗಳಲ್ಲಿ ಒಂದನ್ನು ಮೊದಲ ಗಣಕ್ಕೂ ಇನ್ನೊಂದನ್ನು ಎರಡನೆಯ ಗಣಕ್ಕೂ ಹಂಚಿಹಾಕುವ ರೀತಿ ತಪ್ಪು. ನಾಲ್ಕು ನಾಲ್ಕು ಮಾತ್ರೆಗಳ ಗಣಗಳು ಸ್ಪಷ್ಟವಾಗಿರಬೇಕು.

ಹೀಗೆಯೇ ಮಾತ್ರಾ ಸಂಖ್ಯೆ 'ಏರುಪೇರಾಗಿರುವುದು, ಅನಿಯತವಾಗಿ ಪಾದವನ್ನು ಬೆಳಿಸಿರುವುದು, ಕುಗ್ಗಿಸಿರುವುದು, ಆದಿಪ್ರಾಸ ನಿಯಮೋಲ್ಲಂಘನೆ – ಮುಂತಾದ ದೋಷಗಳು ಕೆಲವು ಪ್ರಾಚೀನ ಕಾವ್ಯಗಳಲ್ಲೂ ಶಾಸನಗಳಲ್ಲೂ ಕಾಣದೊರೆಯುತ್ತವೆ. ಕಂದಪದ್ಯದ ರಚನೆ ಕವಿಪ್ರಿಯ ಹಾಗೂ ಜನಪ್ರಿಯವಾದಂತೆ ಇಂಥ ಶೈಥಿಲ್ಯಗಳು ಅಲ್ಲಲ್ಲಿ ಹಣಿಕಿಕ್ಕಿದುದು ಸಹಜ. ಕಂದದ ಬಂಧವು ಅಷ್ಟು ಸುಲಭವೇನಲ್ಲ. ಅರ್ವಾಚೀನರು ಕಂದದ ರಚನೆಗೆ ಕೈಹಾಕಿ ಮುಗ್ಗರಿಸಿದ್ದೂ ಉಂಟು.

ಕಂದವು ತೆಲುಗು ಭಾಷೆಯಲ್ಲಿ ಮತ್ತು ಹಳಗನ್ನಡದಲ್ಲಿ ಬಹುಮುಖ್ಯವಾದ ಛಂದಸ್ಸು. ಹಳಗನ್ನಡದ ಜೀವಾಳವೆಂದರೂ ತಪ್ಪಲ್ಲ. 'ಚಂಪೂಕಾವ್ಯವೆಂದರೆ ಮುಕ್ಕಾಲು ಪಾಲು ಕಂದ, ಕಾಲು ಪಾಲು 'ಖ್ಯಾತ ಕರ್ಣಾಟಕ ವೃತ್ತಗಳು' ಎಂಬ ಮಾತು ಕಂದದ ಪ್ರಚುರತೆಯನ್ನೇ ಸಾರುತ್ತದೆ. ಕಂದಪದ್ಯದಲ್ಲಿಯೇ ರಚಿಸಿದ ಕಾವ್ಯಗಳು ಕಡಿಮೆ. ಜನ್ನನ 'ಯಶೋಧರ ಚರಿತೆ' ಪೂರ್ತಿ ಕಂದದಲ್ಲೇ ರಚಿತವಾದ ವಿರಳ ಕಾವ್ಯಗಳಲ್ಲೊಂದು. ವ್ಯಾಕರಣ, ನಿಘಂಟು, ಮತತತ್ತ್ವ ವಿಚಾರ, ಜ್ಞಾನ–ಭಕ್ತಿ–ವೈರಾಗ್ಯ ವಿಷಯಗಳುಳ್ಳ ಗ್ರಂಥಗಳು ಕಂದದಲ್ಲಿವೆ : ಉದಾ : ಮರುಳ ದೇವರ ಕಂದ, ಷಡಕ್ಷರಕಂದ, ಶಂಕರದೇವರ ಕಂದ, ರತ್ನಾಕರನ 'ತ್ರಿಲೋಕ ಶತಕ' ದಂಥ ಕೆಲವು ಶತಕ ಗ್ರಂಥಗಳೂ ಕಂದದಲ್ಲಿವೆ. ಕವಿರಾಜಮಾರ್ಗ, ಶಬ್ದಮಣಿದರ್ಪಣ, ಶಬ್ದಸ್ಮೃತಿ, ಲೋಕೋಪಕಾರ, ಸಮಯಪರೀಕ್ಷೆ, ಅಶ್ವಶಾಸ್ತ್ರ ಮೊದಲಾದ ಲಕ್ಷಣಗ್ರಂಥಗಳೂ ಶಾಸ್ತ್ರ ಗ್ರಂಥಗಳೂ ಕಂದದಲ್ಲಿವೆ. ಬಹುಮಟ್ಟಿಗೆ ಸ್ವಲ್ಪದರಲ್ಲಿ ಹೇಳಬಹುದಾದ ವರ್ಣನೆಯ ವಿವರ, ಸಂಕ್ಷಿಪ್ತ ಸಂವಾದ, ಅಡಕವಾದ ಉಕ್ತಿ, ಲಕ್ಷಣ ಸೂತ್ರ ಇತ್ಯಾದಿಗಳಿಗೆ ಕಂದಪದ್ಯದ ಬಳಕೆ ಕನ್ನಡದಲ್ಲಿ ಹೆಚ್ಚಾಗಿ ಆದುದು ಕಂಡುಬರುತ್ತದೆ.

ಕಂದ ಪದ್ಯದ ಚರಿತ್ರೆ :

ಕನ್ನಡದಲ್ಲಿ ಕಂದಪದ್ಯದ ಚರಿತ್ರೆ ಕಿ.ಶ. ಸುಮಾರು ೮ನೆಯ ಶತಕದಷ್ಟು ಹಿಂದೆ ಹೋಗುತ್ತದೆಂದು ತಿಳಿದುಬರುತ್ತದೆ. ಗಂಗ ಶ್ರೀಪುರುಷನ ಕಾಲದ (ಕ್ರಿ.ಶ. ೭೨೬–೮೮೮) ತಾಮ್ರ ಶಾಸನದಲ್ಲಿ ಲಿಖಿತವಾಗಿರುವ ಎರಡು ಕಂದಪದ್ಯಗಳೇ ಬಹುಶಃ

ಪ್ರಾಚೀನತಮವೆಂದು ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೇಳಿದ್ದಾರೆ. ಪ್ರಾಚೀನ ಕಾಲದ ಸಾಹಿತ್ಯ ಪ್ರಕಾರಗಳೆಂದು ಹೇಳಲಾಗುವ ಚತ್ತಾಣ,ಬೆದಂಡೆಗಳಲ್ಲಿ ಆರಂಭವಾಗಿ ಚಂಪು ಕಾವ್ಯಗಳಲ್ಲಿ , ಗದ್ಯಕೃತಿಗಳಲ್ಲಿ, ಅಷ್ಟಕ, ಶತಕ ಮುಂತಾದ ಹಲವು ಪ್ರಕಾರಗಳಲ್ಲಿ ಕಂದ ಹಬ್ಬಿಹರಡಿದೆ. ಕಂದದ ಚೆಲುವನ್ನು ಹರಿಹರನು 'ಕಂದಂಗಳಮೃತಲತಿಕಾಕಂದಂಗಳ್' ಎಂದು ಹೊಗಳಿದ್ದಾನೆ, ಸುರಂಗ ಕವಿ ತನ್ನ 'ತ್ರಿಷಷ್ಟಿ ಪುರಾತನರ ಚರಿತ್ರೆಯಲ್ಲಿ 'ಕಂದಂಗಳ್ ವಾಗ್ವನಿತೆಯ ಕಂದಂಗಳ್', ಎಂದೂ ತಿರುಮಲಾರ್ಯನು ತನ್ನ 'ಚಿಕ್ಕದೇವರಾಜವಿಜಯ'ದಲ್ಲಿ 'ಕಂದಂ ಕವಿಕೋಕಿಲ ಮಾಕಂದಂ' ಎಂದೂ 'ಕಂದಂಗಳ್ ಮರುಕದ ಕಿರುಗಂದಂಗಳ್' ಎಂದು ಹಾಡಿ ಹೊಗಳಿದ್ದಾನೆ ಕಂದಪದ್ಯದ ವೈಶಿಷ್ಟ್ಯವೆಂದರೆ ಪ್ರಾಸ ಯತಿಗಳನ್ನು ಲಕ್ಷಣಕ್ಕೆ ಅನುಗುಣವಾಗಿ ಚೆಲುವಾಗಿ ಪಾಲಿಸಲಾಗುತ್ತದೆ. ಕಂದ ಪದ್ಯದಲ್ಲಿ ವಿವಿಧ ಭಾವರಸಗಳನ್ನೂ ಪ್ರಕಟಪಡಿಸುವ ಪ್ರತಿಭಾಚಾತುರ್ಯವನ್ನು ಪಂಪಾದಿ ಶ್ರೇಷ್ಠ ಚಂಪೂ ಕವಿಗಳು ಯಥೇಷ್ಟವಾಗಿ ತೋರಿಸಿದ್ದಾರೆ. ಮುಕ್ತಕದಂತೆ ರೂಪುಗೊಳ್ಳುವ ಇವರ ಕಂದ ಪದ್ಯಗಳು ಉದ್ದೇಶಿತ ಸಂಗತಿಯನ್ನೊ ಭಾವವನ್ನೊ ಭಾಷೆಬಂಧಗಳ ದೃಷ್ಟಿಯಿಂದ ಸಹಜವಾಗಿ, ಪರಿಣಾಮಕಾರಿಯಾಗಿ ಹೇಳುವಲ್ಲಿ ಸಾರ್ಥಕ ಪ್ರಯತ್ನಗಳೆನಿಸಿವೆ. ಪ್ರಾಚೀನ ಕಾಲದ ಕವಿಗಳೂ ಇಂದಿನ ಹೊಸ ಕಾಲದ ಕೆಲವು ಕವಿಗಳೂ ಕಂದವನ್ನು ಸತ್ತ್ವಯುತವಾಗಿ ಬಳಸಿದ್ದನ್ನು ನೋಡ ಬಹುದಾಗಿದೆ.

೨. ರಗಳೆ

ನಾಗವರ್ಮ 'ರಗಳೆ' , 'ರಘಟಾ' – ಎರಡೂ ಪದಗಳನ್ನು ಬಳಸಿದ್ದಾನೆ. 'ರಗಳೆ' ಎಂಬ ಪದ ಕನ್ನಡ ಮೂಲದ್ದೇ ಇರಬಹುದೆಂದು ವಿದ್ವಾಂಸರ ಮತ. ಜಯಕೀರ್ತಿ 'ರಘಟಾ' ಪದ ವನ್ನು ನಾಗವರ್ಮನಿಂದಲೇ ಸ್ವೀಕರಿಸಿ ಹೇಳಿದಂತೆ ಕಾಣುತ್ತದೆ. ಸಂಸ್ಕೃತ, ಪ್ರಾಕೃತ ಛಂದೋಗ್ರಂಥಗಳಲ್ಲಿ 'ರಘಟಾ' ಪದ ದೊರೆಯುವುದಿಲ್ಲ. ತೆಲುಗಿನಲ್ಲಿ 'ರಗಳೆ' ಗೆ 'ರಗಡ' ಎಂಬ ಪದವಿದೆ. ಆದರೆ ತೆಲುಗಿಗೆ ರಗಳೆಯ ಛಂದಸ್ಸು ಸೇರಿಕೊಂಡಿದ್ದು ಈಚೆಗೆ . ಅನಂತಾಮಾತ್ಯನ (ಕ್ರಿ.ಶ. ೧೪೩೫) 'ಛಂದೋದರ್ಪಣಮು' ಗ್ರಂಥದಲ್ಲಿ ರಗಳೆಯ ಲಕ್ಷಣ ಮೊಟ್ಟ ಮೊದಲು ಕಂಡುಬರುತ್ತದೆ.

'ರಗಳೆ ಸಂಸ್ಕೃತಕ್ಕೆ (ಪ್ರಾಕೃತಕ್ಕೆ) ಸೇರಬೇಕೋ ಅಂಶಗಣದ ಕರ್ಣಾಟಕ ವಿಷಯ ಜಾತಿಯೋ ಎಂಬ ಬಗ್ಗೆ ವಿದ್ವಾಂಸರಲ್ಲಿ ಚರ್ಚೆ ಬಹುಕಾಲ ನಡೆದಿತ್ತು. ಕನ್ನಡ ರಗಳೆಯ ಮೂಲವನ್ನು ಪ್ರಾಕೃತ ಛಂದಸ್ಸು, ಅದಕ್ಕಿಂತ ಹೆಚ್ಚಾಗಿ ಅಪಭ್ರಂಶ ಛಂದಸ್ಸಿನಲ್ಲಿ ಕಾಣಬೇಕಾದೀತು ಎಂಬ ಮತವು ಸರಿಯಾಗಿಯೇ ವ್ಯಕ್ತವಾಗಿದೆ.

ನಾಗವರ್ಮನು ಛಂದೋಂಬುಧಿಯಲ್ಲಿ ವೈತಾಳೀಯಾದಿಗಳ ಲಕ್ಷಣಗಳನ್ನು ವಿವರಿಸಿದ ಮೇಲೆ ಕಂದಪದ್ಯದಲ್ಲಿ 'ರಗಳೆ'ಯ ಲಕ್ಷಣವನ್ನು ಸಂಗ್ರಹವಾಗಿ ಹೀಗೆ ಹೇಳಿದ್ದಾನೆ.

ಗಣನಿಯಮ ವಿಪರ್ಯಾಸದೊ
ಳೆಣೆಪದದೊಳ್ ಕೂಡಿ ಮಾತ್ರೆ ಸಮನಾಗೆ ಗುಣಾ

ಗ್ರಣಿಯ ಮತದಿಂದೆ ತಾಳದ
ಗಣನೆಗೂಡಂಬಟ್ಟುದದುವೆ ರಘಟಾಬಂಧಂ ॥

– ಈ ಪದ್ಯದಲ್ಲಿ ರಗಳೆಯ ನಾಲ್ಕು ಲಕ್ಷಣಗಳನ್ನು ಹೇಳಲಾಗಿದೆ. (೧) 'ಗಣನಿಯಮ ವಿಪರ್ಯಾಸ' ದಿಂದಿರುವಿಕೆ (೨) 'ಎಣೆಪದ' ದಿಂದ ಕೂಡಿರುವಿಕೆ. (೩) ಮಾತ್ರೆಸಮನಾಗಿರುವಿಕೆ ಮತ್ತು (೪) ತಾಳದ ಗಣನೆಗೆ ಒಡಂಬಟ್ಟಿರುವಿಕೆ. ಜಯಕೀರ್ತಿಯೂ ತನ್ನ ಛಂದೋನುಶಾಸನದಲ್ಲಿ ನಾಗವರ್ಮನನ್ನನುಸರಿಸಿ ಹೇಳಿದ ಲಕ್ಷಣಗಳು ಇವು : (೧) 'ಸ್ವಚ್ಛಂದ ಃಸಂಜ್ಞಾ (೨) 'ಪಾದದ್ವಂದ್ವ ಸಮಾಕೀರ್ಣಾ (೩) 'ಮಾತ್ರಾಕ್ಷರ ಸಮೋದಿತಾ : ಮತ್ತು (೪) 'ಸುಶ್ರವ್ಯಾ' ನಾಗ ವರ್ಮನ ಸೂತ್ರಪದ್ಯ ರಗಳೆಯ ಸಾಮಾನ್ಯ ಲಕ್ಷಣವನ್ನು ಹೇಳುತ್ತದೆ. ಜಯಕೀರ್ತಿಯ ಸೂತ್ರವು 'ಪದ್ಧತಿ' (ಪಜ್ಝಟಿಕೆ) ಛಂದಸ್ಸಿನಲ್ಲಿರುವ ರಗಳೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಹೇಳಿರುವ ಹಾಗೆ ಕಾಣುತ್ತದೆ. 'ಗಣನಿಯಮವಿಪರ್ಯಾಸ' ಎಂದರೆ ರಗಳೆಯಲ್ಲಿ ೩, ೪, ೫ ಮಾತ್ರಾ ಗಣಗಳ ಮೂರು ಪ್ರಕಾರಗಳ ಗಣವಿನ್ಯಾಸವಿರುವುದರಿಂದ ಗಣನಿಯಮದಲ್ಲಿ 'ವಿಪರ್ಯಾಸ' ಎಂದರೆ ವ್ಯತ್ಯಾಸವಿರುವುದು ಎಂದರ್ಥ. ಆದರೆ ರಗಳೆಯ ಪ್ರತಿಯೊಂದು ಪಾದದಲ್ಲಿ ಒಟ್ಟು ಮಾತ್ರಾಸಂಖ್ಯೆ ಸಮಾನವಾಗಿರುವುದು. ಅಂಥ ಪಾದಗಳು ಒಂದೊಂದು ಜೋಡಿ ಅಥವಾ ಜತೆಯಾಗಿ ಇರುವುವು. ಇಂಥ ಪಾದಗಳಲ್ಲಿಯ ಗತಿ ತಾಳದ ಲೆಕ್ಕಕ್ಕೆ ಹೊಂದಿಕೊಳ್ಳುತ್ತದೆ. ಜಯಕೀರ್ತಿ ಕೊಟ್ಟಿರುವ ಲಕ್ಷಣ ಪದ್ಯ ಇದು :

ಸ್ವಚ್ಛಂದ ಃ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತಾ ।
ಪಾದದ್ವಂದ್ವ ಸಮಾಕೀರ್ಣಾ ಸುಶ್ರವ್ಯಾ ಸೈವ ಪದ್ಧತಿಃ ॥

– ಇದರಲ್ಲಿ ಜಯಕೀರ್ತಿ 'ರಘಟಾ' ಎಂದರೆ ಪಾದಸಂಖ್ಯಾನಿಯಮವಿಲ್ಲದ (ಸ್ವಚ್ಛಂದಃ) ಒಂದು ಪದ್ಯಗುಚ್ಛ ಅಥವಾ 'ಕಡವಕ' ಪಾದಗಳು ಕೇಳಿದಾಗ ಕಿವಿಗೆ ಇಂಪಾಗಿರಬೇಕು. (– ತಾಳ ಬದ್ಧತೆಯೂ ಕಿವಿಗೆ ಇಂಪಾಗಿರುವುದು ಎಂಬ ಕಾರಣದಿಂದ ಇರಬಹುದು) – ಹೀಗೆ ಲಕ್ಷಣಗಳುಳ್ಳದು 'ಪದ್ಧತಿ' ಯೇ ಆಗಿದೆ ಎಂದು ಹೇಳುತ್ತಾನೆ. 'ಮಾತ್ರಾಕ್ಷರ ಸಮತ್ವ' ಎಂಬ ಒಂದಂಶದ ಹೊರತು ಉಳಿದ ಅಂಶಗಳು ಸ್ಪಷ್ಟವಾಗಿ ಅರ್ಥವಾಗುತ್ತವೆ.

ರಗಳೆಯ ಮೂರು ಪ್ರಭೇದಗಳಾದ (೧) ಮಂದಾನಿಲ (೨) ಲಲಿತ (೩) ಉತ್ಸಾಹ ಎಂಬವುಗಳ ಹೆಸರು ಮತ್ತು ಲಕ್ಷಣ ನಿರೂಪಣೆ ಮೊದಲ ಸಲ ಬಂದಿರುವುದು ಗುಣಚಂದ್ರನ (ಕಿ.ಶ. ೧೬೫೦) 'ಛಂದಸ್ಸಾರ' ಗ್ರಂಥದಲ್ಲಿ 'ಮಾತ್ರೆ' ಎಂಬುದಕ್ಕೆ 'ಕಲ' ಎಂಬ ಪದವನ್ನು ಇಲ್ಲಿ ಬಳಸಿದ್ದನ್ನು ನೋಡಿದರೆ ರಗಳೆ ಪ್ರಾಕೃತದಿಂದ ಬಂದುದು ಎಂಬುದರ ಇನ್ನೊಂದು ಸೂಚನೆಯಾಗಿದೆ.

ರಗಳೆಯ ಪ್ರಯೋಗದ ಚರಿತ್ರೆ. :

ಕನ್ನಡದ ಪ್ರಾಚೀನ ಕವಿಗಳು ಜೈನರಾದ್ದರಿಂದ ಅವರಿಗೆ ಪ್ರಾಕೃತದ ಪರಿಚಯವಿತ್ತು. ಪ್ರಾಕೃತದ ಭಾಷೆಯಾದ ಅಪಭ್ರಂಶದಲ್ಲಿಯ ಛಂದಸ್ಸಿನಿಂದಲೂ ಅವರು

ಪ್ರಭಾವಿತರಾಗಿ ಕಿವಿಗೆ ಇಂಪಾಗಿದ್ದ ಮಾತ್ರಾಛಂದಸ್ಸುಗಳಲ್ಲಿ ಒಂದಾಗಿರುವ 'ಪಜ್ಝಟಿಕಾ' ಛಂದಸ್ಸನ್ನು ರಗಳೆಯ ಬಗೆಬಗೆಯ ಪ್ರಭೇದಗಳಾಗಿ ಬೆಳೆಸಿಕೊಂಡು ತಮ್ಮ ಕಾವ್ಯಗಳಲ್ಲಿ ಪಂಪ ಮೊದಲಾದ ಕವಿಗಳು ಬಳಸಿಕೊಂಡರು. ಇದರಿಂದ ಜೈನ ಚಂಪೂ ಕೃತಿಗಳು ಸಂಸ್ಕೃತ, ಪ್ರಾಕೃತ, ದೇಶಿಯ ಹೀಗೆ ಮೂರು ಛಂದಃಪ್ರಭೇದಗಳ ತ್ರಿವೇಣೀ ಸಂಗಮವಾಗಿ ಕಂಗೊಳಿಸುವಂತಾಯಿತು.

ಪಂಪನ ಕಾವ್ಯಗಳಲ್ಲಿ ಶುದ್ಧ ಪಜ್ಝಟಿಕೆಯ ಪ್ರತಿಬಿಂಬವನ್ನು ಮೊಟ್ಟ ಮೊದಲು ಕಾಣುತ್ತೇವೆ. ಆದಿಪುರಾಣದಲ್ಲಿ ಎರಡು ರಗಳೆಗಳಿವೆ. ಮೊದಲನೆಯದು ಇದು :

UU - U - U U U U UU - U
ಸ್ಫುರಿತೇಂದ್ರ ನೀಲಮಣಿ ಖಚಿತಭೂಮಿ
ಚೆಲುವಿಂಗದು ನೆಟ್ಟನೆ ಜನ್ಮಭೂಮಿ

– ಈ ರೀತಿಯಲ್ಲಿ ಜೋಡಿ ಜೋಡಿಯಾಗಿರುವ ಸಾಲುಗಳು ಮೂವತ್ತೆರಡು ಈ ರಗಳೆಯಲ್ಲಿವೆ. ಇಲ್ಲಿರುವುದು ವಿವಾಹವರ್ಣನೆ. ಇಲ್ಲಿ ಪಾದವೊಂದಕ್ಕೆ ನಾಲ್ಕು ಚತುರ್ಮಾತ್ರಾಗಣಗಳು. ಕೊನೆಯ ಗಣವು ನಿಯತವಾಗಿ ಜಗಣ ಇಲ್ಲವೆ ಸರ್ವಲಘು ವುಳ್ಳ ಗಣ ಇರುತ್ತದೆ. ಅಲ್ಲಲ್ಲಿ ಗಣದ ನಿಯತತೆ ಅಲ್ಪಸ್ವಲ್ಪ ತಪ್ಪಿದ್ದೂ ಉಂಟು. ಒಟ್ಟಿನಲ್ಲಿ ಮಾತ್ರಾಸಂಖ್ಯೆ ಸಮವಾಗಿದೆ. ಅಂತ್ಯಪ್ರಾಸ ಯುತವಾಗಿದೆ. ಚತುರ್ಮಾತ್ರಾ ಗಣವಿನ್ಯಾಸವು ಇದರ ಸಾಮಾನ್ಯ ಲಕ್ಷಣ. ಆದರೂ ಒಮ್ಮೊಮ್ಮೆ ಎಂಟೆಂಟು ಮಾತ್ರೆಗಳ ಎರಡೆರಡು ಜತೆಗಳು ಬರುವುದುಂಟು. ಉದಾ :

- - U -U- - UU U U
ಕಂಕೇಲಿಪಲ್ಲ ವೋಲ್ಲಾಸರಚಿತ

ಪಾದಾಂತ್ಯಕ್ಕೆ ಪದವು ಮುಗಿಯದೆ ಮುಂದಿನ ಪದಕ್ಕೆ ಮುಂದುವರಿದಿರುವುದೂ ಉಂಟು. (ಆಧುನಿಕ ಸರಳ ರಗಳೆಯಲ್ಲಿ ಇರುವ ಹಾಗೆ) ಪಂಪನ ಈ ರಗಳೆಯನ್ನು ಕೆಲವರು 'ಮಂದಾನಿಲ' ರಗಳೆಯೆಂದು 'ಮಟ್ಟರಗಳೆ' ಎಂದು ಕರೆದಿದ್ದಾರೆ. ಇದರಲ್ಲಿ ಒಂದು 'ಕಡವಕ'ದ ಎರಡರಷ್ಟು ಎಂದರೆ ಮೂವತ್ತೆರಡು ಪಾದಗಳು ಮಾತ್ರವೇ ಇವೆ. ಪ್ರತಿ ಪಾದದ ಕೊನೆಗೆ ಜಗಣ (U - U) ಇಲ್ಲವೆ ಸರ್ವಲಘು (U U U U)ಇವೆ. ಇದನ್ನೆಲ್ಲ ಪರಿಶೀಲಿಸಿದಾಗ ಪಂಪನು ಈ ರಗಳೆಯನ್ನು ಅಪಭ್ರಂಶದಲ್ಲಿಯ ಪಜ್ಝಟಿಕೆಯನ್ನು ಅನುಸರಿಸಿಯೇ ರಚಿಸಿರಬಹುದೆನಿಸುತ್ತದೆ.

ಆದಿಪುರಾಣದಲ್ಲಿ 'ಏಳನೆಯ ಆಶ್ವಾಸದ ೨೭ನೆಯ ಪದ್ಯದ ಮುಂದಿನ ವಚನವಾದ ಮೇಲೆ ಬರುವ ರಗಳೆಯು ಎಪ್ಪತ್ತು ಸಾಲುಗಳುಳ್ಳುದು. ಮರುದೇವಿ ಕಂಡ ಸ್ವಪ್ನಗಳ ವರ್ಣನೆ ಇಲ್ಲಿಯ ವಸ್ತು. ಇದರ ಮೊದಲೆರಡು ಸಾಲುಗಳು ಇವು :

- U UU UUU UU U UU U U U U U -
ಶ್ರೀಗೆ ಕುಲ ಸದನ ಮೆನೆ ತೊಳಪ ಮಣಿ ಭವನದೊಳ್ ।

- U UU U U U UU UUUUU U U U -
ರಾಗ ರಸ । ಮೊದವೆ ಸರ । ಸಿರುಹಸಮ । ವದನದೊಳ್ ॥

– ಇಲ್ಲಿ ಪ್ರತಿ ಪಾದದಲ್ಲಿ ಪಂಚಮಾತ್ರಾಗಣಗಳು ನಾಲ್ಕು ಬಂದಿದ್ದು ಆದಿಪ್ರಾಸ, ಅಂತ್ಯಪ್ರಾಸಗಳೆರಡೂ ಪಾಲಿತವಾಗಿವೆ. ಮಾತ್ರಾಲಯದ ಗಡಿ ಖಚಿತವಾಗಿದೆ. ಪಾದಾಂತ್ಯವು 'ರಗಣ' (- U -) ದಲ್ಲಿ ಇಲ್ಲವೆ 'ಸಗಣ' (U U -)ದಲ್ಲಿ ಮುಗಿಯುವುದು. ಪಂಪನು ಈ ರಗಳೆಯನ್ನು 'ಕಡವಕ' ಧಾಟಿಯನ್ನೇ ಹಿಡಿದು ಪಾದಸಂಖ್ಯೆಯನ್ನು ಬೆಳೆಸಿ ಪಂಚಮಾತ್ರೆಗಳ ಗಣವಿನ್ಯಾಸವನ್ನು ರಚಿಸಿರುವಂತೆ ತೋರುತ್ತದೆ. ಇದು ಲಲಿತ ರಂಗಳೆಯೇ ಆಗಿದೆ. ಆದರೆ ಪಂಪ ಈ ಹೆಸರನ್ನು ಹೇಳಿಲ್ಲ. ಈ ಹೆಸರು ಇತ್ತೀಚೆಯದು. ಪಂಪನ ಈ ರಗಳೆಯೇ ಕನ್ನಡದಲ್ಲಿ ಕಂಡುಬಂದ ಮೊಟ್ಟ ಮೊದಲ ಲಲಿತರಗಳೆಯ ನಿದರ್ಶನ.

'ಪಂಪಭಾರತ' ದಲ್ಲಿ ಒಟ್ಟು ಮೂರು ರಗಳೆಗಳಿವೆ. ಒಂದನೆಯ ಆಶ್ವಾಸದ ೫೮ರ ರಗಳೆ ಇದು :

UUU U UUUU U -U UUU UUUUUU -
ಅದರ ಪೊರವೊಳಲವಿಶಾಲ ಕನಕ ಕೃತಕಗಿರಿಗಳಿಂ
ಫಳಪ್ರಕೀರ್ಣತರುಗಳಿಂ

– ಇದು ತುಂಬ ಕುತೂಹಲಕಾರೀ ರಗಳೆ. ಹಸ್ತಿನಪುರದ ವರ್ಣನೆಯೇ ಇದರ ವಸ್ತು. ಇದರಲ್ಲಿ ಒಂದು ಉದ್ದಸಾಲು ಅದರ ಮುಂದೊಂದು ಗಿಡ್ಡ ಸಾಲು ಬರುತ್ತವೆ. ಒಟ್ಟು ಇದರಲ್ಲಿ ಇಪ್ಪತ್ತಾರು ಸಾಲುಗಳಿವೆ. ಆದರೆ ಉದ್ದಸಾಲು ಗಿಡ್ಡಸಾಲುಗಳೆರಡೂ ಸೇರಿ ಒಂದೇ ಸಾಲು ಎನ್ನಬಹುದಾಗಿದೆ. ಆದ್ದರಿಂದ ಪಾದಗಳ ಸಂಖ್ಯೆ ಹರಿಮೂರು ಎನ್ನುವುದೇ ಸರಿ ಎನಿಸುತ್ತದೆ. ಇಲ್ಲಿ ಮೂರು ಮಾತ್ರೆಗಳ ಗಣಗಳ ಲಯವಿದೆ. ಯಾಂತ್ರಿಕವಾಗಿ ತ್ರಿಮಾತ್ರಾಗಣಗಳ ಲೆಕ್ಕ ಹಾಕಿದರೆ ಹನ್ನೊಂದು ತ್ರಿಮಾತ್ರಾಗಣಗಳೂ ಮೇಲೊಂದು ಗುರುವು ಬಂದಿವೆ ಎನ್ನಬಹುದು. ಈ ಬಗೆಯ ಇನ್ನೊಂದು ರಗಳೆಯ ನಿದರ್ಶನ ಕುಮುದೇಂದುರಾಮಾಯಣದಲ್ಲಿದೆ (೪–೬೮ರ ಮುಂದಿನ ಪದ್ಯ). ಇಲ್ಲಿ ಉತ್ಸಾಹ ರಗಳೆ ಎಂಬ ಹೆಸರು ಒಂದು ಪ್ರತಿಯಲ್ಲಿದೆ. ಪಂಪನ ಈ ರಗಳೆಯ ಪಾದಗಳು 'ಲಯೋತ್ತರ' ವೃತ್ತದ ಸಾಲುಗಳನ್ನು ಹೋಲುವುದೆಂಬುದನ್ನೂ ಗಮನಿಸಬೇಕು. ಪಂಪನ ಈ ರಗಳೆಯಲ್ಲಿ ಆದಿ ಪ್ರಾಸವಿಲ್ಲ, ಅಂತ್ಯಪ್ರಾಸವಿದೆ. ಪಂಪನ ಈ ರಗಳೆ ಅನಂತರ ರೂಪುಗೊಂಡ 'ಉತ್ಸಾಹ' ರಗಳೆಗೆ ಮೂಲಪಾದುದೆನ್ನಬಹುದು. ಈ ರಗಳೆಯ ಲಕ್ಷಣವನ್ನು 'ಲಯೋತ್ತರ' ದ ಪಾದಗಳಿಗೆ ಹೋಲಿಸಿ ವಿವರಿಸಬಹುದಾಗಿದೆ.

ಉದಾ : UUU U U U UUU -U UUU UUU UUU - U- U - U U U -
ಅದರ ಪೊರವೊ ಳಲವಿ ಶಾಲ ಕನಕ ಕೃತಕ ಗಿರಿಗಳಿಂ ।ಫಳಪ್ರಕೀರ್ಣತರುಗಳಿಂ
UUU U U U UUU U U U UUU -U - U -
ನನೆಯ ಕೊನೆಯ ತಳಿರ ಮುಗುಳ ವನಲತಾನಿ ಕುಂಜದಿಂ ।

U - U UUU - U -
ಪ್ರಸೂನ ರಜದ ಪುಂಜದಿಂ

– ಇಲ್ಲಿ ಮೂರು ಮಾತ್ರೆಯ ಗಣಗಳು ಹನ್ನೊಂದು ಮೇಲೊಂದು ಗುರು ಎಂದು ಹೇಳುವುದು ಯಾಂತ್ರಿಕ ರೀತಿ. ಈ ಪಾದಗಳನ್ನು ತಾಳಲಯಕ್ಕನುಗುಣವಾಗಿ ಹಾಡಿ ನೋಡಬೇಕು. ಆಗ ಮೂರು ಮೂರು ಮಾತ್ರೆಗಳ ದ್ವಿಗಣಗಳ ಮುಂದೆ ಅಲ್ಪಯತಿ. ಮೂರು ದ್ವಿಗಣಗಳ ನಂತರ ಒಂದು ಪಂಚ ಮಾತ್ರಾಗಣವನ್ನು ಹಾಡಿ ಯತಿಯನ್ನು ಪಾಲಿಸಬೇಕು. ಅನಂತರ ಒಂದು ಜಗಣ (U - U) ದ ಪಲುಕನೊಳಕೊಂಡು (ಗತ್ತಿನಿಂದ) ಒಂದು ತ್ರಿಮಾತ್ರಾಗಣ ಕೊನೆಗೊಂದು ಪಂಚ ಮಾತ್ರಾಗಣಗಳಿಂದ ಮುಕ್ತಾಯಗೊಳಿಸುವುದು ಇಲ್ಲಿಯ ತಾಳಲಯದ ಸ್ವಾರಸ್ಯ. ಜಗಣ (U - U)ದ ಪಲುಕಿನಲ್ಲಿ ಮೊದಲ ಲಘು ವರ್ಣವು ಹುಸಿಯಾಗಿ ಮುಂದಿನ ಗುರುವಿನ ಮೇಲೆ ತಾಳಬಿದ್ದು ಲಯದ ಸೊಗಸು ಎದ್ದು ತೋರುತ್ತದೆ.

ಪಂಪನ ಈ ರಗಳೆಯ ಪಾದಗಳನ್ನು 'ಲಯೋತ್ತರ' ವೃತ್ತದ ಈ ಪಾದಗಳೊಂದಿಗೆ ಹೋಲಿಸುವ :

U - U
ತುರುಗೆ ತುಂಬಿಗುರುಳ ಬಂಬಲಿದೆಕಪೋಲರಂಗದೊಳ್ । ತುಳುಂಕೆ
U - U
ಪೊಂಗರಂಗದೊಳ್ । ಮಲಂಗೆ ವಿಜಯಮಂಗೆದೊಳ್ ।
ಮಿರುಗೆ ಪಲ್ಲ ಚವಿಗಳೊಲೆದು ನೆಲಸೆ ಚೆಲ್ವು ಯಾನದೊಳ್ ।
U - U U - U - U -
ಬೆಡಂಗು ಬಳೆಯೆ ಮಾನದೊಳ್ । ಮನಂ ತೊಡಂಕೆ ದಾನದೊಳ್ ॥
ನೆರೆಯೆ ನವಪಯೋಧರೋತ್ಥ ಕುಂಭ ಮುಲಿಯೆ ಪಾದದೊಳ್ ।
U - U U - U U U U - U -
ಚಲಾಂದುಕಂವಿನೋದದೊಳ್ ಕಡಂಗೆ ಮಧುರ ಮೋದದೊಳ್ ॥
ಮೆರೆದು ಪುಗುಗುಮಂಗನೆಯರುಮಂಕದಾನೆಯುಂ ನಮನ್ ।
- U U - U
ನಿಕಾಮನಿಖಿಲ ಭುವನಮಂ ।ತದೀಯರಾಜಭವನಮಂ ॥
(ನೇಮಿ ಚಂದ್ರನ ಲೀಲಾವತಿ)

– ಲಯೋತ್ತರದ ಪಾದಗಳೂ ಪಂಪರಗಳೆಯ ಪಾದಗಳಂತೆಯೇ ತ್ರಿಮಾತ್ರಾ. 'ಜಗಣ' (U-U) ಪಂಚಮಾತ್ರಾಗಣಗಳಿಂದಲೇ ಘಟಿತವಾಗಿದ್ದು ಅದೇ ಬಗೆಯ ತಾಳಲಯವುಳ್ಳುವಾಗಿವೆ. ಅಂತರವಿಷ್ಟೆ: ಪಂಪನ ರಗಳೆಯ ಪಾದಕ್ಕಿಂತ ಲಯೋತ್ತರ ವೃತ್ತ ಪಾದಗಳು ಹನ್ನೆರಡು ಮಾತ್ರೆಗಳಿಂದ ಉದ್ದವಾದುವು. ಪಂಪ ರಗಳೆಯಲ್ಲಿ ಪಾದ ಮಧ್ಯದಲ್ಲಿ ಒಂದೇ ಕಡೆ ಯತಿಯಿದ್ದರೆ ಲಯೋತ್ತನದಲ್ಲಿ ಎರಡು ಕಡೆಗಳಲ್ಲಿ ಯತಿಯಿದೆ. ಯತಿಯಿದ್ದಲ್ಲಿ ಪಲುಕು ಗೋಚರಿಸುವುದರಿಂದ ಲಯದ ಸ್ವಾರಸ್ಯ ಇಮ್ಮಡಿಯಾಗುತ್ತದೆ.

ಪಂಪ ಭಾರತದ ಮೂರನೆಯ ಆಶ್ವಾಸದ ೨೨ರ ರಗಳೆಯೊಂದು ಹೀಗಿದೆ : ಎರಡು ಪಾದಗಳನ್ನು ಮಾತ್ರ ನೋಡಿದರೆ ಸಾಕು :

- U U U U UU UUU UUU-
ಅಲ್ಲಿ । ಸೊಗಯಿಸುವ । ಕೃತಕ । ಗಿರಿಗಳಿಂ
-UUUUUU - U U UU-
ಕಲ್ಪತರುಗಳನೆ ಪೋಲ್ವ ಮರಗಳಿಂ

– ಇದರಲ್ಲಿ 'ಏಕಚಕ್ರಪುರದ ವರ್ಣನೆ ಬಂದಿದೆ. ಒಟ್ಟು ಇಲ್ಲಿ ೧೮ ಪಾದಗಳಿವೆ. ಆದಿಪ್ರಾಸವಿಲ್ಲ, ಅಂತ್ಯ ಪ್ರಾಸವಿದೆ. ಇದರ ಲಕ್ಷಣ : ತ್ರಿಮಾತ್ರಾಗಣದ ಮುಂದೆ ಪಂಚ-ಮಾತ್ರಾಗಣ ಬರುವ ಎರಡೆರಡು ಜತೆಗಳು ಪ್ರತಿ ಪಾದದಲ್ಲಿವೆ. ಇಲ್ಲಿ ನಾಲ್ಕು ಮಾತ್ರೆಯ ಗಣ ಬಾರದೆ, ೩+೫=೮ ಮಾತ್ರೆಯ ಗಣಗಳ ಜತೆಗಳು ಬಂದಿರುವುದು ಒಂದು ವೈಶಿಷ್ಟ್ಯ. ಇದು ಮಂದಾನಿಲ ರಗಳೆಯ ಎರಡನೆಯ ಪ್ರಕಾರದ ಮೂಲವೆಂದು ಹೇಳಬಹುದು. ಪಂಪನು ಇದನ್ನೂ 'ಪಜ್ಝಟಿಕೆ' ಯನ್ನು ಅನುಸರಿಸಿಯೇ ಮಾಡಿಕೊಂಡಿರಬಹುದು. ಒಂದು 'ಕಡವಕ' ದಲ್ಲಿ ಹದಿನಾರು ಪಾದಗಳಿದ್ದರೆ, ಇಲ್ಲಿ ೧೮ ಪಾದಗಳಿವೆ.

ಪಂಪಭಾರತದ ನಾಲ್ಕನೆಯ ಆಶ್ವಾಸದ ೧೦ರ ರಗಳೆಯನ್ನು ಅವಲೋಕಿಸುವ : ಇದನ್ನು 'ಮಟ್ಟರಗಳೆ' ಎಂದು ಕರೆಯಲಾಗಿದೆ.

- U U - -U UU UU- U
ಎಯ್ದು ವುದುಂ ತತ್ಪುರದುಪವನಂಗ
UUUU UU - UU - U - U
ರವಿಗಳ ಮಳಯಾನಿಳ ಕಂಪಿತಂಗ

– ಇಲ್ಲಿಯ ಪಾದ ಸಂಖ್ಯೆ ಮೂವತ್ತೆರಡು. ಎರಡು 'ಕಡವಕ' ಗಳಷ್ಟು ಸರಿಯಾಗಿ ಪಾದಗಳುಂಟು. ಚತುರ್ಮಾತ್ರಗಣಗಳು ನಾಲ್ಕು ಇದ್ದು ಪಾದಯುಗಳದಲ್ಲಿ ಅಂತ್ಯಪ್ರಾಸವುಂಟು. ಕೊನೆಯ ಗಣ 'ಜಗಣ'.(U-U) ಈ ಲಕ್ಷಣವು ಪಜ್ಝಟಿಕೆ (ಪದ್ಧತಿ) ಯ ಪ್ರತಿರೂಪವೇ ಆಗಿದೆ. ಗಣವಿನ್ಯಾಸದಲ್ಲಿ ವೈವಿಧ್ಯ ಶ್ರಾವ್ಯವಾದ ಲಯ, ಪಾದಾಂತ್ಯದ ಪದ ಮುಂದಿನ ಪಾದಕ್ಕೆ ಸಾಗುವ ರೀತಿಯಿಂದಾಗಿ ಹಾಡಲು ಸ್ವಾರಸ್ಯಕರ ರಗಳೆಯಿದು.

ಪೊನ್ನ – ರನ್ನರಲ್ಲೂ ಈ ಬಗೆಯ ರಗಳೆಗಳು ಕೆಲವಾರು ಬಂದಿವೆ. ರನ್ನನ ಈ ಪಾದಗಳನ್ನು ನೋಡಬಹುದು :

UUU UUUUUU - U
ಅದರ ಬಳಸಿದುಪವನಂಗ
UUU - U - U- U
ಉದಿತ ಕೋಕಿಲಸ್ವನಂಗ

– ಈ ರಗಳೆಯಲ್ಲಿ ಮೂವತ್ತು ಪಾದಗಳಿವೆ. ಆದ್ಯಂತ ಪ್ರಾಸಗಳೂ ಇವೆ. ಪ್ರತಿ ಪಾದದಲ್ಲಿ ನಾಲ್ಕು ತ್ರಿಮಾತ್ರಾ ಗಣಗಳಿದ್ದು ಖಚಿತವಾದ ತಾಳಲಯದ ಗತಿಯುಂಟು. ಇಲ್ಲಿ ಪಾದದ ಕೊನೆಯಲ್ಲಿ ಬರುವ 'ವನಂಗ', 'ಸ್ವನಂಗ' ಗಳಂಥ ಜಗಣವನ್ನು ತ್ರಿಮಾತ್ರಾಲಯದ ಧಾಟಿಯೊಂದಿಗೆ ರನ್ನನು ಹೊಂದಿಸಿದ್ದನ್ನು ಗಮನಿಸಿದರೆ ಪಜ್ಜಟಿಕೆಯ ಈ ಲಕ್ಷಣಾಂಶವನ್ನು ತ್ರಿಮಾತ್ರೆಗಳ ಗಣಕ್ಕೂ ಅನ್ವಯಿಸುವ ಹೊಸ ಪ್ರಯೋಗವನ್ನು ಆತ ಮಾಡಿದ್ದಾನೆಂದು ಹೇಳಬಹುದಾಗಿದೆ. ರನ್ನನ ಈ ತ್ರಿಮಾತ್ರಾಗಣಘಟಿತ ರಗಳೆಗೆ ಪಂಪನ ತ್ರಿಮಾತ್ರಾಗಣದ ರಗಳೆಯೂ ಪ್ರೇರಕವಾಗಿರಬಹುದು. ಕರ್ಣಾಟಕ ವಿಷಯ ಜಾತಿಗಳಲ್ಲಿ ಬರುವ ಉತ್ಸಾಹವೃತ್ತವು ಉತ್ಸಾಹದ ರಗಳೆಯ ಹುಟ್ಟಿಗೆ ಕಾರಣವಾಗಿದ್ದಿರಲೂ ಬಹುದು. ರನ್ನನ ಈ ರಗಳೆ ಉತ್ಸಾಹರಗಳೆಯ ಪ್ರಥಮ ಪರಿಷ್ಕೃತ ರೂಪ ಎನ್ನಬಹುದು.

ಪಂಪರನ್ನಾದಿಗಳ ತರುವಾಯ ಚಂಪೂಕೃತಿಗಳಲ್ಲಿ ಈ ಬಗೆಯ ರಗಳೆಯ ರಚನೆಗಳು ರೂಢಿಗೆ ಬಂದು ೧೨ನೆಯ ಶತಕದ ಹರಿಹರನಲ್ಲಿ ರಗಳೆ ಕಾವ್ಯ ರಚನೆಗೆ ಪ್ರಧಾನ ಛಂದಸ್ಸಾಗಿ ಸ್ವೀಕರಿಸಲ್ಪಟ್ಟಿತು. ಹರಿಹರನು ಉತ್ಸಾಹ, ಮಂದಾನಿಲ, ಲಲಿತ ಎಂಬ ಮೂರು ಪ್ರಕಾರದ ರಗಳೆಗಳಲ್ಲಿ ಶಿವಶರಣರ ಚರಿತ್ರೆಗಳನ್ನು ಬರೆದು ನೂತನ ಕಾವ್ಯಮಾರ್ಗದ ಪ್ರಸ್ಥಾಪಕ ಎನಿಸಿದ. ನೂರೊಂದು ರಗಳೆಗಳನ್ನು ರಚಿಸಿ ರಗಳೆಯ ಕವಿಯೆಂದು ಪ್ರಖ್ಯಾತನಾದ. ಕಥನ ಹಾಗೂ ವರ್ಣನೆಗಳೆರಡಕ್ಕೂ ರಗಳೆ ತಕ್ಕುದೆನಿಸುವಂತೆ ತನ್ನ ಪ್ರತಿಭಾ ಸಾಮರ್ಥ್ಯವನ್ನು ಪ್ರದರ್ಶಿಸಿದ. ಚಂಪೂ ಕಾವ್ಯಗಳಲ್ಲಿ ಅಲ್ಲಲ್ಲಿ ವರ್ಣನೆಗಳಿಗಾಗಿ ಮಾತ್ರ ಬಳಸಲ್ಪಟ್ಟ ರಗಳೆಯನ್ನು ಸತ್ವಯುತವಾಗಿ ಬಳಸಿ ಅದಕ್ಕೊಂದು ಜೀವ ತುಂಬಿದ ಕವಿ ಹರಿಹರ. ಅವನ ಕೈಯಲ್ಲಿ ರಗಳೆ ನದೀಪ್ರವಾಹದಂತೆ ಸುಳಿಯುತ್ತ ಮೊರೆಯುತ್ತ ಏಳುತ್ತ ಬೀಳುತ್ತ ಕನಲುತ್ತ ಕೊಬ್ಬುತ್ತ ಬಗೆಬಗೆಯ ಬೆಡಗಿನಿಂದ ಹರಿಯುತ್ತದೆ. ಅವನ ಸ್ಫೂರ್ತಿ ವಿಶೇಷವೂ ಭಕ್ತಿಪರವಶತೆಯೂ ಪ್ರತಿಭಾಸಂಚಾರವೂ ಅವನ ರಗಳೆಯನ್ನು ಇಚ್ಚೆಬಂದ ಹಾಗೆ ಕುಣಿಸುತ್ತದೆ. ಅವನ ವ್ಯಕ್ತಿತ್ವ ಅವನ ರಗಳೆಗಳಲ್ಲಿ ವ್ಯಕ್ತವಾಗಿರುವಂತೆ, ಸಾಂದ್ರವಾಗಿ, ಮನೋಹರವಾಗಿ ಅವನ 'ಗಿರಿಜಾ ಕಲ್ಯಾಣ' ಚಂಪೂ ಕಾವ್ಯದಲ್ಲಿ ವ್ಯಕ್ತವಾಗಿಲ್ಲ. 'ರಗಳೆಯ ಕವಿ' ಯೆಂದು ಪರಿಹಾಸಕ್ಕೆ ಈಡಾಗಿದ್ದರೂ ಅವನ ಶಿವಶರಣ ರಗಳೆ ಸಾಕು ಅವನ ಕಾವ್ಯ ಮಹಿಮೆಯನ್ನು ಸಾರುವುದಕ್ಕೆ' ಎಂದು ಡಿ.ಎಲ್.ಎನ್. ಅವರು ಹೇಳಿದ್ದು ಸತ್ಯ. ಹರಿಹರನ ಅನಂತರ ಮಾತ್ರ ರಗಳೆಯ ಛಂದಸ್ಸನ್ನು ಅವನ ಹಾಗೆ ಪ್ರಯೋಗಿಸಿದವರಿಲ್ಲ.

ಆಧುನಿಕ ಕವಿತೆಗಳಲ್ಲಿ ರಗಳೆಯ ಪ್ರಯೋಗವು ವಿಶಿಷ್ಟವಾಗಿದೆ. ಲಲಿತ ರಗಳೆ ಇಂಗ್ಲೀಷಿನ ಬ್ಲ್ಯಾಂಕ್ ವರ್ಸಿನೊಂದಿಗೆ ಕಸಿಗೊಂಡು 'ಸರಳ ರಗಳೆ' ಎಂಬ ಹೊಸ ರೂಪವನ್ನೂ, ಹೊಸ ಹೆಸರನ್ನೂ ಪಡೆದಿದೆ. ಕುವೆಂಪು ಅವರು ಈ ಸರಳ ರಗಳೆಯಲ್ಲೆ ಕೆಲವು ಮಾರ್ಪಾಡುಗಳನ್ನು ಮಾಡಿ ತಮ್ಮ ಶ್ರೀರಾಮಾಯಣದರ್ಶನಂ ಕಾವ್ಯಕ್ಕೆ ಬಳಸಿಕೊಂಡು ಅದನ್ನು 'ಮಹಾ ಛಂದಸ್ಸು' ಎಂದು ಕರೆದಿದ್ದಾರೆ. ವಿನಾಯಕರು ತಮ್ಮ 'ಭಾರತ ಸಿಂಧು ರಶ್ಮಿ' ಗೆ ಬಳಸಿ ಅದನ್ನು 'ಸಂಕೀರ್ಣ ಛಂದಸ್ಸು' ಎಂದು ಹೆಸರಿಸಿದ್ದಾರೆ.

'ಲಲಿತ ರಗಳೆ' ಎಂಬ ಹೆಸರು ಈ ಹೆಸರಿನ ರಗಳೆಗೆ ಹೇಗೆ ಬಂತೆಂಬುದು

ವಿಶದಪಟ್ಟಿಲ್ಲ. ನಾಗವರ್ಮನ ಛಂದೋಂಬುಧಿಯಲ್ಲಿ ಕಾಣ ದೊರೆಯುವ ಈ ರಗಳೆಯ ಹಾಗೂ ಇನ್ನೆರಡು ರಗಳೆಗಳ ಹೆಸರು ಹಾಗೂ ಮಾತ್ರಾಸಂಖ್ಯೆಯ ನಿರ್ದೇಶನವಿರುವ ಪದ್ಯಗಳು ಪ್ರಕ್ಷಿಪ್ತವೆಂದು ಭಾವಿಸಲಾಗಿದೆ. ಕ್ರಿ.ಶ. ೧೦೫೫ರ ಒಂದು ಕನ್ನಡ ಶಾಸನದಲ್ಲಿ ಆದ್ಯಂತ ಪ್ರಾಸಬದ್ಧವಾದ ಲಲಿತ ರಗಳೆಯೊಂದಿದ್ದು ಅದನ್ನು 'ತೋಮರ ರಗಳೆ' ಎಂದು ಹೆಸರಿಸಿದ್ದು ಕಂಡುಬಂದಿದೆ. 'ತೋಮರ' ಎಂಬುದು, ಪಂಚಮಾತ್ರಾಗಣಗಳ ನಿರ್ದೇಶನಕ್ಕಾಗಿ ಬಳಸಿರುವ ಆಯುಧನಾಮಗಳಲ್ಲಿ ಒಂದೆಂದು ತಿಳಿಯುವುದರಿಂದ ಪಂಚಮಾತ್ರಾಗಣವಿನ್ಯಾಸದ ರಗಳೆ ಎನ್ನುವಲ್ಲಿ 'ತೋಮರ ರಗಳೆ' ಎಂದು ಆ ಶಾಸನದಲ್ಲಿ ಬಳಸಲಾಗಿದೆಯೆಂದು ಡಿ.ಎಲ್.ಎನ್. ಹೇಳಿದ್ದಾರೆ.

ಪಂಚಮಾತ್ರಾಗಣಗಳ ವಿನ್ಯಾಸವು ಸ್ಫುಟವಾಗಿ ತೋರುವ ೧೬ನೆಯ ಅಷ್ಟಿ ಛಂದಸ್ಸಿನ 'ಲಲಿತ ಪದ' ವೃತ್ತ, ಮಾಲಾವೃತ್ತಗಳಲ್ಲಿಯ 'ಲಲಿತ' ವೃತ್ತ ಇಂಥವುಗಳ ಆಧಾರದಿಂದ ಪಂಚಮಾತ್ರಾಗಣವಿನ್ಯಾಸದ ರಗಳೆಗೆ 'ಲಲಿತ ರಗಳೆ' ಎಂಬ ಹೆಸರು ಬಂದಿರಬಹುದೆನಿಸುತ್ತದೆ.

'ಮಂದಾನಿಲ' ರಗಳೆಗೆ ಅಪಭ್ರಂಶ ಕಾವ್ಯಗಳಲ್ಲಿ ಪ್ರಚಲಿತವಾಗಿರುವ 'ಪಜ್ಝಟಿಕಾ' ಎಂಬ ಅಪಭ್ರಂಶ ಛಂದಸ್ಸಿನಲ್ಲಿರುವ ಹದಿನಾರು ಪಾದಗಳುಳ್ಳ 'ಕಡವಕ' ವೇ ಮೂಲವೆಂಬುದು ಸಿದ್ಧವಾಗಿದೆ. 'ಪದ್ಧತಿ' (ಪಜ್ಝಟಿಕೆ) ಎಂಬುದರ ಪ್ರತಿ ಶಬ್ದವಾಗಿರುವ 'ಪದ್ಧಳಿ' (ಪಡ್ಡಳಿ) ಎಂಬುದರ ಉಲ್ಲೇಖ ದುರ್ಗಸಿಂಹನ (ಕಿ.ಶ. ೧೦೩೧) 'ಪಂಚತಂತ್ರ'ದಲ್ಲೂ ಶಾಂತಿನಾಥನ 'ಸುಕುಮಾರ ಚರಿತೆ' (ಕ್ರಿ.ಶ. ೧೦೬೮) ಯಲ್ಲೂ ಬಂದಿದೆ. ಇದೇ ಕಾಲಕ್ರಮದಲ್ಲಿ ಮಂದಾನಿಲ ರಗಳೆ ಎಂದು ಹೆಸರಾಗಿರಬೇಕು. ಪದ್ಧಳಿಯ ಪ್ರತಿರೂಪವಾದ ಮಂದಾನಿಲ ರಗಳೆಗೆ ಈ ಹೆಸರು ಹೇಗೆ ಬಂದಿತೆಂಬುದು ಇನ್ನೂ ವಿಶದಪಟ್ಟಿಲ್ಲ. ಪಂಕ್ತಿ ಛಂದಸ್ಸಿನಲ್ಲಿ 'ಮಂದಾನಿಲ' ಎಂಬ ವೃತ್ತ ವಿದ್ದು ಇದರ ಗಣವಿನ್ಯಾಸ 'ಭಮನಗ' ಎಂದಿದೆ. ಪಾದವೊಂದಕ್ಕೆ ಮಾತ್ರಾಸಂಖ್ಯೆ ಹದಿನಾರು ಮತ್ತು ಚತುರ್ಮಾತ್ರಾಗಣದ ತಾಳಲಯಕ್ಕೆ ಇದು ಜಗ್ಗುವಂತಿದ್ದು ಈ ಮಂದಾನಿಲವೃತ್ತವೇ 'ಮಂದಾನಿಲ ರಗಳೆ' ಎಂಬ ಹೆಸರಿಗೆ ಪ್ರೇರಕವಾಗಿರಬೇಕು ಎಂಬ ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಅಭಿಪ್ರಾಯ ಗಮನಾರ್ಹ.

'ಉತ್ಸಾಹ ರಗಳೆ' ಎಂಬುದಕ್ಕೆ ಎಂಟು ತ್ರಿಮಾತ್ರಾ ಗಣಗಳು ಬರುವ ಅಂಶಗಣಾತ್ಮಕ 'ಉತ್ಸಾಹ' ವೃತ್ತದ ಹೆಸರಿನ ಪ್ರೇರಣೆ ಒದಗಿರಬೇಕು. ಉತ್ಸಾಹ ರಗಳೆಯಲ್ಲಿ ನಾಲ್ಕು ತ್ರಿಮಾತ್ರಾಗಣಗಳು ಪ್ರತಿ ಪಾದದಲ್ಲಿದ್ದು ಆದ್ಯಂತ ಪ್ರಾಸಬದ್ಧವಾಗಿರುವ ರಚನೆ ಒಂದು ರೀತಿಯದು. ಇದರಲ್ಲಿಯೇ ವೈವಿಧ್ಯಕ್ಕಾಗಿ ತ್ರಿಮಾತ್ರಾಗಣಗಳು ಮೂರು ಮೇಲೊಂದು ಗುರು ಇರುವ ರಗಳೆಯ ರಚನೆಯೂ ಇದೆ. ಅಲ್ಲದೆ, ಎಂಟು ತ್ರಿಮಾತ್ರಾಗಣಗಳು ಆದ್ಯಂತ ಪ್ರಾಸಬದ್ಧವಾಗಿರುವ ರಗಳೆಯ ರಚನೆ ಇನ್ನೊಂದು ಬಗೆಯದಾಗಿದೆ.

ಒಟ್ಟಿನಲ್ಲಿ ರಗಳೆಗಳ ಅನುಕ್ರಮವನ್ನು ಮಂದಾನಿಲ, ಲಲಿತ, ಉತ್ಸಾಹ ಎಂದು ಹೇಳುವುದು ರೂಢಿಯಲ್ಲಿದೆ. ಆದರೆ ರನ್ನ ಮುಂತಾದವರನ್ನು ಗಮನಿಸಿ ಉತ್ಸಾಹವನ್ನು

ಮೊದಲಲ್ಲಿ ಹೇಳುವುದು ಸರಿ ಎನ್ನಬಹುದು. ಆದ್ದರಿಂದ ಈ ಮೂರು ರಗಳೆಯ ಪ್ರಕಾರಗಳ ಲಕ್ಷಣ,ಲಕ್ಷ್ಯಗಳನ್ನು ಹೀಗೆ ಹೇಳಬಹುದು :

(೧) ಉತ್ಸಾಹ ರಗಳೆ : ಲಕ್ಷಣ :

೧) ಪಾದವೊಂದಕ್ಕೆ ತ್ರಿಮಾತ್ರಾಗಣಗಳು ನಾಲ್ಕು ಇರುವುದು ಒಂದನೆಯ ಪ್ರಕಾರದ್ದು (೨) ತ್ರಿಮಾತ್ರಾಗಣಗಳು ಮೂರು ಮೇಲೊಂದು ಗುರುವಿರುವುದು ಎರಡನೆಯ ಪ್ರಕಾರದ್ದು (ಮೊದಲನೆಯ ಪ್ರಕಾರದ ಎರಡು ಪಾದಗಳನ್ನು ಒಂದಾಗಿ ಭಾವಿಸಿ ಪಾದವೊಂದಕ್ಕೆ ಇಪ್ಪತ್ತನಾಲ್ಕು ಮಾತ್ರೆಗಳಿರಬೇಕೆಂದು ನಾಗವರ್ಮನ ಛಂದೊಂಬುಧಿಯಲ್ಲಿರುವುದನ್ನೂ ಗಮನಿಸಬೇಕು)

ಗ

೧) ಒಂದನೆಯ ಪ್ರಕಾರಕ್ಕೆ ಉದಾ : ೩ ಮ್ಹಾ೪=೧೨ ಮಾ.

UUU - U - U- U
ಕುಳಿರ್ವಪೂಗೊಳಂಗಳಲ್ಲಿ
UUU - U - U-U
ತಳಿರ ಕಾವಣಂಗಳಲ್ಲಿ
- U - U - U - U
ತುಂಬಿವಿಂಡಿನಂತೆ ಪಾಡಿ
- U-U - U - U
ಚಕ್ಕವಕ್ಕಿಯಂತೆ ಕೂಡಿ.

ಗ ಗ ಮಾ

೨) ಎರಡನೆಯ ಪ್ರಕಾರಕ್ಕೆ ಉದಾ : ೩ ಮಾ ೩+೧=೧೧

- UUU U - U -
ಮಾವಿನಡಿಯೊಳಾಡುತುಂ
- U - U -U -
ಪಾಡನೆಯ್ದೆ ಕೇಳುತುಂ
- U - U UUU-
ಪೊಳ್ತ ನಿಂತು ಕಳೆಯುತುಂ
U UU - U UU U -
ತೊಲಗದಿರ್ದರೆಸೆಯುತುಂ

೨) ಮುಂದಾನಿಲ ರಗಳೆ : ಲಕ್ಷಣ :

೧) ಪಾದವೊಂದಕ್ಕೆ ಚತುರ್ಮಾತ್ರಾಗಣಗಳು ನಾಲ್ಕು ಬರುವುದು. ಒಂದನೆಯ ಪ್ರಕಾರ

೨) ತ್ರಿಮಾತ್ರಾಗಣದ ಮುಂದೆ ಪಂಚಮಾತ್ರಾಗಣವು ಬರುವಂತೆ ಗಣಗಳು ಎರಡೆರಡು ಬರುವುದು ಎರಡನೆಯ ಪ್ರಕಾರ. ಇದಕ್ಕೆ 'ಮಟ್ಟರಗಳೆ' ಎಂದು ಹೆಸರು ಪಂಪನ ಕಾಲಕ್ಕೆ ಇತ್ತು ಎಂಬುದನ್ನು ನೆನೆಯಬಹುದು. ಅಪಭ್ರಂಶದ 'ಪದ್ಧತಿ'(ಪಜ್ಝಟಿ)ಯಿಂದ ಪ್ರೇರಿತವಾದುದೆಂಬುದನ್ನೂ ಈ ಮೊದಲು ಸೂಚಿಸಿದ್ದಾಗಿದೆ.

ಒಂದನೆಯ ಪ್ರಕಾರಕ್ಕೆ ಉದಾ : ೪ಮ್ಡಾ೪ = ೧೬ ಮಾ

- - U UUU - UU UUUU
ಆ ವೇಳೆಯೊಳತಿ ಸಂಭ್ರಮಮೆಸೆದಿರೆ
ಪೂವಲಿ ಪುರವೀಧಿಗಳೊಳ್ ನೆರೆದಿರೆ
ಪವಳದ ರನ್ನದ ಗುದಿಗಳ ಗುಡಿಗಳೆ
ನವಮೌಕ್ತಿಕರಂಗದ ದಾಂಗುಡಿಗಳ್

U UU U - - U U - U - U
ಪೊಳಲ ಬೆಡಂಗಂ ಮಿಗೆ ಮೆಚ್ಚಿ ನೋಡಿ
UU - U U - U U- U - -
ದಿವಿಜೇಂದ್ರವಿಲಾಸದೊಳಿಂತು ಕೂಡಿ
UU - UU - U U - U - -
ಕರುಮಾಡಮನಾದರದಿಂದಮೇರಿ
UU - - - U U U UU - -
ಕೆಲದೊಳ್ ಮಾಡಂಗಳನರಿದು ತೋರಿ

(ಪಂಪ ಭಾರತ)

– ಪಂಪ ಭಾರತದ ಈ ರಗಳೆಯ ಸಾಲುಗಳಲ್ಲಿ ಅಂಶಛಂದಸ್ಸಿನ ರಾಗಲಯದ ಛಾಯೆಯಿದ್ದುದನ್ನು ಗಮನಿಸಬೇಕು. 'ಮಿಗೆ ಮೆಚ್ಚಿ', 'ಸದೊಳಿಂತು', 'ದರದಿಂದ', 'ಗಳನರಿದು' – ಇವೇ ಮುಂತಾದವುಗಳನ್ನು ತ್ವರಿತಗತಿಯಲ್ಲಿ ಗುರುವನ್ನು ಇಲ್ಲವೆ ಎರಡು ಲಘುಗಳನ್ನು ಕುಗ್ಗಿಸಿ ಹೇಳಬೇಕಾಗುತ್ತದೆ. ನೋಡಿ, ಕೂಡಿ, ಏರಿ, ತೋರಿ – ಇವುಗಳನ್ನು ಮಂದಾನಿಲರಗಳೆಯ ನಿಯಮಕ್ಕನುಸಾರವಾಗಿ ಎರಡು ಗುರುಗಳುಳ್ಳ ಚತುರ್ಮಾತ್ರಾಗಣವಾಗಿ ಇಲ್ಲಿ ತೋರಿಸಿದ್ದರೂ ಅವು ಮೂಲತಃ 'ಪದ್ಧತಿಯ' ಪ್ರೇರಣೆಯಿಂದ ಹುಟ್ಟಿದವುಗಳಾದ್ದರಿಂದ 'ಚ್ಚಿ ನೋಡಿ', 'ತುಕೂಡಿ', 'ದಮೇರಿ', 'ದುತೋರಿ' ಎಂಬ ಜಗಣ ಗಳಿಂದ ಕೊನೆಗೊಳ್ಳುವ ಪಾದಗಳು ಎಂಬುದನ್ನು ನೆನಪಿಡಬೇಕು. ಪಂಪನ ಈ ರಗಳೆಯೇ ಇಂದಿನ ಮಂದಾನಿಲ ರಗಳೆಗೆ ಮೂಲವಾದ್ದರಿಂದ ಇಲ್ಲಿ ಉದಾಹರಿಸಲಾಗಿದೆ. ಎರಡನೆಯ ಪ್ರಕಾರಕ್ಕೆ **ಉದಾ :**

೩ ೫ಮಾ ೩ಮಾ ೫ಮಾ
- U - U - U UU UU U -
ನಂದನಂಗಳೊಳ್ । ಸುಳಿವ । ಬಿರಯಿಯಿಂ ।

- U - U U U - U U U U -
ಕಂಪು । ಕಣ್ಮಲೆಯೆ । ಪೂತ ಸುರಯಿಯಿಂ
- U - UUU U UU - U -
ಸುತ್ತಲುಂ ಪರಿವ । ಜರಿವೊನಲ್ಗಳಿಂ ।
- U - UUU U UU -U -
ಎತ್ತಲುಂ ನಲಿವ । ಪೊಸನವಿಲ್ಗಳಿಂ

(ಪಂಪ ಭಾರತ)

(೩) ಲಲಿತ ರಗಳೆ : ಲಕ್ಷಣ :

ಪಾದವೊಂದಕ್ಕೆ ಪಂಚಮಾತ್ರಾಗಣಗಳು ನಾಲ್ಕು ಇರಲು ಲಲಿತರಗಳೆ :

ಉದಾ : UUU UU - U - - U UU UU - U
ವಿಷಯ ವಿಷವಲ್ಲಿಯಂ ಪೆರ್ಚಿಸುವ ಜಲಧಾರೆ
- - U - UUU UUUU U - - U
ಸಾಧುತ್ವಮಂ ಕಿಡಿಸಿ ನಡೆಸುವ ದುರಾಚಾರೆ
UUU-UU UUU - U UUUU U -
ಕಪಟನಾಟಕತತಿಗೆ ತಾನೆ ನೆಲೆಯೆನಿಸುವಳ್
ಕೋಪಗ್ರಹಾವೇಶಜನ್ಮ ನಿಧಿಯೆನಿಸುವಳ್

(ಕರ್ಣಾಟಕ ಕಾದಂಬರಿ)

– ಈ ಮೂರು ರಗಳೆಗಳಲ್ಲಿ ಸೇರದೆ ನಾಲ್ಕನೆಯ ಪ್ರಕಾರದ ಒಂದು ರಗಳೆ ಪಂಪಭಾರತದ ಒಂದನೆಯ ಆಶ್ವಾಸದಲ್ಲಿ ಕಾಣಬರುವುದನ್ನು ಈ ಮೊದಲೆ ಉಲ್ಲೇಖಿಸಲಾಗಿದೆ. ಅದು ಲಯೋತ್ತರವೃತ್ತವನ್ನು ಹೋಲುವುದನ್ನೂ ಸ್ಪಷ್ಟಪಡಿಸಲಾಗಿದೆ. ಅದರ ಆರು ಸಾಲುಗಳನ್ನು ಮತ್ತೊಮ್ಮೆ ಅವಲೋಕಿಸುವ :

UUU U UUUU U - U UUU UUU UUU- U-U - U U U U -
ಅದರ ಪೊರವೊಳಲ ವಿಶಾಲ ಕನಕ ಕೃತಕ ಗಿರಿಗಳಿಂ । ಫಲಪ್ರ ಕೀರ್ಣತರುಗಳಿಂ ।
ನನೆಯ । ಕೊನೆಯ । ತಳಿರ । ಮುಗುಳ । ವನಲತಾನಿ ಕುಂಜದಿಂ ।
ಲಸತ್ಪ್ರ । ಸೂನಪುಂಜದಿಂ ।
- U -
ಗಗನ । ತಲಮೆ । ಪರಿದು । ಬಿಳ್ದು । ದೆನಿಪ । ಬಹುತ । ಟಾಕ ದಿಂ
U - U UU U - U
ಕುಕಿಲ್ದು । ನಲಿವ । ಕೋಕದಿಂ ।
- U -
ತೆಗೆಯ ದಬ್ದ ಸಮಿತಿ ವೋಲೆ ಪರಿವ ಮದಗ ಜಂಗಳಿಂ ।

U -U - U - U -

ತರತ್ತ ರಂಗಮಂಗಳಿಂ ।

ಲವಣಜಲಧಿ ಬಳಸಿದಂತೆ ಬಳಸಿದಗಳನೀಳದಿಂ ।

ದುದಗ್ರ ಕನಕಸಾಳದಿಂ ।

ಕನಕ ಶೈಲಮೆನಿಸಿ ನೆಗಳ್ದ ಭೂಮಿಪಾಲಭವನದಿಂ । ಸಮಸ್ತ ವಸ್ತುಭುವನದಿಂ ॥

– ಈ ಮೊದಲೆ ವಿಶದಪಡಿಸಿದಂತೆ ಪಂಪನ ಈ ರಗಳೆಯ ಪ್ರತಿಯೊಂದು ಪಾದದಲ್ಲಿ ಮೊದಲಿಗೆ ತ್ರಿಮಾತ್ರಾಗಣಗಳು ಆರು, ಅನಂತರ ಪಂಚಮಾತ್ರಾಗಣವೊಂದು ಬಂದು ಯತಿಯನ್ನು ಪಾಲಿಸಲಾಗುತ್ತದೆ. ಅಲ್ಲಿಂದ ಮುಂದೆ ಒಂದು ಜಗಣದಲ್ಲಿ ಮೊದಲ ಲಘುವನ್ನು ಹುಸಿಯಾಗಿಸಿ, ಪಲುಕಿನ ಗತ್ತಿನಿಂದ ಹೇಳಿ, ಮುಂದೆ ಒಂದು ತ್ರಿಮಾತ್ರಾಗಣ, ಅನಂತರ ಒಂದು ಪಂಚಮಾತ್ರಾಗಣಗಳಿಂದ ಮುಕ್ತಾಯಗೊಳಿಸುವುದು ಇದರ ಧಾಟಿ. ಪ್ರತಿಪಾದದಲ್ಲಿ ಮೂವತ್ತೈದು ಮಾತ್ರೆಗಳಿರುತ್ತವೆ. ಲಯೋತ್ತರವೃತ್ತದಲ್ಲಿ ಹನ್ನೆರಡು ಮಾತ್ರೆಗಳ ಕೊನೆಯ ಭಾಗ ಮತ್ತೊಮ್ಮೆ ಬರುವುದರಿಂದ ಅದರಲ್ಲಿ ಪ್ರತಿಪಾದದಲ್ಲಿ ೪೭ ಮಾತ್ರೆಗಳಾಗುತ್ತವೆಯೆಂದು ಈ ಮೊದಲೆ ಹೇಳಿದ್ದನ್ನು ನೆನಪಿಸಿಕೊಳ್ಳಬೇಕು.

೩. ಮಾತ್ರಾ ಛಂದಸ್ಸಿನ ಇನ್ನಿತರ ಬಂಧಗಳು

(೧) ಲಲಿತ ವೃತ್ತ : ಲಕ್ಷಣ :

ಪ್ರತಿ ಪಾದದಲ್ಲಿ ಪಂಚಮಾತ್ರಾಗಣಗಳು ಮೂರು, ಚತುರ್ಮಾತ್ರಾಗಣವು ಒಂದೂ ಇರುವ ನಾಲ್ಕು ಪಾದಗಳುಳ್ಳುದು.

ಉದಾ : ೫ಮ ೫ಮ ೫ಮ ೪ಮಾ

- U U U - - U - U U U - -

ಸಂಕುಗೊರಲೊಳ್ತಳ್ತ ಮುತ್ತಿನ ಸರಂಗಳ್ ।

- U UU - U U U - U UU - -

ಕೊಂಕಿಡಿದ ಪೆರ್ಬುಲಿಯುಗುರ್ ಸೊಬಗು ವತ್ಸಂ ॥

ಕೆಂಕವಣಿ ಕೆತ್ತಿಸಿದ ತಾಳಿ ಪದಕಂಗಳ್ ।

- U U U - U U U

ಸೋಂಕಲೆರ್ದೆ ಗೊಂಡವನ ಪೆಣ್ಗ ಳೆರ್ದೆಗೊಂಡಂ ॥

('ಎರ್ದೆ' ಶಿಥಿಲದ್ವಿತ್ವ) (ಜಗನ್ನಾಥ ವಿಜಯ)

(೨) ಉತ್ಸಾಹ : ಲಕ್ಷಣ :

ಪ್ರತಿ ಪಾದದಲ್ಲಿ ತ್ರಿಮಾತ್ರಾಗಣಗಳು 'ಏಳೂ, ಒಂದು ಗುರುವೂ ಇರುವ ನಾಲ್ಕು ಪಾದ ಗಳುಳ್ಳುದು.

ಉದಾ : - U - U -U -U - U - U - U -

ಅಂತ ಕಾಂತಕಂದಿಟಕ್ಕೆ ದೇವನೀನೆ ಭಾವಿಪಂ ।

- U - U - U -U - U UU U - U -

ದಂತರಿಂದೆ ಕಾವುದೆನ್ನ ನಾವತೆರದೊಳಂ ಭಯ ॥

ಭ್ರಾಂತನಂ ಬಳಿಕ್ಕ ಮೆಂತು ಮಾಪದರ್ಥಯುಕ್ತರೊಳ್ ।

ಶಾಂತಿಯಂಸಮಂತು ಮಾಡುವುದು ಗುಣಂ ಮಹತ್ತರಂ ॥

– ಇಲ್ಲಿ ಬರುವ ತ್ರಿಮಾತ್ರಾಗಣಗಳು ನಿಯತವಾಗಿ ಗುರು ಲಘು (- U) ಗಳಿರುವುದನ್ನು ನೋಡಿದರೆ ಮೂಲತಃ ಇದು ವರ್ಣವೃತ್ತವಿದ್ದು ಸ್ಫುಟವಾಗಿ ತ್ರಿಮಾತ್ರಾಗಣಗಳ ತಾಳಲಯವು ಎದ್ದು ತೋರುವುದರಿಂದ, ಮಾತ್ರಾ ಛಂದಸ್ಸಿಗೆ ತಿರುಗಿದೆ. ವರ್ಣವೃತ್ತಗಳಲ್ಲಿಯ 'ಉತ್ಸವ' ಎಂಬುದಕ್ಕೆ ಮತ್ತು ಅಂಶಛಂದಸ್ಸಿನ 'ಉತ್ಸಾಹ' ಕ್ಕೂ ಇದನ್ನು ಹೋಲಿಸಿ ನೋಡಬೇಕು. ಉತ್ಸಾಹ ರಗಳೆಯ ಎರಡೂ ಪ್ರಕಾರಗಳ ಪಾದಗಳು ಸೇರಿ ಒಂದು ಪಾದವಿಲ್ಲಿರುವುದನ್ನೂ ಗಮನಿಸಬೇಕು.

(೩) ಅಕ್ಕರಿಕೆ : ಲಕ್ಷಣ :

ಪ್ರತಿಪಾದದಲ್ಲಿ ಚತುರ್ಮಾತ್ರಾಗಣ ಆರೂ, ಮೇಲೊಂದು ಗುರುವೂ ಉಳ್ಳ ನಾಲ್ಕು ಪಾದಗಳುಳ್ಳದು :

ಉದಾ : UUUU UU- UUUU UU - UUUU - U U -

ಸುರನುತ ಚರಣೇ ವರಗುಣ ಭರಣೇ ಖರರುಚಿ ಬಿಂಬಗತೇ ।

UUUUUU- UUUUU U - UUUU - U U -

ಸರಸಿಜವದನೇ ಸುರುಚಿರವದನೇ ಪುರಹರಣಾಂಗಯುತೇ ॥

ಕರಧೃತನಲಿನೇ ಪರಿಹೃತನಲಿನೇ ಹರಿವಿಧಿಶಕ್ರನುತೇ ।

ಕರಿರಿಪುಗಮನೇ ಹರಿರಿಪುಶಮನೇ ಪೊರೆ ಗಿರಿರಾಜಸುತೇ ॥

– ಇಲ್ಲಿಯ ಲಘು ಗುರು ವಿನ್ಯಾಸದಲ್ಲಿ ಕಂಡುಬರುವ ನಿಯತತೆಯನ್ನು ಗಮನಿಸಿದಲ್ಲಿ ಮೂಲದಲ್ಲಿ ಇದು ವರ್ಣಗಣವಿದ್ದು ಅನಂತರ ಇಲ್ಲಿಯ ತಾಳಲಯದ ಸ್ಫುಟತ್ವದ ಪರಿಣಾಮವಾಗಿ ಮಾತ್ರಾ ಛಂದಸ್ಸಿಗೆ ತಿರುಗಿದ್ದುದಾಗಿರಬೇಕು. ಮತ್ತು ಕರ್ಣಾಟ ವಿಷಯಜಾತಿಗಳಲ್ಲಿಯೂ ನಾಗವರ್ಮನು ಒಂದು 'ಅಕ್ಕರಿಕೆ'ಯನ್ನು ಹೇಳಿದ್ದಾನೆ. ಅಲ್ಲಿ ವಿ+ಬ್ರ+ವಿ+ಬ್ರ+ವಿ+ರು ಹೀಗೆ ಅಂಶಗಣಗಳು ಬರುತ್ತವೆ. ಅಲ್ಲಿ 'ಸುರುಚಿರ ಮಾತ್ರೆ' ಗಳು ಶೋಭಿಸುವುವೆಂದು ಆತನು ಹೇಳಿದ್ದೂ ಅದು ಮಾತ್ರಾ ಛಂದಸ್ಸಿಗೆ ತಿರುಗಿರುವುದನ್ನು ಸ್ಪಷ್ಟಪಡಿಸುತ್ತದೆ.

(೪) ಲಯಗ್ರಾಹಿ : ಲಕ್ಷಣ :

ಪ್ರತಿ ಪಾದದಲ್ಲಿ ಪಂಚಮಾತ್ರಾಗಣಗಳು 'ಏಳೂ, ಚತುರ್ಮಾತ್ರಾಗಣ– ವೊಂದು ಇರುವ ನಾಲ್ಕು ಪಾದಗಳುಳ್ಳದು :

- U U U - U U U - U U U - U UU - U UU - U UU

ಒಂದು ದೆಸೆಯೊಳ್ ತುರುಕರೊಂದುಕಡೆಯೊಳ್ ಮೊರಸರೊಂದೆಸೆಯೊಳಾರೆಯರ

- U U U - -

ಬೃಂದಮಳವಿಂ ಬೇ ।

- U U U - UUU - U U U - UU U - U

ರೊಂದು ಬಳಿಯೊಳ್ ತಿಗುಳರೊಂದಿರವಿನೊಳ್ ಕೊಡಗರೊಂದು

U U - U U U - U U U - -

ಕೆಲದೊಳ್ ಮಲೆಪರೊಂದುವೆರೆದೆಲ್ಲರ್ ॥

ಸಂದಣಿಸಿ ಕಾಳೆಗಕೆ ಮುಂದುವರಿವನ್ನ ಮದಟಿಂದವರ ತಟ್ಟುಗಳ ಪಂದಲೆಗಳಂದಿ ।

ಗ್ಬಂದ ಬಲಿಯಿತ್ತು ನಲವಿಂದೆ ಚಿಕದೇವನೃಪನಂದ ಮಿಗೆ ಪೆರ್ಜಸಮ

ನೊಂದಿ ಸೊಗವಾಳ್ಗುಂ

(ಚಿಕ್ಕದೇವರಾಜ ಬಿನ್ನಪಂ)

– ಇಲ್ಲಿಯೂ ನಿಯತ ಲಘುಗುರುವಿನ್ಯಾಸವಿರುವ ಮಾತ್ರಾಗಣಗಳು ಬರುವುದನ್ನು ನೋಡಿದರೆ ಮೂಲದಲ್ಲಿ ಇದೂ ವರ್ಣವೃತ್ತವೇ ಎಂಬಲ್ಲಿ ಸಂದೇಹವಿಲ್ಲ. ಮಾತ್ರಾಗಣಗಳ ತಾಳಲಯವು ಎದ್ದು ತೋರುವುದರಿಂದ ಮಾತ್ರಾ ಛಂದಸ್ಸಿಗೆ ತಿರುಗಿದೆ.

೪. ಹಾಡುಗಳಲ್ಲಿಯ ಮಾತ್ರಾ ಬಂಧಗಳು

ಕನ್ನಡದಲ್ಲಿ ದ್ವಿಪದಿ, ಚೌಪದಿ, ಮುಂತಾದುವು ಹಾಡಿನ ರೂಪದಲ್ಲಿರುವುವು. ಇವುಗಳಲ್ಲಿ ಮಾತ್ರಾಗಣಗಳು ಕೆಲವೆಡೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಇನ್ನು ಕೆಲವೆಡೆಗಳಲ್ಲಿ ಹಾಡುವಾಗ ವರ್ಣಗಳನ್ನು ಹಿಗ್ಗಿಸುವ ಕುಗ್ಗಿಸುವ ಲಯವು ಕಂಡುಬರುವುದರಿಂದ ಅವು ಮೂಲದಲ್ಲಿ ಅಂಶ ಛಂದಸ್ಸಿಗೆ ಸೇರಿದುವೂ ಆಗಿರಬೇಕು ಎನಿಸುತ್ತದೆ :

(೧) ದ್ವಿಪದಿ : ಲಕ್ಷಣ : (೧) ಒಂದನೆಯ ರೀತಿ :

ಎರಡು ಪಾದಗಳುಳ್ಳುದು. ಇವುಗಳ ಪ್ರತಿ ಪಾದದಲ್ಲಿ ಪಂಚಮಾತ್ರಾಗಣಗಳು ಮೂರು ಮೇಲೊಂದು ಚತುರ್ಮಾತ್ರಾಗಣವೂ ಇರುವುದು.

ಉದಾ : - U - UU - U UU UU - U

ಮೋಸಗಾ ರರಕೂಡೆ ಬೆರಸದಿರ ಬೇಕು ।

- U - U U-U UUUUU - U

ಭಾಷೆ ಕೊಟ್ಟ ಬಳಿಕ್ಕ ನಿಜವಿರಲು ಬೇಕು ॥

ಪಾದದ ಕೊನೆಯ ಲಘುವನ್ನು ಗುರುವಾಗಿಸಿಕೊಂಡು ಹಾಡಬೇಕು.

(೨) ಎರಡನೆಯ ರೀತಿ : ಲಕ್ಷಣ :

ಇಲ್ಲಿ ಪ್ರತಿ ಪಾದದಲ್ಲಿಯೂ ತ್ರಿಮಾತ್ರಾಗಣದ ಮುಂದೆ ಚತುರ್ಮಾತ್ರಾಗಣ

ಬರುವಂತೆ ಮೂರು ಜತೆಗಳು ಬಂದು ಮೇಲೊಂದು ತ್ರಿಮಾತ್ರಾಗಣವೂ, ಗುರುವೂ ಇರುವುದು. (೩+೪+೩+೪+೩+೪+೩+ಗ)

ಉದಾ : UUU - - UUU - UU - U - - - U -
ಮಗನೆ ನೀನಿಂತಳಿಯೆ ಸೈರಿಪೆನೆಂತೊ ಪೇಳ್ಳೈ ಶಂಕರಾ
ಸುಗುಣನಿಧಿ ನೀನೆನ್ನ ಮೊರೆಗಳನೊರ್ಮೆ ಕೇಳೈ ಶಂಕರಾ ॥

(೨) ಚೌಪದಿ : ಲಕ್ಷಣ : ಒಂದನೆಯ ಪ್ರಕಾರ :

ಇದು ನಾಲ್ಕು ಪಾದಗಳುಳ್ಳದು. ಪ್ರತಿ ಪಾದದಲ್ಲಿ ಪಂಚಮಾತ್ರಾಗಣಗಳು ಮೂರೂ ಮತ್ತು ಚತುರ್ಮಾತ್ರಾಗಣವೊಂದು ಇರುತ್ತವೆ. ಹಿಂದೆ ಹೇಳಿದ ದ್ವಿಪದಿಯ ಇಮ್ಮಡಿ ಪಾದಗಳಿದ್ದು ಪ್ರತಿ ಪಾದದ ಲಕ್ಷಣವು ಒಂದೇ ಬಗೆಯದಾಗಿದೆ ಮತ್ತು ಅಂಶ ಛಂದಸ್ಸಿನ 'ಛಂದೋವತಂಸ' ವು ಮಾತ್ರಾಛಂದಸ್ಸಿಗೆ ತಿರುಗಿ ಈ ಚೌಪದಿಯಾಗಿರಬೇಕು :

ಉದಾ : - U UU U UU UU - U - - -
ಮೋಸದಲಿ ಕೊಲುವವಗೆ ಧರ್ಮ ತಾನೇಕೆ ? ।
- U - UU UUU - U U U - -
ಭಾಷೆ ತಪ್ಪುವ ನರಗೆ ನಂಬುಗೆಯದೇಕೆ ? ॥
ಕ್ಲೇಶ ಮನದಿರೆ ತೀರ್ಥಯಾತ್ರೆಗಳದೇಕೆ ? ।
ಆಶೆ ಬಿಡದಿರ್ದವಗೆ ಸನ್ಯಾಸವೇಕೆ ? ॥

(೩) ಇನ್ನೊಂದು ಪ್ರಕಾರದ ಮಟ್ಟು ಗೋವಿನ ಕಥೆಯದು.

ಇಲ್ಲಿ ಮೊದಲ ಮೂರು ಪಾದಗಳಲ್ಲಿ ೩ಮಾ+೪ಮಾ+೩ಮಾ+೪ ಮಾ ಹೀಗೆ ನಾಲ್ಕು ಮಾತ್ರಾಗಣಗಳಿದ್ದು ನಾಲ್ಕನೆಯ ಪಾದದಲ್ಲಿ ೩ಮಾ ೪ಮಾ+೩ಮಾ ಹೀಗೆ ಮೂರು ಮಾತ್ರಾಗಣಗಳೂ ಮೇಲೊಂದು ಗುರುವೂ ಇರುತ್ತವೆ.

ಉದಾ : UUU -UU - U U U -
ಧರಣಿ ಮಂಡಲ ಮಧ್ಯದೊಳಗೆ ।
ಮೆರೆಯುತಿಹ ಕರ್ಣಾಟ ದೇಶದಿ ॥
ಇರುವ ಕಾಳಿಂಗನೆಂಬ ಗೊಲ್ಲನ ।
U UU - - U - U -
ಪರಿಯ ನಾನೆಂತು ಪೇಳ್ವೆನು ॥
- U - . - U - U - -
ಸತ್ಯ ವೇ ನಮ್ಮ ತಾಯಿ ತಂದೆ ।
- U - - U - U UUU
ಸತ್ಯ ವೇ ನಮ್ಮ ಬಂಧು ಬಳಗ ॥
- U - U U -U UUUU
ಸತ್ಯ ವಾಕ್ಯಕೆ ತಪ್ಪಿ ನಡೆದರೆ ।

- U - UU- UU
ಮೆಚ್ಚ ನಾ ಜಗದೀಶನು ॥

– ಗೋವಿನ ಕಥೆಯ ಮಟ್ಟು ಮೂಲದಲ್ಲಿ ಅಂಶ ಛಂದಸ್ಸಿನದೇ ಇರಬೇಕು. ಬ್ರಹ್ಮ, ವಿಷ್ಣು ಗಣಗಳು ಮೂಲದಲ್ಲಿದ್ದು ಅವೇ ಮಾತ್ರಾಗಣಗಳಾಗಿ ಪರಿವರ್ತನೆ ಹೊಂದಿರಬೇಕು. ಯಾಕೆಂದರೆ ಇಲ್ಲಿಯ ಪಾದಗಳಲ್ಲಿ ಅಂಶಛಂದಸ್ಸಿನ ರಾಗಲಯವಿದೆ. ಅಲ್ಲಲ್ಲಿ ಲಘು ವರ್ಣಹಿಗ್ಗುವುದು, ಗುರುವರ್ಣ ಕುಗ್ಗುವುದು. 'ಸತ್ಯ ವೇ ನಮ್ಮ' ಎಂಬಲ್ಲಿ 'ನಮ್ಮ' ಎಂಬುದನ್ನು 'ನಮ ಎಂದು ಉಚ್ಚರಿಸುವುದುಂಟು. 'ಕಾಳಿಂಗ' ಎಂಬುದು ನೋಡಲು ೫ ಮಾತ್ರೆಯ ಗಣ. ಆದರೆ ಅದು ಅಂಶಛಂದಸ್ಸಿನ ವಿಷ್ಣುಗಣ (ಕಾಳಿಂಗ) ಇಲ್ಲಿ 'ಳಿಂ' ಎಂಬುದನ್ನು ಕುಗ್ಗಿಸಿ ಉಚ್ಚರಿಸಬೇಕಾಗುತ್ತದೆ. ಹಾಗೆಯೇ 'ನಾನೆಂತು' ಎಂಬುದೂ ವಿಷ್ಣುಗಣ. 'ನೆಂ' ಎಂಬುದನ್ನು ಕುಗ್ಗಿಸಿ ಉಚ್ಚರಿಸಬೇಕು.

೫. ಷಟ್ಪದಿಯ ಮಾತ್ರಾಬಂಧಗಳು

ಷಟ್ಪದಿಯ ಮಾತ್ರಾ ಬಂಧಗಳಿಗೆ ಮೂಲವಿರುವಿದು ಅಂಶ ಛಂದಸ್ಸು. ಕರ್ಣಾಟಕ ವಿಷಯ ಜಾತಿಗಳಲ್ಲಿ 'ಷಟ್ಪದಿ' ಎಂಬುದು ಒಂದು ಮಟ್ಟು. ಅದು ಕಾಲಾನಂತರದಲ್ಲಿ ಮಾತ್ರಾಲಯಕ್ಕೆ ತಿರುಗಿ ಆರು ಪ್ರಕಾರಗಳಲ್ಲಿ ಪರಿವರ್ತನ ಹೊಂದಿತು. ಈಗ ಈ ಆರು ಷಟ್ಪದಿ ಪ್ರಕಾರಗಳನ್ನು ಪರಿಶೀಲಿಸುವ.

ಷಟ್ಪದಿ ಎಂಬುದು ಆರು ಪಾದಗಳುಳ್ಳ ಮಾತ್ರಾವೃತ್ತ. ಇದರಲ್ಲಿ ೧, ೨, ೪, ೫ ನೆಯ ಪಾದಗಳು ಸಮಾನವಾಗಿಯೂ ಮೂರು ಮತ್ತು ಆರನೆಯ ಪಾದಗಳು ಮಿಕ್ಕ ಪಾದಗಳ ಒಂದೂವರೆಯಷ್ಟು ಗಣಗಳೂ ಮೇಲೊಂದು ಗುರುವೂ ಉಳ್ಳುವಾಗಿ ಇರುವವು. ಈ ನಿಯಮವು ಆರು ಪ್ರಕಾರದ ಷಟ್ಪದಿಗಳಿಗೆ ಸಮಾನವಾಗಿ ಅನ್ವಯಿಸುವುದು. ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂದು ಆರು ಪ್ರಕಾರದ ಷಟ್ಪದಿಗಳಿವೆ.

೧) ಶರಷಟ್ಪದಿ : ಲಕ್ಷಣ :

ನಾಲ್ಕು ಮಾತ್ರೆಯ ಗಣವು ೧, ೨, ೪, ೫ನೆಯ ಪಾದಗಳಲ್ಲಿ ಎರಡೆರಡು, ಮೂರು ಆರನೆಯ ಪಾದಗಳಲ್ಲಿ ಮೂರು ಮೂರು ಮೇಲೊಂದು ಗುರುವೂ ಉಳ್ಳುದು ಶರಷಟ್ಪದಿ. ಇದರಲ್ಲಿ ಲಘುವಿನ ಮುಂದೆ ಗುರುವಿನಿಂದ ಆರಂಭವಾಗುವ U - U ಈ ಗಣ ಬರಕೂಡದು.

ಉದಾ : - UU UU U U
ಈಶನ ಕರುಣೆಯ ।
- U U UU U U
ನಾಶಿಸು ವಿನಯದಿ ।

- UU - U U - U U -
ದಾಸನ ಹಾಗೆಯೆ ನೀ ಮನವೇ ॥
ಕ್ಲೇಶದ ವಿಧವಿಧ ।
ಪಾಶವ ಹರಿದು ವಿ ।
ಲಾಸದಿ ಸತ್ಯವ ತಿಳಿಮನವೇ ॥

(ಪದ್ಯಸಾರ)

೨) ಕುಸುಮ ಷಟ್ಪದಿ : ಲಕ್ಷಣ :

ಅಯ್ದು ಮಾತ್ರೆಯ ಗಣಗಳು ೧,೨, ೪, ೫ ನೆಯ ಪಾದಗಳಲ್ಲಿ ಎರಡೆರಡೂ ಮೂರು ಆರನೆಯ ಪಾದಗಳಲ್ಲಿ ಮೂರು ಮೂರು ಮೇಲೊಂದು ಗುರುವೂ ಇರಲು ಕುಸುಮ ಷಟ್ಪದಿ. ಇದರಲ್ಲಿ ಲಘುವಿನ ಮುಂದೆ ಗುರುವಿನಿಂದ ಆರಂಭವಾಗುವ U - U U , U - -ಈ ಗಣಗಳು ಬರಕೂಡದು.

ಉದಾ : - U U UUUUUU
ನಾಡುಮನಸಿಜನೊಲವಿ ।
- U U - U -
ನಾಡುವೆಡೆ ಸಂತತಂ ।
- U U UUUUU UUU U - U -
ಬೀಡು ರತಿಪತಿಗೆ ಸತತ ನಿಧಾನವು ॥
- U U UUUUUU
ನೋಡಿದ ನಿಮಿಷಪತಿಗೆ ।
ಮಾಡುವುದು ವಿನಯವನು ।
ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ ॥

(ಕುಮುದೇಂದು ರಾಮಾಯಣ)

೩) ಭೋಗ ಷಟ್ಪದಿ :

ಉದಾ : U UU - U - U- U
ಮೆರೆಯುತಿದ್ದ ಭಾಗ್ಯವೆಲ್ಲ ।
UUU - U UUU UUU
ಹರಿದು ಹೋಯಿತೆನುತ ತಿರುಕ ।
UUU - U - U - U U U U - U -
ಮರಳಿ ನಾಚಿ ಪೋಗುತಿದ್ದ ಮರುಳನಂತೆಯೆ ॥
ಧರೆಯ ಭೋಗವನ್ನು ಮೆಚ್ಚಿ ।
ಪರವ ಮರೆತು ಕೆಡಲು ಬೇಡ ।
ಧರೆಯ ಭೋಗ ಕನಸಿನಂತೆ ಕೇಳು ಮಾನವಾ ॥

(ಮುಪ್ಪಿನ ಷಡಕ್ಷರಿ)

– ಇಲ್ಲಿ ಮೂರು ಮಾತ್ರೆಯ ಗಣಗಳು ೧,೨, ೪, ೫ನೆಯ ಪಾದಗಳಲ್ಲಿ ನಾಲ್ಕು ನಾಲ್ಕು, ಮೂರು ಆರನೆಯ ಪಾದಗಳಲ್ಲಿ ಆರು ಆರು ಮೇಲೊಂದು ಗುರುವೂ ಬರುವವು. ಇಲ್ಲಿ ಲಘುವಿನ ಮುಂದೆ ಗುರುವಿನಿಂದ ಮೊದಲಾಗುವ ಗಣವು (U -) ಬರಕೂಡದು.

೪) ಭಾಮಿನೀ ಷಟ್ಪದಿ : ಲಕ್ಷಣ :

ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವ ಹಾಗೆ ಈ ಗಣಗಳ ಜೋಡಿಗಳು ೧,೨, ೪, ೫ನೆಯ ಪಾದಗಳಲ್ಲಿ ಎರಡೆರಡು, ಮೂರು ಆರನೆಯ ಪಾದಗಳಲ್ಲಿ ಮೂರು ಮೂರು ಮೇಲೊಂದು ಗುರುವೂ ಇರುವುದು ಭಾಮಿನೀ ಷಟ್ಪದಿ. ಇಲ್ಲಿ ಲಘುವಿನ ಮುಂದೆ ಗುರು ಬರುವಂತೆ ಆರಂಭವಾಗುವ U - । U - U । ಈ ಗಣಗಳು ಬರಕೂಡದು.

ಉದಾ : UUU UUU U - U - -
ಶರಧಿ ಶಯನ ಮುಕುಂದ ಕಂಸಾ ।
UU UUU UU - U - UU
ಸುರ ಮಥನ ಸುರ ಮೌನಿ ವಂದಿತ ।
UUU- U U - U - U U - U U U - -
ಗಿರಿಧರಾಚ್ಯುತ ವೇಣುನಾದ ವಿನೋದ ಭವದೂರ ॥
ಸರಸಿಜೋದ್ಭವ ನುತ ದಯಾಸಾ ।
ಗರ ಮುರಾಂತಕ ದೇವ ವರಪುರ ।
ದರಸ ಚೆನ್ನಿಗರಾಯ ಪಾಲಿಸು ಸಕಲಸಜ್ಜನರ ॥
(ನಳ ಚರಿತ್ರೆ)

೫. ಪರಿವರ್ಧಿನೀ ಷಟ್ಪದಿ : ಲಕ್ಷಣ :

ಚತುರ್ಮಾತ್ರಾಗಣಗಳು ೧, ೨, ೪, ೫ನೇ ಪಾದಗಳಲ್ಲಿ ನಾಲ್ಕು ನಾಲ್ಕು, ಮೂರು ಆರನೆಯ ಪಾದಗಳಲ್ಲಿ ಆರಾರೂ ಮೇಲೊಂದು ಗುರುವೂ ಬರಲು ಪರಿವರ್ಧಿನೀ ಷಟ್ಪದಿ. ಇದರಲ್ಲಿ ಲಘುವಿನ ಮುಂದೆ ಗುರು ಬರುವಂತೆ ಆರಂಭವಾಗುವ ಗಣ (U - U)ಬರ ಕೂಡದು.

ಉದಾ : UUU U - UUUUU - - U U
ದುರಿತವನಂ ಬೆಳೆವುದಕೆ ಪೊಲಂಕೊಲೆ ।
UUUUUU UU - UU UU -
ಪರಕಲಿಸಿದ ನವದೋಹಳಮನ್ನೃತಂ ।
UU - U U UU U UUU - - - UU - -
ಪರಿಕಾಲುದಕಮದ ಕೆ ಕಳವನ್ನಸ್ತ್ರೀ ಸಂಗಮೆಗೆಯ್ಮೆ ॥
ಪರಿರಕ್ಷಣೆಯತಿಕಾಂಕ್ಷೆಯದರಿನವು ।
ನಿರುತಂ ಪೊರ್ದದೊಡಿಲ್ಲಂ ಸಂಸ್ಕೃತಿ ।

ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ॥

೬) ವಾರ್ಧಕ ಷಟ್ಪದಿ : ಲಕ್ಷಣ :

ಪಂಚಮಾತ್ರಾಗಣಗಳು ೧, ೨, ೪, ೫ನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ ಮೂರು ಆರನೆಯ ಪಾದಗಳಲ್ಲಿ ಆರಾರೂ ಮೇಲೊಂದು ಗುರುವೂ ಬರಲು ವಾರ್ಧಕ ಷಟ್ಪದಿ ಎನಿಸುವುದು. ಇಲ್ಲಿ ಲಘುವಿನ ಮುಂದೆ ಗುರು ಬರುವಂತೆ ಆರಂಭವಾಗುವ ಈ U - U U । U - - ।ಗಣಗಳು ನಿಷಿದ್ಧ.

ಉದಾ : - U UU - UU U - U - U U U -
ಶ್ರೀವಧುವಿನಂಬಕ ಚಕೋರಕಂಪೊರೆಯೆ ಭ ।
- U UU - U U U - U - UUU UU
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ
- UUU UUU - - U - - U - - U - - UUU -
ತೀ ವಲಯದಮಲ ಸೌಭಾಗ್ಯರತ್ನಾಕರಂ ಪೆರ್ಚೆನಿಂ ಮೇರೆವರಿಯೆ ॥
ಆವಗಂ ಸರಸಕರುಣಾಮೃತದ ಕಳೆಗಳಿಂ ।
ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುವ ।
ದೇವಪುರ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ ॥
(ಜೈಮಿನೀ ಭಾರತ)

೭. ಧವಲ : ಲಕ್ಷಣ :

ಇದೊಂದು ಮಾತ್ರಾವೃತ್ತ. ಪ್ರಾಕೃತಭಾಷೆಯಲ್ಲಿ ವಿಶೇಷವಾಗಿ ಪ್ರಯೋಗದಲ್ಲಿದೆ. ಇದರಲ್ಲಿ ೪, ೬, ಮತ್ತು ೮ ಪಾದಗಳ ಮೂರು ಮುಖ್ಯ ಪ್ರಕಾರಗಳಿವೆ. ಅವುಗಳಲ್ಲಿ ಬೇರೆ ಬೇರೆ ಹೆಸರಿನ ಒಳಭೇದಗಳೂ ಇವೆ. ಇವುಗಳ ಲಕ್ಷಣ ಎಲ್ಲ ಕಡೆಯೂ ಒಂದೇ ರೀತಿಯಲ್ಲಿ ಉಲ್ಲೇಖವಾಗಿಲ್ಲ. ಇವು ಶ್ರೇಷ್ಠ ಪುರುಷನ ಗುಣಮಹಿಮೆಗಳ ಸಂಕೀರ್ತನೆಗಾಗಿ, ಹೆಚ್ಚಾಗಿ ಹರಕೆಗಳಲ್ಲಿ, ವಿವಾಹ, ಉತ್ಸವ ಮುಂತಾದ ಶುಭ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ಇದು ಗೇಯವಾದ ಛಂದಸ್ಸು. ರಾಗತಾಲಗಳ ಕಟ್ಟುಕಟ್ಟಳೆಗಳ ಬಿಗಿಯಿಲ್ಲ, ಸ್ಪರ್ಶವಿದೆ. ಕನ್ನಡ ಮತ್ತು ತೆಲುಗುಗಳಲ್ಲಿ ಧವಲದ ಹಾಡುಗಳು ಜನಪದ ಸಾಹಿತ್ಯದಲ್ಲಿ, ಸಂಪ್ರದಾಯದ ಹಾಡುಗಳಲ್ಲಿ ಇವೆ.

ಉದಾ : - UUUU - - -
ಈ ಧವಳವ ಹೇಳ್ದೋರು ।
- UUUU - - -
ಈ ಧವಳವ ಕೇಳ್ದೋರು ॥
- - UU U U - -
ಶ್ರೀರಂಗನ ಒಲವಿಂದ ।

- - UU - - -
ವೈಕುಂಠಕೆ ಹೋಗೋರು ॥

— ಇಲ್ಲಿ ಪ್ರಾಸ ಐಚ್ಛಿಕ ಷಣ್ಮಾತ್ರಾ ಲಯವಿಲ್ಲಿದೆ. ಷಣ್ಮಾತ್ರಾಲಯದ ಹೊಸಗನ್ನಡ ಕವಿತೆಗಳಲ್ಲಿ ಕೆಲವನ್ನು ತಕ್ಕ ವ್ಯತ್ಯಾಸದಿಂದ ರೂಪಿಸಿದರೆ 'ಧವಳದ ಹಾಡು' ಗಳೆಂದು ಕರೆಯಲು ಸಾಧ್ಯವಾಗುವುದೆಂದು 'ಶ್ರೀ' ಯವರ 'ಅಶ್ವತ್ಥಾಮನ', ಕುವೆಂಪು ಅವರ 'ಪ್ರೇಮಕಾಶ್ಮೀರ' ಪು.ತಿ.ನ ಅವರ 'ಹಣತೆ', 'ಮಾಂದಳಿರು' — ಈ ಕೃತಿಗಳಿಂದ ಉದ್ಧರಿಸಿ ಡಿ.ಎಲ್.ಎನ್. ಅವರು 'ಧವಳ' ವೆಂಬ ಮಾತ್ರಾವೃತ್ತದ ಸ್ವರೂಪ ಲಕ್ಷಣಗಳನ್ನು ವಿಶದಪಡಿಸಿದ್ದಾರೆ. ಅಶ್ವತ್ಥಾಮನ್ ನಾಟಕದ ಈ ಪಂಕ್ತಿಗಳನ್ನು ನೋಡಬಹುದು.

- UU UU - UU UU U U U UUU UU - -
ಚೆಲ್ವಿನ ನೆಲೆ । ಕಣ್ಗಳ ಬಲೆ । ಸುಖದೊ ರತೆಯ । ಬನವಾಸೀ ।

೮) ಸೀಸ ಪದ್ಯ :

'ಸೀಸ' ಪದದ ಮೂಲ ಶೀರ್ಷ (=ಶೀರ್ಷಕ) ಎಂದು ತೋರುತ್ತದೆ. ಶೀರ್ಷಕ ಎಂಬುದು ಪ್ರಾಕೃತ ಭಾಷೆಯಲ್ಲಿ ಒಂದು ಮಾತ್ರಾವೃತ್ತ. ಇದರ ಲಕ್ಷಣವನ್ನು ಛಂದೋಂಬುಧಿಯಲ್ಲಿ ಮತ್ತು 'ಕವಿಜಿಹ್ವಾಬಂಧನ' ದಲ್ಲಿ ಕಂದಪದ್ಯದಲ್ಲಿ ಹೀಗೆ ಹೇಳಿದೆ :

ಪುರುಹೂತಗಣಗಳಾರುಂ ।
ಸರಸಿಜ ಸಖಗಣಗಳೆರಡು ಸಂಧಿಸಿ ಬರ್ಕುಂ ॥
ಚರಣಕ್ಕೆ ಸೀಸದಂತದೊ ।
ಳೊರೆ ಗೀತೆಯ ಸರಳಮಪ್ಪೊಲೋದುವ ತೆರದಿಂ ॥

— ಇದರಲ್ಲಿ ಆರು ವಿಷ್ಣುಗಣಗಳು, ಎರಡು ಬ್ರಹ್ಮಗಣಗಳು ಬರುವವು. ಕನ್ನಡ ಕೈಪಿಡಿಕಾರರು ಇದು ಮಾತ್ರಾ ಛಂದಸ್ಸಿಗೆ ತಿರುಗಿರುವಂತೆ ಪಂಚಮಾತ್ರಾಗಣಗಳು ಆರು ಮತ್ತು ತ್ರಿಮಾತ್ರಾ ಗಣಗಳು ಎರಡು ಎಂದೂ ಲಕ್ಷಣವನ್ನು ಹೇಳಿದ್ದಾರೆ. ಸೀಸ ಪದ್ಯದ ಲಕ್ಷಣವು ಮಾತ್ರಾ ಮತ್ತು ಅಂಶಗಣಗಳ ನಡುವೆ ತುಯ್ದಾಡುತ್ತಿರುವಂತೆ ಕಾಣುತ್ತದೆ.

ಉದಾ : - U - UU-U - U - UU -U - U - U
ತಿಂಗಳಂ । ತಳೆದಿತ್ತ । ರಂಗಮಂ । ಗಳ ಕರ್ತ । ತುಂಗ ಸೂ । ರ್ಯ
U -U UUU - U
ಸುಭರ್ತ । ತಮಸ ನಾಶ ॥

ಇದರ ಗತಿ ಅಂಶಛಂದಸ್ಸಿನ ರಾಗಲಯದಲ್ಲೇ ಇರುವಂತೆ ತೋರುತ್ತದೆ. ೫ ಮಾತ್ರೆಯ ಗಣಗಳೆಂದು ಸೂಚಿಸಿರುವ ಗಣಗಳು ವಿಷ್ಣು ಗಣಗಳೆಂದೂ ಕೊನೆಯ ಎರಡು ತ್ರಿಮಾತ್ರೆಗಳ ಗಣಗಳನ್ನು ಒಂದು ರುದ್ರಗಣವೆಂದೂ ಭಾವಿಸಬಹುದಾಗಿದೆ. ಇದು ಪಿರಿಯಕ್ಕರವನ್ನು ಹೋಲುತ್ತದೆ. ಮೊದಲ ಗಣವು ಸೀಸದಲ್ಲಿ ವಿಷ್ಣುವಾಗಿದ್ದರೆ ಪಿರಿಯಕ್ಕರದಲ್ಲಿ ಅದು ಬ್ರಹ್ಮ.

ಅಧ್ಯಾಯ : ೪

ಅಚ್ಚಗನ್ನಡ ಅಥವಾ ದ್ರಾವಿಡ ಭಾಷಾ ಛಂದಸ್ಸು

ಮುಖ್ಯಾಂಶಗಳು :

೧. ಹಿನ್ನೆಲೆಯ ವಿವರ

೨. ಕರ್ಣಾಟಕ ವಿಷಯ ಜಾತಿ : ತ್ರಿಮೂರ್ತಿ ಗಣಗಳು, ಪ್ರಕಾರಗಳು : ಅಂಶಗಣಗಳ ಸ್ವರೂಪ ವಿಚಾರ : ಅಂಶಗಣಗಳು ಮಾತ್ರಾಗಣಗಳಾಗಿ ಪರಿವರ್ತನೆ : (೧) ಮದನವತಿ (೨) ಅಕ್ಕರ : ಐದು ಪ್ರಕಾರಗಳು, ಪಿರಿಯಕ್ಕರ (೩) ಚೌಪದಿ (೪) ಗೀತಿಕೆ (೫) ಏಳೆ (೬) ತಿವದಿ : ಚಿತ್ರಂ, ವಿಚಿತ್ರಂ ಪ್ರಕಾರಗಳು, ಜಯಕೀರ್ತಿ, ೩ನೆಯ ಸೋಮೇಶ್ವರ, ಶಾರ್ಙ್ಗದೇವ ಇವರ ವಿಚಾರ: ತ್ರಿಪದಿಯ ಚರಿತ್ರೆ:ಅದರ ಮಾರ್ಪಾಟು (೭) ಉತ್ಸಾಹ : ವರ್ಣವೃತ್ತ, ಮಾತ್ರಾ ವೃತ್ತದ ಉತ್ಸಾಹದೊಂದಿಗೆ ಹೋಲಿಕೆ (೮) ಷಟ್ಪದ : ಜಯಕೀರ್ತಿ ಮೊದಲಾದವರು ಹೇಳುವ ಲಕ್ಷಣ ವಿಚಾರ : ಷಟ್ಪದದ ಚರಿತ್ರೆ (೯) ಅಕ್ಕರಿಕೆ : ಲಕ್ಷಣ ವಿಚಾರ, ಮಾತ್ರಾವೃತ್ತದ ಅಕ್ಕರಿಕೆಯೊಂದಿಗೆ ಹೋಲಿಕೆ (೧೦) ಛಂದೋವತಂಸ : ಲಕ್ಷಣ ವಿಚಾರ: ಆದಿವರಾಹ ಪ್ರಕಾರ (೧೧) ಸಾಂಗತ್ಯ : ಹಿನ್ನೆಲೆ : ಚರಿತ್ರೆ : ಲಕ್ಷಣ : ಮೂಲ, – ಸ್ವರೂಪ ವಿಚಾರ, ಸಾಂಗತ್ಯ ಪದದ ನಿಷ್ಪತ್ತಿ.

★★★

ರ . ರ ರ

- U - - U -- U - - U - - U - - U -

ವಿಗ್ರಹೋಲ್ಲಾಸ ಲಕ್ಷ್ಮೀಮನೋನಾಥನಾಭೀ ಸರೋಜಾತಜಾ

- U U - U - - U - - U U - -U - U U

ತಾಂಡಮಧ್ಯೋಲ್ಲ ಸದ್ದೇಶ ಕರ್ನಾಟಕವೆಂಬಲ್ಲಿ ಬಲ್ಲಂಥ

- - U - - U - - U - - U

ಪಂಪಾ ಸರೋವಾಮಷಟ್ಕೋಶ ದೂರ್ದಲ್ಲಿ – – –

(ಮಧ್ವಾರ್ಯ ಸಿದ್ಧಾಂತ ಸದ್ದಂಡಕ)

ಶ್ರೀಪಾದರಾಯರ ಒಂದು ದಂಡಕದ ಪಾದಗಳು :

- U - - U - - U - - U -

ಶ್ರೀರಮಾಮಾನಿನೀ ಮಾನಸೇಂದ್ರೀವರೋ

- U - - U - - U - - U -

ತ್ಫುಲ್ಲ ಸಂಫುಲ್ಲ ಚಂದ್ರಾ ಚಿದಾನಂದ ಸಾಂ

– ಇದು ರಗಳೆಯ ರೀತಿಯಲ್ಲಿ ಅಚ್ಚಾಗಿದೆ. ಮೂಲ ಹಸ್ತಪ್ರತಿಯಲ್ಲೂ ಇದು ಹೀಗೆಯೇ ಇದ್ದಿರಬಹುದೆಂದು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಹೇಳುತ್ತಾರೆ. ಇದರ ಒಂದು ವಿಶೇಷವೆಂದರೆ ಪಿಂಗಲಾದ್ಯರಾಗಲಿ ನಾಗವರ್ಮನಾಗಲಿ ಹೇಳುವ ದಂಡಕದ ಲಕ್ಷಣ ಇಲ್ಲಿ ಕಾಣದು. ಆದಿಲಘುನಿಯಮವಾಗಲಿ ಚತುಷ್ಪಾದ ನಿಯಮವಾಗಲಿ ಇಲ್ಲಿ ಇಲ್ಲ. 'ರಗಣ'ಗಳ ಪರಂಪರೆಯಿದೆ.

★★★

೧. ಹಿನ್ನೆಲೆಯ ವಿವರ

ಅಚ್ಚಗನ್ನಡ ಛಂದಸ್ಸನ್ನು ಅಂಶಛಂದಸ್ಸು ಎಂದು ಕರೆಯಬಹುದು. ಕನ್ನಡ ಭಾಷೆ , ಸಂಸ್ಕೃತ, ಪ್ರಾಕೃತಗಳ ಸಂಪರ್ಕ ಉಂಟಾಗಿರದ ಮುಂಚೆಯೇ ಅಂಶಛಂದಸ್ಸು ಕನ್ನಡ ಜನತೆಯಲ್ಲಿ ರೂಢಿಯಲ್ಲಿತ್ತು. ಕ್ರಿ.ಶ. ದ ಆದಿ ಭಾಗದಲ್ಲೆ ಕನ್ನಡ ನುಡಿ ಮತ್ತು ಅದರದೇ ಆದ ದೇಸಿ ಸಾಹಿತ್ಯ ಇದ್ದುವೆಂದು ವಿದ್ಯಾಂಸರನೇಕರು ಅಭಿಪ್ರಾಯಪಟ್ಟಿದ್ದಾರೆ. ಬಾದಾಮಿಯ ೭ನೆಯ ಶತಮಾನದ ತಟ್ಟುಕೋಟೆ ಶಾಸನದಲ್ಲಿಯ ಮೂರು ತ್ರಿಪದಿಗಳಿಂದ ಅಂಶಛಂದಸ್ಸಿನ ಚರಿತ್ರೆ ಆರಂಭವಾಗಿದೆಯೆಂದು ಈಗಿನ ಮಟ್ಟಿಗೆ ಹೇಳಬಹುದಾಗಿದೆ. ತ್ರಿಪದಿಯಂತೆ ಪಿರಿಯಕ್ಕರವೂ ಶಾಸನಗಳಲ್ಲಿ ೯ ರಿಂದ ೧೨ನೆಯ ಶತಕದವರೆಗೆ ಕಂಡುಬಂದಿದೆ. ಹಾಗೆಯೇ ಮೂಲ ಷಟ್ಪದವೂ ಜನತೆಯ ನಾಲಗೆಯ ಮೇಲೆ ಬಳಕೆಯಾಗುತ್ತಿರಬೇಕು. ನಾಗವರ್ಮನು ಅದರ ಲಕ್ಷಣವನ್ನು ಹೇಳಿರುವನೆಂದಮೇಲೆ ಅವನಿಗಿಂತ ಮೊದಲೇ ಅದು ಪ್ರಚಲಿತವಿದ್ದಿರಬೇಕೆಂಬಲ್ಲಿ ಸಂದೇಹವಿಲ್ಲ. ಆದರೆ ಅದರ ಪ್ರಯೋಗವು ೧೧ ನೆಯ ಶತಕಕ್ಕೆ ಮುಂಚೆ ಶಾಸನಗಳಲ್ಲಿ ಉಪಲಬ್ಧವಾಗಿಲ್ಲ. ೧೨ ನೆಯ ಶತಕದ ಉತ್ತರಾರ್ಧದ ಕಾಲದಲ್ಲಿ ಮೂಲ ಷಟ್ಪದವು ತನ್ನ ಅಂಶಗಣದ ರಾಗಲಯವನ್ನು ಕಳೆದುಕೊಂಡು ಮಾತ್ರಾಲಯಕ್ಕೆ ಪರಿವರ್ತನಗೊಂಡು, ಒಂದಿದ್ದುದು ಆರು ಪ್ರಕಾರಗಳಾಗಿದ್ದುದನ್ನು ಈ ಮೊದಲೆ ವಿಶದಪಡಿಸಿದ್ದಾಗಿದೆ. ಈಗ ನಾಗವರ್ಮನು 'ಕರ್ಣಾಟ ವಿಷಯಜಾತಿ' ಯೆಂದು ಹೆಸರಿಸಿ ಅಂಶಛಂದಸ್ಸಿನ 'ಮಟ್ಟು' ಗಳನ್ನು ಲಕ್ಷಣ–ಲಕ್ಷ್ಯ ಸಮನ್ವಿತವಾಗಿ ವಿವರಿಸಿದ್ದನ್ನು ಪರಿಶೀಲಿಸುವ . ಆರಂಭದಲ್ಲಿ ನಾಗವರ್ಮನು ೧ನೆಯ ಅಧಿಕಾರದಲ್ಲಿ ಹೀಗೆ ಹೇಳಿದ್ದಾನೆ :

ಇಂದುಧರನುಮೆಗೆ ಪೇಳ್ದಾ ।
ಛಂದಂ ಪಿಂಗಳನಿನವನಿಯೊಳ್ ಪರಪಿದೊಡಾ ॥
ಛಂದೋಂಬುರಾಶಿಯೊಳ್ ಮೊಗೆ ।
ತಂದದನಾತ್ಮೀಯ ಸತಿಗೆ ನಾಕಿಗನುಸಿರ್ದಂ ॥

– ನಾಗವರ್ಮನು ತನ್ನ ಹಿಂದೆ ಕನ್ನಡದಲ್ಲಿದ್ದಿರಬಹುದಾದ 'ಗುಣಗಾಂಕೀಯ' ಮುಂತಾದ ಯಾವ ಕನ್ನಡ ಛಂದೋ ಗ್ರಂಥಗಳನ್ನೂ ಉಲ್ಲೇಖಿಸದೆ ಸಂಸ್ಕೃತದ ಪಿಂಗಳನನ್ನು ಆಧರಿಸಿ ವಿವರಿಸುವುದಾಗಿ ಹೇಳುತ್ತಾನೆ. ಆ ಪ್ರಕಾರ ಸಂಸ್ಕೃತ, ಪ್ರಾಕೃತಗಳಲ್ಲಿಯ ಸರ್ವ ವಿಷಯ ಭಾಷಾ ಜಾತಿಗಳಾದ ವೃತ್ತ, ಸ್ಕಂಧಕಾದಿಗಳನ್ನು ನಿರ್ದೇಶಿಸಿ ಕನ್ನಡದಲ್ಲಿರುವ ಛಂದಃಪ್ರಕಾರಗಳನ್ನು ಹೀಗೆ ಹೆಸರಿಸುತ್ತಾನೆ :

೨. ಕರ್ಣಾಟ ವಿಷಯಜಾತಿ

ಮದನವತಿಯಕ್ಕರಂ, ಚೌ ।
ಪದಿ, ಗೀತಿಕೆ, ಯೇಳೆ, ತಿವದಿ, ಯುತ್ಸಾಹಂ, ಷ ॥

ಟ್ಪದಿ, ಯಕ್ಕರಿಕೆ, ಕರಂ ಚೆ ।
ಲ್ವೊದವಿದ ಛಂದೋವತಂಸಮಬ್ಜದಾಳಕ್ಷೀ ॥

– ಇವು 'ಕರ್ಣಾಟ ವಿಷಯ ಜಾತಿ' ಗಳು (೧) ಮದನವತಿ (೨) ಅಕ್ಕರಂ (೩) ಚೌಪದಿ (೪) ಗೀತಿಕೆ (೫) ಏಳೆ (೬) ತಿವದಿ (ತ್ರಿಪದಿ) (೭) ಉತ್ಸಾಹಂ (೮) ಷಟ್ಪದಿ (ಷಟ್ಪದ), (೯) ಅಕ್ಕರಿಕೆ (೧೦) ಛಂದೋವತಂಸ – ಹೀಗೆ ಇವು ಹತ್ತೆಂದು ನಾಗವರ್ಮ ಹೇಳಿದರೆ ನಾಗವರ್ಮನ ಛಂದೋಂಬುಧಿಯನ್ನೇ ಆಧರಿಸಿ 'ಛಂದೋನುಶಾಸನ' ವನ್ನು ರಚಿಸಿದ ಜಯಕೀರ್ತಿ ಉತ್ಸಾಹವೊಂದನ್ನುಳಿದು ಒಂಭತ್ತು 'ಕರ್ಣಾಟ ಭಾಷಾ ವಿಷಯಜಾತಿ' ಗಳನ್ನು ವಿವರಿಸುತ್ತಾನೆ.

೧೦ನೆಯ ಶತಕದವರೆಗೆ ಶಾಸನಗಳಲ್ಲಿ ಪಂಪಾದಿ ಚಂಪೂ ಕವಿಗಳಲ್ಲಿ ಮತ್ತು ನಾಗವರ್ಮನಲ್ಲಿ ಕಾಣದೊರೆಯುವ ಮುಖ್ಯ ಅಂಶಛಂದಸ್ಸಿನ ಪದ್ಯಗಳೆಂದರೆ (೧) ತ್ರಿಪದಿ, (೨) ಅಕ್ಕರ (ಪಿರಿಯಕ್ಕರ) (೩) ಷಟ್ಪದಿ ಇತ್ಯಾದಿ.

ಈ ಮೊದಲೆ ಅಂಶಛಂದಸ್ಸಿನ ತ್ರಿಮೂರ್ತಿಗಣಗಳ ಸ್ವರೂಪವನ್ನೂ ಪ್ರಕಾರಗಳನ್ನೂ ವಿವರಿಸಿದ್ದಾಗಿದೆ. ಬ್ರಹ್ಮ, ವಿಷ್ಣು, ರುದ್ರ ಗಣಗಳಿಗೆ ತೆಲುಗಿನಲ್ಲಿ ಕ್ರಮವಾಗಿ ಸೂರ್ಯ, ಇಂದ್ರ, ಚಂದ್ರ ಗಣಗಳೆಂದು ಹೇಳುತ್ತಾರೆ. ತಮಿಳಿನಲ್ಲಿ ಈರಶೈಶೀರ್, ಮೂವಶೈಶೀರ್, ನಾಲಶೈಶೀರ್ ಎಂದು ಕರೆದಿದ್ದಾರೆ. ಜಯಕೀರ್ತಿ ಸಂಸ್ಕೃತದಲ್ಲಿ ರತಿ, ಮದನ, ಶರ ಎಂದು ಹೆಸರಿಸಿದ್ದಾನೆ.

ತಮಿಳಿನ 'ಅಶೈ' ಪದವನ್ನನುಸರಿಸಿ 'ಅಂಶ' ಪದವನ್ನು 'ಶ್ರೀ' ಯವರು ಕಲ್ಪಿಸಿದ್ದಾರೆ. ಗಣದಲ್ಲಿ ಅಂಶಗಳಿರುತ್ತವೆ. ಇಲ್ಲಿ ಗಣಕ್ಕೆ ಮೂಲಾಂಶ ಒಂದು ಗುರು (–) ಲಘುವಲ್ಲ, ಇದೇ ಗಣವಾಗಲಾರದು. ಆದರೆ ಪಾದದ ಕೊನೆಯಲ್ಲಿ ಗಣಸ್ಥಾನದಲ್ಲಿ ನಿಲ್ಲಬಹುದು. (– ಷಟ್ಪದಿಯ ಅರ್ಧದ ಕೊನೆಯಂತೆ)

ಅಂಶಗಣಗಳ ಸ್ವರೂಪ ವಿಚಾರ :

ಮೊದಲಿನ ಮೂಲಾಂಶವಾದ ಗುರುವಿಗೆ ಒಂದು, ಎರಡು, ಮೂರು ಗುರುಗಳನ್ನು ಎಂದರೆ ಅಂಶಗಳನ್ನು ಸೇರಿಸಿ ಬ್ರಹ್ಮ (- . -) ವಿಷ್ಣು (- . - . -) ರುದ್ರ, (- . - . - . -) ಗಣಗಳನ್ನು ಮಾಡಿಕೊಳ್ಳಲಾಗಿದೆ.

ಎರಡು ಅಂಶಗಳುಳ್ಳ ಬ್ರಹ್ಮಗಣವು ನಾಲ್ಕು ಬಗೆಯದು; ಮೂರು ಅಂಶಗಳ ವಿಷ್ಣುಗಣವು ಎಂಟು ಬಗೆಯದು, ಮತ್ತು ನಾಲ್ಕು ಅಂಶಗಳ ರುದ್ರಗಣವು ಹದಿನಾರು ಬಗೆಯದು ಇರುತ್ತವೆ. ಈ ಮೊದಲೇ ಪ್ರತಿಯೊಂದು ಗಣದ ಈ ಪ್ರಕಾರಗಳನ್ನು ತೋರಿಸಲಾಗಿದೆ. ಆದರೂ ಇಲ್ಲಿ ಮತ್ತೊಮ್ಮೆ ಸಂಗ್ರಹವಾಗಿ ನೋಡುವ :

ಗಣದ ಮೊದಲನೆಯ ಅಂಶಕ್ಕೆ ಮಾತ್ರ ಒಂದು ಗುರುವಿಗೆ ಬದಲಾಗಿ ಎರಡು ಲಘುಗಳನ್ನು ಹಾಕಬೇಕು. ಎರಡನೆಯ, ಮೂರನೆಯ, ನಾಲ್ಕನೆಯ ಸ್ಥಾನಗಳಲ್ಲಿ ಒಂದು ಲಘುವಿರಲಿ, ಒಂದು ಗುರುವಿರಲಿ – ಅವು ಒಂದೊಂದು ಅಂಶ ಎನಿಸಿಕೊಳ್ಳುವುವು.

ನಾಲ್ಕು ಬ್ರಹ್ಮಗಣ ಪ್ರಕಾರಗಳು : (ಒಂದು ಮೂಲಾಂಶಕ್ಕೆ ಒಂದು ಗುರು ಇಲ್ಲವೆ ಒಂದು ಲಘು ಸೇರಿ)

ಅಂಶ :	೧	೨
೧)	– .	–
೨)	U U .	–
೩)	– .	U
೪)	U U .	U

ಎಂಟು ವಿಷ್ಣುಗಣ ಪ್ರಕಾರಗಳು : (ಮೇಲಿನ ನಾಲ್ಕು ಬ್ರಹ್ಮಗಳಿಗೆ ಒಂದು ಗುರು ಇಲ್ಲವೆ ಒಂದು ಲಘು ಸೇರಿ)

ಅಂಶ :	1		2		3
1)	–	.	–	.	–
2)	–	.	–	.	U
3)	U U	.	–	.	–
4)	U U	.	–	.	U
5)	–	.	U	.	–
6)	–	.	U	.	U
7)	U U	.	U	.	–
8)	U U	.	U	.	U

ಹದಿನಾರು ರುದ್ರಗಣ ಪ್ರಕಾರಗಳು : (ಮೇಲಿನ 8 ವಿಷ್ಣುಗಳಿಗೆ ಒಂದು ಗುರು ಇಲ್ಲವೆ ಒಂದು ಲಘು ಸೇರಿ)

ಅಂಶ :	1		2		3		4
1)	–	.	–	.	–	.	–
2)	–	.	–	.	–	.	U
3)	U U	.	–	.	–	.	–
4)	U U	.	–	.	–	.	U

ಹೀಗೆಯೇ ಮುಂದೆ ಸಾಗಬೇಕು.

ಮೂಲಾಂಶದ ಮೇಲೇರಿದ ಅಂಶಗಳಿಗೆ ಬದಲಾಗಿ (ಎಂದರೆ ಒಂದೊಂದು ಅಂಶಕ್ಕೆ) ಎರಡು ಲಘುಗಳನ್ನು ಇಡಕೂಡದು. ಮೊದಲನೆಯ ಅಂಶವು ಮಾತ್ರ ಒಂದು ಗುರು (–) ಇಲ್ಲವೆ ಎರಡು ಲಘು (UU) ಮುಂದಿನವು ಒಂದು ಗುರುವಿರಲಿ, ಒಂದು ಲಘುವಿರಲಿ ಅವು ಒಂದೊಂದು ಅಂಶ ಎನಿಸುತ್ತವೆ. ಅಂಶಗಣಗಳು ಶುದ್ಧವಾಗಿ ಹಾಗೇ ಇರುವವರೆಗೂ ಈ ನಿಯಮವಿತ್ತು. ಆದರೆ ಕಾಲಕ್ರಮೇಣ ಮೊದಲನೆಯ ಸ್ಥಾನದಂತೆ ಮಿಕ್ಕ ಸ್ಥಾನಗಳಲ್ಲೂ ಮುಂದಿನ ಸ್ಥಾನಗಳಲ್ಲಿಯ ಗುರುವಿಗೆ ಬದಲಾಗಿ ಎರಡು ಲಘುಗಳನ್ನು ಇಡುವ ರೂಢಿ ಹಬ್ಬಿಕೊಂಡು ಅಂಶಗಣವಾಗಿದ್ದದ್ದು ಮಾತ್ರಾಗಣವಾಗಿ ಪರಿಣಮಿಸಿತು. ಆಗ ಬ್ರಹ್ಮ, ವಿಷ್ಣು,ರುದ್ರ, ಎಂಬ ಎರಡು ಮೂರು, ನಾಲ್ಕು ಅಂಶಗಳ ಗಣಗಳು ಹೋಗಿ 3, 4, 5 ಮಾತ್ರೆಗಳುಳ್ಳ ಗಣಗಳು ಉಳಿದುವು. ಇವಕ್ಕೆ ಉತ್ಸಾಹಗಣ,ಮಂದಾನಿಲಗಣ, ಲಲಿತಗಣ ಎಂದು ಅಯಾ ರಗಳೆಗಳ ಮೇಲೆ ಹೆಸರು ಕಟ್ಟಬಹುದೆಂದು ಕನ್ನಡ ಕೈ ಪಿಡಿಕಾರರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯವಾಗಿ ಇಷ್ಟನ್ನು ಗಮನಿಸಬೇಕು (೧) ಬ್ರಹ್ಮಗಣವು ಎರಡು ಅಂಶಗಳುಳ್ಳದು,(– –)ವಿಷ್ಣುಗಣ ಮೂರಂಶಗಳುಳ್ಳದು (– – –) ಮತ್ತು ರುದ್ರಗಣ ನಾಲ್ಕು ಅಂಶಗಳುಳ್ಳದು (– – – –)ಮತ್ತು (೨) ಯಾವುದೇ ಗಣದ ಮೊದಲನೆಯ ಅಂಶವು ಒಂದು ಗುರು (–) ಅಥವಾ ಎರಡು ಲಘು (UU) ವಾಗಿರಬೇಕು. ಮಿಕ್ಕ ಅಂಶಗಳು ಒಂದೊಂದೂ ಒಂದು ಗುರು ಅಥವಾ ಒಂದು ಲಘುವಾಗಿರಬೇಕು.

ಅಂಶಗಣಗಳು ಕಾಲ ಕ್ರಮೇಣ ಮಾತ್ರಾಗಣಗಳಾದುವು. ಮೊದಲನೆಯ ಅಂಶಕ್ಕೆ (–) ಮಾತ್ರ ಎರಡು ಲಘುಗಳ (UU) ಸಮಾನತೆ ಇದ್ದದ್ದು ಮುಂದಿನ ಸ್ಥಾನಗಳಿಗೂ ಹರಡಿ ಅಂಶಗಣಗಳು ಮಾತ್ರಾಗಣಗಳಾಗುವುದಕ್ಕೆ ಆಸ್ಪದವುಂಟಾಗಿರಬಹುದೆಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

(೧) ಮದನವತಿ : ನಾಗವರ್ಮನು ಕೊಡುವ ಲಕ್ಷಣ ಪದ್ಯ :

UUUU -U U UUUU UUUU UU UU -
ಮದನನ ತಂದೆಯ ಗಣಮವು ವಿಷಯದೊಳಿರೆ ಗುರು ಮುಂ ।
U U UU UUU UU UUU - UU UUUU -
ದೊದವಿರೆ ಪದದೊಳಮದರವೊ ಲಪ್ಪುದು ಹರಪದ ಮುಂ ॥
ವಿದಿತಮುಪೇಂದ್ರಚತುಷ್ಟಯದತ್ತಲಬುಜವದನೇ ।
ಮದನಹರತ್ರಯದಿಂ ಹರಿ ಕಡೆಪಡೆ ಮದನವತೀ ॥

– ಈ ಲಕ್ಷಣ ಪದ್ಯದಲ್ಲಿ ಮದನವತಿಯ ಲಕ್ಷಣವನ್ನು ಮೂರು ರೀತಿಯಲ್ಲಿ ನಾಗವರ್ಮನು ಗಣವಿಭಾಗ ಮಾಡಿದ್ದಾನೆ. (೧) ೫ ವಿಷ್ಣು+೧ ಗುರು (೨) ೪ ವಿಷ್ಣು+೧ ರುದ್ರ (ರುದ್ರ ೧ವಿ+೧ಗು) (೩) ೩ ರುದ್ರ+೧ವಿಷ್ಣು, ಮೊದಲ ಎರಡು ಪ್ರಕಾರಗಳು ಒಂದೇ ಬಗೆಯೆಂದೇ ಹೇಳಬಹುದು. ೧ವಿ+೧ಗು ಎಂದರೂ ಒಂದು ರುದ್ರಗಣವೆಂದರೂ ಒಂದೇ. ಮೂರನೆಯ ಪ್ರಕಾರ 'ಶ್ರೀ' ಯವರು ಸೂಚಿಸಿದಂತೆ :

UUUU U U - U U UUUUU UUU -
ಮದನಹರ ತ್ರಯದಿಂಹರಿ ಕಡೆಪಡೆಮದನವತೀ ।

– ಹೀಗೆ ೩ರು + ೧ವಿ ಎಂದು ವಿಭಜಿಸಬಹುದು. ಆದರೆ ರಾಗಲಯದ ಸ್ವಾರಸ್ಯ ಮೊದಲ ಎರಡು ಪ್ರಕಾರಗಳಲ್ಲಿರುವಂತೆ ಈ ಮೂರನೆಯ ಪ್ರಕಾರದಲ್ಲಿಲ್ಲ.

ಈ ಲಕ್ಷಣ ಪದ್ಯದಿಂದ 'ಮದನವತಿ' ಯು ಮಾತ್ರಾಗಣಗಳುಳ್ಳುದೂ ಆಗಿರುವಂತೆ ತೋರುತ್ತದೆ. ಜಯಕೀರ್ತಿ ನಾಗವರ್ಮನ ಈ ಲಕ್ಷಣ ಪದ್ಯವನ್ನು ನೋಡಿರುವ ಸಾಧ್ಯತೆಯಿದೆ. ಆತನ ಮೊದಲ ಪಾದದಲ್ಲಿ ೨೦ ಲಘು, ಕೊನೆಗೊಂದು ಗುರು (ಒಟ್ಟು ೨೨ ಮಾತ್ರೆ) ಬರಬೇಕು. ಉಳಿದ ಪಾದಗಳಲ್ಲಿ ೪ ಮದನ (=ವಿಷ್ಣು) ಗಣಗಳು ಕೊನೆಗೊಂದು ರತಿ (=ಬ್ರಹ್ಮ) ಗಣವು ಇರಬೇಕು. ಒಟ್ಟಿನಲ್ಲಿ ೨೨ ಮಾತ್ರೆಗಳು ಯತಿಯಿಂದ ಕೂಡಿಕೊಂಡು ಇರಬೇಕು ಎಂದಿದ್ದಾನೆ. ಅವನು ಕೊಡುವ ಸಂಸ್ಕೃತದ ಲಕ್ಷಣಪದ್ಯದಲ್ಲಿ ಮೊದಲ ಪಾದದಲ್ಲಿ ೨೦ ಲಘು+೧ಗುರು ಬರುವಂತೆ ಗಣವಿನ್ಯಾಸವಿದೆ. ಇವರಿಬ್ಬರಲ್ಲಿ ವ್ಯತ್ಯಾಸವೆಂದರೆ – ನಾಗವರ್ಮನು ಅಂಶಗಣಗಳಲ್ಲಿಯೇ ನಿರೂಪಿಸಿದರೆ ಜಯಕೀರ್ತಿ ಮಾತ್ರೆ, ಅಂಶಗಳೆರಡರ ಪ್ರಸ್ತಾಪ ಮಾಡುತ್ತಾನೆ. ಎರಡೂ ಲಕ್ಷ್ಯ ಪದ್ಯಗಳಲ್ಲಿ ಮಾತ್ರಾಲಯದ ಧಾಟಿಯಿದೆ. ಜಯಕೀರ್ತಿ ಯತಿಯ ಪ್ರಸ್ತಾಪ ಮಾಡಿದ್ದರೂ ಯತಿಸ್ಥಾನವನ್ನು ಸ್ಪಷ್ಟವಾಗಿ ನಿರ್ದೇಶಿಸಿಲ್ಲ. ಎರಡೆರಡು ಗಣಗಳಿಗೊಂದರಂತೆ ಮತ್ತು ಪಾದದ ಕೊನೆಗೆ ಯತಿ ಇದೆಯೆಂದು ತಿಳಿದುಕೊಳ್ಳಬಹುದಾಗಿದೆ. ಕನ್ನಡ ಛಂದಸ್ಸಿನ ಮಟ್ಟುಗಳಿಗೆ ಯತಿ ನಿರ್ದೇಶನ ಮಾಡಿರುವುದು ಜಯಕೀರ್ತಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ 'ಮದನವತಿ' ಯ ಪ್ರಯೋಗವು ಎಲ್ಲಿಯೂ ಕಂಡುಬರುವುದಿಲ್ಲ. ಮೂಲದಲ್ಲಿ ಅಂಶಗಣಾತ್ಮಕವಾದ 'ಮದನವತಿ' ಕ್ರಮೇಣ ಮಾತ್ರಾಗಣದ ಕಡೆಗೆ ತಿರುಗಿ ಚತುರ್ಮಾತ್ರಾಗಣಗಳು ಅಯ್ದು ಮೇಲೊಂದು ಗುರುವುಳ್ಳ ನಾಲ್ಕು ಪಾದಗಳ ಮಾತ್ರಾಬಂಧವಾಗಿರಬೇಕು (೪ಮ್ಮಾ೫+೧ಗ = ೨೨ ಮಾ)

(೨) ಅಕ್ಕರ :

ನಾಗವರ್ಮ–ಜಯಕೀರ್ತಿಗಳಿಬ್ಬರೂ ಇದರಲ್ಲಿ ಅಯ್ದು ಪ್ರಕಾರಗಳನ್ನು ಹೇಳಿದ್ದಾರೆ : (೧) ಪಿರಿಯಕ್ಕರ (೨) ದೊರೆಯಕ್ಕರ (೩) ನಡುವಣಕ್ಕರ (೪) ಎಡೆಯಕ್ಕರ (೫)ಕಿರಿಯಕ್ಕರ ಎಂದು ವಿಭಜಿಸಿದ್ದರೆ ಜಯಕೀರ್ತಿ ಕ್ರಮವಾಗಿ (೧) ಮಹಾಕ್ಷರ (೨) ಸಮಾನಾಕ್ಷರ (೩) ಮಧ್ಯಾಕ್ಷರ (೪) ಅಂತರಾಕ್ಷರ (೫) ಅಲ್ಪಾಕ್ಷರ ಎಂಬುದಾಗಿ ವಿಭಜಿಸಿದ್ದಾನೆ. – ತೆಲುಗಿನಲ್ಲಿ ಇದನ್ನೇ 'ಕವಿಜನಾಶ್ರಯಮು' ಛಂದೋಗ್ರಂಥದಲ್ಲಿ ಕ್ರಮವಾಗಿ (೧) ಮಹಾಕ್ಕರ (೨) ಮಧ್ಯಾಕ್ಕರ (೩) ಮಧುರಾಕ್ಕರ (೪) ಅಂತರಾಕ್ಕರ (೫) ಅಲ್ಪಾಕ್ಕರ ಎಂದು ಹೇಳಿದ್ದಾಗಿದೆ. ಲಕ್ಷಣವು ಎಲ್ಲ ಕಡೆಗಳಲ್ಲೂ ಸಮಾನರೀತಿಯದು. ಪಂಪಾದಿಗಳ ಚಂಪೂ ಕೃತಿಗಳಲ್ಲಿ ಪಿರಿಯಕ್ಕರಕ್ಕೆ ಮಾತ್ರ ಪ್ರಾಶಸ್ತ್ಯದೊರೆತಿದ್ದು ಉಳಿದ ಅಕ್ಕರದ ಪ್ರಕಾರಗಳಿಗೆ ಎಲ್ಲಿಯೂ ಉದಾಹರಣೆಗಳು ದೊರೆತಿಲ್ಲ. ಆದ್ದರಿಂದ ನಾಗವರ್ಮನನ್ನ ನುಸರಿಸಿ ಪಿರಿಯಕ್ಕರದ ಲಕ್ಷ್ಯ – ಲಕ್ಷಣಗಳ ವಿವೇಚನೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ವಿ ವಿ ವಿ ವಿ ವಿ ವಿ ರು
- U - U - - UU - - UUU U - UU - U - -
ಭೋಗ । ಭೂಮಿಜಂ । ಶ್ರೀಧರ । ದೇವಂ । ಸುವಿಧಿ ನ ।ರಾಧಿಪ । ನಚ್ಯುತೇಂದ್ರಂ ।
- U - - UUUU U U U - - U - UU - U -U - U
ಸಾಗ । ರಾಂತಂ । ನೆಲನೆನಿತ । ನಿ । ತುಮಂ । ಚಕ್ರದಿಂ । ಬೆಸಕೆಯ್ಸಿ । ವಜ್ರನಾಭಿ
- U - - U - U - - U U UUU - - U - U - -
ಯಾಗಿ । ಸರ್ವಾರ್ಥ । ಸಿದ್ಧಿಯೊಳ್ । ಪುಟ್ಟಿ । ಭರತದೊ।ಳಿನ್ನಾದಿ । ದೇವನಪ್ಪೊಂ ॥

(ಆ.ಪ. ೨-೪೪)

ಪಂಪನ ಈ ಪಿರಿಯಕ್ಕರವು ನಾಗವರ್ಮ – ಜಯಕೀರ್ತಿ ಮೊದಲಾದವರು ಹೇಳಿದ ಲಕ್ಷಣಕ್ಕೆ ಹೊಂದುವಂಥದಾಗಿದೆ. ಎರಡನೆಯ ಪಾದದ ನಾಲ್ಕನೆಯ ಗಣ, ಮೂರನೆಯ ಪಾದದ ಎರಡನೆಯ ಗಣ ಮತ್ತು ನಾಲ್ಕನೆಯ ಪಾದದ ನಾಲ್ಕನೆಯ ಗಣ ವಿಷ್ಣುವಿಗೆ ಬದಲಾಗಿ ಬ್ರಹ್ಮ ಬಂದಿದೆ. ಪಂಪನ ಕೆಲವು ಪಿರಿಯಕ್ಕರಗಳಲ್ಲಿ ಮೊದಲ ಗಣವು ಬ್ರಹ್ಮವಿರಬೇಕಾದಲ್ಲಿ ವಿಷ್ಣು ಬಂದಿದೆ. ಪಂಪನ ತರುವಾಯ ಬಂದ ನಾಗವರ್ಮನು ಜಾನಪದದಲ್ಲಿ ಕೇಳಬಂದ ಪಿರಿಯಕ್ಕರದ ಲಯವನ್ನು ಸೂಕ್ಷ್ಮವಾಗಿ ಗ್ರಹಿಸಿ ಇದರ ಮೊದಲ ಗಣವು ಬ್ರಹ್ಮವಾದರೇನೇ ಸ್ವಾರಸ್ಯಕರವೆಂದು ಅದನ್ನು ಕಡ್ಡಾಯವಾಗಿ ವಿಧಿಸಿದ್ದಾನೆ. ಆದರೆ ಪಂಪನು ಪಿರಿಯಕ್ಕರದ ಮೊದಲ ಗಣವು ವಿಷ್ಣುವಿದ್ದರೂ ಲಯಕ್ಕೆ ತೊಂದರೆಯೇನಿಲ್ಲವೆಂದು ಭಾವಿಸಿ, ಕೆಲವೆಡೆಗಳಲ್ಲಿ ಮೊದಲ ಬ್ರಹ್ಮಕ್ಕೆ ಬದಲಾಗಿ ವಿಷ್ಣುವನ್ನು ಇರಿಸಿದ್ದಾನೆ. ಅಂಥ ಉದಾಹರಣ ಪದ್ಯದ ಸಾಲುಗಳನ್ನು ಈ ಕೆಳಗೆ ಕೊಟ್ಟಿದೆ

ವಿ ವಿ ವಿ ವಿ ವಿ ವಿ
U U -U UUUU - U - - - U - U - UU - -
೧) ಬಗೆದಾಗ । ಳರಸರೊ । ಳೆಲ್ಲಕೇಳ್ । ನೀಂಬಲ್ಲೆ । ಬೇಂಟಕಾ । ರರೊಳೆಲ್ಲ ।
- U - -
ಮಾನೆಬಲ್ಲೆಂ ।

ವಿ ವಿ ವಿ ವಿ ವಿ
U U U - - U - U U U - UU -U UUU -
೨) ಸಿಲೆಯಮೇ । ಲಾದೊಡಂ । ಶಕುನಮಂ । ನಿರಿಪಂತೆ । ನಿರಿಸುವೆಂ
- U - - - U -
ಪಂದಿಯಂ ।ನೀಂ ಮೆಚ್ಚಲುಂ ॥

(ಪ.ಭಾ.೫-೪೭ ಕೊನೆಯ ಪಾದ)

UUU - UU U - UU - - U U UU - U
೩) ಬಸನಮೆಂ । ದರಿಯದೇ । ಳಿಸುವರ್ । ಬೇಂಟೆಯಂ । ಬಿನದಂಗ
ಳರಸಲ್ತೆ (ಳರಸನಲ್ತೆ ?)

UUUU - UU - U - U U U U U U U U - U -
೪) ಪಿರಿಯಮ । ರಂಗಳೆ । ಮಾಡ ।ಮಾಗೆ । ಪೊಳೆವೆಳ ।ದಳಿರ್ಗಳೆ । ಸೆಜ್ಜೆಯಾಗೆ
UUUU UUUU UUUU - U -UU - U U - U - U
೫) ಪರೆದತ । ರಗಲೆಯೆ । ಪರಿಯಣ । ಮಾಗೆ । ಪಣ್ವಲ । ಮೆತ್ತಿದ । ಬೋನಮಾಗೆ
(ಪಂ.ಭಾ. ೭-೨೮. ೧, ೨ನೆಯ ಪಾದಗಳು)

ಪಿರಿಯಕ್ಕರದ ಈ ಪಾದಗಳಲ್ಲಿ ಮೊದಲ ಬ್ರಹ್ಮಕ್ಕೆ ಬದಲಾಗಿ ವಿಷ್ಣು ಬಂದಿರುವುದನ್ನು ಗಮನಿಸಬೇಕು. ಕೆಲವೆಡೆ ಕೊನೆಯ ಗಣವೂ ರುದ್ರಕ್ಕೆ ಬದಲಾಗಿ ವಿಷ್ಣುವಾಗಿರುವುದು ಪಾಠಾಂತರದೋಷವಿರಬಹುದು : (ಅರಸಲ್ತೆ – ಅರಸನಲ್ತೆ)

ಅಕ್ಕರದ ಅಯ್ದೂ ಪ್ರಕಾರಗಳ ಲಕ್ಷಣಗಳನ್ನು ಸಂಗ್ರಹವಾಗಿ ಹೀಗೆ ಸೂಚಿಸಬಹುದು.

ಹೆಸರು	ಗಣ	ಲಕ್ಷಣಸ್ವರೂಪ	
೧. ಪಿರಿಯಕ್ಕರ :	೭	೧ಬ್ರ+೫ವಿ +೧ರು	ಯತಿ ೪ನೆಯ ಗಣದ ಮುಂದೆ
೨. ದೊರೆಯಕ್ಕರ :	೬	೨ವಿ+೧ಬ್ರ+೨ವಿ+೧ಬ್ರ	ಯತಿ ೩ನೆಯ ಗಣದ ಮುಂದೆ
೩. ನಡುವಣಕ್ಕರ :	೫	೧ಬ್ರ+೩ವಿ+೧ರು	ಯತಿ ೩ನೆಯ ಗಣದ ಮುಂದೆ
೪. ಎಡೆಯಕ್ಕರ :	೪	೧ಬ್ರ+೨ವಿ+೧ರು	ಯತಿ ೨ನೆಯ ಗಣದ ಮುಂದೆ
೫. ಕಿರಿಯಕ್ಕರ :	೩	೨ವಿ+೧ರು	ಯತಿ ೨ನೆಯ ಗಣದ ಮುಂದೆ

೩) ಚೌಪದಿ : ಲಕ್ಷಣ

ನಾಗವರ್ಮ – ಜಯಕೀರ್ತಿಯರಿಬ್ಬರೂ ಒಂದೇ ರೀತಿಯಲ್ಲಿ ಇದರ ಲಕ್ಷಣವನ್ನು ಹೇಳಿದ್ದಾರೆ. ಇದರಲ್ಲಿ ನಾಲ್ಕು ಪಾದಗಳು. ಪ್ರತಿ ಪಾದದಲ್ಲಿ ವಿಷ್ಣುಗಣವೊಂದರ ಮುಂದೆ ರುದ್ರಗಣವೊಂದು ಬರುವುದು. ಅಂಶಗಣದ ಈ ಚೌಪದಿಗೂ ನಡುಗನ್ನಡದಲ್ಲಿ ರೂಢಿಯಲ್ಲಿದ್ದ ಮಾತ್ರಾಗಣದ ಚೌಪದಿಗೂ ಪ್ರಾಕೃತ ಛಂದಸ್ಸಿನ ಚೌಪದಿಗೂ ಯಾವ ಸಂಬಂಧವಿಲ್ಲ.ನಾಗವರ್ಮನ ಲಕ್ಷಣ ಪದ್ಯದಲ್ಲಿ ಮಾತ್ರಾಗಣದ ಧಾಟಿಯ ಸುಳಿವು ಗೋಚರಿಸುತ್ತಿದ್ದರೂ ಇದು ಶುದ್ಧ ಅಂಶಗಣದ ರಾಗಲಯದಲ್ಲಿ ಹಾಡಬಹುದಾದ ಮಟ್ಟು. ನಾಗವರ್ಮನ ಈ ಲಕ್ಷಣಪದ್ಯವನ್ನು ಪರಿಶೀಲಿಸಬಹುದು :

U UUU - U U -
ಮದನನ । ತಂದೆಯ ಮುಂ ।
U U UU - U U -
ದುದಯಿಸೆ । ಶಂಕರ ನೊ ॥
U UUU - U U -
ಳ್ಪೊದವಿರೆ । ಸಂದುದು ನೋ ।

UU UU - UUU
ಡಿದೆ ಸತಿ । ಚೌಪದಿಗೆ ॥

ಈ ಪದ್ಯದ ಪ್ರಕಾರ ಅಂಶಛಂದಸ್ಸಿನ ಈ ಚೌಪದಿಯ ಲಕ್ಷಣ : ೧ವಿ+೧ರು. ಮಾತ್ರಾಗಣದಂತೆ : ೪ಮಾ+೪ಮಾ+ಗುರು.

೪) ಗೀತಿಕೆ :

ನಾಗವರ್ಮ–ಜಯಕೀರ್ತಿಯರಿಬ್ಬರದೂ ಗೀತಿಕೆಯ ಲಕ್ಷಣ ಬಹುಮಟ್ಟಿಗೆ ಒಂದೇ ಬಗೆಯದಾಗಿದೆ. ನಾಗವರ್ಮನ ಲಕ್ಷಣ ಪದ್ಯದಲ್ಲಿ ಪಾಠಾಂತರಗಳಿಂದ ಕೆಲಮಟ್ಟಿನ ಅಸ್ಪಷ್ಟತೆಯಿದೆ. ಗೀತಿಕೆಯಲ್ಲಿ ನಾಲ್ಕು ಪಾದಗಳಿರುತ್ತವೆ. ಪ್ರತಿ ಪದ್ಯಾರ್ಧದ ೨, ೬ನೆಯ ಗಣಗಳು ಬ್ರಹ್ಮ ವಾಗಿರಬೇಕು ಮತ್ತು ಉಳಿದ ಗಣಗಳು 'ಮೆಚ್ಚುವ ತೆರದಿಂದ' ಎಂದರೆ ಯಾವ ಗಣವಿದ್ದರೂ ಸರಿಯೇ. ನಾಗವರ್ಮನ ಲಕ್ಷಣ ಪದ್ಯವಿದು :

ವಿ ಬ್ರ ರು
UUUU - U - - U -
ಎರಡರೊ । ಳಾರೆಂ । ಬಾಸಂಖ್ಯೆಯೊಳ್ ।
UU- U UUUU U U - U U UU -
ಬರೆಪದ್ಮ । ಭವನುಳಿ । ದುವು ಮೆ ।ಚ್ಚುವ ತೆರದಿಂ ॥
UU - U UU - - U U U
ದಿರೆ ಮುಂ ।ದಣ ಪ ದಂ । ಮುನ್ನಿನಂ
UU U - - UU - - U -
ತಿರೆ ಕರಂ । ಗೀತಿಕೆ ।ಯಿಂತ । ಕ್ಕುಂ ಸಖೀ ॥

ಈ ಪದ್ಯದಲ್ಲಿದ್ದ ಹಾಗೆ ಇದರ ಲಕ್ಷಣವನ್ನು ಹೀಗೆ ಸೂಚಿಸಬಹುದು :

ವಿ+ಬ್ರ+ರು
ವಿ+ವಿ+ಬ್ರ+ರು
ಬ್ರ+ಬ್ರ+ರು
ವಿ+ವಿ+ಬ್ರ+ವಿ (ರು?)

ಅಂಶಛಂದಸ್ಸಿನಲ್ಲಿ ಗೀತಿಕೆ ಅರ್ಧಸಮಮಟ್ಟು ಎನ್ನಬಹುದು. ಪೂರ್ವಾರ್ಧದಲ್ಲಿ ಏಳು ಗಣಗಳು ಉತ್ತರಾರ್ಧದಲ್ಲೂ ಏಳು ಗಣಗಳು. ವಿಷ್ಣುವಿಗೆ ಬದಲಾಗಿ ಮೂರನೆಯ ಪಾದದಲ್ಲಿ ಬ್ರಹ್ಮ ಬಂದಿದೆ. ನಾಲ್ಕನೆಯ ಪಾದದ ಕೊನೆಯ ಗಣವು ವಿಷ್ಣುವಾಗಿದೆ. ಎರಡನೆಯ ಪಾದಕ್ಕೆ ಸಮವೆನಿಸಬೇಕಾದರೆ ಅದು ರುದ್ರವಾಗಬೇಕು. ಪಾಠಾಂತರದೋಷವಿದ್ದರೂ ಇರಬಹುದು. ಅರ್ಧಸಮ ಮಟ್ಟಾದ್ದರಿಂದ ೧, ೩ ನೆಯ ಪಾದಗಳೂ ೨, ೪ ನೆಯ ಪಾದಗಳು ಸಮನಾಗಿರುವುದು ಸಾಮಾನ್ಯ ಲಕ್ಷಣ. ಗೀತಿಕೆಯಲ್ಲಿ ೨ ಮತ್ತು ೬ನೆಯ ಗಣಗಳು ಬ್ರಹ್ಮವಾಗಿರುವುದೂ ಉಳಿದವು 'ಮೆಚ್ಚುವ

ತೆರದಿಂ'ದಿರುವುದೂ ಎಂದಿದ್ದರಿಂದ ನಾಲ್ಕನೆಯ ಪಾದದ ಕೊನೆಯ ಗಣವು ವಿಷ್ಣುವಿದ್ದರೂ ತಪ್ಪಿಲ್ಲ ಎನ್ನಬಹುದಾಗಿದೆ. ೧೪ನೆಯ ಶತಕದ ಸುಮಾರಿಗೆ ಹೊಸತಾಗಿ ಹುಟ್ಟಿದ ಸಾಂಗತ್ಯವು ಬಹುಶಃ ಗೀತಿಕೆಯ ಅನುಕರಣೆಯಿಂದಾಗಿರಬೇಕೆಂಬ ಊಹೆಯೂ ಇದೆ. ಅಂಶಗಣದ ಈ ಗೀತಿಕೆ ಆರ್ಯಾಭೇದವಾದ ಮಾತ್ರಾಗಣದ ಗೀತಿಕೆಯೊಡನೆ ಹೊರಕಟ್ಟಿನಲ್ಲಿ ಹೋಲಿಕೆಯುಳ್ಳದಾದರೂ ಒಳರಚನೆಯಲ್ಲಿ ತೀರ ಭಿನ್ನವಾದುದು. ಗೀತಿಕೆಯನ್ನು ರಾಗಲಯದಲ್ಲಿ ಸರಾಗವಾಗಿ ಹಾಡುವಲ್ಲಿ ಕ್ಲೇಶವೆನಿಸುತ್ತದೆ. ಕವಿರಾಜಮಾರ್ಗದಲ್ಲಿ ಗೀತಿಕೆಯ ಉದಾಹರಣಪದ್ಯಗಳು ದೊರೆಯುತ್ತವೆ.

೫) ಏಳೆ : ಲಕ್ಷಣ :

ಏಳೆಯ ಲಕ್ಷಣವನ್ನು ನಾಗವರ್ಮ, ಜಯಕೀರ್ತಿ ಮತ್ತು 'ಸಂಗೀತ ರತ್ನಾಕರ' ದ ಶಾರ್ಙ್ಗದೇವ ಈ ಮೂವರೂ ಒಂದೇ ರೀತಿಯಲ್ಲಿ ವಿವರಿಸಿದ್ದಾರೆ. ಛಂದೋಂಬುಧಿಯಲ್ಲಿ ಈ ಲಕ್ಷಣ ಪದ್ಯದ ಪಾಠ ಕೆಟ್ಟಿದೆ.ಅದನ್ನು ಸರಿಪಡಿಸಿ ಹೀಗೆ ಹೇಳಲಾಗಿದೆ :

U U -U UUUU
ಭುಜಪಕ್ಷ ಪುರಗಣ
UUU - UU UU
ವ್ರಜದೊಳಾ ರರೊಳಕ್ಕು
UUUU - U UUU -
ಮಜಗಣ । ಮೇಳೆ । ಗಿಭಗತೀ ॥

ಭುಜ =೨, ಪಕ್ಷ=೨, ಪುರ=೩ (=ತ್ರಿಪುರ) – ಒಟ್ಟು ಏಳು ಗಣಗಳು ಏಳೆಯಲ್ಲಿದ್ದು ೬ನೆ ಗಣವು ಬ್ರಹ್ಮವಾಗಿರುವುದು. ಮೂರನೆಯ ಪಾದವಿಲ್ಲದ ತ್ರಿಪದಿಯೇ ಏಳೆ ಎಂದು ಜಯಕೀರ್ತಿ ಹೇಳಿದ್ದಾನೆ. ಮೇಲಿನ ಲಕ್ಷಣ ಪದ್ಯವನ್ನು ಎರಡು ಪಾದಗಳಾಗಿ ಬರೆಯುವುದೂ ಉಂಟು. ಏಳೆಯಲ್ಲಿ ತ್ರಿಪದಿಯ ಎರಡನೆಯ ಪಾದವಾದ ವಿ+ಬ್ರ+ವಿ+ವಿ – ಇದು ಇಲ್ಲ. ಜಯಕೀರ್ತಿ ಇದನ್ನೇ ೩ನೆಯ ಪಾದ ಎಂದು ಕರೆದಿದ್ದಾನೆ. ತ್ರಿಪದಿಯ ಮೊದಲ ಪಾದವನ್ನು ಏಳೆಯ ಲಕ್ಷಣ ಪದ್ಯದ ಮೊದಲೆರಡು ಸಾಲುಗಳಂತೆ ಇಟ್ಟು ಬರೆದರೆ ಏಳೆಯಲ್ಲಿಲ್ಲದ ಈ ಸಾಲು ತ್ರಿಪದಿಯ ೩ನೆಯ ಪಾದವಾಗುತ್ತದೆ. ಶಾರ್ಙ್ಗದೇವನು ಏಳೆಯನ್ನು ಹಾಡುವ ಕ್ರಮವನ್ನೂ ಹೇಳುತ್ತಾನೆ. ಅವನು ಮೇಲೆ ತೋರಿಸಿದಂತೆ ಏಳೆಯನ್ನು ಮೂರು ಪಾದಗಳಲ್ಲಿ ಬರೆದು ಮೊದಲೆರಡು ಪಾದಗಳನ್ನು ವಿಲಂಬಗತಿಯಲ್ಲೂ ೩ನೆಯದನ್ನು ದ್ರುತಗತಿಯಲ್ಲೂ ಹಾಡಬೇಕೆಂದು ಸೂಚಿಸುತ್ತಾನೆ. ಈತನು ಏಳೆಗಳಲ್ಲಿ ೨೦ ವಿಧಗಳನ್ನು ಹೇಳಿ ಛಂದೋಂಬುಧಿಯಲ್ಲಿ ಉಕ್ತವಾಗಿರುವ ಮೇಲಿನ ಮಾದರಿಯ ಏಳೆಯೆಂದು ಕರೆದಿರಬಹುದು. ಸಂಸ್ಕೃತದಲ್ಲಿ ಇದನ್ನು 'ಏಳಾ' ಎಂದಿದ್ದಾರೆ. ಇದು ಚಿಕ್ಕ ಮಟ್ಟು ಆದರೂ ಪ್ರಾಸಾನುಪ್ರಾಸಗಳಿಂದ ಸೊಗಸಾಗಿದ್ದು ರಾಗಲಯದಲ್ಲಿ ಹಾಡಲು ಯೋಗ್ಯವಾಗಿದೆ. ಹೆಣ್ಣುಮಕ್ಕಳ ಹಾಡುಗಳಲ್ಲಿ ಇದರ ಬಳಕೆ ಇದ್ದುದು ಕಂಡುಬರುತ್ತದೆ :

ಉದಾ :

ವಿ ವಿ ಬ್ರವಿ

U U - U - - U - U UU - U

(೧) ಕುದುರೇನ । ತಂದೀನಿ । ಜೀನ । ಬಿಗ್ಸಿದೇನಿ

UU - U - - UU UU

ಬರಬೇಕು । ತಂಗೀ । ಮದುವೆಗೆ ।

- UU UU - - - UU - - -

(೨) ಬೇಸಗೆ ಬಿಸಲಣ್ಣಾ । ಕೂಸಿನ । ತಾಯಣ್ಣಾ

- - U - - U U UU

ಹೇಗ್ಬ ರ । ಲಣ್ಣಾ । ಮದುವೆಗೆ ॥

– ಇಲ್ಲಿ ಮೊದಲ 'ಏಳೆಯ ೪ನೆಯ ಗಣ 'ಬಿಗ್ಸಿದೇನಿ' ಎಂಬುದನ್ನು ಶಿಥಿಲದ್ವಿತ್ವದಂತೆ ತ್ವರಿತಗತಿಯಲ್ಲಿ ಹೇಳಬೇಕು. ಅಂಶಲಯದಲ್ಲಿ ಹೀಗೆ ಒತ್ತಕ್ಷರಗಳಲ್ಲಿ ಹೊಂದಿಸಿಕೊಂಡು ಹಾಡುವ ಪರಿಪಾಠವಿರುತ್ತದೆ. ಅದೇ ಪ್ರಕಾರ ೨ನೆಯ 'ಏಳೆಯ' ಹೇಗ್ಬರ।ಲಣ್ಣಾ' ಎಂದು ಬರೆದು ವಿಷ್ಣು+ಬ್ರಹ್ಮ ಬರುವಂತೆ ಮಾಡಿಕೊಳ್ಳಬೇಕು.

೬) ತ್ರಿವದಿ (ತ್ರಿಪದಿ)

ತ್ರಿಪದಿಯ ಮಟ್ಟು ಪ್ರಾಚೀನಸಾಹಿತ್ಯದಲ್ಲಿ ವಿರಳವಾಗಿದ್ದರೂ ಜನಪದ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತದೆ. ಇದು ತುಂಬ ಜನಪ್ರಿಯ ಮಟ್ಟಾಗಿದ್ದು ಅಂಶಛಂದಸ್ಸಿನ ಕನ್ನಡ ಮಟ್ಟುಗಳಿಗೆಲ್ಲ ಇದೇ ಮೂಲವೆಂದು ವಿದ್ವಾಂಸರ ಮತ. ಮೇಲೆ ವಿವರಿಸಿದ ಏಳೆ ತ್ರಿಪದಿಗೂ ಮೂಲ ಎನ್ನಬಹುದು. ತ್ರಿಪದಿಯ ಲಕ್ಷಣವನ್ನು ನಾಗವರ್ಮ, ಜಯಕೀರ್ತಿ, 'ಮಾನಸೋಲ್ಲಾಸ' ದ ಸೋಮೇಶ್ವರ, ಶಾರ್ಂಗದೇವ ಇವರೆಲ್ಲರೂ ಒಂದೇ ರೀತಿಯಲ್ಲಿ ಹೇಳಿದ್ದಾರೆ. ತ್ರಿಪದಿಯ ಲಕ್ಷಣ ಹೀಗಿದೆ :

UUU - UUU - UUUU - U -

ಬಿಸರು ಹೋ । ದ್ಭವಗಣಂ । ರಸದಶಸ್ಥಾನದೊಳ್ ।

UUUU - U U U U - U U U U

ಬಿಸರುಹ । ನೇತ್ರ । ಗಣಮೆಬ । ರ್ಕುಳಿದುವು ।

UUUU - - UUUU

ಬಿಸರುಹನೇತ್ರೇ । ತ್ರಿಪದಿಗೆ ॥

ಇದನ್ನು ಹೀಗೆ ಸೂಚಿಸಬಹುದು :

ವಿ+ವಿ+ವಿ+ವಿ

ವಿ+ಬ್ರ+ವಿ+ವಿ

ವಿ+ಬ್ರ+ವಿ

ಬಿಸರುಹೋದ್ಭವ ಬ್ರಹ್ಮ (ಬಿಸ=ನೀರು–ವಿಷ (ತ್ನ)

ರಸ=ಆರು (ಷಡ್ರಸ) ದಶ=ಹತ್ತು.

ಇಲ್ಲಿ ೬, ೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣವಿರಬೇಕೆಂದೂ ಉಳಿದುವು ಬಿಸರುಹನೇತ್ರ (ಕಮಲನೇತ್ರ) ಎಂದರೆ ವಿಷ್ಣುಗಣಗಳಿರಬೇಕೆಂದೂ ಹೇಳಿದೆ. ತ್ರಿಪದಿಗೆ ಮೂರು ಪಾದಗಳು, ಒಟ್ಟು ೧೧ ಗಣಗಳು. ಮೊದಲ ಪಾದದಲ್ಲಿ ನಾಲ್ಕು, ಎರಡನೆಯ ಪಾದದಲ್ಲಿ ನಾಲ್ಕು ಮತ್ತು ೩ನೆಯ ಪಾದದಲ್ಲಿ ಮೂರು. ಇವುಗಳಲ್ಲಿ ೬ನೆಯ ಮತ್ತು ೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣವಿದ್ದು ಉಳಿದುವೆಲ್ಲ ವಿಷ್ಣುಗಣಗಳು. ಮೊದಲ ಪಾದದ ಮಧ್ಯದಲ್ಲಿ ಮೊದಲನೆಯ ಯತಿ ಬಳಿಕ ಮಧ್ಯಪ್ರಾಸ ಇರುತ್ತದೆ. ಅನಂತರ ಎರಡನೆಯ ಪಾದದ ಮೂರು ಗಣಗಳ ನಂತರ ಒಂದು ಯತಿ. ಅದನ್ನು ಪಾಲಿಸಿ ಎರಡನೆಯ ಪಾದವನ್ನು ಮತ್ತೊಮ್ಮೆ ಉಚ್ಚರಿಸಿ ೪ನೆಯ ವಿಷ್ಣುಗಣವನ್ನು ಸೇರಿಸಿಕೊಂಡು ಮೂರನೆಯ ಪಾದವನ್ನು ಹೇಳಿ ಮುಗಿಸಬೇಕು.

ನಾಗವರ್ಮನು ಮೇಲೆ ಹೇಳಿದ ಲಕ್ಷಣವು ತ್ರಿಪದಿಯ ಸಾಮಾನ್ಯ ಲಕ್ಷಣ. ಅದು 'ಚಿತ್ರಂ' ಎಂಬ ತ್ರಿಪದಿಯಾದರೆ ಇನ್ನೊಂದು 'ವಿಚಿತ್ರಂ' ಎಂಬ ಇನ್ನೊಂದು ಪ್ರಕಾರ. ಅದನ್ನು ವಿವರಿಸುವ ಪದ್ಯ ಹೀಗಿದೆ :

ವಿ ವಿ ವಿ ವಿ
U U U - U UUU UUUU UU - -
ತುದಿಯೊಳೀಶ್ವರಗಣಮೊದವಿರೆ ಪದವೆಲ್ಲಂ ।
UUUU U U - UUUU - U -
ಮದಗಜ । ಗಮನೇ । ಪೆರಗಣ । ಚಿತ್ರದಂ ।
UU - U U U U-U - -
ದದಿನಿರ್ದೊಡದು ವಿಚಿತ್ರಮಕ್ಕುಂ ॥

ಸಾಮಾನ್ಯ ಲಕ್ಷಣದ ತ್ರಿಪದಿ 'ಚಿತ್ರಂ' ಎಂಬುದಾದರೆ, ಅದೇ ತ್ರಿಪದಿಯ ಕೊನೆಯ ಗಣವು ರುದ್ರವಾದರೆ 'ವಿಚಿತ್ರಂ' ಎಂಬ ಇನ್ನೊಂದು ತ್ರಿಪದಿಯಾಗುತ್ತದೆ.

ಜಯಕೀರ್ತಿ 'ಚಿತ್ರಾತ್ರಿಪದಿಕಾ' ಎಂಬುದರ ಲಕ್ಷಣವನ್ನು ನಾಗವರ್ಮನ 'ಚಿತ್ರಂ' ದೊಂದಿಗೆ ಹೋಲಿಸಿದಾಗ ಎರಡರ ಸ್ವರೂಪವೂ ಒಂದೇ ಎನಿಸುತ್ತದೆ. ೭, ೧೧, ನೆಯ ಗಣಗಳು ಆದಿ ಲಘು ಎಂದರೆ ಆದಿ ಲಘುದ್ವಯವುಳ್ಳವು ಎಂದು ಜಯಕೀರ್ತಿ ಹೇಳಿರುವುದು ಹೆಚ್ಚಿನ ಅಂಶ. ನಾಗವರ್ಮನು ತನ್ನ ಲಕ್ಷಣ ಪದ್ಯದಲ್ಲಿ ಈ ಲಕ್ಷಣಾಂಶವನ್ನು ಹೇಳದೆ ಇದ್ದರೂ ಆತನ ಲಕ್ಷಣ ಪದ್ಯದಲ್ಲಿ ಈ ಲಕ್ಷಣವಿರುವುದನ್ನು ನೋಡಿಯೇ ಜಯಕೀರ್ತಿ ಇದನ್ನು ಹೇಳಿರಬಹುದೆನಿಸುತ್ತದೆ. ಜಯಕೀರ್ತಿ 'ವಿಚಿತ್ರಾತ್ರಿಪದಿಕಾ' ದ ಲಕ್ಷಣವನ್ನು ನಾಗವರ್ಮನು ಹೇಳಿದಂತೆಯೇ ಹೇಳಿದ್ದಾನೆ. ೧೧ನೆಯ ಗಣವು ಆದಿಗುರುವುಳ್ಳ ಶರಗಣ (=ರುದ್ರ) ವಾಗಿದ್ದರೆ ಅದು 'ವಿಚಿತ್ರ' ತ್ರಿಪದಿ. ಈ ಹೆಚ್ಚಿನ ಲಕ್ಷಣಾಂಶವನ್ನು ಜಯಕೀರ್ತಿ ನಾಗವರ್ಮನ ಲಕ್ಷಣಪದ್ಯವನ್ನು ನೋಡಿಯೇ ಹೇಳಿರಬಹುದು. ಜಯಕೀರ್ತಿ ಉಲ್ಲೇಖಿಸಿರುವ ಪೂರ್ವಂ ಕರ್ಣಾಟಚ್ಛಂದೋಮತೇ'

ಎಂಬುದರಿಂದ ನಾಗವರ್ಮನ ಛಂದೋಂಬುಧಿಯನ್ನು ಆತನು ನೋಡಿದ್ದನೆಂದು ಭಾವಿಸಬಹುದಾಗಿದೆ. ಜಯಕೀರ್ತಿ ತ್ರಿಪದಿಯ ಈ ಎರಡು ಪ್ರಭೇದಗಳನ್ನು ಹೇಳಿಯಾದ ಮೇಲೆ ತ್ರಿಪದಿಯಲ್ಲಿಯ ಮಾತ್ರಾಗಣನೆಯನ್ನೂ ಪರಿಶೀಲಿಸಿದ್ದಾನೆ. ತ್ರಿಪದಿ ಮಾತ್ರಾ ಛಂದಸ್ಸಿಗೆ ಸೇರಿದ್ದಲ್ಲ, ಅದರಿಂದ ಭಿನ್ನವಾದ ಅಂಶಛಂದಸ್ಸಿಗೆ ಸೇರಿದ್ದು ಎಂಬುದನ್ನು ಸೂಚಿಸುವುದಕ್ಕೆಂದೇ ಜಯಕೀರ್ತಿ ಈ ಮಾತ್ರಾವಿವಕ್ಷೆಯನ್ನು ನಡೆಸಿದಂತೆ ಕಾಣುತ್ತದೆ.

'ಮಾನಸೋಲ್ಲಾಸ' ದ ಸೋಮೇಶ್ವರನು ತ್ರಿಪದಿಯ ಪ್ರಕಾರಗಳನ್ನು ಹೇಳಿಲ್ಲ, ಅದರ ಸಾಮಾನ್ಯ ಲಕ್ಷಣವನ್ನು ನಾಗವರ್ಮ – ಜಯಕೀರ್ತಿಯರಂತೆಯೇ ಹೇಳಿದ್ದಾನೆ ಮತ್ತು ಅವನು ಸೂಚಿಸುವ ವಿಶೇಷಾಂಶಗಳು ಇವು : ತ್ರಿಪದಿಯ ಮೊದಲ ಪಾದವನ್ನು ಎರಡೆರಡು ಗಣಗಳಿಗೊಂದರಂತೆ ಎರಡು ಪಾದಗಳಾಗಿಟ್ಟುಕೊಳ್ಳುವುದರ ಮೂಲಕ ತ್ರಿಪದಿಯನ್ನು ನಾಲ್ಕು ಪಾದಗಳ ಮಟ್ಟಾಗಿ ಗ್ರಹಿಸಿದ್ದಾನೆ. ಮತ್ತು 'ತ್ರಿಪದಿಯನ್ನು ಹಾಡುವಾಗ ಮೊದಲಿನ ಎರಡು ಪಾದಗಳನ್ನೂ ಮೂರನೆಯ ಪಾದದ ಸ್ವಲ್ಪ ಭಾಗವನ್ನೂ ಹೇಳಿ ಅನಂತರ ಅದನ್ನು ಪುನರಾವರ್ತನೆ ಮಾಡಿ ಮೂರನೆಯ ಪಾದವನ್ನು ಮುಗಿಸಿ ಆಮೇಲೆ ನಾಲ್ಕನೆಯ ಪಾದವನ್ನು ಹಾಡಬೇಕು' ಎಂದು ತ್ರಿಪದಿಯನ್ನು ಹಾಡುವ ವಿಧಾನವನ್ನು ತಿಳಿಸಿದ್ದಾನೆ. ಅಲ್ಲದೆ ತ್ರಿಪದಿಯನ್ನು ಯಾವ ಯಾವ ಸಂದರ್ಭಗಳಲ್ಲಿ ಹಾಡಬೇಕೆಂಬ ನಿರ್ದೇಶನವೂ ಇಲ್ಲಿ ಮೊದಲ ಬಾರಿಗೆ ಬಂದಿದೆ.

'ಸಂಗೀತ ರತ್ನಾಕರ' ದ ಶಾರ್ಙ್ಗದೇವನೂ ಸೋಮೇಶ್ವರನಂತೆಯೇ ತ್ರಿಪದಿಯ ಪ್ರಭೇದಗಳನ್ನು ಹೇಳದೆ ಹಾಡುವ ರೀತಿಯನ್ನು ತಿಳಿಸಿದ್ದಾನೆ ಮತ್ತು ತ್ರಿಪದಿ 'ತಾಳರಹಿತ' ವಾದದ್ದು ಕರ್ಣಾಟ ಭಾಷೆಗೆ ಸೇರಿದ್ದು ಎಂಬ ಅಂಶಗಳನ್ನೂ ಹೆಚ್ಚಿಗೆ ಸೇರಿಸಿದ್ದಾನೆ.

ತ್ರಿಪದಿಯ ಚರಿತ್ರೆ :

ಅಂಶಗಣಾತ್ಮಕವಾದ ತ್ರಿಪದಿ ಕಾಲಕ್ರಮದಲ್ಲಿ ಸುಮಾರು ೧೨ ನೆಯ ಶತಕದಿಂದೀಚೆಗೆ ವೀರಶೈವ 'ತ್ರಿವಿಧಿ' ರಚನೆಗಳಲ್ಲಿಯೂ ಇತರ ರಚನೆಗಳಲ್ಲಿಯೂ ಮಾತ್ರಾಗಣಾತ್ಮಕವಾಗಿ ಪರಿಣಮಿಸಿತು. ೬, ೧೦ನೆಯ ಗಣಗಳು ಮಾತ್ರ ಬ್ರಹ್ಮಗಳಾಗಿಯೇ ಉಳಿದು ವಿಷ್ಣು ಗಣಗಳ ಸ್ಥಾನದಲ್ಲಿ ಪಂಚ ಮಾತ್ರಾಗಣಗಳು ಪ್ರವೇಶಿಸಿ ತ್ರಿಪದಿ ತಾಳಲಯದಲ್ಲಿ ಹಾಡುವಂತಾಯಿತು. ಆದರೂ ಅಂಶಗಣದ ರಾಗಲಯವೇ ಪರಂಪರಾಗತವಾಗಿ ಈ ಪರಿವರ್ತನೆ ಹೊಂದಿದ ತ್ರಿಪದಿಗಳಿಗೂ ಅನ್ವಯವಾದುದನ್ನು ಕಾಣುತ್ತೇವೆ. ತ್ರಿಪದಿಯ ಜೀವಾಳವು 'ದೇಶ್ಯಲಯ' ಅದರ ರಚನೆ ಸಹಜ, ಅದರ ರುಚಿ ವಿಶೇಷವಾದುದು. ಅಂತೇ ಸರ್ವಜ್ಞನಂಥ ಜಾನಪದ ಕವಿಯ ಕೈಯಲ್ಲಿ ಅಥವಾ ಬಾಯಲ್ಲಿ ಅಮೃತೋಕ್ತಿಯಂಥ ವಚನಗಳೆನಿಸಿದವು – ಈ ತ್ರಿಪದಿಯ ರಚನೆಗಳು.

ಅಂಶಗಣಾತ್ಮಕವಾದ ಬಾದಾಮಿ ಶಾಸನದ (ಕ್ರಿ.ಶ. ೭ನೆಯ ಶತಕ) ಈ ತ್ರಿಪದೀ ಪದ್ಯಗಳನ್ನು ಅವಲೋಕಿಸುವುದು ಪ್ರಯೋಜನಕಾರಿ ;

- U U - U - - - U - - -
ಸಾಧುಗೆ । ಸಾಧು ಮಾ ।ಧುರ್ಯಂಗೆ । ಮಾಧುರ್ಯಂ ।
- - U UUU UU U U U U - -
ಬಾಧಿಪ್ಪ । ಕಲಿಗೆ । ಕಲಿಯುಗ । ವಿಪರೀತನ್ ।
- U U - - UU-U
ಮಾಧವ । ನೀತನ್ । ಪೆರನಲ್ಲ ॥
ಒಳ್ಳಿತ್ತ । ಕೆಯ್ವೊರಾರ್ । ಪೊಲ್ಲದು । ಮದರಂತೆ ।
ಬಲ್ಲಿತ್ತು । ಕಲಿಗೆ । ವಿಪರೀತಾ । ಪುರಾಕೃತ ।
- U U U - U
ಮಿಲ್ಲಿ ಸಂ । ಧಿಕ್ಕು । ಮದು ಬಂದು ॥
ಕಟ್ಟಿದ । ಸಿಂಘಮನ್ । ಕೆಟ್ಟೋದೇ । ನೆಮಗೆಂದು ।
ಬಿಟ್ಟವೋಲ್ । ಕಲಿಗೆ । ವಿಪರೀತಂ । ಗಹಿತರ್ಕಳ್ ।
ಕೆಟ್ಟರ್ ಮೇಣ್ । ಸತ್ತ । ರವಿಚಾರಂ ॥

– ಇಲ್ಲಿ ಮೊದಲ ತ್ರಿಪದಿಯ ಮೊದಲನೆಯ ಪಾದದಲ್ಲಿ ಒಳಪ್ರಾಸಕ್ಕೆ ಭಂಗಬಂದಿದೆ. (ಸಾಧುಗೆ ಸಾಧುಮಾ । ಧುರ್ಯಂಗೆ) ಎರಡನೆಯ ಪದ್ಯದ ೨ನೆಯ ಪಾದದ ಕೊನೆಯ ಗಣದ 'ಪುರಾಕೃತ' ಎಂಬಲ್ಲಿಯ 'ರಾ' ಗುರುವನ್ನು ಕುಗ್ಗಿಸಿ ಹೇಳಬೇಕು. (ಅಂಶ ಛಂದಸ್ಸಿನ ಲಕ್ಷಣವದು) ತ್ರಿಪದಿಗಳಲ್ಲೂ ವಿಷ್ಣುವಿಗೆ ಬದಲಾಗಿ ಅಲ್ಲಲ್ಲಿ ಬ್ರಹ್ಮಗಣಗಳು ಬರುವುದೂ ಸಾಮಾನ್ಯ ನಿಯಮ.

ಅಧುನಿಕರಲ್ಲೂ ಬೇಂದ್ರೆ, ಮಾಸ್ತಿ, ಎಸ್.ವಿ. ಪರಮೇಶ್ವರ ಭಟ್ಟ, ಜಯದೇವಿ ತಾಯಿ ಲಿಗಾಡೆ ಮುಂತಾದವರು ತ್ರಿಪದಿಯ ಕಾವ್ಯರಚನೆ ಮಾಡಿದ್ದುಂಟು. ಆದರೆ ಮೂಲದ ಅಂಶಗಣಗಳನ್ನು ಬಿಟ್ಟು ಮಾತ್ರಾಗಣಗಳಲ್ಲಿಯೇ ಹೆಚ್ಚಾಗಿ ಈ ರಚನೆಗಳಾಗಿವೆ. ಆದ್ದರಿಂದ ಅಂಶ ಛಂದಸ್ಸಿನ ರಾಗಲಯಕ್ಕೆ ಅವು ಎರವಾಗಿವೆ ಎನ್ನಬಹುದು.

೭) ಉತ್ಸಾಹ:

ಇದರ ಪ್ರತಿಪಾದದಲ್ಲಿ ೭ ಬ್ರಹ್ಮಗಳೂ ಒಂದು ಗುರುವೂ ಬರುತ್ತಿದ್ದು ಕೊನೆಯ ಗುರು ಲಯಗ್ರಾಹಿಯಾಗಿ ಮುನ್ನಡೆಯುತ್ತದೆ ಎಂಬುದು ಉತ್ಸಾಹದ ಲಕ್ಷಣ. ಇದರಲ್ಲಿಯೂ ಮಾತ್ರಾಗಣಗಳ ತಾಳಲಯದ ನಡೆ ಎದ್ದು ಕಾಣುತ್ತದೆ. ಉತ್ಸಾಹಪೂರ್ಣ ಲಯಗತಿಯ ಕಾರಣದಿಂದ ಈ ಹೆಸರು ಇದಕ್ಕೆ ಬಂದಿದೆ ಎನ್ನಬಹುದು. ಛಂದೋಂಬುಧಿಯಲ್ಲಿಯ ಲಕ್ಷಣಪದ್ಯವಿದು :

ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
- U - U U UU UUU UUU - U - U -
ಭೂಹಿ । ತಾರ್ಥ । ಮೆನಿಸು । ವಜನ । ಗಣಮ । ವೆಯ್ದಿ । ಸಂಪ್ತ । ಸಂ ।

- U - U - U U U U - U - U U U U -
ದೋಹ । ಮತ್ತ । ಲೊಂದೆ । ಗುರು ಬೆ । ಡಂಗ । ನಾಳ್ದು । ನಿಲೆ ಲ ।ಯ ॥
ಗ್ರಾಹಿ।ಯಾಗಿ ।ಮಧುರ ।ವಚನ ।ರಚನೆ । ವೆತ್ತು ।ಬಂದೊಡು ।
ತ್ಸಾಹ । ಮೆಂಬ । ಪೆಸರೊ । ಳೆಸೆವು । ದಬ್ಜ । ಪತ್ರ । ಲೋಚ । ನೇ ॥

– ಈ ಲಕ್ಷಣ ಪದ್ಯದಲ್ಲಿ ಬ್ರಹ್ಮಗಣ ಪ್ರಕಾರಗಳಾಗಿರುವ - . - ಮತ್ತು U U - ಗುರು ಲಘು ವಿನ್ಯಾಸಗಳು ಬಂದಿಲ್ಲ. - . U ಮತ್ತು U U. U ಎಂಬ ವಿನ್ಯಾಸಗಳು ಮಾತ್ರ ಬಂದಿವೆಯೆಂಬುದು ಗಮನಾರ್ಹ. ಇದರಿಂದ ಉತ್ಸಾಹಮಟ್ಟು ತ್ರಿಮಾತ್ರಾಗಣಗಳ ಸರಣಿಯಿಂದ ಕಟ್ಟಿದ್ದೇ ಆಗಿದೆ ಎನ್ನಬಹುದು. ಶುದ್ಧ ಅಂಶಛಂದಸ್ಸಿನ ಮಟ್ಟಾಗಿದ್ದರೆ ಅದರಲ್ಲಿ ಬ್ರಹ್ಮದ ನಾಲ್ಕೂ ಪ್ರಕಾರಗಳಿಗೆ ಅವಕಾಶವಿರುತ್ತಿತ್ತು. ಕಾವ್ಯದಲ್ಲಿ ಕಂಡುಬರುವ ಉತ್ಸಾಹದ ಪದ್ಯಗಳಲ್ಲೂ ಇವೇ ಮಾದರಿಯ ಗುರು ಲಘು ವಿನ್ಯಾಸವಿರುತ್ತದೆಯೆಂದು ತಿಳಿದು ಬಂದಿದೆ.

ಜಯಕೀರ್ತಿ ಉತ್ಸಾಹದ ಈ ಲಕ್ಷಣವನ್ನರಿತೇ ತಾನು ಹೇಳುವ 'ಕರ್ಣಾಟ ಭಾಷಾ ವಿಷಯ ಜಾತಿ'ಗಳಲ್ಲಿ ಉತ್ಸಾಹವನ್ನು ಹೇಳಿಲ್ಲ. ಮಾತ್ರಾ–ವರ್ಣ ವೃತ್ತಗಳನ್ನು ಕುರಿತ ಮಿಶ್ರಾಧಿಕಾರದಲ್ಲಿ ಇದನ್ನು ಸೇರಿಸಿದ್ದಾನೆ. ಈ ವೃತ್ತದ ಹೆಸರನ್ನು 'ಉತ್ಸಾಹ', 'ಉತ್ಸವ' ಎಂದು ಕರೆದಿದ್ದಾನೆ. ಉತ್ಸಾಹದ ಲಕ್ಷಣವನ್ನು ಹೇಳುತ್ತ ಗುರುಲಘುಗಳು ಕ್ರಮವಾಗಿ ಒಂದರ ಮೇಲೊಂದು 'ಏಳು ಸಲ ಬರಬೇಕು; ಕಡೆಗೊಂದು ಗುರುವಿರಬೇಕು. ಗುರುಲಘುಗಳ ಈ 'ಏಳು ಜೋಡಿಗಳ ಬದಲು ಎಲ್ಲಾದರೂ ಒಂದು ಕಡೆ ಅಥವಾ ಎಲ್ಲ ಕಡೆಯೂ ನಗಣ (U U U) ಬರಲಡ್ಡಿಯಿಲ್ಲ. ಛಂದೋಂಬುಧಿಯ ಲಕ್ಷಣಪದ್ಯವನ್ನೇ ಜಯಕೀರ್ತಿಯದೂ ಹೋಲುತ್ತದೆ.. ಎರಡರಲ್ಲೂ ಹಕಾರ ಪ್ರಾಸವಿದೆ. ಇದರಿಂದ ನಾಗವರ್ಮನನ್ನನುಸರಿಸಿಯೇ ಈ ಲಕ್ಷಣಪದ್ಯದ ರಚನೆಯಾದಂತೆನಿಸುತ್ತದೆ. ಜಯಕೀರ್ತಿ ಇಲ್ಲಿ ಅಂಶಗಣದ ಪರಿಭಾಷೆಯನ್ನು ತಾರದೆ, ಮಾತ್ರಾಗಣದ ವರ್ಣಗಣದ ಪರಿಭಾಷೆಯನ್ನೇ ಬಳಸಿದ್ದಾನೆ. ಒಟ್ಟಿನಲ್ಲಿ ಇದು ಮಾತ್ರಾವೃತ್ತ .ಯಾಕೆಂದರೆ – U 'ಈ ಗಣಗಳ ಜತೆಗೆ ಅಲ್ಲಲ್ಲಿ ಈ U U U ಗಣಗಳು ಬೇಕಾದಲ್ಲಿ ಬರಬಹುದಾದ್ದರಿಂದ ವರ್ಣವೃತ್ತದ ನಿಯತ ಲಘು ಗುರುವಿನ್ಯಾಸವಿಲ್ಲಿ ಇಲ್ಲ.

ವರ್ಣವೃತ್ತಗಳಲ್ಲಿ ೧೫ನೆಯ ಅತಿಶಕ್ವರಿ ಛಂದಸ್ಸಿನಲ್ಲಿ 'ಉತ್ಸವ' ಎಂಬ ವೃತ್ತವಿದೆ. ಅದರ ಲಕ್ಷಣ ಸೂತ್ರ ಈ ಮೊದಲೇ ತಿಳಿಸಿದಂತೆ

- U - U - U - U - U - U - U -
ರಂಜರಂಜರಂಬರಲ್ ವಿರಾಜಿಸಿರ್ಪುದುತ್ಸವಂ

– ಎಂದರೆ ರ, ಜ, ರ, ಜ, ರ ಗಣಗಳು ಬರುತ್ತವೆ. ಅದರ ಉದಾಹರಣ ಪದ್ಯವನ್ನು ವರ್ಣವೃತ್ತಗಳ ವಿವರಣೆಯ ಸಂದರ್ಭದಲ್ಲಿ ಕೊಟ್ಟಿದೆ. ಅದನ್ನು ಹೋಲಿಸಿ ನೋಡಬೇಕು. ಹಾಗೆಯೆ ಮಾತ್ರಾ ಛಂದಸ್ಸಿನ ನಿರೂಪಣೆಯಲ್ಲೂ . 'ಉತ್ಸಾಹ' ಎಂಬ ಮಾತ್ರಾಬಂಧದ ವೃತ್ತವೂ ನಿರೂಪಿತವಾಗಿದೆ. ಅಲ್ಲಿ ಪ್ರತಿ ಪಾದದಲ್ಲಿ

ತ್ರಿಮಾತ್ರಾಗಣಗಳೇಳು ಒಂದು ಗುರುವೂ ಇರುವ ನಾಲ್ಕು ಪಾದಗಳುಳ್ಳುದು ಎಂದು ಲಕ್ಷಣ ಹೇಳಲಾಗಿದೆ. ಅದರ ಲಕ್ಷ್ಯಪದ್ಯವನ್ನು ಇದರೊಂದಿಗೆ ಹೋಲಿಸಿ ನೋಡಬೇಕು. 'ಉತ್ಸಾಹ ರಗಳೆ'ಯ ಪಾದಗಳೂ 'ಉತ್ಸಾಹ' ಮಟ್ಟನ್ನು ಹೋಲುವುದನ್ನೂ ಗಮನಿಸಬೇಕು. ಪ್ರಾಚೀನವಾದ ಅಪಭ್ರಂಶ ಭಾಷೆಯ ಛಂದಶ್ಶಾಸ್ತ್ರಕಾರನಾದ ಸ್ವಯಂಭು ಇದನ್ನು 'ತೋಲಅಂ' ವರ್ಣವೃತ್ತವೆಂದು ಹೆಸರಿಸಿದ್ದಾನೆ. ನಾಗವರ್ಮನು ಉತ್ಸಾಹವೃತ್ತವನ್ನು ನಿರೂಪಿಸಿದ ಮೇಲೆ 'ಉತ್ಸಾಹ ದಂಡಕ'ವನ್ನೂ ಹೇಳಿದ್ದಾನೆ. ಇದರಲ್ಲಿ ಗುರು–ಲಘು ಗಳೂ ನಗಣಗಳೂ ಬರುತ್ತವೆ. ಜಯಕೀರ್ತಿಯೂ 'ಉತ್ಸವ ದಂಡಕ' ವನ್ನು ನಾಗವರ್ಮನ ಅನುಸರಣೆಯಿಂದಲೇ ಹೇಳಿದ್ದಾನೆ.

ಆಧುನಿಕ ಕಾವ್ಯದಲ್ಲೂ ಉತ್ಸಾಹ ಲಯದ ಪಾದಗಳು ಅಲ್ಲಲ್ಲಿ ದೊರೆಯುತ್ತವೆ.

ಉದಾ : U U U - U - U - U - U U U U - U -

ಹಳೆಯ । ಬೀಡ । ಬೇಲ । ನಾಡ । ಮಾಡ । ಮೆನಿತೊ । [illegible] । ರಂ

ಬಳಿಯ । ಕೊಳದ । ಕಾರ । ಕಳದ । ನಿಡುಕ । ರೆನಿತೊ । ಬಂಧುರಂ ॥

ಉತ್ಸಾಹದ ಲಯವು ಕನ್ನಡ ಭಾಷೆಗೆ ಹೊಂದಿಕೊಳ್ಳುವಂಥದೆಂಬುದನ್ನು ಮೇಲಿನ ಉದಾಹರಣೆಯಿಂದ ತಿಳಿಯಬಡುದಾಗಿದೆ.

(೮) ಷಟ್ಪದ :

'ಕರ್ಣಾಟಕ ವಿಷಯ ಜಾತಿ' ಯಲ್ಲಿ 'ಷಟ್ಪದ' ವು ತುಂಬ ಮಹತ್ವದ್ದು. ಇದು ಮೂಲದಲ್ಲಿ ಅಂಶಛಂದಸ್ಸಿನಲ್ಲಿ ಒಂದೇ ರೂಪದಲ್ಲಿದ್ದುದು ೧೨ನೆಯ ಶತಕದ ಸುಮಾರಿಗೆ ಮಾತ್ರಾಛಂದಸ್ಸಿಗೆ ತಿರುಗಿ ಆರು ಪ್ರಕಾರಗಳಲ್ಲಿ ಪರಿವರ್ತನಗೊಂಡಿತು. ಈ ಮಾತ್ರಾಗಣ ಘಟಿತ ಷಟ್ಪದಿಗಳನ್ನು ಈ ಮೊದಲೆ ನಿರೂಪಿಸಲಾಗಿದೆ.

ನಾಗವರ್ಮನು ಷಟ್ಪದವನ್ನು ಕುರಿತು ಹೇಳಿದ ಲಕ್ಷಣಪದ್ಯವು ತೀ.ನಂ. ಶ್ರೀಯವರಿಂದ ಪರಿಷ್ಕೃತವಾಗಿ ಹೀಗೆ ರೂಪ ತಳೆದಿದೆ :

- U U U U U -
ಮಂದರಧರಗಣಂ ।
- - - - U -
ಬಂದಿರ್ಕಾರಂತ್ಯದೊಳ್ ।
- U U UUUU UUUU -
ಕುಂದದೆ ನೆಲಸುಗೆ ಮದನಹರಂ ॥
- U U-UU
ಇಂದು ನಿಭಾನನೆ ।
- U U UUU -
ಮುಂದಣ ತೆರನುಮೀ ।

- U - - U - U U - U -
ಯಂದಮಾದಂದು ಷಟ್ಪ (ದ) ಲಕ್ಷಣಂ ॥

– ಈ ಷಟ್ಪದದ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಪ್ರತಿಯೊಂದರಲ್ಲಿ ಆರು ವಿಷ್ಣುಗಣಗಳು ಮೇಲೊಂದು ರುದ್ರಗಣ ಹೀಗೆ 'ಏಳು ಗಣಗಳು ಇರುತ್ತವೆ. ಒಟ್ಟಿನಲ್ಲಿ ಷಟ್ಪದದಲ್ಲಿ ಆರು ಪಾದಗಳು. ೧, ೨, ೪, ೫ನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣಗಳು ೩, ೬ನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣಗಳೊಂದಿಗೆ ಒಂದೊಂದು ರುದ್ರಗಣಗಳು.

ಇದನ್ನು ಹೀಗೆ ಸೂಚಿಸಬಹುದು :

ವಿ+ವಿ
ವಿ+ವಿ
ವಿ+ವಿ+ರು
ವಿ+ವಿ
ವಿ+ವಿ
ವಿ+ವಿ+ರು

ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ 'ಷಟ್ಪದಿಕಾ' ಎಂದು ಇದನ್ನು ಹೆಸರಿಸಿ ನಾಗವರ್ಮನ ಹಾಗೆಯೇ ನಿರೂಪಿಸಿದ್ದಾನೆ. ಮತ್ತು ಷಟ್ಪದಿಕೆಯು ಷಟ್ಚರಣದಂತೆ ಝೋಂಕರಿಸುವುದೆಂದು ಅದರ ಗೇಯತೆಯನ್ನು ಕುರಿತು ಹೇಳಿದ್ದಾನೆ.

ಮಾನಸೋಲ್ಲಾಸದ ೩ನೆಯ ಸೋಮೇಶ್ವರನೂ (ಕ್ರಿ.ಶ. ಸು. ೧೧೨೯) ನಾಗವರ್ಮ ಜಯಕೀರ್ತಿಯರಂತೆಯೇ ಷಟ್ಪದಿಯ ಲಕ್ಷಣವನ್ನು ಹೇಳಿ ಇದು ಕರ್ಣಾಟಭಾಷೆಯಲ್ಲಿ ಹಾಡತಕ್ಕುದು, ಪ್ರಾಣಾಕ್ಷರ (ಪ್ರಾಸಾಕ್ಷರ)ವುಳ್ಳುದು, ತಾಳರಹಿತವಾದುದು, ಅನುಪ್ರಾಸಾತ್ಮಕವಾದುದು, ಕಥೆಯನ್ನು ಒಳಕೊಳ್ಳುವಂಥದು – ಎಂದು ಹೇಳಿದ್ದಾನೆ. 'ಕಥಾಸು ಷಟ್ಪದೀ ಯೋಜ್ಯಾ' – ಕಥೆ ಹೇಳುವಲ್ಲಿ ಷಟ್ಪದಿಯೇ ಯೋಗ್ಯ ಎಂದು ಆತನ ಅಭಿಪ್ರಾಯ. ಬಹುಶಃ ಸೋಮೇಶ್ವರನ ಕಾಲದಲ್ಲಿ ಷಟ್ಪದೀ ಕಥನ ಕಾವ್ಯಗಳಿದ್ದವು ಎನ್ನಬಹುದು.

'ಸಂಗೀತ ರತ್ನಾಕರ' ದಲ್ಲಿ ಶಾಂರ್ಗದೇವನೂ (ಕ್ರಿ.ಶ. ೧೨೫೦) ಷಟ್ಪದಿಯನ್ನು ಸೋಮೇಶ್ವರನಂತೆಯೇ ಲಕ್ಷಣಿಸಿದ್ದಾನೆ. ಇದು ಕನ್ನಡ ಭಾಷೆಗೆ ಸೇರಿದ್ದೆಂದೂ ತಾಳದ ಗಣನೆಗೆ ಒಡಂಬಡದಂಥದೆಂದೂ ಹೇಳಿದ್ದಾನೆ.

ಷಟ್ಪದದ ಚರಿತ್ರೆ :

ಪ್ರಾಚೀನ ತೆಲುಗು ಸಾಹಿತ್ಯದಲ್ಲಿ ಷಟ್ಪದಿ ಕಾವ್ಯಗಳಿಲ್ಲ. ಆದರೂ ಅಲ್ಲಿಯ ಛಂದಶ್ಶಾಸ್ತ್ರಕಾರರು ಇದರ ಲಕ್ಷಣವನ್ನು ದೇಶೀಯ ವೃತ್ತಗಳೊಂದಿಗೆ ನಿರೂಪಿಸಿದ್ದಾರೆ. ನಾಗವರ್ಮನು ಹೇಳಿದ ಲಕ್ಷಣವನ್ನೇ ಅವರೂ ಹೇಳುತ್ತಾರೆ.

ಅಂಶಗಣಘಟಿತವಾದ ಈ ಮೂಲ ಷಟ್ಪದದ ಪ್ರಯೋಗಗಳು ಕನ್ನಡ ಪ್ರಾಚೀನ

ಕಾವ್ಯಗಳಲ್ಲೂ, ಶಾಸನಗಳಲ್ಲೂ ದೊರೆಯುತ್ತವೆ.

೧) ಮೊದಲು ಚಂದ್ರರಾಜನ (ಕ್ರಿ.ಶ. ಸು. ೧೦೩೦) 'ಮದನತಿಲಕ' ದಲ್ಲಿ ಇದು ದೊರೆಯುತ್ತದೆ. ಪ್ರಥಮಾಧಿಕಾರದಲ್ಲಿ ರಚಿಸಿರುವ ವನಮಂಜರಿವೃತ್ತದಿಂದ ಹಲವು ವೃತ್ತಗಳು ಹೊರಡುವಂತೆ ಎರಡು ಷಟ್ಪದಗಳೂ ಹೊರಡುತ್ತವೆಯೆಂದು ಚಂದ್ರರಾಜನೇ ಹೇಳಿದ್ದಾನೆ.

(೨) ಚಿತ್ರದುರ್ಗದ ೪೭ನೆಯ ಶಾಸನದಲ್ಲಿ (ಕ್ರಿ.ಶ. ೧೦೬೭) ಕೆಳಗಿನ ಷಟ್ಪದವು ಕಂಡು ಬರುತ್ತದೆ. ಅದು ಚತುಷ್ಪಾದಗಳಲ್ಲಿ ವೃತ್ತದಂತೆ ಅಚ್ಚಾಗಿದೆ :

- U U - - U - U - U - U U
ಮಂಡಲಿ । ಗಾವಪ್ರ । ಚಂಡ ಬಿ । ವ್ವಿ । ಗಂ ಜಯ ।
- - U U U - - U U -
ಗೊಂಡೇಶ್ವ । ರಕ್ಕೆ ಬಿ । ಟ್ಟುಂ ಬಳಿಯಂ ॥
- U U - UU - U - - - U
ಭಂಡಣ । ಕಳ್ಕದ । ಗಂಡ ನೀ । ಯಲ್ಕಾಂಪ ।
- - - U U -U - U - -UU -
ಗಂಡಂ ಮಾ । ಚಿಗನೆಯ್ದೆ । ರಕ್ಷಿಪಂ (ರಕ್ಷಿಸುಗುಂ ?) ॥

ಇದು ಅಂಶಗಣಘಟಿತ ಷಟ್ಪದವೇ ಅಗಿದೆ. ಎರಡನೆಯ ಪಂಕ್ತಿಯಲ್ಲಿ 'ವ್ವಿಗಂಜಯ' ಎಂಬುದು 'ವ್ವಿಗಜಯ' ಆಗಬೇಕಿತ್ತು. ಹಾಗೆಯೇ ಕೊನೆಯ ಗಣ 'ರಕ್ಷಿಪಂ' ಎಂಬುದು 'ರಕ್ಷಿಸುಗುಂ' ಆಗಬೇಕಿತ್ತು. ಶಾಸನಗಳಲ್ಲಿ ಇಂಥ ತಪ್ಪುಗಳಿರುತ್ತದೆ.

(೩) ಇಂಡಿ ತಾಲೂಕಿನ ಚಡಚಣದ ಶಾಸನ (ಕ್ರಿ.ಶ. ೧೦೬೭) ದಲ್ಲಿ ಮೂರು ಅಂಶ ಛಂದಸ್ಸಿನ ಷಟ್ಪದಗಳಿವೆ. ಇವೂ ಪರಿಷ್ಕೃತವಾದಾಗ ಶುದ್ಧ ಷಟ್ಪದಗಳಾಗುವುವು.

(೪) ಶಾಂತಿನಾಥನ ಸುಕುಮಾರ ಚರಿತೆಯಲ್ಲಿ (ಕ್ರಿ.ಶ. ಸು. ೧೦೬೫) ಅಂಶಗಣ ಘಟಿತ ಷಟ್ಪದವೊಂದಿದೆ : ಅದು ಹೀಗಿದೆ :

UU UU - UU
ಅದು ಪರಮಾಸ್ಪದ ।
U U - U - U U
ಮದು ಪುಣ್ಯ ಸಂಪದ ।
U U U - U U U U - U - -
ಮದು ಮಹಾಭ್ಯುದಯ ವಿಲಾಸವಾಸಂ ॥
UU - U U U - U
ಅದು ದಿಬ್ಯಮದು ಸೇಬ್ಯ ।

UU -U UU -U
ಮದು ಸೌಮ್ಯ ಮದು ರಮ್ಯ ।
UU U--U --U--
ಮದು ಸುಖಾಧಾರ ಸಂಸಾರಸಾರಂ ॥

ಇದರಲ್ಲಿ ಯಾವ ತಪ್ಪೂ ಇಲ್ಲ. ಶುದ್ಧ ಅಂಶಗಣಘಟಿತವಾಗಿದೆ.

(೫) ಅಮ್ಮಿನ ಭಾವಿಯ ಶಾಸನದ (ಕ್ರಿ.ಶ. ಸು. ೧೦೭೧) ಒಂದು ಷಟ್ಪದದ ೩ನೆಯ ಪಾದ ಸಂಪೂರ್ಣ ನಷ್ಟವಾದುದು. ಆದರೂ ಅದನ್ನು ಮೂಲ ಷಟ್ಪದವೆಂದೇ ನಿರ್ಣಯಿಸಲಾಗಿದೆ. ಪಿ.ಬಿ. ದೇಸಾಯಿಯವರು ಇದೊಂದು 'ಅಪೂರ್ವ ಷಟ್ಪದಿ' ಎಂದು ಹೇಳಿದ್ದರು. ಅವರು ಮಾತ್ರಾಗಣಗಳ ಲೆಕ್ಕದಿಂದ ಪರಿಶೀಲಿಸಿದ್ದರು. ಆದರೆ ತೀ.ನಂ.ಶ್ರೀಯವರು ಇದು ಅಂಶಗಣ ಘಟಿತವೆಂದು ಸಿದ್ಧಪಡಿಸಿದರು. ಅಲ್ಲಲ್ಲಿ ಇದೂ ಪರಿಷ್ಕರಣಗೊಳ್ಳಬೇಕಾಯಿತು.

(೬) ೩ನೆಯ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಷಟ್ಪದದ ಲಕ್ಷಣವನ್ನು ವಿವರಿಸಿ ಕೊಟ್ಟ ಲಕ್ಷ್ಯಪದ್ಯವು ಮೂರು ಪಾದಗಳಲ್ಲಿ ಅಚ್ಚಾಗಿದ್ದು ಪರಿಷ್ಕೃತವಾದ ನಂತರ ಅದು ಶುದ್ಧ ಅಂಶ ಛಂದಸ್ಸಿನ ಷಟ್ಪದವೆಂದು ತಿಳಿದುಬಂತು.

ಮನಸೋಲ್ಲಾಸದ ಷಟ್ಪದವೊಂದನ್ನುಳಿದರೆ ಮಿಕ್ಕುವೆಲ್ಲಾ ಉದಾಹರಣೆಗಳು ೧೧ನೆಯ ಶತಕದವು.

ಅದ್ದರಿಂದ ಬಹುಶ : ೧೨ನೆಯ ಶತಕದ ತರುವಾಯ ಷಟ್ಪದವು ತನ್ನ ಅಂಶಗಣದ ಲಕ್ಷಣವನ್ನು ಕಳೆದುಕೊಂಡು ಮಾತ್ರಾಛಂದಸ್ಸಿಗೆ ತಿರುಗಿರಬೇಕು. ಅನಂತರ ಕುಮಾರ ಪದ್ಮರಸ (ಸು. ೧೧೮೦), ಪೋಲಾಳ್ವ ದಂಡನಾಥ (ಸು. ೧೨೨೪), ರಾಘವಾಂಕ (ಸು. ೧೨೨೦), ಕುಮುದೇಂದು (ಸು. ೧೨೬೫) ಮೊದಲಾದವರು ಮಾತ್ರಾಛಂದಸ್ಸಿನ ಷಟ್ಪದಿಗಳನ್ನು ತಮ್ಮ ಕಾವ್ಯಗಳಿಗಾಗಿ ಬಳಸಿದ್ದಾರೆ. ಮೂಲ ಷಟ್ಪದಿಯಿಂದ ಶರ-ಕುಸುಮಗಳನ್ನೂ ಉತ್ಸಾಹರಗಳೆ ಮಂದಾನಿಲರಗಳೆ ಲಲಿತರಗಳೆಗಳಿಂದ ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಷಟ್ಪದಿಗಳನ್ನು ಕಲ್ಪಿಸಿಕೊಂಡಿರಬೇಕು. ರಾಘವಾಂಕನು 'ಉದ್ದಂಡ ಷಟ್ಪದಿ' ಯನ್ನು ಕಟ್ಟಿ ವೀರೇಶ ಚರಿತೆಯನ್ನು ರಚಿಸಿದನು. ಕಿರಿಯ ಚರಣಗಳಲ್ಲಿ ೪ ಮಾತ್ರೆಯ ೫ ಗಣಗಳು ಬರುವುದರಿಂದ ತಾಳದ ಗಣನೆಗೆ ಒಡಂಬಡದ ರಚನೆಯಾಗಿ ಮಾತ್ರಾ ಛಂದಸ್ಸಿಗೂ ಒಗ್ಗದ ಷಟ್ಪದಿಯಾಗಿದೆ. ಇದನ್ನು ಮುಂದೆ ಯಾರೂ ಬಳಸಲಿಲ್ಲ.

ಆಧುನಿಕಕಾವ್ಯದಲ್ಲಿ ಮಾತ್ರಾಛಂದಸ್ಸಿನ ಷಟ್ಪದೀಲಯಗಳ ಸುಳಿದಾಟ ಹೆಚ್ಚು ಹಳೆಯ ಷಟ್ಪದಿಗಳನ್ನೇ ಪಾದಗಳನ್ನು ಒಡೆದು ಬೇರೆ ಬೇರೆ ರೂಪಗಳಲ್ಲಿ ಭಾವಗೀತೆಗಳ ರಚನೆಗಳಾಗಿವೆ.

ಗೋವಿಂದ ಪೈ. ಡಿ.ಎಸ್.ಕರ್ಕಿ ಮೊದಲಾದವರು ಮಾತ್ರಾ ಗಣಗಳ ಲೆಕ್ಕದಿಂದ ೧೨ ರವರೆಗೆ ಷಟ್ಪದೀ ಪ್ರಕಾರಗಳನ್ನು ವಿವರಿಸಿದ್ದಾರೆ. ಕರ್ಕಿಯವರು ತಲ,

ಜಲ, ಮೊದಲಾದ ಹೊಸ ಷಟ್ಪದಿಗಳನ್ನು ಹೆಸರಿಸಿ ಬೇಂದ್ರೆ, ಕುವೆಂಪು ಅವರ ರಚನೆಗಳ ಉದಾಹರಣೆಗಳನ್ನು ಒದಗಿಸಿದ್ದಾರೆ.

(೯) ಅಕ್ಕರಿಕೆ : ನಾಗವರ್ಮನ ಲಕ್ಷಣ ಪದ್ಯ :

ವಿ ವಿ ವಿ ಬ್ರ ವಿ ರು
U U UU - - U UUU - - U U UU - UU -
ಮುರರಿಪು । ಬೊಮ್ಮಂ । ಮುರರಿಪು । ಬೊಮ್ಮಂ । ಮುರರಿಪು । ಶೂಲಧರಂ
ಸರಸದೆ । ನಿಲ್ಕುಂ । ಖರಗಣ । ಮಕ್ಕುಂ । ಸುರುಚಿರ । ಮಾತ್ರೆಗಳಿಂ ॥
ನಿರುಪಮ । ದಿಂದಂ । ಪರಿಮಿತ । ಮಪ್ಪಂ । ತಿರೆಯತಿ । ಋತುನಿಯತಂ ।
ಬರೆ ತರ । ಳಾಕ್ಷೀ । ಧರೆಯೊಳಿ । ದೆತ್ತಂ । ಕರಮೆಸೆವಕ್ಕರಿಕೆ ॥

– ಲಕ್ಷಣವಿದು : ವಿ+ಬ್ರ+ವಿ+ಬ್ರ+ವಿ+ರು ॥ ಪ್ರತಿಪಾದಕ್ಕೆ ಹೀಗೆ ಗಣಗಳಿರುವ ನಾಲ್ಕು ಪಾದಗಳು. ಕೊನೆಯಲ್ಲಿ ರುದ್ರಗಣವಿದ್ದು ಉಳಿದೆಡೆಗಳಲ್ಲಿ ನಾಲ್ಕು ಲಘು ವರ್ಣಗಳಿರುವ ವಿಷ್ಣುಗಣ ('ಮುರರಿಪು') ಗಳನ್ನು ಮತ್ತು ಎರಡು ಗುರುವರ್ಣಗಳುಳ್ಳ ಬ್ರಹ್ಮಗಣ ('ಬೊಮ್ಮಂ')ಗಳನ್ನು ಮಾತ್ರ ಸಂಯೋಜಿಸಲಾಗಿದೆ. ಮಾತ್ರೆಗಳ ವಿಚಾರವೂ ಇಲ್ಲಿದೆ. ಪ್ರತಿ ಪಾದದಲ್ಲಿ ೨೬ ಮಾತ್ರೆಗಳಿವೆ : ಚತುರ್ಮಾತ್ರಾಗಣಗಳಾರು ಮೇಲೊಂದು ಗುರು, ಎರಡೆರಡು ಗಣಗಳಿಗೊಮ್ಮೆಯತಿ (ಋತುನಿಯತಂ). ವಿಷ್ಣು–ಬ್ರಹ್ಮಗಣಗಳು ಒಟ್ಟು ಆರು (ಖರಗಣಮಕ್ಕುಂ – ಖರ= ಆರು : ಋತುರಸ ಖರಮವಾರು')

ಜಯಕೀರ್ತಿಯ ಲಕ್ಷಣವೂ ಇದೇ ಆಗಿದೆ. ಎಂಟೆಂಟು ಮಾತ್ರೆಗಳ ನಂತರ ಯತಿ ಎರಡು ಸಲ ಎಂದಿದ್ದಾನೆ. ಕೊನೆಯ ಗಣ ರುದ್ರ ಎಂದು ನಾಗವರ್ಮ ಹೇಳಿದರೆ ಜಯಕೀರ್ತಿ ವಿಷ್ಣು + ೧ ಗುರು ಎಂದಿದ್ದಾನೆ. ಎರಡೂ ಒಂದೇ ಮಾತ್ರೆಗಳು ಒಟ್ಟು ೧೦೪ (ಪ್ರತಿ ಪಾದಕ್ಕೆ ೨೬. ನಾಲ್ಕು ಪಾದಗಳಿಗೆ ೧೦೪) ಜಗಣವಲ್ಲದ ಚತುರ್ಮಾತ್ರಾಗಣಗಳು ೬+೧ಗು.

ನಾಗವರ್ಮ–ಜಯಕೀರ್ತಿಯರಿಬ್ಬರೂ ಮಾತ್ರಾ–ವರ್ಣಗಣ ವಿನ್ಯಾಸಗಳೆರಡನ್ನೂ ಹೇಳಿದ್ದಾರೆ. ಅಕ್ಕರಿಕೆಯನ್ನು ಅಂಶಗಣದ ರಾಗಲಯದಲ್ಲೂ ಮಾತ್ರಾಗಣದ ತಾಳಲಯದಲ್ಲೂ ಹಾಡಬಹುದಾಗಿದೆ.

ಜಯಕೀರ್ತಿ ನಾಗವರ್ಮನ ಲಕ್ಷಣಪದ್ಯವನ್ನು ಅನುಕರಿಸಿಯೇ ಸಂಸ್ಕೃತದಲ್ಲಿ ಅದೇ ರೀತಿಯಲ್ಲಿ ಲಕ್ಷಣ ಹೇಳಿದ್ದಾನೆ. ಉತ್ಸಾಹದಂತೆ ಅಕ್ಕರಿಕೆಯನ್ನೂ ಜಯಕೀರ್ತಿ ಮಾತ್ರಾ–ವರ್ಣವೃತ್ತಗಳ ಮಿಶ್ರಾಧಿಕಾರಕ್ಕೆ ಸೇರಿಸಬಹುದಿತ್ತು ಎನಿಸುತ್ತದೆ.

ಷಡಕ್ಷರಿಯ 'ವೃಷಭೇಂದ್ರವಿಜಯ'ದಲ್ಲಿ ಅಕ್ಕರಿಕೆಗೆ ಉದಾಹರಣೆಯಿದೆ :

UUUU UU - UUUU U U- UUUU - UU -
ಸುರನುತ । ಚರಣೇ । ವರಗುಣ । ಭರಣೇ ।ಖರರುಚಿ । ಬಿಂಬಗತೇ ।
ಸರಸಿಜ ವದನೇ ಸುರುಚಿರರದನೇ ಪುರಹರಣಾಂಗಯುತೇ ॥

ಕರಧೃತ ನಲಿನೇ ಪರಿಹೃತ ಮಲಿನೇ ಹರಿವಿಧಿ ಶಕ್ರಸುತೇ।
ಕರಿರಿಪುಗಮನೇ ಹರಿರಿಪುಶಮನೇ ಪೊರೆ ಗಿರಿರಾಜಸುತೇ॥

ಮಾತ್ರಾಛಂದಸ್ಸಿನಲ್ಲಿ ಅಕ್ಕರಿಕೆ ಎಂಬ ವೃತ್ತವನ್ನು ಈ ಮೊದಲೇ ನಿರೂಪಿಸಿದ್ದಾಗಿದೆ. ಅಲ್ಲಿ ಚತುರ್ಮಾತ್ರಾಗಣಗಳಾರು ಮೇಲೊಂದು ಗುರು ಹೀಗೆ ಇರುವ ನಾಲ್ಕು ಪಾದಗಳು ಎಂದು ಲಕ್ಷಣ ಹೇಳಿದರೂ ನಿಯತವಾಗಿ – U U U U , U U - ಈ ಗಣಗಳ ಸರಣಿಯೇ ಬಂದಿರುವುದು ಗಮನಾರ್ಹ. ಮೂಲದಲ್ಲಿ ಅಂಶಗಣಾನ್ವಿತವಾದ ಅಕ್ಕರಿಕೆ ಮಾತ್ರಾಗಣಕ್ಕೆ ಬಹುಬೇಗ ತಿರುಗಿರಬೇಕು.

(೧೦) ಛಂದೋವತಂಸ :

ಇದಕ್ಕೆ ಎರಡು ಬಗೆಯ ಲಕ್ಷಣವನ್ನು ಹೇಳಲಾಗಿದ್ದು ಕಂಡುಬರುತ್ತದೆ. ಕಿಟ್ಟೆಲ್ ಪ್ರತಿಯಲ್ಲಿ ೩ ವಿಷ್ಣು+ಬ್ರಹ್ಮ ; ಮದ್ರಾಸ್ ಪ್ರತಿಯಲ್ಲಿ ೧ವಿ+೪ಬ್ರ. ಜಯಕೀರ್ತಿಯಲ್ಲಿ ೧ ಮದನ (ವಿಷ್ಣು) + ೪ರತಿ (ಬ್ರಹ್ಮ) – ಮದ್ರಾಸ ಪ್ರತಿಯಂತೆ.

ಕಿಟ್ಟೆಲ್ ಪ್ರತಿಯ ಲಕ್ಷಣವೇ ಛಂದೋವತಂಸದ ಲಕ್ಷಣ ಎಂದು ವಿದ್ವಾಂಸರು ಹೇಳಿ ಅದರ ಪರಿಷ್ಕೃತ ಲಕ್ಷಣ ಪದ್ಯ ಕೆಳಗಿನಂತಿದೆ ಎಂದಿದ್ದಾರೆ :

ವಿ ವಿ ವಿ ಬ್ರ
- UU UUUU - U U U U -
ಮಂದರ । ಧರಗಣ । ಮೊಂದಿರೆ । ಮೊದಲೊಳ್ ।
ಬಂದಿರೆ ನಾಲ್ಕಕೆ ಬಿಸರುಹ ಜನ್ಮಂ ॥
ಸಂದುದು ಲಕ್ಷಣಮೀ ತೆರದಿಂದಂ ।
ಛಂದೋವತಂಸಕೆ ಮದಗಜಗಮನೇ ॥

ಲಕ್ಷಣ : (೧) ನಾಲ್ಕು ಪಾದಗಳು (೨) ಪ್ರತಿ ಚರಣದಲ್ಲಿ ೩ವಿ+೧ಬ್ರ. ಇಲ್ಲಿ ಪ್ರತಿ ಚರಣದಲ್ಲಿ ಚತುರ್ಮಾತ್ರಾಗಣಗಳೂ ನಾಲ್ಕು ಹೊರಡುತ್ತವೆ. ಮಾತ್ರಾಗಣದ ತಾಳಲಯವೂ ಇದೆ. ಆದರೆ ಅಂಶಗಣದ ರಾಗಲಯಕ್ಕೂ ಇದು ಹೊಂದುತ್ತದೆ. ಕ್ರಮೇಣ ಇದು ಮಾತ್ರಾಗಣಕ್ಕೆ ತಿರುಗಿರಬಹುದಾಗಿದೆ.

ಜಯಕೀರ್ತಿ ಹೇಳುವ ೧ವಿ+೪ಬ್ರ ಈ ಲಕ್ಷಣವು ಅವನೇ ಈ ವೃತ್ತಕ್ಕೆ ಹೇಳುವ 'ಆದಿವರಾಹ' ಎಂಬ ಹೆಸರಿನ ವೃತ್ತದ್ದು ಎನ್ನಬಹುದಾಗಿದೆ.

ಛಂದೋವತಂಸವು ನಾಗವರ್ಮ ಹೇಳಿದ ಲಕ್ಷಣದ್ದು ಎಂದೇ ಹೇಳಬಹುದು. ಅದಕ್ಕೆ ಉದಾಹರಣೆಗಳು ದಾಸರ ಪದಗಳಲ್ಲಿ ಚಿಕ್ಕದೇವರಾಜ ಬಿನ್ನಪದಲ್ಲಿ ದೊರೆಯುತ್ತವೆ :

ಉದಾ : ವಿ ವಿ ವಿ ಬ್ರ
- U U UUUU UUU1U - -
ಬಾವಿಯ । ಬಳಸುವ । ಪಸುಳೆಯ । ತಪ್ಪೋ ।
ತಾವಂದು ತಡೆಯದ ತಾಯಿಯ ತಪ್ಪೋ ॥

ಈ ವಿಷಯಕೆ ಮುಗ್ಗುವೆನ್ನಯ ತಪ್ಪೋ ।
ಆ ವೇಳೆ ಕಾಪುಗೈಯದ ನಿನ್ನ ತಪ್ಪೋ ॥

– ಚಿಕ್ಕದೇವರಾಜ.

(೧೧) ಸಾಂಗತ್ಯ : ಹಿನ್ನೆಲೆ :

ಇದು ೧೪೧೦ರಲ್ಲಿದ್ದ ದೇವರಾಜನ 'ಸೊಬಗಿನ ಸೋನೆ' ಎಂಬ ಕಾವ್ಯದಲ್ಲಿ ಮೊದಲ ಸಲ ಕಾಣಬಂದುದು. ನಾಗವರ್ಮ – ಜಯಕೀರ್ತಿಯರ ಕಾಲದಲ್ಲಿ ಇದು ಇದ್ದಿರಲಿಲ್ಲ. ಆದ್ದರಿಂದ ಜನಪ್ರಿಯವೆನಿಸಿದ ಸಾಂಗತ್ಯ 'ಕರ್ಣಾಟ ವಿಷಯ ಜಾತಿ' ಯಲ್ಲಿ ನಾಗವರ್ಮ-ಜಯಕೀರ್ತಿಯರಿಂದ ಉಕ್ತವಾಗಿಲ್ಲ. ಬಹುಶಃ ೧೪ನೆಯ ಶತಕದ ಈಚೆಗೆ ಇದು ಹುಟ್ಟಿ ಪ್ರಚುರವಾಗಿರಬೇಕು. ಅನಂತರ ಸಾಂಗತ್ಯದಲ್ಲಿ ನೂರಾರು ಕಾವ್ಯಗಳು ಹುಟ್ಟಿವೆ. ರತ್ನಾಕರವರ್ಣಿ, ಹೊನ್ನಮ್ಮ, ನಂಜುಂಡಕವಿ, ಮಂಗರಸ ಮೊದಲಾದ ಪ್ರಖ್ಯಾತ ಕವಿಗಳ ಕೈಯಲ್ಲಿ ಪ್ರಸಿದ್ಧ ಛಂದಸ್ಸಾಗಿ ಬೆಳಗಿದೆ. ಅಂಶಗಣದ ಮಟ್ಟುಗಳಲ್ಲಿ ಹಾಡುವುದಕ್ಕೆ ಸೊಗಸಾದುದೆಂದರೆ ಸಾಂಗತ್ಯವೇ ಎನ್ನುವಂತಾಯಿತು.

ಲಕ್ಷಣ : (೧) ನಾಲ್ಕು ಪಾದಗಳು ೧ ಮತ್ತು ೩ನೆಯ ಪಾದಗಳಲ್ಲಿ ೪ ವಿಷ್ಣು, ೨ ಮತ್ತು ೪ನೆಯ ಪಾದಗಳಲ್ಲಿ ೨ ವಿಷ್ಣು ೧ ಬ್ರಹ್ಮ : ಇದು ಸಾಮಾನ್ಯ ಲಕ್ಷಣವಾದರೂ ಆಗಾಗ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮವೋ ರುದ್ರವೋ, ಬ್ರಹ್ಮನ ಸ್ಥಾನದಲ್ಲಿ ವಿಷ್ಣುವೋ ರುದ್ರವೋ ಬರುವುದೂ ಉಂಟು. ಇದು ಹಾಡಲು ಯೋಗ್ಯವಾಗಿರುವುದು.

ಸಾಂಗತ್ಯದ ಮೂಲ

'ಗೀತಿಕೆ' ಯ ಎರಡು ಪಾದಗಳ ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು ಎಂದೂ, ತ್ರಿಪದಿಯನ್ನು ಕಥನ ಶೈಲಿಗೆ ಹೊಂದಿ ಕೊಳ್ಳುವಂತೆ ಮಾರ್ಪಡಿಸಿದ ಫಲವೇ ಸಾಂಗತ್ಯವೆಂದು ತೋರುತ್ತದೆ ಎಂದೂ, ಅಕ್ಕರದ ಅಥವಾ ಎರಡು 'ಏಳೆಗಳಿಂದ ಸಾಂಗತ್ಯವಾಗುತ್ತದೆ ಎಂದೂ-ಹೀಗೆ ಅನೇಕ ಅಭಿಪ್ರಾಯಗಳು ಸಾಂಗತ್ಯದ ಮೂಲವನ್ನು ಕುರಿತು ಹೊರಟಿವೆ.

ತ್ರಿಪದಿಯನ್ನು ಅಲ್ಪಸ್ವಲ್ಪ ಮಾರ್ಪಡಿಸಿ ಸಾಂಗತ್ಯವನ್ನು ಮಾಡಿಕೊಂಡಿರಬಹುದೆಂಬ ಅಭಿಪ್ರಾಯ ಯುಕ್ತವಾದುದು ಎನಿಸುತ್ತದೆ. ಎರಡರ ಲಕ್ಷಣವನ್ನೂ ಹೋಲಿಸಿ ಅವಲೋಕಿಸಿದಾಗ ಇದು ಖಚಿತವಾಗುತ್ತದೆ.

ತ್ರಿಪ್ರದಿ	**ಸಾಂಗತ್ಯ**
ವಿ+ವಿ+ವಿ+ವಿ	ವಿ+ವಿ+ವಿ+ವಿ
ವಿ+ಬ್ರ+ವಿ+ವಿ	ವಿ+ವಿ+ಬ್ರ
ವಿ+ಬ್ರ+ವಿ ॥	ವಿ+ವಿ+ವಿ+ವಿ
	ವಿ+ವಿ+ಬ್ರ ॥

ತ್ರಿಪದಿಯ ಎರಡನೆಯ ಪಾದದ ಮೊದಲ ಮೂರು ಗಣಗಳಲ್ಲಿಯ ಬ್ರಹ್ಮಗಣವನ್ನು ಸ್ಥಳಾಂತರಿಸಿ ಕೊನೆಗೆ ಇರಿಸಿದಾಗ ಸಾಂಗತ್ಯದ ಪೂರ್ವಾರ್ಧ ಹುಟ್ಟುತ್ತದೆ. ಪೂರ್ವಾರ್ಧದಂತೆಯೇ ಉತ್ತರಾರ್ಧವನ್ನು ಮಾಡಿಕೊಂಡಾಗ ಸಾಂಗತ್ಯವಾಗುತ್ತದೆ. ತ್ರಿಪದಿ ಚಿಕ್ಕ ಚಿಕ್ಕ ಭಾವ ಆಲೋಚನೆಗಳ ಅಭಿವ್ಯಕ್ತಿಗೆ ಯೋಗ್ಯವೆನಿಸಿದರೆ ಸಾಂಗತ್ಯ ಕಥನಕ್ಕೆ ಮತ್ತು ಹಾಡುವುದಕ್ಕೆ ಯೋಗ್ಯವೆನಿಸಿದೆ. ಜಾನಪದದಲ್ಲಿ ಲೋಕಪ್ರಿಯವೆನಿಸಿದ್ದ ತ್ರಿಪದಿ ಮಾರ್ಪಟ್ಟು ಮತ್ತೊಂದು ಹೆಚ್ಚು ಲೋಕಪ್ರಿಯ ಮಟ್ಟು ರೂಪುತಳೆಯುವಂತಾಯಿತು.

ಬ್ರಹ್ಮಗಣದ ಸ್ಥಳಾಂತರದಿಂದ ಮತ್ತೊಂದು ಪಾದವನ್ನು ಹೆಚ್ಚಿಗೆ ಸೇರಿಸುವುದರಿಂದ ಸಾಂಗತ್ಯವಾಯಿತು ಎನ್ನುವುದಕ್ಕಿಂತ, ಸಾಂಗತ್ಯವು ಅಂಶಗಣದ ರಾಗಲಯದ ಜಾಯಮಾನವನ್ನನುಸರಿಸಿ ಸ್ವತಂತ್ರವಾಗಿ ಹುಟ್ಟಿರಬಾರದೇಕೆ ? ಎಂಬವರೂ ಇದ್ದಾರೆ. ಹೋಲಿಕೆಯ ಮೂಲಕ ಒಂದಾದ ಮಟ್ಟು ಮತ್ತೊಂದಕ್ಕೆ ಪ್ರೇರಕವಾಗುವುದೂ ಉಂಟು. ಉದಾ : ಷಟ್ಪದವು ಮೊದಲು ಎರಡಾಗಿ ಅನಂತರ ಆರಾದುದು, ಹನ್ನೆರಡಾದುದು ಹೀಗೆಯೇ ಅಲ್ಲವೆ ?

'ಸಂಗತಿ' ಎಂದರೆ ಕಥಾವಸ್ತು ಎಂದಾದರೆ, ಕಥನಕ್ಕೆ ಯೋಗ್ಯವಾದುದು 'ಸಾಂಗತ್ಯ' ಎನ್ನಬಹುದು. 'ಸಂಗತಿ' ಎಂಬುದು ಸಂಗೀತದ ಪರಿಭಾಷೆ ಎಂದಾದರೆ, ಹಾಡಲು ಯೋಗ್ಯವಾದ್ದು ಎಂಬ ಮಾತು ಸಂಗೀತದ ಪರಿಭಾಷೆಯಲ್ಲಿದೆ. ಭರತೇಶವೈಭವ, ಹದಿಬದೆಯ ಧರ್ಮ, ಮೋಹನತರಂಗಿಣಿ ಮೊದಲಾದ ಸಾಂಗತ್ಯ ಕಾವ್ಯಗಳು ಕಥನವನ್ನೊಳಗೊಂಡ ಹಾಡುಗಬ್ಬಗಳಾಗಿವೆ. ಹಾಡಲು ಯೋಗ್ಯವಾದುದು ಸಾಂಗತ್ಯ. ಸಾಂಗತ್ಯ (ಸಂಗತಿಹಾಕುವುದು)

ಆಧುನಿಕರಲ್ಲಿ ಎಸ್.ವಿ. ಪರಮೇಶ್ವರ ಭಟ್ಟರು ಮೊದಲಾದವರು ಸಾಂಗತ್ಯವನ್ನು ಬಳಸಿ ಕಾವ್ಯ ರಚನೆ ಮಾಡಿದ್ದಾರೆ.

★★★

ಅಧ್ಯಾಯ : ೫

ಹೊಸಗನ್ನಡ ಛಂದಸ್ಸು

ಮುಖ್ಯಾಂಶಗಳು : ೧. ಹೊಸಗನ್ನಡದ ಛಂದೋಲಯಗಳು : ಆರು : ಅವುಗಳ ಸ್ವರೂಪ.
೨. ಗಣವಿಭಜನೆಯ ರಹಸ್ಯ
೩. ವಿಷಮ ಗಣದ ಪ್ರಯೋಜನ
೪. ಗಣಪರಿವೃತ್ತಿ
೫. ಮಾತ್ರೆ, ಮುಡಿ, ಪದ್ಮಗಣ :
ಪ್ಲುತ, ಕಂಪಿತ, ಮೌನ, ವಿರಾಮ, ಗುರುವನ್ನು ಕುಗ್ಗಿಸುವುದು, ಮುಡಿ, ಪದ್ಮಗಣ.

★★★

೧. ಹೊಸಗನ್ನಡ ಛಂದೋಲಯಗಳು : ಆರು : ಅವುಗಳ ಸ್ವರೂಪ

ಹೊಸಗನ್ನಡದ ಕೆಲವು ಪದ್ಯ ಮಾದರಿಗಳನ್ನು ತೆಗೆದುಕೊಂಡು ಅಲ್ಲಿ ಕಾಣಬರುವ ಲಯವನ್ನು ಗುರುತಿಸಿದಾಗ ಮುಖ್ಯವಾಗಿ ಅವು ಆರು ಪ್ರಕಾರದವೆಂದು ತಿಳಿದುಬರುತ್ತದೆ ಎಂದು ಶ್ರೀಯವರು ತಮ್ಮ ಸಮಾಲೋಕದಲ್ಲಿ ಹೇಳುತ್ತಾರೆ. ಅವು ಕ್ರಮವಾಗಿ ೩, ೪, ೫, ೬ (೨+೪ ಇಲ್ಲವೆ ೪+೨), ೭ (೩+೪) ೮ (೩+೫) ಎಂಬ ಸಂಖ್ಯೆಯ ಮಾತ್ರೆಗಳ ಗಣಗಳಿಂದ ಆದುವೆಂದು ಹೇಳಬಹುದು. ಉದಾಹರಣೆಗಾಗಿ 'ಶ್ರೀ' ಯವರ 'ಇಂಗ್ಲಿಷ್ ಗೀತಗಳು ಮತ್ತು 'ಅಶ್ವತ್ಥಾಮನ್' – ಈ ಎರಡು ಕೃತಿಗಳಿಂದ ಪದ್ಯಪಾದಗಳನ್ನು ಆಯ್ದು ತೋರಿಸಿದ್ದಾರೆ. ಅವನ್ನೀಗ ಪರಿಶೀಲಿಸುವ :

೧) ಮೂರು ಮಾತ್ರೆಯ ಗಣಕ್ಕೆ :

U U U I - U I - U I U U U I
ಮೊದಲು ತಾಯ ಹಾಲ ಕುಡಿದು
- U I - U I U U U I U U U
ಲಲ್ಲೆಯಿಂದ ತೊದಲಿ ನುಡಿದು
U UU I U U U I UUU I - U -
ಕೆಳೆಯ ರೊಡನೆ ಬೆಳೆದು ಬಂದ (೩ಮಾ+೩ಮಾ+೩ಮಾ+೩ಮಾ)
- U I - U U
ಮಾತ ದಾವು ಮು

— — — — — — — —

೨) ಲೋಕಂ । ಪುಟ್ಟಲ್ । ಲೋಕಂ । ಸಾಯಲ್

(೪ಮಾ+೪ಮಾ+೪ಮಾ+೪ಮಾ)

- U UU - U U U UUUU U - U UU

೩) ಆಶೆಗಳು ।ಆಶೆಯನು । ಕನಲಿಸುವ । ವಿಘ್ನಗಳು । (೫+೫+೫+೫)

- UU UU -UU UU U U U U UU U - -

೪) ಚೆಲ್ವಿನ ನೆಲೆ । ಕಣ್ಗಳ ಬಲೆ । ಸುಖದೊರೆತೆಯ ।ಬನವಾಸೀ (೬+೬+೬+೬)

U UU - U U UUU - U U

೫) ಒಲಿದು ದಾಯಿತು । ನಲಿದು ದಾಯಿತು । (೭+೭)

- U - UUU - U - UUU

೬) ನೋಟ ಸಿಂಗರದ । ತೋಟ ದೊತ್ತಿನಲಿ (೮+೮)

ಮೇಲಿನ ಪ್ರತಿಯೊಂದರಲ್ಲು ನಡೆ ಬೇರೆ ಬೇರೆ. ಇಲ್ಲಿ ಕ್ರಮವಾಗಿ ೩ ಮಾತ್ರೆಯ ಗಣಗಳು, ೪ ಮಾತ್ರೆಯ ಗಣಗಳು, ೫ ಮಾತ್ರೆಯ ಗಣಗಳು, ೬ ಮಾತ್ರೆಯ (೨+೪ ಇಲ್ಲವೆ ೪+೨) ಗಣಗಳು, ೭ ಮಾತ್ರೆಯ (೩+೪) ಗಣಗಳು, ೮ ಮಾತ್ರೆಯ (೩+೫) ಗಣಗಳು ಬಂದಿವೆ. ೬, ೭, ೮ ಮಾತ್ರೆಯ ಗಣಗಳನ್ನು ಅವಲೋಕಿಸಬೇಕು. ಇವು ಒಂದು ರೀತಿಯಲ್ಲಿ ಮಿಶ್ರಗಣಗಳು. ೬ ಮಾತ್ರೆಯ ಗಣವನ್ನು ೩+೩ ಹೀಗೆ ಒಡೆಯಲಾಗುವುದಿಲ್ಲ. ಹಾಗೆ ಆಗುತ್ತಿದ್ದರೆ ಆ ಪಾದ ೩ ಮಾತ್ರೆಯ ಲಯದ ಗುಂಪಿಗೆ ಸೇರುತ್ತಿತ್ತು. ೬ ಮಾತ್ರೆಯದನ್ನು ಇಡಿಯಾಗಿ ಒಂದು ಗಣವೆಂದು ಪರಿಗಣಿಸಬೇಕಾಗುತ್ತದೆ. ಆದರಲ್ಲಿ ಸೂಕ್ಷ್ಮವಾಗಿ ೨+೪ ಇಲ್ಲವೆ ೪+೨ ಮಾತ್ರೆಗಳ ಸೇರುವೆ ಇರುವುದೇ ಗಮನಕ್ಕೆ ಬರುತ್ತದೆ. ಹಾಗೆಯೇ ೭ ಮಾತ್ರೆಯ ಮತ್ತು ೮ ಮಾತ್ರೆಯ ಗಣಗಳನ್ನು ಪ್ರತ್ಯೇಕ ಗಣಗಳೆಂದು ಪರಿಗಣಿಸಬೇಕಾಗುತ್ತದೆ.

ಮೇಲೆ ಸೂಚಿಸಿದ ಈ ಆರು ಲಯಗಳಲ್ಲಿ ೬ ಮಾತ್ರೆಯ ಗಣವೊಂದನ್ನು ಬಿಟ್ಟು ಉಳಿದ ಐದು ಲಯಗಳ ಪರಿಚಯ ಕನ್ನಡಿಗರಿಗಿದೆ ಎನ್ನಬಹುದು. ೩ ಮಾತ್ರೆಯ ಗಣವು ಉತ್ಸಾಹರಗಳೆಯಲ್ಲಿ ಮತ್ತು ಭೋಗಷಟ್ಪದಿಗಳಲ್ಲೂ ೪ ಮಾತ್ರೆಯದು ಮಂದಾನಿಲರಗಳೆ ಶರಷಟ್ಪದಿ, ಪರಿವರ್ಧಿನೀಷಟ್ಪದಿಗಳಲ್ಲೂ, ೫ ಮಾತ್ರೆಯದು ಲಲಿತರಗಳೆ, ಕುಸುಮಷಟ್ಪದಿ ವಾರ್ಧಕಷಟ್ಪದಿಗಳಲ್ಲೂ, ೭ ಮಾತ್ರೆಯದು (೩+೪) ಭಾಮಿನೀಷಟ್ಪದಿಯಲ್ಲೂ ಗೋವಿನ ಕಥೆಯ ಮಟ್ಟುಗಳಲ್ಲೂ ಹಿಂದಿನಿಂದಲೇ ಬಳಕೆಯಲ್ಲಿದ್ದುದು ನಮಗೆ ತಿಳಿದಿದೆ. ೮ ಮಾತ್ರೆಯ (೩+೫) ಗಣವು ಪಂಪನ ಒಂದು ರಗಳೆಯಲ್ಲಿ ಕಂಡುಬಂದಿದೆ. ಒಂದು ಸಾವಿರ ವರ್ಷಗಳೀಚೆಗೆ ಅದು ಮತ್ತೆ ಇಂಗ್ಲಿಷ್ ಗೀತೆಗಳಲ್ಲಿ ತಲೆಯೆತ್ತಿದೆ ಎನ್ನಬಹುದು. ೬ ಮಾತ್ರೆಯ ಧಾಟಿ ಮಾತ್ರ 'ಅಶ್ವತ್ಥಾಮನ್' ನಾಟಕದಲ್ಲೆ ಮೊಟ್ಟಮೊದಲು ಆವಿರ್ಭಾವವಾದುದು ಎಂದು ತೀ.ನಂ. ಶ್ರೀಯವರು ಹೇಳಿದ್ದರೂ ಅವರೇ 'ಧವಳ'ವೆಂಬ ಜಾತಿಯ ಹಾಡುಗಳಲ್ಲಿ ಅದು ಪ್ರಯೋಗವಾದುದನ್ನು ಡಿ.ಎಲ್.ಎನ್. ಅವರು ಈ ಬಗ್ಗೆ ಬರೆದ ಲೇಖನದಿಂದ ತಿಳಿದು ನೆನಪಿಸಿದ್ದಾರೆ.

ಮೇಲೆ ವಿವರಿಸಿದ ಆರು ಲಯಗಳಲ್ಲದೆ ೨ ಮಾತ್ರೆಯ ಗಣ ಮತ್ತು ೯ಮಾತ್ರೆಯ (೪+೫) ಮಿಶ್ರಗಣ ಇವುಗಳ ಲಯದಲ್ಲಿ ಪದ್ಯರಚನೆ ಆಗಬಹುದೇ ಎಂಬ ಪ್ರಶ್ನೆಯನ್ನೆತ್ತಿ ತೀ.ನಂ. ಶ್ರೀಯವರು ೨ ಮಾತ್ರೆಯದು ಅತಿ ಹ್ರಸ್ವವಾಗುತ್ತದೆ ಮತ್ತು ತಾಳ ತಾಳಕ್ಕೆ ಅಂತರ ಬಲು ಕಿರಿದಾಗುತ್ತದೆ ಎಂದಿರುವುದಲ್ಲದೆ ೨ ಮಾತ್ರೆಯ ಎರಡು ಗಣಗಳಿಗೂ ೪ ಮಾತ್ರೆಯ ಒಂದು ಗಣಕ್ಕೂ ನಿಜವಾದ ಭೇದವಿರುವುದಿಲ್ಲ ಎಂದು ಅದನ್ನು ನಿರಾಕರಿಸುತ್ತಾರೆ. ಇನ್ನು ೯ ಮಾತ್ರೆಯ ಗಣದ ನಡೆ (೪+೫)ಯ ಅಥವಾ ಲಯದ ನೆಲೆ ಹತ್ತದೆಂದು ಅದನ್ನೂ ನಿರಾಕರಿಸುತ್ತಾರೆ. ಇಲ್ಲಿ ೪ ಮಾತ್ರೆಯಾದ ಮೇಲೆ ಒಳತಾಳ ಬೀಳಬೇಕು. ಈ ಉಪಗಣಗಳಲ್ಲಿ ಸುಸ್ಪಷ್ಟವಾದ, ಸುಲಭಗ್ರಾಹ್ಯವಾದ ವ್ಯತ್ಯಾಸವಿಲ್ಲ. ೭ ಮತ್ತು ೮ ಮಾತ್ರೆಯ ಗಣಗಳಲ್ಲಿ ಈ ವ್ಯತ್ಯಾಸವುಂಟು. ೭=೩+೪ ಈ ಎರಡು ಉಪಗಣಗಳಿಗೂ ಅಳತೆಯಲ್ಲಿ ೩:೪=೧/೩ ರಷ್ಟು ಅಂತರವಿದೆ. ಮನಸ್ಸು ಈ ಅಂತರವನ್ನು ಸರಿಯಾಗಿ ಹಿಡಿಯಬಲ್ಲುದು. ೮ ಮಾತ್ರೆಯ ಗಣದಲ್ಲಿ ಇನ್ನೂ ಸ್ಪಷ್ಟವಾದ ಅಂತರವಿದೆ ೩:೫=೨/೩. ಆದರೆ ೯ ಮಾತ್ರೆಯ ಗಣದಲ್ಲಿ ಈ ಅಂತರ ತೀರ ಕಡಿಮೆ ೪:೫ = ೧/೪ ಇಲ್ಲಿಯ ಉಪಗಣಗಳ ಸೂಕ್ಷ್ಮ ವ್ಯತ್ಯಾಸವನ್ನು ತಾಳಲಯದಲ್ಲಿ ಗ್ರಹಿಸುವುದು ಸಾಧ್ಯವಿಲ್ಲ. ಆದ್ದರಿಂದ ೯ ಮಾತ್ರೆಯ ಮಿಶ್ರಗಣ ಶ್ರಾವ್ಯವಾಗದು. ಪಟ್ಟೇದ ಚನ್ನ ಬಸವಪ್ಪ ಎಂಬುವರು 'ಪ್ರೌಢ ಷಟ್ಪದಿ' ಎಂಬ ಹೊಸ ಷಟ್ಪದೀ ಪದ್ಯಗಳನ್ನು ೪+೫ ಮಾತ್ರೆಗಳ ನಡೆಯಲ್ಲಿ ರಚಿಸಿದ್ದರೂ ಅವು ತಾಳ ಹಿಡಿದು ಹಾಡಲು ಸಾಧ್ಯವಿಲ್ಲವೆಂಬುದು ಸಿದ್ಧವಾಗಿದೆ. ಒಂದು ಪಾದವನ್ನು ಅವಲೋಕಿಸಬೇಕು :

UU -   UUU -   - UU   - U -
ಕಡುಕಂ । ಗೋಳಿಪಕ । ರ್ಣಾಟಕ । ತಾಯುಮಂ

ಇಲ್ಲಿ ೪ ಮಾತ್ರೆಯ ಗಣವಾದ ಮೇಲೆ ಒಳತಾಳ ಬೀಳುವುದಿಲ್ಲ.

ಒಟ್ಟಿನಲ್ಲಿ ಮೇಲೆ ಸೂಚಿಸಿದ ಆರು ಲಯಗಳು ಮಾತ್ರ ಸ್ವೀಕರಿಸಲರ್ಹವಾಗಿವೆ ಮತ್ತು ಅವು ಪ್ರಯೋಗದಲ್ಲಿ ಬಂದಿವೆ, ಸುಶ್ರಾವ್ಯ ಎನಿಸಿವೆ.

೨ ಗಣ ವಿಭಜನೆಯ ರಹಸ್ಯ

ಮಾತ್ರೆಗಳಿಂದ ಗಣಗಳಾಗುತ್ತವೆ. ಗಣಗಳು ಲಯವನ್ನು ರೂಪಿಸುತ್ತವೆ. ಲಯವೇ ಛಂದಸ್ಸಿನ ಜೀವಾಳವೆಂಬುದು ಈ ಮೊದಲೆ ತಿಳಿದ ಸಂಗತಿ. ಆದ್ದರಿಂದ ಒಂದು ಪಾದವನ್ನು ಗಣಗಳಾಗಿ ವಿಂಗಡಿಸಲಾಗದಿದ್ದರೆ ಅದರಲ್ಲಿ ಮಾತ್ರೆಗಳ ಸಂಖ್ಯೆ ಸರಿಯಿದ್ದರೂ ಲಯ ಪ್ರತೀತಿ ಹುಟ್ಟುವುದಿಲ್ಲ.

ಉದಾ : UU U U U   - - U   UU -U   U U - U
ಜಡಿಮಳೆಯು । ಹೋಯೆಂದು । ಸುರಿದಿತ್ತು । ಬಿರುಗಾಳಿ = ೨೦ ಮಾ

ಇಲ್ಲಿ ೫ ಮಾತ್ರೆಯ ಗಣಗಳು ೪ ಇವೆ. ಐದೈದು ಮಾತ್ರೆಯ ಗಣಕ್ಕೊಂದರಂತೆ ನಾಲ್ಕು ತಾಳಗಳು ಬೀಳುತ್ತವೆ. ಆದರೆ ಕೆಳಗಿನ ಪದ್ಯದ ಪಾದವನ್ನು ನೋಡುವ

U U UU -U - UU - U -U - U
ಬೆಲೆಗೊಳಗಾದ ಕೇಸರಿಯಂತೆ ಗರ್ಜಿಸಿತ್ತು (೨೦ ಮಾತ್ರೆ)

ಈ ಎರಡು ಪಾದಗಳಲ್ಲೂ ಮಾತ್ರಾ ಸಂಖ್ಯೆ ಸಮವಾಗಿದ್ದರೂ ಮೊದಲ ಪಾದದಲ್ಲಿ ಪಂಚಮಾತ್ರಾ ಗಣದ ಲಯವು ತಾಳಬದ್ಧವಾಗಿರುವಂತೆ ಎರಡನೆಯ ಪಾದದಲ್ಲಿ ಲಯವಿಲ್ಲ. 'ಬಲೆಗೊಳಗಾದ ಕೇಸರಿ – ಇದು ಹತ್ತು ಮಾತ್ರೆಗಳುಳ್ಳ ಪದಪುಂಜ. ಇದರಲ್ಲಿ ೫ ಮಾತ್ರೆಗಳ ಎರಡು ಗಣಗಳು ಸ್ಪಷ್ಟವಾಗಿ ಹೊರಡುವುದಿಲ್ಲ. ಇಲ್ಲಿ ತಾಳಕ್ಕೆ ಸರಿಯಾಗಿ ಗಣಗಳನ್ನು ವಿಂಗಡಿಸಬೇಕಾದರೆ 'ಗಾ' ಎಂಬ ಗುರುವನ್ನು ಕತ್ತರಿಸಿ ಒಂದು ಮಾತ್ರೆಯನ್ನು ಹಿಂದಿನ ಗಣಕ್ಕೂ ಇನ್ನೊಂದನ್ನು ಮುಂದಿನ ಗಣಕ್ಕೂ ಹಂಚಿ ಹಾಕಬೇಕಾಗುತ್ತದೆ. ಹೀಗೆ ಒಂದು ವರ್ಣವನ್ನು ಸೀಳುವುದು ಅಸಾಧ್ಯ. ಆದ್ದರಿಂದ ಇಲ್ಲಿ ಲಯ ಕೆಟ್ಟಿದೆ ಎನ್ನಬೇಕು.

ಇನ್ನೊಂದು ಉದಾಹರಣೆಯನ್ನು ನೋಡೋಣ :

UUUUU - UUU - U - U - U
ಕನಸಿನಲಿ ಗೈದಿರುವ । ಮೃತಪಾನ । ದಂತೆ

– ಇಲ್ಲಿ ೫ ಮಾತ್ರೆಯ ಗಣಗಳು ಇವೆ. ಇಲ್ಲಿ ಅಕ್ಷರವನ್ನು ಕತ್ತರಿಸುವುದಾಗಲಿ ಒಂದು ಗುರುವಿನ ಎರಡು ಮಾತ್ರೆಗಳನ್ನು ಹಿಂದಿನ ಗಣಕ್ಕೊಂದು ಮುಂದಿನ ಗಣಕ್ಕೊಂದು ಹಂಚುವುದಾಗಲಿ ಇಲ್ಲ. ಆದರೂ ಇಲ್ಲಿಯೂ ಲಯ ಹೇಗೆ ಕೆಟ್ಟಿದೆ ಎಂಬುದನ್ನು ಗಮನಿಸಬೇಕು. 'ಗೈದಿರುವ । ಮೃತಪಾನ' ಈ ೫ ಮಾತ್ರೆಯ ಗಣಗಳೇನೋ ಇವೆ. ಆದರೆ ಇಲ್ಲಿ 'ಮೃ' ಎಂಬುದರ ಮೇಲೆ ಒತ್ತುಬಿದ್ದಾಗ ಕವಿಯ ಆಶಯವಾದ 'ಅಮೃತ ಪಾನ' ಎಂಬ ಅರ್ಥಕ್ಕೆ ಬಾಧೆ ತಟ್ಟುವುದಲ್ಲವೆ ?' ಅಮೃತ ಪಾನ' ಎಂಬ ಪದದ ಅರ್ಥ ಮನಕ್ಕೆ ಹೊಳೆಯಬೇಕಾದರೆ 'ಗೈದಿರುವ' ಎಂಬಲ್ಲಿಯ 'ವ' ವರ್ಣದ ಮೇಲೆ ಒತ್ತು ಬೀಳಬೇಕು. ಹಾಗೆ ಮಾಡಿದರೆ ಲಯ ಕೆಡುತ್ತದೆ. ಆದ್ದರಿಂದ ಕವಿ ಇಂಥ ಗಣವಿನ್ಯಾಸಕ್ಕೆ ಅವಕಾಶವಿರದಂತೆ ನೋಡಿಕೊಳ್ಳಬೇಕಾಗುತ್ತದೆ. ಲಯವೂ ಕೆಡಬಾರದು ಅರ್ಥವೂ ಕೆಡಬಾರದು ಹಾಗೆ ಪದಗಳ ಗಣಗಳ ಜೋಡಣೆ ಇರಬೇಕೆಂಬುದನ್ನು ಹೊಸ ಕವಿಗಳು ತಿಳಿದಿರಬೇಕೆಂದು ತೀ.ನಂ. ಶ್ರೀಯವರು ಇಂಥ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಕನ್ನಡ ನುಡಿಯ ಜಾಯಮಾನವನ್ನು ಅವರು ತಿಳಿಸಿಕೊಡುತ್ತಾರೆ. ಸ್ವರಾಘಾತವು ಕನ್ನಡಭಾಷೆಯಲ್ಲಿ ಇಲ್ಲವೇ ಇಲ್ಲವೆಂದು ಹೇಳಲಾಗದು. ಕನ್ನಡದಲ್ಲಿ ಸಾಮಾನ್ಯವಾಗಿ ಪದದ ಮೊದಲನೆಯ ಸ್ವರದ ಮೇಲೆ ಆಘಾತವಿರುತ್ತದೆ. ಸ್ವರವು ಗುರುವಾಗಿದ್ದರೆ ಮಾತ್ರ ಪದದ ಯಾವ ಸ್ಥಾನದಲ್ಲಿದ್ದರೂ ಅದು ಆಘಾತವನ್ನು ತಡೆದುಕೊಳ್ಳುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕಾಗುತ್ತದೆ. ಛಂದಸ್ಸಿನ ಚೌಕಟ್ಟಿನೊಳಗೆ ಅರ್ಥಗರ್ಭಿತ ಮಾತುಗಳನ್ನು ಅಳವಡಿಸುವುದು ಪದ್ಯ ರಚಕನ ಸೂಕ್ಷ್ಮ ಕೆಲಸ. ಒಂದು ಕಡೆ ತಾಳಮಾನಕ್ಕನುಸರಿಸಿ ಛಂದಸ್ಸಿನ ಧಾಟಿ–ಲಯಗಳನ್ನು ಕಾಯ್ದುಕೊಳ್ಳಬೇಕು, ಇನ್ನೊಂದೆಡೆ ಪದಗಳ ಜೀವಸ್ವರಗಳು ಕೆಡದಂತೆ ನೋಡಿಕೊಳ್ಳಬೇಕು.

ಗುರು ಪದದಲ್ಲಿ ಎಲ್ಲಿದ್ದರೂ ಸರಿಯೆ ಒತ್ತನ್ನು ತಡೆದುಕೊಳ್ಳುತ್ತದೆ. ಪದದ

ಎರಡನೆಯ ಸ್ವರವೇ ಆಗಲಿ ಕೊನೆಯ ಸ್ವರವೇ ಆಗಲಿ ಗುರುವಾಗಿದ್ದರೆ ಅದರಿಂದ ಗಣ ಮೊದಲಾಗಿದ್ದರೂ ಯತಿ ಕೆಡುವುದಿಲ್ಲ. ಉದಾ : ಪದದ ಎರಡನೆಯ ಸ್ವರಕ್ಕೆ –

U - U

ಚಟಪಟ । ಗುಟ್ಟಿ ಚ । ಟಾಕಿಯು । ಮುಂಗಡೆ । ಕೀವಿಯ ।
ತೋರುತ । ಬರುತಿರ । ಲು

– ಇಲ್ಲಿ ಚತುರ್ಮಾತ್ರಾಗಣಗಳಿವೆ. 'ಚಟಾಕಿ' ಪದವು ಒಡೆದಿದ್ದರೂ 'ಟಾ' ಎಂಬ ಗುರುವರ್ಣ ಒತ್ತನ್ನು ತಡೆದುಕೊಂಡು ಅರ್ಥಕ್ಕೆ ಬಾಧೆ ತಟ್ಟದಂತೆ ನೋಡಿಕೊಳ್ಳುತ್ತದೆ.

ಇನ್ನೊಂದು ಉದಾಹರಣೆ :

ಪರಿವ । ಳೀ ಕ । ವೇರ । ತನಯೆ । ಧೀರ ಜನನಿ । ಯೆನಿಸು । ತುಂ

ಮೂರು ಮಾತ್ರೆಯ ಗಣಗಳಿವು. 'ಕವೇರ ತನಯೆ' ಎಂಬ ಪದ ಒಡೆದಿದ್ದರೂ 'ವೇ' ಗುರುವರ್ಣ ಪದದ ಎರಡನೆಯದಾಗಿ ಗಣದ ಮೊದಲಲ್ಲಿ ಒತ್ತನ್ನು ತಡೆದುಕೊಳ್ಳುತ್ತದೆ. ಅರ್ಥಕ್ಕೆ ಬಾಧೆಯಿಲ್ಲ, ಇತ್ತ ಲಯವೂ ಕೆಡದು.

ಪದದ ಕೊನೆಯ ಸ್ವರಕ್ಕೆ ಉದಾ :

ಭಾಗ್ಯ ದೇ । ವತೆಯ ಕೊರ । ಲಿಂ ಬಿದ್ದ ಕಟ್ಟಾಣಿ

ಗಣ ವಿಭಜನೆಯಲ್ಲಿ 'ಕೊರಲಿಂ' ಪದದ ಕೊನೆಯ ಸ್ವರದಿಂದ ಮುಂದಿನ ಗಣ ಆರಂಭವಾಗಿದ್ದರೂ 'ಲಿಂ' ಗುರು ವರ್ಣವಾಗಿದ್ದರಿಂದ ಅದು ಆಘಾತವನ್ನು ತಡೆದುಕೊಳ್ಳುತ್ತದೆ.

ಇನ್ನೊಂದು ಮಾತು : ಒಂದು ಪದವನ್ನು ಎರಡು ಗಣಗಳಲ್ಲಿ ಹಂಚುವುದಾದರೆ ಅದರಲ್ಲಿ ಕನಿಷ್ಠ ಪಕ್ಷ ೨ ಮಾತ್ರೆಗಳಷ್ಟು ಅಕ್ಷರಗಳಾದರೂ (ಎಂದರೆ ಎರಡು ಲಘುಗಳು ಅಥವಾ ಒಂದು ಗುರು) ಒಂದೊಂದು ಗಣಕ್ಕೆ ಸೇರಬೇಕು. ಈ ಕೆಳಗಿನ ಪಾದಗಳನ್ನು ನೋಡಿರಿ :

- - - UU UUUU UUUU
ನಿನ್ನಾ ಮೋಹದ ನಡುವನು ಬಳಸುವ

- UU - - UU UU U
ಚಿನ್ನದ ಕಟ್ಟಾ ಗಲು ಬಯ ಕೆ

ಇಲ್ಲಿ ೪ ಮಾತ್ರೆಯ ಗಣಗಳಿವೆ. 'ಕಟ್ಟಾಗಲು' ಪದವು 'ಕಟ್ಟಾ ಗಲುಬಯಕೆ' ಎಂದು ಗಣ ವಿಭಜನೆಗೊಂಡಾಗ ಈ ನಿಯಮ ಪಾಲನೆಯಾಗಿದೆಯಲ್ಲವೆ ? ಹೀಗೆ ಗಣವಿಭಜನೆಯಾದರೆ ತಪ್ಪಿಲ್ಲ.

ಆದಷ್ಟು ಮಟ್ಟಿಗೆ ಪದಚ್ಛೇದವು ಸ್ವಾಭಾವಿಕವಾಗಿರಬೇಕು. ಉದಾಹರಣೆಗೆ

'ನಡತೆಯಲಿ' ಎಂಬ ಪದವನ್ನು 'ನಡತೆ'ಯಲಿ ಎಂದು ವಿಭಜಿಸಿದರೆ ಸರಿಯೇ. ಯಾಕೆಂದರೆ । ಭೇದವು ಪ್ರಕೃತಿ ಪ್ರತ್ಯಯಗಳ ನಡುವೆ ಬಂದಿದೆ. ಆದರೆ ನಡ । ತೆಯಲಿ ಎಂಬುದು ಸರಿಹೋಗದು.

ಸಮಾಸದಲ್ಲೂ ಹೀಗೆಯೇ –

ಉದಾ :

ಕಾರ್ ಮುಸುಕು ರಾತ್ರಿ ಬೆಳ್ಗುದುರೆಗಳ ಸೂರ್ಯಂಗೆ ಬೆನ್ನಿತ್ತು ಸರಿಗುಂ ಇಲ್ಲಿ 'ಬೆಳ್ಗುದುರೆಗಳ' (=ಬೆಳ್+ಗುದುರೆಗಳ) ಎಂಬ ಕಡೆ ಭೇದವು ಸಹಜವಾಗಿದೆ, ಹಿತವಾಗಿದೆ. ಇದನ್ನು 'ಬೆಳ್ಗ । ದುರೆಗಳ' ಎಂಬಂತೆ ಒಡೆಯಬೇಕಾಗಿ ಗಣ ವಿಭಜನೆಯಾಗಿದ್ದರೆ ಸಹಜವಾಗಲಿ, ಹಿತವಾಗಲಿ ಎನಿಸುತ್ತಿರಲಿಲ್ಲ.

೩. ವಿಷಮ ಗಣದ ಪ್ರಯೋಜನ

ಗಣದ ಮೊದಲಲ್ಲಿ ಒಂದು ಲಘುವನ್ನಿಟ್ಟು ಕೂಡಲೆ ಗುರುವನ್ನು ತರುವ ಪದ್ಧತಿ ಕನ್ನಡ ಛಂದಸ್ಸಿಗೆ ಒಗ್ಗದು. ಹಿಂದಿನ ಕವಿಗಳೂ ಇಂಥ ಗಣಗಳನ್ನು ನಿಷಿದ್ಧಗೊಳಿಸಿದ್ದರು. ಷಟ್ಪದಿಗಲ್ಲಿ U - (ಮೂರು ಮಾತ್ರೆಯ ಗಣ) U - U (೪ ಮಾತ್ರೆಯ ಗಣ) U - - ಅಥವಾ U - U U (೫ ಮಾತ್ರೆಯ ಗಣ) – ಇವು ಬರಕೂಡದು. ಇವನ್ನು 'ವಿಷಮಗಣ' ಎಂದೂ ಹೇಳುತ್ತಾರೆ. ಹೀಗೆ ನಿಷೇಧಿಸುವುದಕ್ಕೆ ಸ್ವರಾಘಾತದ ನಿಯಮದ ಮೇರೆಗೆ ಔಚಿತ್ಯವೂ ಉಂಟು. ಆದರೂ ಇಂದಿನ ಕವಿಗಳು ವಿಶೇಷ ಪ್ರಯೋಜನ ದೃಷ್ಟಿಯಿಂದ 'ವಿಷಮ ಗಣ' ಗಳನ್ನು ಕೆಲವೊಮ್ಮೆ ಪ್ರಯೋಗಿಸುತ್ತಾರೆ :

ಉದಾ : - U U - UU - - - UU

ಬೊಬ್ಬೆಯ । ಹಬ್ಬಿಸಿ । ಒಂದೇ । ಬಾರಿಗೆ
ಉಬ್ಬರ । ಎಬ್ಬಿಸಿ । ಕಡಲಿನ । ನೀರಿಗೆ

U-U

ಬೊಬ್ಬುಳಿ । ತೆರೆಯನು । ದಡಕ್ಕೆ । ಹೊಮ್ಮಿಸಿ
ಅಬ್ಬರ । ದಲಿ ಭೋರ್ । ಭೋರೆನೆ । ಗುಮ್ಮಿಸಿ

U-U

– ಇಲ್ಲಿಯ ಚತುರ್ಮಾತ್ರಾಗಣಗಳಲ್ಲಿ ದಡಕ್ಕೆ ಎಂಬುದು ವಿಷಮಗಣ. ತೆರೆ ದಡಕ್ಕೆ ಅಪ್ಪಳಿಸಿದ ಭಾವಕ್ಕೆ ಈ ಗಣವು ಪುಷ್ಟಿ ಕೊಡುವುದಿಲ್ಲವೆ ? ಪಂಜೆಯವರ 'ತೆಂಕಣ ಗಾಳಿಯಾಟ' ಕವನದ ಸಾಲುಗಳಿವು. ವಿಷಮಗಣದಿಂದ ಭಾವಪುಷ್ಟಿಯ ಪ್ರಯೋಜನವುಂಟಾಗಿದೆ ಇಲ್ಲಿ.

೩ ಮಾತ್ರೆಯ ವಿಷಮ ಗಣದ ಪ್ರಯೋಗ :

U - U - - U - U - U -

ಮತ್ತ । ಮಧು । ಮಾಸ । ವಿದು । ಬನ್ನಿ । ರೆಂದು । ಸಾರು । ತ

U -

ಜಾರುತಿಹುದು ಮಾಗಿ । ಚಳಿ

U -

ಕುಸುಮಿಸಿರುವ ಲತೆಗ । ಳಲಿ

U - -

ಮೊರೆಯುತಿಹುದು ಸೊಕ್ಕಿದಳಿ ಮುಕ್ತ ಜೀವರಂದದಿ

U - U -

ಉಲಿಯೆ । ಪಿಕ । ಗಳಪೆ । ಶುಕ । ಸುಗ್ಗಿ ಬಂದಿತಂದದಿ

– ಇಲ್ಲಿಯ ವಿಷಮ ಗಣಗಳಲ್ಲಿ ಲಘು ಸ್ವರಕ್ಕೆ ಗುರುವಿನ ಬೆಲೆಯೂ ಅಂತ್ಯಪ್ರಾಸದ ಬಿಗಿಯೂ ಸಮುಚಿತವಾಗಿ ಬಂದು ಪದ್ಯ ಮನೋಹರವಾಗಿದೆ.

ರಗಳೆಯ ಕವಿ ಹರಿಹರ ಈ ವಿಷಮ ಗಣವನ್ನು ಹಿಂದೆಯೇ ರಮ್ಯವಾಗಿ ಬಳಸಿದ್ದಾನೆ :

ಉದಾ : ಬರುತು । ಮಿರ್ದ । ಳಿಂದು । ಧರನ । ಪೊಜೆ । ಗೆಮ್ಮ ।

U -

ಮಹಾ । ದೇವಿ.

U -

ಪರಮ ಭಕ್ತೆ ಶಾಂತಿಯುಕ್ತೆ ಯತಿವಿರಕ್ತೆ । ಮಹಾ । ದೇವಿ

ಅನಾಗತ :

ಪಾದದ ಮೊದಲಲ್ಲಿಯೆ ತಾಳವೂ ಮೊದಲಾಗಿ ಮುಂದುವರಿಯುವುದು ಪದ್ಯದ ರೂಢಿ. ಆದರೆ ಒಮ್ಮೊಮ್ಮೆ ತಾಳಕ್ಕೆ ಮೊದಲೆ ಒಂದು ಅಕ್ಷರ ಬಿಡಿಯಾಗಿ ನಿಂತು ತಾಳವನ್ನು ಎತ್ತಿಕೊಡುತ್ತದೆ. ಈ ಬಿಡಿಯಕ್ಷರವನ್ನು ತ್ವರಿತವಾಗಿ ಉಚ್ಚರಿಸಬಹುದು. ಇದರ ಮುಂದಿನ ಅಕ್ಷರ ಗುರು ಎನ್ನುವ ಕಾರಣದಿಂದ ಸ್ವರಾಘಾತವೂ ತಾಳವೂ ಅಲ್ಲಿ ಬೆರೆಯುತ್ತದೆ. ಹೀಗೆ ತಾಳವನ್ನು ಎತ್ತಿಕೊಡುವ ಬಿಡಿಯಾದೊಂದು ಲಘು ಅಕ್ಷರಕ್ಕೇ (ಒಮ್ಮೊಮ್ಮೆ ಎರಡು ಲಘು ಅಕ್ಷರಗಳಿಗೆ) 'ಅನಾಗತ' ಎಂಬ ಹೆಸರು. ಆದರೆ ಈ ಪದ್ಯದ ಪಾದಗಳನ್ನು ನೋಡಿ –

- U UU - - U

ಅ ನಾಥೆ ಇವ ಳಿನ್ನೊಬ್ಬ ॥

- - U - U

ಳೀಜನ್ಮ ರೋಸಿ

ವೇಥೆಯನು । ತಾಳದೆಯೆ । ಮುಳುಗಿದಳು । ಹೊಳೆಗೆ

ಮೊದಲ ಪಾದದಾದಿಯ 'ಅ' ಎಂಬ ಲಘು ಬಿಡಿಯಾಗಿ ನಿಂತು ಅಲ್ಲಿಂದ ಮುಂದೆ ೫ ಮಾತ್ರೆಯ ಗಣಗಳೆರಡು ಬಂದಿವೆ. 'ಅನಾಥೆ' ಎಂಬಲ್ಲಿ 'ನಾ' ದ ಮೇಲೆ ತಾಳದ ಒತ್ತು

ಇದೆ. 'ಅ' ಅಕ್ಷರವನ್ನು ತ್ವರಿತವಾಗಿ ಉಚ್ಚರಿಸಬೇಕಾಗುತ್ತದೆ. ಇನ್ನೊಂದು ಉದಾಹರಣೆ :

- U - U U - U U - UU
ಕು ಮಾರ । ವ್ಯಾಸನು । ಹಾಡಿದ । ನೆಂದರೆ
UU U U - U U - U U U
ಕಲಿಯುಗ । ದ್ವಾಪರ । ವಾಗುವು । ದು

೪ ಮಾತ್ರೆಯ ಗಣ ವಿಭಜನೆ ಮೇಲೆ ತೋರಿಸಿದಂತೆ ಮಾಡುವುದೇ ಉಚಿತ. 'ಮಾ' ದ ಮೇಲೆ ಒತ್ತು ಬೀಳುವಂತೆ ಹಾಡಬೇಕು. ಇನ್ನು ಕೆಲವರು ಮೊದಲಲ್ಲಿ ವಿಷಮ ಗಣವನ್ನು ತಂದು 'ವ್ಯಾ' ಎಂಬ ಒತ್ತಕ್ಷರವನ್ನು ಶಿಥಿಲಗೊಳಿಸಿ ತೇಲಿಸಿ ಹೇಳುತ್ತಾರೆ.

U - U - U U - U U - U U
ಕುಮಾರ । ವ್ಯಾಸನು । ಹಾಡಿದ । ನೆಂದರೆ

– ಎಂಬಂತೆ. ಆದರೆ ಗತ್ತು ಗಾಂಭೀರ್ಯಗಳನ್ನು ಉಳಿಸಿಕೊಳ್ಳಲು ಮೊದಲನೆಯ ರೀತಿಯೇ ಒಳ್ಳೆಯದು.

೪ ಮಾತ್ರೆಯ ಗಣದ ಧಾಟಿಯಲ್ಲಿ ಮೊದಲ ತಾಳಕ್ಕೆ ಹಿಂದೆ ಎರಡು ಲಘುಗಳನ್ನು ಇರಿಸಿಯೂ ಸೊಗಸುಂಟು ಮಾಡಬಹುದಾಗಿದೆ :

ಉದಾ : - - UUU U - U U U U -
ಹಗ ಲೆಲ್ಲಾ । ಕಳೆಯಿತು । ಸೂರ್ಯನು । ಮುಳುಗೆ
- U U - UU UU -
ಖಗ ಹಾರಿತು । ಗೂಡಿನ । ಒಳಗೆ
UU - - UU UU - U U U U -
ಆದರೆ, ಹಗಲೆ । ಲ್ಲಾ ಕಳೆ । ಯಿತು ಸೂ । ರ್ಯನು ಮು ಗೆ

ಎಂಬ ರೀತಿಯಲ್ಲಿ ಗಣ ವಿಭಜನೆ ಮಾಡಿದರೆ ಮೊದಲಿನ ರೀತಿಯ ಪಲುಕಿಗೆ ಗತ್ತೂ ಇಂಪೂ ಉಂಟಾಗದು.

ಹೊಸಗನ್ನಡದ ಇವೇ ಮೊದಲಾದ ಹೊಸ ಪ್ರಯೋಗಗಳಲ್ಲಿ ಹೊಸ ದಾರಿಯೊಂದು ಕಾಣುತ್ತಿದೆ. ಹೊಸ ಹೊಸ ಸೊಗಸುಗಳನ್ನು ಪ್ರತಿಭಾಬಲದಿಂದ ಕವಿಗಳು ಪ್ರದರ್ಶಿಸುತ್ತಿದ್ದಾರೆ. ಸಹೃದಯರು ತಮ್ಮ ಕಿವಿಗಳನ್ನು ಈ ಹೊಸ ನಾದಲಯಗಳಿಗೆ ಪಳಗಿಸಿಕೊಳ್ಳುವ ಕಾಲ ಇದು. ಈ ಸಂಧಿಕಾಲದಲ್ಲಿ ಛಂದಸ್ಸಿನ ಪ್ರಯೋಗಗಳನ್ನು ಕುರಿತು ಇದೇ ಕೊನೆಯ ಮಾತೇನೂ ಅಲ್ಲ ಎಂದು ತೀ.ನಂ. ಶ್ರೀಯವರು ಇನ್ನೂ ಮುಂದೆ ಬರಲಿರುವ ಪ್ರಯೋಗಗಳನ್ನು ಬರಮಾಡಿಕೊಂಡು ಅವುಗಳ ಸವಿಯ ಬಗ್ಗೆ ವಿವೇಚಿಸಬೇಕೆಂದು ಹೇಳುತ್ತಾರೆ. ಒಟ್ಟಿನಲ್ಲಿ ಅವರು ಹೇಳುವ ಮಾತೆಂದರೆ, ಒಂದು ಕಿವಿಯನ್ನು ತಾಳಕ್ಕೂ ಒಂದು ಕಿವಿಯನ್ನು ಭಾಷಾಗತಿಗೂ ಕವಿಯು ತೆರೆದಿಟ್ಟು ಎರಡಕ್ಕೂ ವಿರೋಧ ಬಾರದಂತೆ ಕವನಗಳನ್ನು ಕಟ್ಟಬೇಕು. ನಿಯಮ-ವೈವಿಧ್ಯಗಳ ಸಮನ್ವಯವೇ

ಛಂದಸ್ಸಿನ ತಿರುಳು ಎಂದಿದ್ದಾರೆ.

೪. ಗಣಪರಿವೃತ್ತಿ

ಈ ಸಂದರ್ಭದಲ್ಲಿ ತೀ.ನಂ.ಶ್ರೀಯವರು 'ಗಣಪರಿವೃತ್ತಿ' ಎಂಬುದೊಂದು ಪದವನ್ನು ಹೊಸ ಛಂದಸ್ಸಿನ ಒಂದು ಬಗೆಯ ಛಂದೋವಿಧಾನವನ್ನು ಕುರಿತು ಬಳಸಿದ್ದಾರೆ. ಅದರ ವಿಚಾರ ಹೀಗೆ: ೪ ಮಾತ್ರೆ+೪ ಮಾತ್ರೆಗಳ ಧಾಟಿಯಲ್ಲಿ ಪದ್ಯ ನಡೆಯುತ್ತಿರುವಾಗ ಒಂದೊಂದು ಕಡೆ ೩. ಮಾ+೫ಮಾ (೮ ಮಾತ್ರೆ) ಯ ಭಿನ್ನ ಜಾತಿಯ ಗಣವನ್ನು ಉಪಯೋಗಿಸುವ ಪದ್ಧತಿ ಆಧುನಿಕಯುಗದಲ್ಲಿ ಮೊದಲಾದದ್ದೇನೂ ಅಲ್ಲ. ಇದರ ಸುಖವನ್ನು ಜನ್ನ, ರಾಘವಾಂಕರೂ ಬಲ್ಲವರಾಗಿದ್ದರು.

ಉದಾ : ೪ಮಾ ೪ಮಾ ೪ಮಾ ೪ಮಾ

೧) ಮೊಳಗುವು । ವಘಮೃಗ । ವಿರದೋ । ಡು ವಿನಂ

U U U - U -

ಮೊಳಗು । ಗೆತ್ತುಕೇ । ಕಿಗಳಾಡು ವಿನಂ.....

UUU - U - -

ಸಕಲ । ದೇಶಭಾ । ಷಾಪ್ರತಿ । ಭಾನಂ

ಪ್ರಕಟಂ । ನೆಗೆದುದು । ದಿವ್ಯ । ಧ್ವಾನಂ

(ಜನ್ನ : ಅನಂತನಾಥಪುರಾಣ)

- U - UUU U U - U U -

೨) ಐವೆ । ನೇವೆನೆಲೆ । ಮಗನೇ ಮಗನೇ

- - - - UU - UU -

ಸಾವೇ । ಕಾಯಿ । ತ್ತೆಲೆಚೆ । ನ್ನಿಗನೇ

(ರಾಘವಾಂಕ : ಹರಿಶ್ಚಂದ್ರ ಕಾವ್ಯ)

ಈ ಬಗೆಯ ರಚನೆ ಸಂಸ್ಕೃತದಲ್ಲೂ ಇದೆ. 'ಗೀತ ಗೋವಿಂದ' ದಲ್ಲಿ ಜಯದೇವ 'ಗಣ ಪರಿವೃತ್ತಿ' ಯಿಂದ ಛಂದೋ ವೈವಿಧ್ಯ ತಂದಿದ್ದಾನೆ.

ಉದಾ : ೪ಮಾ ೪ಮಾ ೩ಮಾ ೫ಮಾ ೪ಮಾ ೪ಮಾ

ಮದನಮ । ಹೀಪತಿ । ಕನಕ । ದಂಡರುಚಿ । ಕೇಸರ । ಕುಸುಮವಿ । ಕಾಸೇ

೩ಮಾ ೫ಮಾ ೪ಮಾ ೪ಮಾ ೪ಮಾ ೪ಮಾ ೪ಮಾ

ಮಿಲಿತ । ಶಿಲೀಮುಖ । ಪಾಟಲ । ಪಟಲಕೃ । ತಸ್ಮರ । ತೂಣವಿ । ಲಾಸೇ

ಹೀಗೆ ಲಯದಲ್ಲಿ ಹೊಸ ಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾಸಂಖ್ಯೆಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ 'ಗಣಪರಿವೃತ್ತಿ'ಎಂದು ಹೆಸರಿಸಿದ್ದಾರೆ.

೩ ಮಾತ್ರೆಯ ಗಣದ ಧಾಟಿ ಶುದ್ಧವಾಗಿ ನಡೆದರೆ ಏಕನಾದದಿಂದ

ಬೇಸರವುಂಟಾಗಬಹುದು. ಆಗ ೩+೩ರ ಸ್ಥಾನದಲ್ಲಿ ೨+೪=೬ ಇಲ್ಲವೆ ೪+೨=೬ರ ರಚನೆಯುಳ್ಳ ೬ ಮಾತ್ರೆಯ ಗಣವನ್ನು ಪ್ರಯೋಗಿಸುವುದು ರೂಢಿಗೆ ಬಂದಿದೆ. ಇಲ್ಲಿ ಔಚಿತ್ಯವರಿತು ಈ ಛಂದೋವೈವಿಧ್ಯ ವಿಧಾನವನ್ನು ಬಳಸಿದರೆ ಬಲು ರಮ್ಯ.

ಉದಾ : ೩ ೩ ೩ ೩

ಗಂಗೆ । ಯಮುನೆ । ಕೂಡಿ । ಹರಿದು

೬ ೨ ೩

-U U UU

ಸಂಗಮ ಜಲ । ಬಿಳಿದು । ಕರಿದು

ತಿಂಗಳ ನಗೆ । ವೇರೆ । ವರಿದು ।

(ಬೇಂದ್ರೆ)

೫. ಮಾತ್ರೆ, ಮುಡಿ, ಪದ್ಯಗಣ

ಪ್ಲುತ : ಮಾತ್ರೆಯ ಹೆಚ್ಚಳ :

ಲಘುವಿಗೆ ಒಂದು ಮಾತ್ರೆ, ಗುರುವಿಗೆ ಎರಡು ಮಾತ್ರೆ ಎಂದಿದ್ದರೂ ಹೊಸಗನ್ನಡ ಕವಿತೆಗಳಲ್ಲಿ ಒಂದು ಗುರುವಿಗೆ ಮೂರು ಮಾತ್ರೆಯ ಬೆಲೆಕೊಟ್ಟು ಒಂದು ಗಣವಾಗಿ ಪರಿಗಣಿಸುವುದು ರೂಢಿಗೆ ಬರುತ್ತಿದೆ. ಅರ್ಥದ ಔಚಿತ್ಯವರಿತು ಬಳಸಿದರೆ ಇದು ವಿಶೇಷ ಭಾವಪುಷ್ಟಿಗೆ ಕಾರಣವಾಗುವುದು :

ಉದಾ : ಹಡೆದ । ಕೂಸು । ಬಾಳ್ವು । ದೆಂತು

ಎನುತ । ತ । ಲ್ಲಣಿಸು । ತ

ಇಲ್ಲಿ ಮೂರು ಮೂರು ಮಾತ್ರೆಯ ಗಣಗಳಿವೆ. ಎರಡನೆಯ ಪಾದದಲ್ಲಿ 'ತ' ಅಕ್ಷರವನ್ನು ಮೂರು ಮಾತ್ರೆಯ ಕಾಲಕ್ಕೆ ಎಳೆದು ಪಲುಕಿಸುವುದರಲ್ಲಿ ತಲ್ಲಣದ ನಡುಕವೂ ಧ್ವನಿಸುತ್ತದೆಯಲ್ಲವೇ ? ಪ್ಲುತವನ್ನು 'ತ' – ಎಂಬಂತೆ ಗುರುತಿಸುವುದು ಈಚೆಗೆ ರೂಢಿಯಲ್ಲಿದೆ.

ಕಂಪಿತ :

ಒಮ್ಮೊಮ್ಮೆ ಒಂದು ಅಕ್ಷರವು ಮೂರು ಮಾತ್ರೆಗಳೂ ಮೀರುವುದುಂಟು :

ಉದಾ : - U - U U - U - U

ನಿನ್ನ । ಬೆಳ್ಳಿಯ । ಕೂದಲಂದ

- U -UU - U - -

ನನ್ನ ಕಣ್ಣಿಗ ದೇನು ಚೆಂದ

ಮೂಡ । ಬೆಳ್ಳಿಯ । ಥಳಕು । ಮುಂದ

ನನ್ನ । ಮೇ । ರಿ । (ಮೇ = ೪ ಮಾತ್ರೆ)

ಇಲ್ಲಿ ಕೊನೆಯ ಪಾದವನ್ನು 'ಓದುವಾಗ' 'ಮೇ' ಎಂಬುದನ್ನು ಮೂರಕ್ಕಿಂತ ಹೆಚ್ಚು ಮಾತ್ರೆ (ಎಂದರೆ ೪ ಮಾತ್ರೆ) ಯ ಕಾಲದಲ್ಲಿ ಉಚ್ಚರಿಸುವುದರಿಂದ ಭಾವಪುಷ್ಟಿಯುಂಟು. ಅಂಥ ಅಕ್ಷರವನ್ನು 'ಕಂಪಿತ' ಎನ್ನಬೇಕು. ಕಂಪಿತದ ಸಂಕೇತ ಇದು :

ಒಮ್ಮೊಮ್ಮೆ ಒಂದು ಅಕ್ಷರ ಲಘುವಾಗಿದ್ದರೂ ಭಾವ ಸಂದರ್ಭಕ್ಕೆ ಅನುಸಾರವಾಗಿ ಎಳೆದು ಎರಡು ಮಾತ್ರೆಯ ಬೆಲೆ ಕೊಟ್ಟು ಗಣವನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ :

3 4 3 4

ಉದಾ : ಕೆರಳಿ । ಕೆರಳಿ । ಗಾಳಿ । ಚಚ್ಚಿತು (೩+೪)

ಇಲ್ಲಿ ೩+೪+೩+೪ ಮಾತ್ರಾಗಣಗಳ ನಡೆಯಿದೆ. ಆದರೆ 'ಕೆರಳಿ' ಎಂದು ಗುರುತು ಮಾಡಿರುವಲ್ಲಿ ಮೂರು ಮಾತ್ರೆಯ ಪದವನ್ನು ೪ ಮಾತ್ರೆಗೆ ಎಳೆಯಬೇಕಾಗುತ್ತದೆ : ಉದಾ : ಕೆರಳೀ । ಕೆರಳೀ । ಎಂದು

ಮೌನಃ ವಿರಾಮ

ಕೆಲವು ಸಂದರ್ಭಗಳಲ್ಲಿ ಮೌನವನ್ನು ಅಥವಾ ವಿರಾಮವನ್ನು ತುಂಬಿ ಗಣವನ್ನು ಪೂರ್ಣಗೊಳಿಸಬೇಕಾಗುತ್ತದೆ. ವಿರಾಮವನ್ನು ಈ ಗುರುತಿನಿಂದ ಸೂಚಿಸಬೇಕು.

ಉದಾ : ಈಗಳೇನಾದೆನ್ । ಕೇಳೆ ದೈವೇಚ್ಛೆಯನ್
ಜಮದಗ್ನಿ ಅಯ್ಯನ್ –
ಎನ್ನನಾ । ರುಷಿ ಭರ । ದ್ವಾಜಂಗೆ । ಕೊಟ್ಟನ್ –
ದಾನಮನ್ । ಕೊಟ್ಟನ್

ಈ ಕೆಳಗಿನ ಪಾದಗಳನ್ನು ಪರಿಶೀಲಿಸಿರಿ :

–
ಮಿಂಚು । ಮಿಂಚನು । ಸೆಣಸುವ । ತೆರದಿ (೪ಮಾತ್ರೆಯ ಗಣಗಳು)
–
ಸಿಡಿಲು । ಸಿಡಿಲನು । ಸೆಣಸುವ । ತೆರದಿ

ಇಲ್ಲಿರುವುದು ಚತುರ್ಮಾತ್ರಾಗಣದ ನಡೆ. ಮೊದಲನೆಯ ಗಣವನ್ನು ಇದಕ್ಕೆ ಹೊಂದಿಸಿಕೊಳ್ಳಲು 'ಮಿಂ' ಎಂಬುದಕ್ಕೆ ೩ ಮಾತ್ರೆಯ ಬೆಲೆ ಕೊಡಬೇಕಾಗುತ್ತದೆ. ಎರಡನೆಯ ಸಾಲಿನ 'ಸಿಡಿಲು' ಪದಕ್ಕೂ ೪ ಮಾತ್ರೆಯ ಕಾಲ. 'ಸಿಡಿಲು' ಎಂಬುದರ ಮುಂದೆ ಒಂದು ಮಾತ್ರೆಯ ವಿರಾಮವನ್ನಿಟ್ಟು ೪ ಮಾತ್ರೆಗೆ ಸರಿದೂಗಿಸಬೇಕು. ಇಲ್ಲವೆ ಒಂದೊಂದು ಅಕ್ಷರಕ್ಕೂ ೧/೩ಮಾತ್ರೆ ಲಯ ಕಾಲ ಹೆಚ್ಚು ತೆಗೆದುಕೊಂಡು ಮಂದಗತಿಯಲ್ಲಿ ಹೇಳಬೇಕು. ಮೌನ ವಿಧಾನ ಒಳ್ಳೆಯದು.

ಗುರುವನ್ನು ಕುಗ್ಗಿಸುವುದು :

ಸಂದರ್ಭಕ್ಕನುಗುಣವಾಗಿ ಕೆಲವೊಮ್ಮೆ ಒಂದು ಗುರುವಿಗೆ ಒಂದೇ ಮಾತ್ರೆಯ

ಬೆಲೆಯನ್ನು ಕೊಡಬೇಕಾಗಬಹುದು. ಇಂಥ ಕಡೆಗಳಲ್ಲಿ ದೀರ್ಘಸ್ವರವನ್ನು ತ್ವರಿತವಾಗಿ ಉಚ್ಚರಿಸಬೇಕಾಗುತ್ತದೆ. ಮುಂದಿನ ಒತ್ತಕ್ಷರವನ್ನೋ ಅನುಸ್ವಾರವನ್ನೋ ತೇಲಿಸಿ ಉಚ್ಚರಿಸಬೇಕಾಗುತ್ತದೆ.

ಉದಾ : U

ಕುರಿನೆಗೆದಾಟ ಕುರುಬರ । ಕೊಳಲಿನೂದಾಟ

U

ಇನಿಯರ ಬೇಟ ಬನದಲಿ । ಬೆಳದಿಂಗ । ಳೂಟ

U

ಮಾವಿನ ಸೊಂಪು ಮಲ್ಲಿಗೆ । ಬಯಲೆಲ್ಲ । ಕಂಪು

ಒತ್ತಕ್ಷರವನ್ನು ಶಿಥಿಲವಾಗಿಸುವುದು :

ಒಂದು ಪದದ ಕೊನೆಯಲ್ಲಿ ಹ್ರಸ್ವ ಸ್ವರವಿದ್ದು ಅದರ ಮುಂದಿನ ಪದದ ಆದಿಯಲ್ಲಿ ಒತ್ತಕ್ಷರವಿದ್ದರೆ ಈ ಒತ್ತಕ್ಷರವನ್ನು ತೇಲಿಸಿ ಉಚ್ಚರಿಸಿ ಹಿಂದಿನ ಹ್ರಸ್ವವನ್ನು ಲಘುವಾಗಿ ಉಳಿಸುವುದು ಉತ್ತಮ.

ಉದಾ : ಏನು ಕೋಮಲ ಕಾಯ

ಹೊಳಪು ಹೊಸ ಪ್ರಾಯ

– ಈ ಚಿಹ್ನೆ ಒತ್ತಕ್ಷರದ ಶಿಥಿಲೋಚ್ಚರಣೆಯನ್ನು ಸೂಚಿಸುತ್ತದೆ.

ಮುಡಿ :

ಪದ್ಯಪಾದದ ಕೊನೆಗೆ ನಿಂತು ಅದಕ್ಕೆ ಮುಡಿವು ಕೊಡುವ ಅಕ್ಷರಕ್ಕೆ 'ಮುಡಿ' ಎಂದು ತೀ.ನಂ. ಶ್ರೀಯವರು ಹೆಸರಿಸಿದ್ದಾರೆ. ಮಾತ್ರೆಯ ದೃಷ್ಟಿಯಿಂದ ಮುಡಿಗೆ ಎಲ್ಲ ಕಡೆ ಒಂದೇ ಬೆಲೆ ಇಲ್ಲ, ಅದು ಯಾವ ಗಣದೊಂದಿಗೆ ಬರುತ್ತದೋ ಅದರ ಬೆಲೆಯನ್ನು ಹೊಂದುತ್ತದೆ.

ಉದಾ : –

ಗಿರಿಯನೇ । ರುವ ಬಲವ । ಕೊಟ್ಟು ಏ । ರೆನುವನು ।

–

ನಡೆವ ಶ । ಕ್ತಿಯ ಕೊಟ್ಟು । ನಡೆ ಎಂಬ । ನು

ಇಲ್ಲಿ ೫ ಮಾತ್ರೆಯ ಗಣಗಳಿವೆ. ಎರಡನೆಯ ಪಾದದಲ್ಲಿ ಮೂರು ಪಂಚ ಮಾತ್ರಾಗಣಗಳಾದ ಮೇಲೆ ಬಿಡಿಯಕ್ಷರವು 'ನು' ಕೊನೆಗಿರುವುದರಿಂದ ಗುರುವಾಗಿದೆ. ಅದು ಪಾದಕ್ಕೆ ಮುಕ್ತಾಯದ ಧ್ವನಿಯನ್ನು ಕೊಡುವುದರಿಂದ ಅದು 'ಮುಡಿ'. ಈ ಬಿಡಿ ಅಕ್ಷರದ ಬೆಲೆ ೫ ಮಾತ್ರೆಯದು.

ಇನ್ನೊಂದು ಉದಾ : ೪ ಮಾತ್ರೆ

- U U - UU -
ಸಾಯ್ವರ । ಶಾಪದ । ಲಿ
- UU - U U -
ಬೀಳ್ವರ । ತಾಪದ । ಲಿ

'ಲಿ' ಎಂಬುದು ನಾಲ್ಕು ಮಾತ್ರೆಯ ಬೆಲೆಯುಳ್ಳ ಮುಡಿ.

ಮುಡಿ ಒಮ್ಮೊಮ್ಮೆ ಪಾದದ ನಡುವೆಯೂ ಬರಬಹುದು :

ಉದಾ : ೩.ಮಾ ೩.ಮಾ ಮು ೩.ಮಾ ೩.ಮಾ ಮು
ಇರುಳು । ಹಗಲೊ । ಳು । ಹರುಷ । ವೆನ್ನೊ । ಳು
ತೊರೆದೆ । ಹೋಯಿ । ತೋ । ಹೋಯಿ । ತೋ (೩ ಮಾ)

ಅಕ್ಷರಗಳಿಗೆ ಎಷ್ಟೆಷ್ಟು ಮಾತ್ರೆಗಳ ಕಾಲವನ್ನು ಕೊಡಬೇಕಾದೀತೆಂಬುದನ್ನು ಕೆಳಗಿನ ಈ ಚರಣಗಳನ್ನು ಉದಾಹರಿಸಬಹುದು. ಇಲ್ಲಿಯದು ೪ ಮಾತ್ರೆಯ ಗಣದ ಧಾಟಿ :

ಇಂತು । ಲಗ್ಗೆಯ । ಹತ್ತುವ । ಜನದಲಿ ।
ಕೈದುಗ । ಳೊಳಲೆಯೂ ಖಣಿಖಣಿ । ರವದಲಿ ।
ಇರುಳ । ಮೌನವೂ । ಬೆಚ್ಚಿ । ತು । ಸದ್ದು ಹೆಚ್ಚಿ । ತು

ಇಲ್ಲಿ ಮೌನ, ಪ್ಲುತ, ಮುಡಿ ಮೂರೂ ಉಂಟು.

ಪದ್ಮಗಣ : ಪಂಚ ಮಾತ್ರಾಗಣಗಳ ಈ ಪಾದಗಳನ್ನು ನೋಡಿರಿ.

- UUU UUUUU - UUU - -
ಕಿತ್ತಿಳೆಯ । ಮರಗಳಲಿ । ಹೂಗಳರ । ಳುತ್ತ ಪದ್ಮಗಣ
ಎತ್ತಲುಂ । ಮಿಂಚುಹುಳು । ಚಿಮ್ಮಿ ಕುಣಿ । ಯುತ್ತ

ಇಲ್ಲಿ ೫ ಮಾತ್ರೆಯ ಗಣಗಳು ಪ್ರತಿ ಪಾದದಲ್ಲಿ ಮೂರು ಮೂರು ಕೊನೆಗೆ ಒಂದೊಂದು ೪ ಮಾತ್ರೆಯ ಗಣ ಇವೆ. ಈ ಕೊನೆಯ ಗಣದಲ್ಲಿ ೧ ಗುರುವಿನ (ಅಥವಾ ೨ ಲಘುಗಳ) ಮುಂದೆ ಒಂದೇ ಅಕ್ಷರವಿರಬೇಕು. ಈ ತುದಿಯ ಅಕ್ಷರವು ಸ್ವರೂಪದಲ್ಲಿ ಲಘುವಿರಬಹುದು ಇಲ್ಲವೆ ಗುರುವಿರಬಹುದು. ಪಾದದ ಕೊನೆಗಿದ್ದುದರಿಂದ ಎಳೆದು ಹೇಳುವುದು ರೂಢಿ. ಆದರೆ ಅದರ ಬೆಲೆ ಎರಡು ಮಾತ್ರೆಯೆಂದು ಅದರ ಜಾಗದಲ್ಲಿ ಎರಡು ಲಘು ಅಕ್ಷರಗಳನ್ನು ಇಡುವ ಹಾಗಿಲ್ಲ. ಇಲ್ಲಿಯ ಕೊನೆಯ ಗಣ U U U̲ ಎಂದಾಗಲಿ - U̲ ಎಂದಾಗಲಿ ಇರಬೇಕು. ಆದರೆ UUUU ಎಂಬಂತೆ ಅಥವಾ -UU ಎಂಬಂತೆ ಇರಲು ಸಾಧ್ಯವಿಲ್ಲ.

ಉದಾ : ನಡುಗನ್ನಡದ ಚೌಪದಿಯ ಮೊದಲ ಪಾದವನ್ನು ನೋಡಿರಿ
೫ಮಾ ೫ಮಾ ೫ಮಾ
ಮಳೆ ಬಂದು । ಬೆಳೆ ಬೆಳೆದು । ಧರೆ ತಣಿಯ । ಲೆಂದು

ಈ ದ್ವಿಪದಿಯ ಸಾಲುಗಳನ್ನು ನೋಡಿರಿ.

ರಾಯ ಕಳು । ಹಿದನೆನ್ನ । ತಾಯೆ ನಿ । ನ್ನಡಿಗೆ

UUU

ವಾಯುಸುತ । ತಾನೆನುತ । ಪೊಡೆಮಡುತ । ಲಡಿಗೆ

ಇಲ್ಲಿಯ ಗಣ ವಿನ್ಯಾಸ : ೫+೫+೫+U U U ಎಂಬಂತೆ

ಮೂರು ೫ ಮಾತ್ರೆಯ ಗಣಗಳ ಮುಂದೆ ನ ಗಣವು (U U U)ಬಂದು ಪಾದದ ಕೊನೆಯಲ್ಲಿ ಮುಕ್ತಾಯದ ಧ್ವನಿಯಿದೆ.

ಹಿಂದೆ ನೋಡಿದ 'ಮುಡಿ' ಗೆ ಇದನ್ನು ಹೋಲಿಸಬೇಕು. ಮುಡಿಯಂತೆಯೇ ಈ ಕೊನೆಯ ಗಣಕ್ಕೂ ೫ ಮಾತ್ರೆಗಳ ಬೆಲೆಯುಂಟು. ಇದನ್ನು ಕೊನೆಯ ಅಕ್ಷರದ ಪಲುಕಿನಿಂದಾಗಲಿ ಮೌನದಿಂದಾಗಲಿ ತುಂಬಿಕೊಳ್ಳಬಹುದು. ಮುಡಿಗೂ ಇದಕ್ಕೂ ಇರುವ ವ್ಯತ್ಯಾಸವೆಂದರೆ ಮುಡಿಯಲ್ಲಿ ಗೋಚರಿಸದ ಸಾವಕಾಶ ಗತಿ U U U ಈ ಗಣದಲ್ಲಿದೆ.

ಮುಡಿಗಿಂತ ಅಕ್ಷರ ಪ್ರಮಾಣದಲ್ಲಿ ಉದ್ದವಾಗಿ ಮುಕ್ತಾಯದ ಧ್ವನಿ ಅದಕ್ಕಿಂತ ಸಾವ ಕಾಶವಾಗಿ ತರುವ ಈ ಲಕ್ಷಣದ ಗಣಕ್ಕೆ 'ಪದ್ಮಗಣ' ಎಂದು ತೀ.ನಂ.ಶ್ರೀ ಹೆಸರಿಸಿದ್ದಾರೆ.

'ಪದ್ಮ' ಎಂಬುದು ಪದ್ಮದ ಪ್ರಕಾರಗಳಲ್ಲಿ ಒಂದಕ್ಕೆ ಉದಾಹರಣೆಯೂ (- U) ಆಗಿದೆ. 'ಪ' ಇದರ ಸಂಕೇತ.

ಈ ಉದಾಹರಣೆಯನ್ನು ನೋಡಿರಿ

೫ಮಾ ಪ

ಹಾಡಿದನು । ಗಮಕಿ

೫ ೫ ೫ ಪ

ನಾಡು ನಲಿ । ಮುದು ರಸದ । ಕಡಲಿನಲಿ । ಧುಮುಕಿ

ಸಾಮಾನ್ಯವಾಗಿ ಪದ್ಮಗಣವು ಮುಡಿಯಂತೆ ಪಾದದ ಕೊನೆಗೆ ಬರುತ್ತಿದ್ದರೂ ಅದರ ಹಾಗೆಯೇ ಪಾದದ ನಡುವೆಯೂ ಬರಬಹುದು.

ಉದಾ : ೫ ಪ ಪ ಮು

ಮೇಲೊಂದು । ಗರುಡ । ಹಾರುತಿಹು । ದು

೫ ಪ ಮು

ಕೆಳಗದರ । ನೆರಳು । ಓಡುತಿಹು । ದು

೫ ೫ ಮು

ಅದಕೊ ಅದ । ರಿಚ್ಚೆಹಾ । ದಿ

೫ ೫ ಮು

ಇದಕು ಹರಿ । ದತ್ತ ಬೀ । ದಿ

ಹಿಂದೆ ಕೊಟ್ಟ ಉದಾಹರಣೆಯನ್ನು ನೋಡಿರಿ.

ಶಿ ಪ ಶಿ ಶಿ ಶಿ ಪ

ಈಗಳೇ । ನಾದೆನ್ । ಕೇಳ ದೈ । ವೇಚ್ಚೆಯನ್ । ಜಮದಗ್ನಿ । ಅಯ್ಯನ್

ಶಿ ಶಿ ಶಿ ಪ ಶಿ ಪ

ಎನ್ನನಾ । ಋಷಿಭರ । ದ್ವಾಜಂಗೆ । ಕೊಟ್ಟನ್ – । ದಾನಮನ್ । ಕೊಟ್ಟನ್

ಆರು ಮಾತ್ರೆಯ ಗಣಗಳ ಜತೆಗೂ ಪದ್ಮಗಣ ಬರಬಹುದು.

ಉದಾ : ೬ ೬

ಚಣ ಚಣಕೂ । ಮಿರು ಮಿಂಚುವ

೬ ೬

ಕೋಲ್ಮಿಂಚಿನ । ಸಂಚೇನಿದು

೬ ೬

ತಪ ಭಂಗಕೆ । ಕುಸುಮಾಸ್ತ್ರವ

೬ ಪ

ನಣಿ ಗೈವನೊ । ಮಾರಂ

ಕೊನೆಯ ಮಾತು : 'ಮುಡಿ' ಮೊದಲು ಷಟ್ಪದಿಯ ಪ್ರಕಾರಗಳಲ್ಲಿ ೩, ೬ನೆಯ ಪಾದಗಳ ಕೊನೆಯಲ್ಲಿ ನೆಲೆಗೊಂಡು ಬಳಿಕ ಎಲ್ಲ ಬಗೆಯ ಲಯಗಳ ಬಗೆಬಗೆಯ ಪಾದಗಳಿಗೂ ವ್ಯಾಪಿಸಿರಬಹುದು.

'ಪದ್ಮಗಣ' ದ ಮೂಲವೂ ಅಂಶಛಂದಸ್ಸಿನಲ್ಲೇ ಇದೆ. ಎರಡು ಅಂಶಗಣ ಬ್ರಹ್ಮಗಣ (ಅಥವಾ ಸೂರ್ಯಗಣ) ಕ್ಕೆ ಇದ್ದ ನಿಯತಸ್ಥಾನವನ್ನು ಪರಿಶೀಲಿಸಬೇಕು.

ಸಾಂಗತ್ಯದ ಈ ಪದ್ಯದಲ್ಲಿ ಬ್ರಹ್ಮಗಣದ ಸ್ಥಾನವನ್ನು ನೋಡಿರಿ.

ವಿ ವಿ ವಿ ವಿ

ಪೆಣ್ಣಲ್ಲ । ವೇ ತಮ್ಮ । ನೆಲ್ಲ ಪ । ಡೆದ ತಾಯಿ ।

ವಿ ವಿ ಬ್ರ

ಪೆಣ್ಣಲ್ಲ । ವೇ ಪೊರೆ । ದವಳು

ವಿ ಬ್ರ ವಿ ವಿ

ಪೆಣ್ಣು ಪೆಣ್ಣಿಂದೇ । ತಕೆ ಬೀಳು । ಗಳೆವರು

ವಿ ಬೆ U U Uಬ್ರ

ಕಣ್ಣು ಕಾ । ಣದ ಗಾ । ವಿಲರು

೨ನೆಯ ಮತ್ತು ೪ನೆಯ ಪಾದಗಳ ಕೊನೆಗೆ ಬ್ರಹ್ಮಗಣ ಬಂದು ಪಾದಗಳಿಗೆ ಮುಕ್ತಾ ಯದ ಧ್ವನಿಯನ್ನು ಕೊಡುವುದಲ್ಲವೆ ? ಬ್ರಹ್ಮಗಣದ ಈ ಗುಣವೇ ಪದ್ಮಗಣದಲ್ಲೂ ಇದೆ. ಪದ್ಮಗಣದ ಉಚ್ಚರಣೆಯ ಕಾಲ ಇಷ್ಟೇ ಮಾತ್ರೆಗಳೆಂದು

ಖಚಿತವಿಲ್ಲ, ಯಾವ ಬಗೆಯ ಮಾತ್ರಾಗಣದೊಂದಿಗೆ ಬರುವುದೋ ಆದರ ಮಾತ್ರೆಗಳ ಬೆಲೆ ಇರುತ್ತದೆ. ಆದರೆ ಅದರ ಸ್ವರೂಪ ರಚನೆ ಮಾತ್ರ ನಿಯತ. ಬ್ರಹ್ಮಗಣದಂತೆ ಎರಡು ಅಂಶಗಳು (UUU) ಪದ್ಮಗಣದ ಹುಟ್ಟು ಅಂಶಛಂದಸ್ಸಿನ ಬ್ರಹ್ಮ (ಅಥವಾ ಸೂರ್ಯ) ಗಣದಲ್ಲಿರುವುದರಿಂದ ಅದರ ಲಕ್ಷಣವನ್ನೇ ಬಲುಮಟ್ಟಿಗೆ ಉಳಿಸಿಕೊಂಡಿರುವುದರಿಂದ ಇಂದಿನ ಮಾತ್ರಾ ಛಂದಸ್ಸಿನಲ್ಲಿ ಅದಕ್ಕೆ 'ಪದ್ಮ' ಎಂದು ಹೆಸರಿಸಿದೆ. ಬ್ರಹ್ಮ –ಸೂರ್ಯರಿಬ್ಬರಿಗೂ ಪದ್ಮವು ಪ್ರಿಯವಾದುದಲ್ಲವೆ ?.

★★★

ಅಧ್ಯಾಯ : ೬

(ಬ) ಛಂದಸ್ಸಿನ ಪ್ರೌಢ ಅಧ್ಯಯನ
ಹೊಸಗನ್ನಡ ಛಂದಸ್ಸು : ಪ್ರೇರಣೆಗಳು

ಮುಖ್ಯಾಂಶಗಳು :
೧. ಹಿನ್ನೆಲೆಯ ವಿವರ
೨. ಆಂಗ್ಲ ಕಾವ್ಯದ ಪ್ರೇರಣೆ
೩. ವೃತ್ತಬಂಧ – ಭಾವ
೪. ಆರಂಭದ ಪ್ರಯತ್ನಗಳು
೫. ಕನ್ನಡ ಮಟ್ಟುಗಳ ಪರಂಪರೆಯ ಪ್ರೇರಣೆ
೬. ಸುನೀತ ಅಥವಾ ಅಷ್ಟ ಷಟ್ಪದಿ : ಪ್ರಗಾಥ
೭. ಮಹಾ ಛಂದಸ್ಸು

★★★

೧. ಹಿನ್ನೆಲೆಯ ವಿವರ

ಈ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡ ಕಾವ್ಯ ಪ್ರಪಂಚದಲ್ಲಿ ಹೊಸದೊಂದು ಯುಗಾರಂಭವಾಯ್ತು. ಆ ಮೊದಲು ಕನ್ನಡ ಕಾವ್ಯ ಸುಮಾರು ಒಂದು ಸಾವಿರ ವರುಷಗಳ ಕಾಲ ಹಲವು ರೂಪಗಳಲ್ಲಿ ವಿಜೃಂಭಿಸಿತ್ತು. ಪಂಪ–ರನ್ನಾದಿಗಳ ಕಾಲದಲ್ಲಿ (ಕ್ರಿ.ಶ.೧೦ನೆಯ ಶತಕದಿಂದ ೧೨ನೆಯ ಶತಕದ ಮಧ್ಯದವರೆಗೆ) ವರ್ಣಛಂದಸ್ಸಿನ ಅಸಂಖ್ಯಾತ ವೃತ್ತಗಳಲ್ಲಿ ಕೆಲವನ್ನೇ ಆಯ್ದುಕೊಂಡು ಚಂಪೂಕಾವ್ಯದೇವಿಗೆ ತೊಡಿಸಿ ನೋಡಲಾಯ್ತು. ಪ್ರಾಕೃತದಿಂದ ಬಂದ ಕಂದ ಪದ್ಯಗಳ ಛಂದ ಕನ್ನಡ ನುಡಿಗೆ ಸಂಸ್ಕೃತ ವೃತ್ತಗಳಿಗಿಂತ ಹೆಚ್ಚು ಹಾಳತವಾಗಿ ಒಗ್ಗಿಕೊಂಡುದರಿಂದ ಚಂಪೂ ಕವಿಗಳು ತಮ್ಮ ಕಾವ್ಯಗಳಲ್ಲಿ ಅವುಗಳನ್ನು ಮುಕ್ಕಾಲು ಪಾಲು ಪ್ರಮಾಣದಲ್ಲಿ ಬಳಸಿದರು. ಜೊತೆಗೆ ಅಚ್ಚಗನ್ನಡ ಛಂದಸ್ಸಿನ ತ್ರಿಪದಿ, ಪಿರಿಯಕ್ಕರಗಳನ್ನು ಪ್ರಾಕೃತ ಅಪಭ್ರಂಶಗಳಿಂದ ಬಂದ 'ಪಜ್ಜಟಿಕೆ'ಯಿಂದ ಪ್ರೇರಿತವಾದ ರಗಳೆಯ ಹಲವು ಪ್ರಕಾರಗಳನ್ನೂ ಸಂದರ್ಭಾನುಸಾರವಾಗಿ ಬಳಸಿಕೊಂಡರು.

೧೨ನೆಯ ಶತಕದ ವೀರಶೈವ ಧರ್ಮಕ್ರಾಂತಿಯ ಫಲವಾಗಿ ಕನ್ನಡ ಭಾಷೆಗೆ ಹೊಸ ರೂಪ ಬಂತು. ಹಳಗನ್ನಡದ ನುಡಿಗಳ ಬಳಕೆ ತಪ್ಪಿ ನಡುಗನ್ನಡ ನುಡಿಯ ಚಲಾವಣೆಯಲ್ಲಿ ಜನಮನಕ್ಕೆ ಮುಟ್ಟುವ ಮಾತುಗಳಲ್ಲಿ 'ವಚನ' ಗಳ ಸೃಷ್ಟಿ ಮೊದಲಾಯ್ತು. ಚಂಪುವಿನ ವರ್ಣವೃತ್ತಗಳ ಕಟ್ಟು ಕಟ್ಟಳೆಗಳೂ ಪದ್ಯಗಳ ನಿಯಮ

ಆಕಾರದ ಚೌಕಟ್ಟುಗ್ಗಳೂ ಕವಿಗಳ ಹೃದಯಾಂತರಾಳದ ಅನಿಸಿಕೆ, ಸಂವೇದನೆ, ಸೂಕ್ಷ್ಮಾತಿಸೂಕ್ಷ್ಮ ಭಾವ ತರಂಗಗಳನ್ನು ವ್ಯಕ್ತಪಡಿಸುವುದಕ್ಕೆ ಅಡ್ಡಿ–ಆತಂಕಗಳನ್ನು ಒಡ್ಡುತ್ತಿರುವಂತೆ ಭಾಸವಾಗತೊಡಗಿತು. ವೀರಶೈವ ಶರಣರ ವಚನಗಳು ಈ ಅಡೆ–ತಡೆಗಳನ್ನು ಮೀರಿ ಹೊಸತೊಂದು ಗತ್ತು, ಪಲುಕುಗಳಿಂದ ಸ್ವಚ್ಛಂದ ಛಂದದಲ್ಲಿ ಆಡುನುಡಿಗಳನ್ನು ಹೊಂದಿಸಿಕೊಂಡು ಸಾಗತೊಡಗಿದವು. ಸಾಮಾನ್ಯ ಜನಮನಕ್ಕೆ ಅರ್ಥವಾಗುವ ರೀತಿಯಲ್ಲಿ ವಚನರೂಪದ ಕಾವ್ಯ ಸೃಷ್ಟಿಯಾಗತೊಡಗಿತು. ಇದರ ಸ್ವಚ್ಛಂದ ಲಯಗಳು ಗದ್ಯದತ್ತಲೇ ಹೆಚ್ಚು ವಾಲಿದಂತಾಗಿತ್ತು. ಭಾವ ತರಂಗಗಳ ನಾದಲಯದ ಗತಿಗೆ ಹಾಡುಗಬ್ಬದ ಮಾತ್ರಾಲಯದ ಗತ್ತುಗಳೂ ಒತ್ತು – ಆ್ಯಕ್ಸೆಂಟ್‌ಗಳೂ ಆವಶ್ಯಕವೆನಿಸಿ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿಗಳಂಥ ಮಟ್ಟುಗಳ ಬಳಕೆ ಆರಂಭವಾಯ್ತು. 'ರಗಳೆ' ಪ್ರಾಕೃತ – ಅಪಭ್ರಂಶಗಳಿಂದ ಬಹಳ ಹಿಂದೆಯೇ ಕನ್ನಡಕ್ಕೆ ಬಂದುದು. ಚಂಪೂ ಕವಿಗಳು ಅವುಗಳನ್ನು ತಮ್ಮ ಕಾವ್ಯಗಳಲ್ಲಿ ವಿಧ ವಿಧ ಭಂಗಿಗಳಲ್ಲಿ ಬಳಸುತ್ತಲೇ ಬಂದಿದ್ದರು. ನಮ್ಮ ಪಂಡಿತ ಕವಿಗಳು ಅಂಶಗಣಘಟಿತವಾದ ಷಟ್ಪದಿ, ಪಿರಿಯಕ್ಕರ, ತ್ರಿಪದಿಗಳನ್ನು ದೂರ ಸರಿಸಿ ವರ್ಣವೃತ್ತಭೂಯಿಷ್ಠವಾದ ಸಂಸ್ಕೃತಮಯ ಕಾವ್ಯದ ಪ್ರೌಢಿಮೆಗೆ ಮಾರುಹೋಗಿದ್ದರು. ಅಚ್ಚಗನ್ನಡದ ರಾಗಲಯದ ಅಂಶಗಣಗಳು ನಮ್ಮ ಕನ್ನಡ ನುಡಿಯ ಜಾಯಮಾನಕ್ಕೆ ತೀರ ಹತ್ತಿರದಾದ್ದರಿಂದ ಆ ಪರಂಪರೆಯನ್ನು ಬಿಟ್ಟು ಕೊಡಲು ಆರರು, ಹಿಡಿಯಲೂ ಆರರು ಎಂಬಂಥ ಸ್ಥಿತಿಯ ಚಂಪೂಕಾವ್ಯಗಳಲ್ಲಿ ಅಲ್ಲಲ್ಲಿ ವರ್ಣನೆಯ ಸಂದರ್ಭಗಳಲ್ಲೆಲ್ಲ ಅವುಗಳನ್ನು ಬಳಸಿ ತಮ್ಮ ಕಾವ್ಯದ ನಡೆಯಲ್ಲಿ ವೈವಿಧ್ಯ ತರಲು ಯತ್ನಿಸುತ್ತಿದ್ದರು. ಅನಂತರ ಸಂಸ್ಕೃತವೃತ್ತಗಳ ಹಾವಳಿ ಹೆಚ್ಚಿದಂತಾಗಿ ಅವುಗಳ ಕಾರಣದಿಂದ ಸಂಸ್ಕೃತ ಭಾಷಾ ಶೈಲಿಯ ಹೊರೆ ಹೊತ್ತ ಕನ್ನಡ ನುಡಿಯ ಇಂಪೂ ಸೊಂಪೂ ಮಾಯವಾದಂತೆನಿಸಿತು. ಸಂಸ್ಕೃತ ಭಾಷೆಯ ಬಗ್ಗೆ ಒಂದು ಬಗೆಯ ಪ್ರತಿಭಟನೆ ವ್ಯಕ್ತವಾಗಿ ವರ್ಣವೃತ್ತ–ಕಂದ ಪದ್ಯಗಳ ಬಗೆಗೂ ತುಸು ಅಸಡ್ಡೆ ಆರಂಭವಾಯ್ತು. ಆಗ ಹರಿಹರನ ರಗಳೆಗಳಿಗೆ ರಾಘವಾಂಕನ ಷಟ್ಪದೀ ಕಾವ್ಯಗಳಿಗೆ ಜನಪ್ರಿಯತೆ ಹೆಚ್ಚಿತು. ಹರಿಹರ ಪ್ರತಿಭಾವಂತ. ರಗಳೆಯ ಮೂರು ಬಗೆಗಳನ್ನು ತನ್ನ ನೂರೊಂದು ಶರಣರ ರಗಳೆಗಳಲ್ಲಿ ಬಳಸಿ ಅಪಾರ ಮೆಚ್ಚಿಕೆ ಪಡೆದ. ರಗಳೆಯ ಸಮಾನ ಮಾತ್ರಾಸಂಖ್ಯೆಯ ಮತ್ತು ಸಮಾನ ಮಾತ್ರಾಗಣಗಳ ಪಾದಗಳು ನೂರಾರು ಬಂದರೂ ಬೇಸರವುಂಟಾಗದ ಹಾಗೆ ಹರಿಹರ ಕಾವ್ಯವನ್ನು ನಡೆಸಬಲ್ಲವನಾಗಿದ್ದ. ಈ ಪ್ರತಿಭಾ ಸಾಮರ್ಥ್ಯ ಅವನ ತರುವಾಯದ ಯಾವ ಕವಿಯಲ್ಲೂ ಕಂಡು ಬರಲಿಲ್ಲ. ಅವನ ಸೋದರಳಿಯನೂ ಶಿಷ್ಯನೂ ಆಗಿದ್ದ ರಾಘವಾಂಕನೂ ಪಂಡಿತನಾಗಿದ್ದ, ಪ್ರತಿಭಾವಂತನೂ ಆಗಿದ್ದ. ಆದರೂ ಹರಿಹರನ ರೀತಿಯಲ್ಲಿ ರಗಳೆಯನ್ನು ದುಡಿಸಿಕೊಂಡು ಕಾವ್ಯವನ್ನು ನಡೆಸುವ ಆತ್ಮವಿಶ್ವಾಸ ತೋರಲಿಲ್ಲ. ರಗಳೆಯ ಗೀಳನ್ನು ಹರಿಹರನಿಗೇ ಬಿಟ್ಟುಕೊಟ್ಟು ತಾನು ಷಟ್ಪದಿಯ ದಾರಿ ಹಿಡಿದು ಷಟ್ಪದೀ ಕಾ[illegible] ಪುರಸ್ಕರ್ತನಾದ. ಮಿಗಿಲಾದ ಪ್ರತಿಭೆಯನ್ನು ಮೆರೆದು ಷಟ್ಪದೀ ಛಂದಸ್ಸಿನಲ್ಲಿ ಕಾವ್ಯರಚನೆಗೆ[illegible] ಪಂಡಿತ–ಪಾಮರರೆಲ್ಲರ ಮೆಚ್ಚಿಕೆ ಪಡೆದ ಷಟ್ಪದೀ ಛಂದೋ ಮಾರ್ಗದಲ್ಲಿ ಕೈ ಪಳಗಿ[illegible]ತೆ ರಾಘವಾಂಕನು ಷಟ್ಪದಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವ ಕುತೂಹಲ[illegible] ಕೆರಳಿದಂತೆ ತೋರುತ್ತದೆ. ಪಂಚ

ಮಾತ್ರಾಗಣಗಳ ವಾರ್ಧಕ ಷಟ್ಪದಿ ಅವನ ಕೈಯಲ್ಲಿ ಹದಗೊಂಡು ಪ್ರಸಿದ್ಧಿ ಪಡೆದಾಗ ಕಿರಿಯ ಪಾದವೊಂದಕ್ಕೆ ಚತುರ್ಮಾತ್ರೆಯ ಐದು ಗಣಗಳನ್ನು ಸೇರಿಸಿ 'ಉದ್ದಂಡ ಷಟ್ಪದಿ' ಯೆಂಬ ಹೊಸ ಷಟ್ಪದಿಯನ್ನು ಸೃಷ್ಟಿಸಿ 'ವೀರೇಶ ಚರಿತ' ವೆಂಬ ಕಾವ್ಯ ರಚನೆ ಮಾಡಿದ. ಪಂಡಿತರೂ ಸಾಮಾನ್ಯರೂ ಆ ಕಾವ್ಯವನ್ನು ಮೆಚ್ಚಿದರೋ ಇಲ್ಲವೋ ಸ್ಪಷ್ಟವಾದ ಯಾವ ಪ್ರತಿಕ್ರಿಯೆಗಳೂ ವ್ಯಕ್ತವಾದಂತಿಲ್ಲ. ರಾಘವಾಂಕನ 'ಉದ್ದಂಡ ಷಟ್ಪದಿ' ಯನ್ನು ಮುಂದಿನ ಯಾವ ಕವಿಗಳೂ ಪ್ರಯೋಗಿಸಿ ನೋಡಿಲ್ಲ. ರಾಘವಾಂಕನಿಗಿಷ್ಟೇ ಇದು ಸೀಮಿತವಾಗಿ ಅನಂತರ ಮುಗ್ಗಿಹೋಗಿದೆ. ಬೇರೆಲ್ಲಿಯೂ ಈ ಷಟ್ಪದೀ ರೂಪ ಗೋಚರಿಸದೆ ತಲೆಮರೆಸಿಕೊಂಡು ಹೋಗಬೇಕಾದರೆ ಅದರಲ್ಲಿ ಏನೋ ದೋಷವಿರಬೇಕು. ಷಟ್ಪದಿಯ ಝೇಂಕಾರವುಳ್ಳ ಶ್ರುತಿಲಯಗಳಿಗೆ ಎರವಾಗಿರವುದೇ ಅದರ ಮುಖ್ಯ ದೋಷ.

ರಾಘವಾಂಕನಿಂದ ಆರಂಭವಾದ ಷಟ್ಪದೀಯುಗವು ಕುಮಾರ ವ್ಯಾಸನಂಥ ಅಸಾಧಾರಣ ಕವಿಯನ್ನು ಸೃಷ್ಟಿಸಿತು. ಅಚ್ಚಗನ್ನಡ ಛಂದಸ್ಸಾದ ಭಾಮಿನೀ ಷಟ್ಪದಿ ಕುಮಾರವ್ಯಾಸನಿಂದ ಮುಗಿಲೆತ್ತರ ನೆಗೆಯಿತೆಂದೇ ಹೇಳಬೇಕು. ಈ ಯುಗಕ್ಕೆ ಕುಮಾರವ್ಯಾಸನೇ ಯುಗಪುರುಷ ಎನ್ನುವಂತಾಯ್ತು. ರಗಳೆಗೆ ಹರಿಹರ, ಸಾಂಗತ್ಯಕ್ಕೆ ರತ್ನಾಕರರ್ಣಿ, ತ್ರಿಪದಿಗೆ ಸರ್ವಜ್ಞ ಮಿಗಿ ಲೆನಿಸಿದವರು. ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ದಾಸರ ಹರಿಕೀರ್ತನೆಗಳ ವೈಭವದ ಕಾಲದಲ್ಲಿ ವರ್ಣವೃತ್ತ ಭೂಯಿಷ್ಠವೆನಿಸಿದ ಚಂಪೂ ಕಾವ್ಯಗಳು ಹೇಗೋ ಜೀವ ಹಿಡಿದುಕೊಂಡು ಬದುಕಿದ್ದವು.

೨. ಆಂಗ್ಲ ಕಾವ್ಯದ ಪ್ರೇರಣೆ

೧೯ನೆಯ ಶತಕದ ಕೊನೆಯ ಸುಮಾರಿಗೆ ಮುದ್ದಣ ಕವಿ ಪದ್ಯಕಾವ್ಯವನ್ನೇ ಹಳಿಯುತ್ತ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ಘೋಷಿಸಿ ಷಟ್ಪದಿಯಲ್ಲಿ ಕಾವ್ಯ ರಚನೆಗೆ ತೊಡಗಿದವನು ಅದನ್ನು ಬಿಟ್ಟು ಗದ್ಯ ಕಾವ್ಯಸೃಷ್ಟಿಗೆ ಕೈಹಾಕಿ ಕಾವ್ಯದ ಹೊಸ ಸಾಧ್ಯತೆಗಳನ್ನು ಮೆರೆದು ತೋರಿಸಿದ. ಆಧುನಿಕ ಗದ್ಯಯುಗ ಅವನಿಂದಲೇ ಆರಂಭವಾಗಿ ಇದೀಗ ಹಿಂದೆಂದೂ ಕಾಣದಂಥ ಗದ್ಯ ವೈಖರಿ ಹೇರಳವಾಗಿ ಬೆಳೆದು ಇಂದಿನ ಸಾಹಿತ್ಯದಲ್ಲಿ ತಲೆಯೆತ್ತಿ ಮೆರೆಯುತ್ತಿದೆ. ಆದರೆ ಪದ್ಯ ಕಾವ್ಯರಚನೆ ಮುದ್ದಣನ ಘೋಷಣೆಯಿಂದ ನಿಂತುಹೋಗಲಿಲ್ಲ. ೧೯ನೆಯ ಶತಕದ ಕೊನೆಯಲ್ಲಿ ೨೦ನೆಯ ಶತಕದ ಮೊದಲಲ್ಲಿ ಅಷ್ಟಿಷ್ಟು ಪದ್ಯರಚನೆ ಹಳೆಯ ಸಂಪ್ರದಾಯದ ವೃತ್ತ, ಕಂದ, ಷಟ್ಪದಿ, ಸಾಂಗತ್ಯ, ತ್ರಿಪದಿಗಳಲ್ಲಿ ಅಲ್ಪಸ್ವಲ್ಪವಾದರೂ ನಡೆದೇ ಇತ್ತು. ಆದರೆ ಅಂಥ ಸತ್ವಯುತ ಕಾವ್ಯವೆಲ್ಲಿದೆ ? ಕವಿಗಳೆಲ್ಲಿ ? ಕನ್ನಡ ಕಾವ್ಯ ಪ್ರತಿಭೆ ಬತ್ತಿಯೇ ಹೋಯಿತೇನೋ ಎನಿಸುವಂತಾಯಿತು. ಆಗ ಬ್ರಿಟಿಶ್ ಆಡಳಿತದಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಪರಿಣಾಮವಾಗಿ ಆಂಗ್ಲ ಸಾಹಿತ್ಯದ ಸಂಪರ್ಕ ಎಲ್ಲ ಭಾರತೀಯರಿಗೊದಗಿದಂತೆ ಕನ್ನಡಿಗರಿಗೂ ಲಭಿಸಿತು. ಆಂಗ್ಲ ಕವಿಗಳಾದ ಶೇಕ್ಸ್ ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಕೀಟ್ಸ್, ಶೆಲ್ಲಿ, ಕೊಲರಿಜ್, ಬೈರನ್, ಟೆನಿಸನ್, ಬ್ರೌನಿಂಗ್ ಮುಂತಾದವರ ಕಾವ್ಯದ ಹೊಸ ಬೆಡಗು ಬಿನ್ನಾಣಗಳು ಕನ್ನಡ ಜನಮನಗಳನ್ನು ಸೂರೆಗೊಳ್ಳತೊಡಗಿದವು. ಕೆಲವು ಕನ್ನಡಿಗರ ಕವಿಹೃದಯಗಳು ಅರಳಿ ಕನ್ನಡದಲ್ಲೂ ಆಂಗ್ಲ ಮಾದರಿಯ

ಕಾವ್ಯರಚನೆಯಾದರೆ ಅದೆಷ್ಟು ಚೆನ್ನ ಎನಿಸತೊಡಗಿತು. ಆದರೆ ಹಾಗೆ ಸ್ವತಂತ್ರ ಕಾವ್ಯರಚನೆಗೆ ಧುಮುಕದೆ ಮೊದಲು ಆಂಗ್ಲರ 'ಲಿರಿಕ್' ಮಾದರಿಯ ಚಿಕ್ಕ ಚಿಕ್ಕ ಕವನಗಳನ್ನು ಕನ್ನಡಕ್ಕೆ ಪರಿವರ್ತನಗೊಳಿಸಿದರೆ ಹೇಗೆ ? ಶಬ್ದಶ ಃ ಭಾಷಾಂತರ ಸಾಧ್ಯವೆ ? ಅದು ಸರಿಯೇ ? ಸ್ಥೂಲಾನುವಾದ, ಛಾಯಾನುವಾದ, ರೂಪಾಂತರ ಮುಂತಾದ ಹೊಸ ಹೊಸ ವಿಧಾನಗಳಲ್ಲಿ ಆಂಗ್ಲ ಕಾವ್ಯಸಂಪತ್ತನ್ನು ತಂದು ಕನ್ನಡ ಕಣಜಕ್ಕೆ ತುಂಬಬಾರದೇ ? ಹಳೆಯದಕ್ಕೆ ಬೇಸತ್ತಿದ್ದ ನಮ್ಮ ಜನಮನಕ್ಕೆ ಆಂಗ್ಲ ಕಾವ್ಯದ ಈ ಹೊಸ ನಿಧಿಯನ್ನು ಒದಗಿಸಬಾರದೆ ? ಎನಿಸಿದ್ದು ಕವಿಸಹಜಪ್ರವೃತ್ತಿ, ಆಂತರಿಕ ಪ್ರೇರಣೆ. ನೂರಾರು ವರುಷಗಳಿಂದ ವೃತ್ತ, ಕಂದ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಅಕ್ಕರ ಮೊದಲಾದ ಛಂದೋರೂಪಗಳಲ್ಲಿ ಹರಿದು ಬಂದ ಕಾವ್ಯವಾಹಿನಿ ಹರಿಗಡಿದು ಹೋಗಿ ದುರ್ಬಲವಾಗಿದ್ದಾಗ ಈ ಹಳೆಯ ಛಂದೋವೃತ್ತಗಳ ಕಟ್ಟುಕಟ್ಟಳೆಗಳನ್ನು ವಿಸ್ತರಿಸಿಕೊಂಡು ಕಾವ್ಯರಚನೆ ಮಾಡುವುದೇ ನಮ್ಮ ಕವಿಗಳಿಗೆ ಸಾಧ್ಯವಾಗದ ಸ್ಥಿತಿಯೊದಗಿದ್ದಂತೆ ತೋರುತ್ತದೆ. ಅಲ್ಲಲ್ಲಿ ನಡೆದಿದ್ದ ಇಂಥ ಪ್ರಯತ್ನಗಳೆಲ್ಲ ತುಂಬ ಶ್ರಮ ಸಾಧ್ಯವಾಗಿದ್ದಂಥವು. ಸಹಜ ಪ್ರತಿಭೆಯ ಸರಾಗತೆ ಸರಳತೆಗಳು ಅಲ್ಲಿರಲಿಲ್ಲ. ಹೀಗಿರುವಾಗ ಆಂಗ್ಲ ಕವಿತೆಗಳ ಚಿಕ್ಕ ಚಿಕ್ಕ ಪದ್ಯ ಮಾದರಿಗಳು ಮನಸೆಳೆದುದು ಸಹಜವೇ. ಆಂಗ್ಲ ಕಾವ್ಯದ ನಂಟು ಅಕಸ್ಮಾತ್ತಾಗಿ ಗಂಟುಬಿದ್ದು ಆಂಗ್ಲ ಕವನಗಳ ನೂತನ ಛಂದೋಲಯಗಳತ್ತ ಕನ್ನಡಿಗರ ಮನವೊಲಿದುದು ಅಸ್ವಾಭಾವಿಕವಲ್ಲ, ಹೊಸತೆಂಬುದು ಆಕರ್ಷಕವೇ.

೩. ವೃತ್ತ ಬಂಧ – ಭಾವ.

ಮುಖ್ಯವಾದ ಮಾತೆಂದರೆ, ತೀ.ನಂ. ಶ್ರೀಯವರು ಹೇಳಿದಂತೆ ಕವಿ ತನ್ನ ಭಾವಗಳಿಗೆಲ್ಲ ಮೊದಲು ಮಾತಿನ ರೂಪವನ್ನು ಕೊಟ್ಟು ಬಳಿಕ ಆ ಪಾಕವನ್ನು ಪಾತ್ರೆಗಳಲ್ಲಿ ನೀರನ್ನು ತುಂಬಿದಂತೆ ಕೆಲವು ವೃತ್ತಗಳಲ್ಲಿ ತುಂಬಿಡುವುದಲ್ಲ. ಕವಚಧಾರಿಯಾಗಿ ಕರ್ಣನು ಜನಿಸಿದಂತೆ, ಭಾವಗಳು ಕವಿಹೃದಯದಿಂದ ಛಂದೋಬದ್ಧವಾಗಿಯೇ ರೂಪುತಳೆದು ಹೊರ ಬೀಳುತ್ತವೆ. ಒಂದು ಪದ್ಯಬಂಧಕ್ಕೂ ಅದರಲ್ಲಿ ವ್ಯಕ್ತವಾಗುವ ಭಾವಗಳಿಗೂ ಬಲು ಹತ್ತಿರದ ಸಂಬಂಧ ವಿರುತ್ತದೆ. ಪದ್ಯದ 'ಓಟ, ತಡೆ, ತಿರುವುಗಳೇ ಭಾವದ 'ಓಟ, ತಡೆ, ತಿರುವುಗಳನ್ನು ಅನುಸರಿಸುತ್ತವೆ. ಆದ್ದರಿಂದ ಕವಿ ಆಯ್ದುಕೊಳ್ಳುವ ವೃತ್ತ ಅವನ ಭಾವಕ್ಕೆ ಅನುಚಿತವಾಗಿದ್ದರೆ ಆತನ ಕವನವು ಹದಗೆಡುವಲ್ಲಿ ಸಂದೇಹವಿಲ್ಲ. ವೃತ್ತದ ಬಂಧವು ಚೀನಾದೇಶದಲ್ಲಿ ಹಿಂದೆ ಹೆಣ್ಣುಮಕ್ಕಳು ಕಾಲಿಗೆ ತೊಡುತ್ತಿದ್ದ ಕಬ್ಬಿಣದ ಜೋಡಿನಂತೆ ಅದರ ಪರಿಮಿತಿಯೆಷ್ಟೊ ಭಾವವೂ ಅಷ್ಟೇ ಬೆಳೆಯಬೇಕು. ಅದರ ಆಕಾರವು ಹೇಗೋ ಇದು ಹಾಗೆಯೇ ಆಕಾರ ತಳೆಯ ಬೇಕು. ಉಚಿತವಾದ ಮತ್ತೊಂದು ಹೋಲಿಕೆಯನ್ನು ಕೊಡಬಹುದಾದರೆ, ವೃತ್ತದ ಬಂಧವು ಗ್ರೀಕ ಪುರಾಣದ ಪ್ರೊಕ್ರಸ್ಟೀಸನ ಹಾಸಿಗೆಯಂತೆ. ಭಾವವು ಚಿಕ್ಕದಾದರೆ ಅದನ್ನು ವೃತ್ತವು ತನ್ನುದ್ದಕ್ಕೆ ಎಳೆದು ಎಳೆದು ಹಿಗ್ಗಲಿಸುತ್ತದೆ. ಭಾವವು ದೊಡ್ಡದಾಗಿದ್ದರೆ ಅದರ ತಲೆಯನ್ನೋ ಕಾಲನ್ನೋ ಕತ್ತರಿಸಿಹಾಕುತ್ತದೆ. ಇದಕ್ಕೆ ಹಲವು ನಿದರ್ಶನಗಳನ್ನು ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಕಾಣಬಹುದು. ಸಂಸ್ಕೃತ ವೃತ್ತಗಳಲ್ಲಿ ಅನಾವಶ್ಯಕವಾದ ಅನೇಕ ಆಡಂಬರದ ಶಬ್ದಗಳನ್ನು ಕವಿಗಳು ತುಂಬುವುದು

ಇದರಿಂದಲೇ. ಲಕ್ಷ್ಮೀಶನಂಥ ಕವಿಯೂ ಕೂಡ ಜೈಮಿನೀ ಭಾರತದಲ್ಲಿ ಒಂದು ವಾರ್ಧಕ ಷಟ್ಪದಿಯ ತುಂಬ ಒಂದು ಭಾವವನ್ನು ವಿಸ್ತರಿಸಲಾರದೆ ಅಲ್ಲಲ್ಲಿ ಕ್ಲೇಶ ಪಟ್ಟಿರುವುದು ಇದರಿಂದಲೇ (ಸಮಾಲೋಕನ ಪು. ೧೮೩–೮೪)

ಸಂಸ್ಕೃತ ವೃತ್ತಗಳಲ್ಲಿ ಮತ್ತು ಕಂದಪದ್ಯಗಳಲ್ಲಿ ನಾಲ್ಕು ಪಾದಗಳು. ಷಟ್ಪದಿಗಳಲ್ಲಿ ಆರು ಪಾದಗಳು. ಇದು ತುಂಬ ಇಕ್ಕಟ್ಟಾದ ಚೌಕಟ್ಟು. ಕವಿಯ ಅನಂತ ಭಾವಗಳ ಅಭಿವ್ಯಕ್ತಿಗೆ ಈ ಛಂದೋರೂಪಗಳು ಸಾಲವು. ಭಾವದ ಗತಿಗೆ ಬಳುಕುವ, ಹಿಗ್ಗುವ, ಬೇಕೆಂದಾಗ ಸಲ್ಲುವ ವಿವಿಧ ಗತಿಯ ಮಟ್ಟುಗಳು ಕನ್ನಡಕ್ಕೆ ಬೇಕಾದವು. ಅಂಥ ಹೊಸ ಮಾದರಿಗಳಿಗಾಗಿ ತಡಕಾಡುತ್ತಿದ್ದಾಗ ಆಂಗ್ಲ ಕಾವ್ಯದ ಹೊಸ ರುಚಿ ಕನ್ನಡಿಗರನ್ನು ಮೋಹಿಸಿತು. ಪ್ರೇರಿಸಿತು, ಪ್ರಚೋದಿಸಿತು.

೪. ಆರಂಭದ ಪ್ರಯತ್ನಗಳು

ಇಪ್ಪತ್ತನೆಯ ಶತಕದ ಮೊದಲೆರಡು ದಶಕಗಳಲ್ಲಿ ಬಿ.ಎಂ. ಶ್ರೀಯವರು, ಹಟ್ಟಿಯಂಗಡಿ ನಾರಾಯಣರಾಯರು, ಪಂಜೆ ಮಂಗೇಶರಾಯರು, ಗೋವಿಂದ ಪೈಯವರು ಮುಂತಾದವರು ಇಂಗ್ಲಿಷ್ ಕವನಗಳ ಅನುವಾದಕ್ಕೆ ತೊಡಗಿದರು. ಆ ಮಾದರಿಯಲ್ಲಿ ಸ್ವತಂತ್ರ ಕವನ ರಚನೆಯನ್ನೂ ಆರಂಭಿಸಿದರು. ಇವರಿಗಿಂತ ಸ್ವಲ್ಪ ಮುಂಚೆ – ಎಸ್.ಜಿ. ನರಸಿಂಹಾಚಾರ್ಯರು ಇಂಗ್ಲಿಷ್ ಕವಿತೆಗಳನ್ನು ಚೌಪದಿ, ಷಟ್ಪದಿ, ಸಾಂಗತ್ಯಗಳಲ್ಲಿ ಅನುವಾದಿಸಿದ್ದರು. ಉತ್ತರ ಕರ್ನಾಟಕದಲ್ಲಿ ಧಾರವಾಡದ ಬಾಳಾಚಾರ್ಯಸಕ್ಕರಿ (ಶಾಂತಕವಿ) ಯವರು ಪುಣೇಕರ ನರಸಿಂಹಾಚಾರ್ಯರು (ಕಾವ್ಯಾನಂದರು) ಕಂದ–ವೃತ್ತಗಳಲ್ಲೂ ಷಟ್ಪದಿಗಳಲ್ಲೂ ಇನ್ನಿತರ ಸ್ವತಂತ್ರ ಪದ್ಯರೂಪದಲ್ಲೂ ಕಾವ್ಯರಚನೆ ನಡೆಸಿದ್ದರು.

ಈ ಹಿನ್ನೆಲೆಯ ವಿವರದಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಬಹುಕಾಲದಿಂದ ಕನ್ನಡ ಕಾವ್ಯದಲ್ಲಿ ಹಲವಾರು ಛಂದಸ್ಸಿನ ಪ್ರಯೋಗಗಳು ನಡೆಯುತ್ತಲೆ ಬಂದಿವೆ. 'ಕನ್ನಡ ಛಂದಸ್ಸು ನೀರು ನಿಂತ ಒಂದು ಕೊಳದಂತಲ್ಲ; ಒಂದು ನದಿಯಂತೆ, ಅಲ್ಲಲ್ಲಿ ಉಪನದಿಗಳನ್ನು ಸೇರಿಸಿಕೊಳ್ಳುತ್ತ ಒಂದು ಕ್ಷೀಣಿಸಿ ಮತ್ತೊಂದು ಪ್ರಬಲಿಸುವ ಶಾಖೆಗಳಾಗಿ ಒಡೆಯುತ್ತ ಮುಂದು ಮುಂದಕ್ಕೆ ಹರಿಯುವ ನದಿಯಂತೆ' – ತೀ.ನಂ. ಶ್ರೀಯವರ ಈ ಮಾತು ಮನನೀಯವಾಗಿದೆ.

೧೯೨೧ರಲ್ಲಿ ಪ್ರಕಟವಾದ ಬಿ.ಎಂ.ಶ್ರೀಯವರ 'ಇಂಗ್ಲಿಷ್ ಗೀತೆಗಳು' ಮತ್ತು ಅನಂತರ ಪ್ರಕಟವಾದ 'ಅಶ್ವತ್ಥಾಮನ್' ನಾಟಕ – ಇವು ಕನ್ನಡದ ನವೋದಯ ಕಾವ್ಯಕ್ಕೆ ನಾಂದಿ ಹಾಡಿದ ಕೃತಿಗಳು. ಇವು ಬಿ.ಎಂ. ಶ್ರೀಯವರ ಶಿಷ್ಯವರ್ಗದಲ್ಲಿದ್ದು ಇಂದು ರಾಷ್ಟ್ರಕವಿ ಎನಿಸಿದ ಕುವೆಂಪು (ಅಂದು 'ಕಿಶೋರಚಂದ್ರವಾಣಿ'), ವಿ.ಸೀತಾರಾಮಯ್ಯ, ಜಿ.ಪಿ. ರಾಜರತ್ನಂ, ಪು.ತಿ.ನರಸಿಂಹಾಚಾರ್ಯ, ತೀ.ನಂ. ಶ್ರೀಕಂಠಯ್ಯ, ಎಂ.ವಿ. ಸೀತಾರಾಮಯ್ಯ ಮುಂತಾದವರು. 'ಇಂಗ್ಲೀಷ್ ಗೀತೆಗಳ' ಪ್ರಕಟನೆಯಿಂದ ಸ್ಫುರಣಗೊಂಡು ಹೊಸ ಕಾವ್ಯರಚನೆಗೆ ನುಗ್ಗಿದರು. ಮಂಗಳೂರು ಕಡೆಗೆ ಇದೇ ಸುಮಾರಿಗೆ

ಪಂಜೆ ಮಂಗೇಶರಾಯರು, ಗೋವಿಂದ ಪೈಯವರು, ಮತ್ತಿತರರು ಕನ್ನಡದಲ್ಲಿ ಹೊಸ ಹೊಸ ಮಟ್ಟುಗಳ ರಚನೆಯಲ್ಲಿ ಮುಂದುವರಿದಿದ್ದರು. ಇತ್ತ ಧಾರವಾಡದ ಕಡೆಗೆ ೧೯೧೮ರಿಂದಲೇ ಸ್ವತಂತ್ರ ಕವನದ ರಚನೆಗೆ ತೊಡಗಿದ್ದ ಹುಟ್ಟುಕವಿ ಬೇಂದ್ರೆಯವರು ೧೯೨೫ರ ಸುಮಾರಿಗೆ 'ಗೆಳೆಯರ ಗುಂಪ'ನ್ನು ಕಟ್ಟಿ ಹೊಸ ಕಾವ್ಯದ ದಾರಿಯಲ್ಲಿ ರಭಸದಿಂದ ಸಾಗಿದ್ದರು. ಅವರ ಈ ಗುಂಪಿನಲ್ಲಿ ಇಂದು ಸುಪ್ರಸಿದ್ಧ ಸಾಹಿತಿಗಳೂ ಕವಿಗಳೂ ಎನಿಸಿದ ವಿನಾಯಕರು, ರಂಗನಾಥ ಮುಗಳಿಯವರು, ಸಂಶೋಧಕ ಶಂ.ಬಾ. ಜೋಶಿಯವರೂ ಮನೋಹರ ಗ್ರಂಥಮಾಲೆಯ ಜಡಭರತ (ಜಿ.ಬಿ.ಜೋಶಿ) ಮುಂತಾದವರು ಪ್ರಮುಖರಾಗಿದ್ದರು.

೫. ಕನ್ನಡ ಮಟ್ಟುಗಳ ಪರಂಪರೆಯ ಪ್ರೇರಣೆ

ಹೀಗೆ ಕನ್ನಡ ಸಾಹಿತ್ಯದ 'ನವೋದಯ' ದಲ್ಲಿ ಹೊಮ್ಮಿದ ಕವಿತೆಯ ಹೊಸ ಮಟ್ಟುಗಳ ಮೂಲ ಪ್ರೇರಣೆ ಆಂಗ್ಲ ಕಾವ್ಯದ ಕವಿಗಳ 'ಲಿರಿಕ್' ಎಂಬ ಕವನ ರೂಪದಿಂದಲೇ ಒದಗಿದ್ದು ಎನ್ನಬಹುದು. ಹೀಗಿದ್ದರೂ ಬಿ.ಎಂ. ಶ್ರೀಯವರ 'ಇಂಗ್ಲಿಷ್ ಗೀತೆಗಳ' ಛಂದೋಬಂಧಗಳು 'ಲಿರಿಕ್' ಮಾದರಿಯನ್ನು ಹೋಲುವಂತಿದ್ದರೂ ಸೂಕ್ಷ್ಮ ವಿಶ್ಲೇಷಣೆಯಿಂದ ಪರಿಶೀಲಿಸಿದಾಗ ಅವುಗಳ ಲಯಗಳ ತಳಹದಿ ಇರುವುದು ಕನ್ನಡ ನೆಲದಿಂದ ಹುಟ್ಟಿದ್ದ ಷಟ್ಪದಿ, ಚೌಪದಿ, ರಗಳೆ, ಛಂದೋವತಂಸ, ಸೀಸಪದ್ಯ, ಧವಳದ ಹಾಡು ಮುಂತಾದವುಗಳಲ್ಲಿಯೇ ಎಂಬುದು ಗವನಿಸಬೇಕಾದ ಸಂಗತಿ. ಹೆಚ್ಚಾಗಿ ಷಟ್ಪದಿ, ಚೌಪದಿಗಳ ಬಗೆಬಗೆಯ ಮಾರ್ಪಾಟುಗೊಂಡ ಬಂಧಗಳೇ ಇವು. ೩, ೪, ೫, ೬ (೨+೪, ೪+೨) , ೭(೩+೪), ೮ (೩+೫) – ಹೀಗೆ ಆರು ಬಗೆಯ ಮಾತ್ರಾಗಣಗಳಲ್ಲಿ ಯಾವ ಗಣಗಳಿಂದಾದರೂ ರಚನೆಗೊಂಡ ಪಾದಗಳು ಈ ಬಂಧಗಳಲ್ಲಿವೆ. ಅಂಶಗಣಗಳ ರಾಗಲಯದ ಛಾಯೆಯೂ ಅಲ್ಲಲ್ಲಿ ಕೇಳಬರುತ್ತದೆ. ಈ ಪದ್ಯಗಳಿಗೆ ಒಂದೊಂದರಲ್ಲೂ ಇಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ, ಪ್ರತಿ ಪಾದಕ್ಕೆ ಇಷ್ಟೇ ಅಕ್ಷರ ಅಥವಾ ಮಾತ್ರೆಗಳಿರಬೇಕೆಂಬ ಕಟ್ಟಳೆಯೂ ಇಲ್ಲ. ಈ ಪದ್ಯಗಳಲ್ಲಿ ಮಾತ್ರಾಗಣ – ಅಂಶಗಣಗಳ ನಾದಲಯದ ವೈವಿಧ್ಯವಿರುವುದು; ಸ್ವಚ್ಛಂದತೆಯಿಲ್ಲ. ಈ ರಚನೆಗಳು ವಾಚನ–ಗಾಯನಗಳೆರಡಕ್ಕೂ ಯೋಗ್ಯವಾಗಿವೆ.

೬. ಸುನೀತ ಅಥವಾ ಅಷ್ಟಷಟ್ಪದಿ – ಪ್ರಗಾಥ

ಆಂಗ್ಲ ಕವನಗಳಲ್ಲಿಯ ಛಂದೋಬಂಧಗಳ ಬೀಸು ಬಳುಕುಗಳ ವಿಶಾಲ ಮಾರ್ಗವನ್ನೂ ವೈವಿಧ್ಯಮಯ ಗತಿಗಳನ್ನೂ ಇಂದಿನ ನವೋದಯದ ಕವನಗಳಲ್ಲಿ ಕಾಣಬಹುದಾಗಿದೆ. ಲಲಿತರಗಳೆಯನ್ನು ಇಂಗ್ಲಿಷಿನ 'ಬ್ಲ್ಯಾಂಕ್ ವರ್ಸಿ' ನೊಂದಿಗೆ ಕಸಿ ಮಾಡಿ ಸರಳ ರಗಳೆಯನ್ನೂ, ಅದನ್ನೇ ಇನ್ನಷ್ಟು ಮಾರ್ಪಾಟುಗೊಳಿಸಿ 'ಮಹಾ ಛಂದಸ್ಸ' ನ್ನೂ ಸೃಷ್ಟಿಸಿಕೊಳ್ಳಲಾಗಿದೆ. ಸಾನೆಟ್ ಎಂಬ ಕವನ ಪ್ರಕಾರವನ್ನು 'ಸುನೀತ' ಇಲ್ಲವೇ 'ಅಷ್ಟ

ಷಟ್ಪದಿ' ಎಂಬ ಹೆಸರಿನಲ್ಲಿ ಅದರ ಎರಡೂ ಪ್ರಕಾರಗಳ ಪ್ರಯೋಗಗಳು ಕನ್ನಡಕ್ಕೆ ಬಂದಿವೆ.'ಪ್ರಗಾಥಾ' ಎಂಬುದು ಇಂಗ್ಲೀಷ್ 'ಓಡ್' ಮಾದರಿಯಲ್ಲಿ ಅನೇಕ ವೈವಿಧ್ಯಮಯ ಹಾಗೂ ಗಂಭೀರಗತಿಯ ಪಾದಗಳಲ್ಲಿ ಸೃಷ್ಟಿಗೊಂಡ ಬಂಧ. 'ಪ್ರಗಾಥಾ' ಎಂಬ ಹೆಸರನ್ನು ಬಿ.ಎಂ.ಶ್ರೀಯವರು ವೈದಿಕ ಛಂದಸ್ಸಿನ ಆ ಹೆಸರಿನ ಬಂಧದಿಂದ ಪ್ರೇರಿತರಾಗಿ ರೂಢಿಗೆ ತಂದರು. ಬಿ.ಎಂ. ಶ್ರೀ, ಮಾಸ್ತಿ, ಬೇಂದ್ರೆ, ವಿನಾಯಕ ಕುವೆಂಪು ಮುಂತಾದವರು ಹಲವಾರು 'ಪ್ರಗಾಥ' ಗಳನ್ನು ರಚಿಸಿದ್ದಾರೆ.

೭.ಮಹಾ ಛಂದಸ್ಸು

ಹೊಸಗನ್ನಡ ಛಂದಸ್ಸಿನಲ್ಲಿ 'ಲಲಿತ ರಗಳೆ' (೫ಮಾ ೪ಗ =೨೦ ಮಾ) ಯನ್ನು ಇಂಗ್ಲಿಷಿನ ಬ್ಲ್ಯಾಂಕ್ ವರ್ಸಿನೊಂದಿಗೆ ಕಸಿ ಮಾಡಿ 'ಸರಳರಗಳೆ' ಯನ್ನು ಸಿದ್ಧಪಡಿಸಲಾಯಿತೆಂದು ಈ ಮೊದಲೆ ಸೂಚಿಸಿದೆಯಷ್ಟೆ ? ಕುವೆಂಪು ಅವರು ಮಾತ್ರೆಗಳ ವ್ಯತ್ಯಾಸ, ಗಣಗಳ ವ್ಯತ್ಯಾಸ, ಲಯದ ವ್ಯತ್ಯಾಸ ಇವುಗಳಿಂದ ಸರಳರಗಳೆಯಲ್ಲಿ ವೈವಿಧ್ಯ ಸಾಧಿಸಿ ತಮ್ಮ ಅನೇಕ ಕಥನ ಕಾವ್ಯ ಮತ್ತು ನಾಟಕಗಳಲ್ಲಿ ರೂಢಿಸಿಕೊಂಡಾದ ಮೇಲೆ 'ಚಿತ್ರಾಂಗದಾ' ಎಂಬ ದೀರ್ಘ ಕಥನ ಕಾವ್ಯದ ೧೯೪೭ರ ಆವೃತ್ತಿಯಲ್ಲಿ 'ಸರಳ ರಗಳೆ'ಯೇ ಮಹಾಛಂದಸ್ಸಾಗಿ ಮಾರ್ಪಾಟುಗೊಂಡುದನ್ನು ಅವರೇ ತಿಳಿಸಿದ್ದಾರೆ. ಅನಂತರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಈ 'ಮಹಾ ಛಂದಸ್ಸನ್ನು 'ಈ ಕಾವ್ಯದ' ಭವ್ಯಶೈಲಿ' ಗೆ ಅಳವಡಿಸಿಕೊಂಡಿದ್ದಾರೆ. ಈ ಛಂದಸ್ಸಿನಲ್ಲಿ ಕವಿ ಹೆಚ್ಚಿನ ಸ್ವಾತಂತ್ರ್ಯ ವಹಿಸಿರುವುದು ಮುಖ್ಯ ಲಕ್ಷಣ. ಗಣಕ್ಕೆ ೫ ಮಾತ್ರೆಯಿರುವುದು. 'ಸರಳ ರಗಳೆ' ಯ ಲಕ್ಷಣವಾದರೆ, ಇಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಗಣಕ್ಕೆ ೩, ನಾಲ್ಕು ಇಲ್ಲವೆ ಆರು ಮಾತ್ರೆಗಳ ಬಳಕೆ ಕಂಡುಬರುತ್ತದೆ. ಕೆಲವು ಪಾದಗಳಲ್ಲಿ ಗಣಗಳ ಸಂಖ್ಯೆಯಲ್ಲೂ ಹೆಚ್ಚು ಕಡಿಮೆಯಾಗುತ್ತದೆ. ಕುವೆಂಪು ಅವರು ಮಿಲ್ಟನ್ ಮಹಾಕವಿಯ 'ಪ್ಯಾರಡೈಸ್ ಲಾಸ್ಟ್' ಕಾವ್ಯದ ಬ್ಲ್ಯಾಂಕ್ ವರ್ಸಿನ ಮಾದರಿಯನ್ನು ತಮ್ಮ ಈ ಮಹಾ ಛಂದಸ್ಸಿಗೆ ಅಳವಡಿಸಿಕೊಂಡಿರುವರೆಂಬ ಅಭಿಪ್ರಾಯವೂ ಇದೆ. ಮಿಲ್ಟನ್ ಬಳಸಿದ 'ಬ್ಲ್ಯಾಂಕ್ ವರ್ಸ್' ನಲ್ಲಿ ಎಷ್ಟು ಲಯ ವೈವಿಧ್ಯ, ಗಣ ವೈವಿಧ್ಯಗಳನ್ನು ಸಾಧಿಸಿರುವನೆಂದರೆ ಆ ಸಾಲುಗಳನ್ನು ನಿಯತವಾಗಿ, ಶಾಸ್ತ್ರೀಯವಾಗಿ ಗಣ ವಿಭಜನೆ ಮಾಡುವುದೇ ಸಾಧ್ಯವಿಲ್ಲವೆಂದು ಆಂಗ್ಲ ವಿಮರ್ಶಕರ ಅಭಿಪ್ರಾಯ. ಆದರೆ ಕಿವಿಗೆ ಆ ಸಾಲುಗಳ ಸ್ವನ -ಸೌಂಡ್ ಒಗ್ಗಿದರೆ ಆಗ ನಿಯಮಗಳನ್ನೂ ಶಾಸ್ತ್ರವನ್ನೂ ಬದಿಗಿರಿಸಬೇಕೆಂದು ಸೇಂಟ್ಸ್ ಬರಿ ಎಂಬ ತಜ್ಞನ ಮತ. ಈ ಮಾತುಗಳನ್ನು ಕುವೆಂಪು ಅವರ ಮಹಾಛಂದಸ್ಸಿಗೂ ಅನ್ವಯಿಸಿ ಹೇಳಬಹುದಾಗಿದೆ. ಕುವೆಂಪು ಅವರು ಹಲವಾರು ಬಗೆಯ ಗಣಗಳನ್ನು ಬೆರೆಸಿ ಪರಿಣಾಮಕಾರಿಯಾದ ಈ ಛಂದೋರೂಪವನ್ನು ಕನ್ನಡಕ್ಕೆ ಒದಗಿಸಿದ್ದಾರೆ. 'ಶ್ರೀರಾಮಾಯಣದರ್ಶನಂ' ಕಾವ್ಯದ ಈ ಪಾಠಗಳನ್ನು ಪರಿಶೀಲಿಸಬೇಕು.

ಉದಾ :

- - U - U - - U - U U UUU
ಸಹ್ಯಾದ್ರಿ । ಕಾನನ । ಕ್ಲೇಶ ಯಾತ್ರೆಗೆ ದಣಿದ (೨೦ ಮಾ)
- U - UU - U -UU U-U UU -
ತುಂಗಭದ್ರೆಯ ನೀರನಿದ್ರೆಗೆ ನಿಸರ್ಗರಮೆ ತಾಂ (೨೨ ಮಾ)
- U -UU UUU - - U - UU U
ಮಾರ್ಗಸತ್ರದಿ ಸಮೆದ ವಿಶ್ರಾಂತಿ ಮಂಚಮನೆ (೨೦ ಮಾ)
- U U U -UUUU U UUU -UU U
ಶೋಭಿಸಿತು. ಬೆಟ್ಟದಡವಿಯ ಕಣಿವೆ ತಳ್ವಲಿನ (೨೦ ಮಾ)
- U - - U - - - U - U -
ತುಂಬುಗಣ್ಣಂಬಿನಂ, ಕಣ್ತುಂಬೆ ತುಂಬಿದಾ (೨೦ ಮಾ)
- - U - U UU UUU - U U - U
ಪಂಪಾಸರೋವರದ ಸಲಿಲದರ್ಪಣ ದೀರ್ಘ (೨೦ ಮಾ)
- - U - U - U - U - U U -U
ವಿಸ್ತಾರ ಸರ್ಪಶೈಲಿ ಕೊಲ್ಲಿ ಕೊಲ್ಲಿಗಳಾಗಿ (೨೧ ಮಾ)
-U U U - U - -U - -U
ಕಳ್ತರಿಸಿದಾ ಸರಸ್ತೀರದಿಂದಲ್ಲಲ್ಲಿ (೨೦ ಮಾ)
U U U - U U - U - U - - - U
ಮೊದ ಮೊದಲ್ ತೆಳುವಾಗಿ, ಮೇಲೆ ದಟ್ಟೈತ್ತಾಗಿ (೨೦ ಮಾ)
UUU U U U U - U - U U U U U - U
ಬರಬರುತ ಕಡಿದಾಗಿ, ಮತ್ತೆ ತೆರೆ ತೆರೆಯಾಗಿ (೨೦ ಮಾ)
UUUUU - - U - U U UUU U - U
ಕೆಳಗಿಳಿದು ಮೇಲೇರಿ ಧುಮುಕಿ ನೆಗೆಯುತೆ ಹಾರಿ (೨೦ ಮಾ)
- U -UU - U - U - U U - U
ಹಜ್ಜೆ ಹಜ್ಜೆಗೆ ಹೋರಿ ಲಗ್ಗೆಯೇರ್ದುದು ಕಾಡು (೨೦ ಮಾ)
ಹಗೆಯ ಕೋಂಟೆಗೆ ಮುಗ್ಗುವರಿಸೇನೆಯೋಲಂತೆ (೨೦ ಮಾ)
ಗಜಸೇನೆಯೆನೆ ಬಂಡೆವಿಂಡು ; ರಥಸೇನೆಯೆನೆ (೨೦ ಮಾ)
ತುಮುಲು ತರುಪಂಕ್ತಿ ; ಕಾಲಾಳ್ಗಳೆನೆ ಹಿಣಿಲಾಗಿ (೨೦ ಮಾ)
ತುಂಡು; ಸಿಡಿಮದ್ದಿಂದೇಳ್ವ ಹೊಗೆಯೆನಲಿಲ್ಲಿ (೨೦ ಮಾ)
ಅಲ್ಲಿ ದರಿ ಫೂತ್ಕರಿಸುವುಸಿರಾವಿಯೋಲುಣ್ಣೆ (೨೦ ಮಾ)
ಮಂಜು (೨೦ ಮಾ)

(ಕಿಷ್ಕಿಂದಾ ಸಂಪುಟಂ. ಸಂ. ೪.
ಸಾಲು : ೧೫೧–೧೬೮)

– ಭಾಗದಲ್ಲಿ ಗಣಭೇದ, ವಿರಾಮ ಸ್ಥಳಪಲ್ಲಟ, ಮಾತ್ರೆಗಳ ವ್ಯತ್ಯಾಸದಿಂದ ಲಯವೈವಿಧ್ಯವನ್ನು ಸಾಧಿಸಲಾಗಿದೆ ಎಂದು ಎಸ್. ಅನಂತನಾರಾಯಣರು 'ಶ್ರೀರಾಮಾಯಣ ದರ್ಶನಂ' ದ ಮಹಾಛಂದಸ್ಸನ್ನು ಕುರಿತು ಹೇಳಿದ ಅಭಿಪ್ರಾಯಗಳ ಸಾರವಿದು ('ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಪು ೨೭೩–೭೪)

★★★

ಅಧ್ಯಾಯ : ೭

ಛಂದೋ ಗ್ರಂಥಗಳು

ಮುಖ್ಯಾಂಶಗಳು :
೧. ಸಂಸ್ಕೃತ ಪ್ರಾಕೃತ ಛಂದೋಗ್ರಂಥಗಳ ಹಿನ್ನೆಲೆ ಸಂಸ್ಕೃತ ಛಂದೋಗ್ರಂಥಗಳು
೨. ಪ್ರಾಕೃತ ಛಂದೋಗ್ರಂಥಗಳು
೩. ಕನ್ನಡ ಛಂದೋಗ್ರಂಥಗಳು
೪. ಸಂಸ್ಕೃತ ಛಂದೋ ಗ್ರಂಥಗಳಲ್ಲಿ ಕನ್ನಡ ಛಂದಸ್ಸಿನ ವಿಚಾರಗಳು

★★★

೧. ಸಂಸ್ಕೃತ ಪ್ರಾಕೃತ ಛಂದೋಗ್ರಂಥಗಳ ಹಿನ್ನೆಲೆ ಸಂಸ್ಕೃತ ಛಂದೋಗ್ರಂಥಗಳು

೧) ಪಿಂಗಲನ ಛಂದಸೂತ್ರಗಳು : ಪಿಂಗಲನು ಭಾರತದ ಆದ್ಯ ಛಂದಶ್ಶಾಸ್ತ್ರಕಾರ. ಈತನು ಪಾಣಿನಿಗೆ ಸಮಾನ ಎಂದು ಹೇಳುತ್ತಾರೆ. ಇವನ ಕಾಲ ಕ್ರಿ.ಪೂ. ೨೦೦. ಈತನ ಈ ಗ್ರಂಥದಲ್ಲಿ ವೈದಿಕ ಮತ್ತು ಲೌಕಿಕ ಛಂದಸ್ಸುಗಳ ವಿಚಾರ–ವಿವೇಚನೆಗಳಿವೆ. ಲಘು–ಗುರು (ಲಗ) ವಿಚಾರ, ಸಮುದ್ರಕಾಮಶರ ಮುಂತಾದ ಸಂಕೇತಗಳ ವಿಚಾರ, 'ಮಯರಸತಜಭನ' ಸಂಜ್ಞೆಗಳ 'ತ್ರಿಕ' ಗಳ ವಿಚಾರ, ಗಣ, ಯತಿ, ವರ್ಣವೃತ್ತಗಳು – ಇತ್ಯಾದಿ ಮೊಟ್ಟ ಮೊದಲ ಬಾರಿ ಕಂಡುಬಂದುದು ಇಲ್ಲಿಯೇ.

೨) ಭರತನ ನಾಟ್ಯಶಾಸ್ತ್ರ (ಸು. ೩–೪ನೆಯ ಶ.): ಇದು ನಾಟ್ಯಶಾಸ್ತ್ರ ಗ್ರಂಥವಾದರೂ ೧೨ನೆಯ ಅಧ್ಯಾಯದಲ್ಲಿ ವರ್ಣ – ಮಾತ್ರಾ ವೃತ್ತಗಳನ್ನು ೩೨ನೆಯ ಅಧ್ಯಾಯದಲ್ಲಿ ಕೆಲವು ಗೇಯ ವೃತ್ತಗಳನ್ನೂ ವಿವರಿಸಿದ್ದಾನೆ. ಯತಿಯನ್ನು ಗಮನಿಸದವರಲ್ಲಿ ಭರತನೂ ಒಬ್ಬನೆಂದು ಸ್ವಯಂಭು ಹೇಳಿದ್ದಾನೆ.

೩) ಜಯದೇವಚ್ಛಂದಸ್: (ಕ್ರಿ.ಶ. ಸು. ೬೦೦) ಪಿಂಗಲನನ್ನು ಅನುಸರಿಸಿ ರಚಿಸಿದ ಗ್ರಂಥ. ಲಕ್ಷಣ–ಲಕ್ಷ್ಯಸಮನ್ವಯ ಪದ್ಧತಿಯಲ್ಲಿ ವೃತ್ತಸ್ವರೂಪ ವಿವರಣೆ ಇಲ್ಲಿದೆ. ನಾಗವರ್ಮನ ಛಂದೋಂಬುಧಿ ಇದೇ ಪದ್ಧತಿಯದು.

(೪) ಜಯಕೀರ್ತಿಯ 'ಛಂದೋನುಶಾಸನ' (ಕ್ರಿ.ಶ. ಸು. ೧೦೦೦) ಜೈನ ಲಾಕ್ಷಣಿಕ. ದಿಗಂಬರಪಂಥದ ಜೈನ ಸನ್ಯಾಸಿ. ಇವನ ಗ್ರಂಥದಲ್ಲಿ ಉಳಿದ ಛಂದೋವಿಚಾರಗಳೊಂದಿಗೆ 'ಕರ್ಣಾಟಕ ಭಾಷಾ ವಿಷಯಜಾತಿ' ಗಳ ವಿಚಾರ ಬಂದಿದೆ.

ನಾಗವರ್ಮನ ಛಂದೋಂಬುದಿಯನ್ನು ಈತ ಅವಲೋಕಿಸಿದ್ದಿರಬಹುದು. ಈತನ ಮಾತೃಭಾಷೆ ಕನ್ನಡ. ಕನ್ನಡ ಕವಿ – ಕಾವ್ಯಗಳ ಉಲ್ಲೇಖ ಮಾಡಿದ್ದಾನೆ. ಕನ್ನಡ ಭಾಷಾ ಸಾಹಿತ್ಯದ ದೃಷ್ಟಿಯಿಂದ ಈತನ ಗ್ರಂಥಕ್ಕೆ ಮಹತ್ವವುಂಟಾಗಿದೆ. ೭ನೆಯ ಅಧಿಕಾರದಲ್ಲಿ ಪೂರ್ತಿಯಾಗಿ ಕನ್ನಡ ಛಂದಸ್ಸನ್ನು ಕುರಿತ ವಿವೇಚನೆಯಿದೆ. ನಾಗವರ್ಮನ ಛಂದೋಂಬುಧಿಯಲ್ಲಿ ಪಾಠಾಂತರಗಳಿಂದ ಅನೇಕ ಕ್ಲೇಶಗಳಿವೆ. ಅವುಗಳ ಪರಿಹಾರಕ್ಕೆ ಜಯಕೀರ್ತಿಯ 'ಛಂದೋನುಶಾಸನ' ತುಂಬ ಪ್ರಯೋಜನಕಾರಿ.

ಇವುಗಳಲ್ಲದೆ ಸಂಸ್ಕೃತದಲ್ಲಿ ಕೇದಾರಭಟ್ಟನ (ಸು. ೧೧೦೦) 'ವೃತ್ತ ರತ್ನಾಕರ' ಹೇಮಚಂದ್ರನ 'ಛಂದೋನುಶಾಸನ' (ಸು. ೧೧೨೫), ರಾಜಶೇಖರನ 'ಛಂದಶೇಖರ' (ಸು. ೧೧೦೦), ಕ್ಷೇಮೇಂದ್ರನ 'ಸುವೃತ್ತ ತಿಲಕ' ಗಂಗಾದಾಸನ 'ಛಂದೋಮಂಜರಿ' 'ಅಗ್ನಿ ಪುರಾಣ' ದ ೩೨೮–೩೪ನೆಯ ಅಧ್ಯಾಯದಲ್ಲಿ ಛಂದೋವಿಚಾರಗಳು – ಸಂಸ್ಕೃತ ಛಂದಶ್ಶಾಸ್ತ್ರಕ್ಕೆ ಕೊಡುಗೆ ಯಿತ್ತ ಇತರ ಮುಖ್ಯ ಗ್ರಂಥಗಳಾಗಿವೆ.

೨. ಪ್ರಾಕೃತ ಛಂದೋಗ್ರಂಥಗಳು

೧) ವಿರಹಾಂಕನ 'ವೃತ್ತಜಾತಿ ಸಮುಚ್ಚಯ' – ಇದರಲ್ಲಿ ಕೆಲಭಾಗ ಸಂಸ್ಕೃತದಲ್ಲಿ ಹೆಚ್ಚು ಭಾಗ ಪ್ರಾಕೃತದಲ್ಲಿದೆ. ಲಕ್ಷ್ಯ–ಲಕ್ಷಣ ಸಮೀಕರಣ ವಿಧಾನ ಇಲ್ಲಿದೆ.

೨) ನಂದಿತಾಢ್ಯನ 'ಗಾಥಾಲಕ್ಷಣ' : ಹೆಸರೇ ಹೇಳುವಂತೆ ಈ ಗ್ರಂಥದಲ್ಲಿ ಗಾಥೆ ಮತ್ತು ಅದರ ಜನ್ಯವೃತ್ತಗಳ ವಿವೇಚನೆ ಇದೆ.

೩) ಸ್ವಯಂಭೂಕೃತ 'ಸ್ವಯಂಭೂ ಛಂದಸ್ಸು' : ಈತನು ಅಪಭ್ರಂಶ ಭಾಷೆಯಲ್ಲಿ ಮಹಾಕವಿಯೂ ಆಗಿದ್ದ, ಈತನ ಛಂದೊಗ್ರಂಥದಲ್ಲಿ (೧) ತ್ರ್ಯಕ್ಷರ ಗಣಗಳ ಬಳಕೆಯಿಲ್ಲ, ಅಂಶಗಳೆಂಬ ೫ ಮಾತ್ರಾಗಣಗಳನ್ನು ಬಳಸಿದ್ದಾನೆ (೨) ಒಂದು ಅಕ್ಷರವನ್ನೋ ಗಣವನ್ನೋ ಸೇರಿಸುವುದರಿಂದ ಇಲ್ಲವೆ ಬಿಡುವುದರಿಂದ ಒಂದು ವೃತ್ತದಿಂದ ಮತ್ತೊಂದು ವೃತ್ತ ಹುಟ್ಟುವ ವಿಧಾನದ ವಿವೇಚನೆ ಇಲ್ಲಿದೆ (೩) ವರ್ಣವೃತ್ತಗಳಲ್ಲಿ ಯತಿ ವಿವೇಚನೆ ಇಲ್ಲ (೪) ಮಾಲಾದಂಡಕಗಳೆಂಬ ವಿಶೇಷ ದಂಡಕಗಳನ್ನು ಉಲ್ಲೇಖಿಸುತ್ತಾನೆ.

ರಾಜಶೇಖರ, ಹೇಮಚಂದ್ರರು ಈತನ ಪ್ರಾಕೃತ ಭಾಷೆಯ ಲಕ್ಷ್ಯಗಳನ್ನು ಮಾದರಿಯಾಗಿ ಅನುಸರಿಸಿರುವಂತೆ ಕಾಣುತ್ತದೆ.

(೪) 'ಪ್ರಾಕೃತ ಪೈಂಗಲ' : ಇದು ಪ್ರಾಕೃತ, ಅಪಭ್ರಂಶ ಛಂದಸ್ಸುಗಳ ವಿಸ್ತೃತ ವಿವೇಚನೆಯುಳ್ಳುದು. ಇದರ ಕರ್ತೃ ಪಿಂಗಲ ಎಂದಿದ್ದರೂ ಸಂಸ್ಕೃತದ ಪ್ರಾಚೀನ ಪಿಂಗಲಾಚಾರ್ಯನಲ್ಲ, ಇದು ೧೪ನೆಯ ಶತಕದ್ದು, ಈ ಪಿಂಗಲನು ಮೇವಾಡದ ರಾಜಪುತ್ರ ದೊರೆ ಹಮ್ಮೀರನ ಉಲ್ಲೇಖ ಮಾಡಿದ್ದಾನೆ – ವಿರಹಾಂಕನ ಪ್ರಾಕೃತ ಪದ್ಧತಿಯ ಅನುಕರಣೆ ಇಲ್ಲಿದೆ.

೩. ಕನ್ನಡ ಛಂದೋಗ್ರಂಥಗಳು

೧) ಶ್ರೀ ವಿಜಯಕೃತ 'ಕವಿರಾಜ ಮಾರ್ಗ' (ಸು. ೮೫೦)

ಇದೊಂದು ಅಲಂಕಾರ ಗಂಥ. ಆದರೂ ವ್ಯಾಕರಣ, ಛಂದಸ್ಸುಗಳನ್ನು ಕುರಿತ ಕೆಲವು ವಿಚಾರಗಳು ಇದರಲ್ಲಿವೆ. ಛಂದಸ್ಸಂಬಂಧವಾಗಿ, ಯತಿ ವಿಚಾರ, ಛಂದೋಭಂಗ, ಗುರುಲಘು ದೋಷ, ಪ್ರಾಸವಿಚಾರ ಇವು ಗಮನಿಸಬೇಕಾದುವು.ಕಾವ್ಯ ದೋಷಗಳಲ್ಲಿ ಯತಿಭಂಗವನ್ನೂ ಶಬ್ದಾಲಂಕಾರಗಳಲ್ಲಿ ಕನ್ನಡಕ್ಕೆ ಅತಿಶಯವಾದದ್ದು ಎಂದು ಪ್ರಾಸವಿಚಾರವನ್ನೂ ವಿವೇಚಿಸಿದ್ದಾಗಿದೆ. ಛಂದಸ್ಸಿನ ಬಗ್ಗೆ ಮೊಟ್ಟಮೊದಲು ವ್ಯಕ್ತವಾದ ವಿಚಾರಗಳು ಇಲ್ಲಿವೆ.

೨) 'ಗುಣಗಾಂಕಿಯಂ' : (ಸು. ೮೪೪-೮೮)

ಅಮೃತಸಾಗರಕೃತ 'ಯಾಪ್ಪರುಂಗಲಕ್ಕಾರಿಹೈ' ಎಂಬ ತಮಿಳು ಛಂದೋಗ್ರಂಥ (ಸು. ೧೧ನೆಯ ಶತಕ) ಕ್ಕೆ ಬರೆದ ವ್ಯಾಖ್ಯಾನ ಗ್ರಂಥವೊಂದರಲ್ಲಿ 'ಗುಣಗಾಂಕಿಯಂ' ಎಂಬ ಕನ್ನಡ ಛಂದ್ರೊಗ್ರಂಥದ ಹೆಸರು ಬಂದಿದೆ. ಈ ಗ್ರಂಥವು ಒಬ್ಬ ಸ್ತ್ರೀಯನ್ನುದ್ದೇಶಿಸಿ ಬರೆದುದು. ಈ ಗ್ರಂಥವನ್ನು ಅಮೃತಸಾಗರನೂ ಅನುಸರಿಸಿದ್ದನೆಂದು ತಿಳಿದುಬಂದಿದೆ. ಈ ಕನ್ನಡ ಗ್ರಂಥದ ಕರ್ತೃ ಯಾರೆಂಬುದು ತಿಳಿದಿಲ್ಲ. ಈ ಗ್ರಂಥ ಉಪಲಬ್ಧವಿಲ್ಲ. ಇದೇ ಕನ್ನಡದ ಆದ್ಯ ಛಂದೋಗ್ರಂಥ ಎನಿಸಿದೆ. ನಾಗವರ್ಮನ ಛರದೋಂಬುಧಿಯೇ. 'ಗುಣಗಾಂಕಿಯಂ' ಇದ್ದಿರಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಈ ಬಗ್ಗೆ ಯಾವುದೂ ಖಚಿತವಾಗಿಲ್ಲ.

೩) ನಾಗವರ್ಮನ ಛಂದೋಂಬುಧಿ :

೧ನೆಯ ನಾಗವರ್ಮ (ಕ್ರಿ.ಶ. ಸು. ೯೯೦) ನ 'ಛಂದೋಂಬುಧಿ' ಉಪಲಬ್ಧ ಛಂದೋಗ್ರಂಥಗಳಲ್ಲಿ ಪ್ರಾಚೀನತಮವಾದುದು. ಛಂದಸ್ಸಂಬಂಧಿಯಾದ ಅನೇಕ ವಿಷಯಗಳು ವಿಸ್ತಾರವಾಗಿಯೂ ಸ್ವತಂತ್ರವಾಗಿಯೂ ಪ್ರತಿಪಾದಿತವಾಗಿವೆ. ಪಿಂಗಳನ 'ಛಂದಸ್ಸೂತ್ರಗಳು' ಇವನ ಗ್ರಂಥಕ್ಕೆ ಆಧಾರ.ಅಲ್ಲದೆ ಜಯದೇವ ಮೊದಲಾದ ಪ್ರಾಚೀನ ಛಂದಶ್ಶಾಸ್ತ್ರಕಾರರ ಕೃತಿಗಳಿಂದಲೂ ನೆರವು ಪಡೆದುದಾಗಿ ಆತನೇ ಹೇಳಿದ್ದಾನೆ. ಈ ಗ್ರಂಥದಲ್ಲಿ ನಾಗವರ್ಮನ ಸ್ವತಂತ್ರ ದೃಷ್ಟಿ ಮತ್ತು ಪ್ರಯೋಗಶೀಲತೆಗೆ ನಿದರ್ಶನಗಳು ಸಾಕಷ್ಟು ದೊರೆಯುತ್ತವೆ. ಇದರಲ್ಲಿ ಆರು ಅಧಿಕಾರಗಳಿವೆ. ಪ್ರಥಮಾಧಿಕಾರದಲ್ಲಿ ಗಣಗಳು, ಗುರು ಲಘು ವಿಚಾರ, ಯತಿಪ್ರಾಸ, ಸರ್ವಭಾಷಾ ವಿಷಯ ಜಾತಿಗಳು, ಉಕ್ತೆಯಿಂದ ಉತ್ಕೃತಿಯವರೆಗೆ ೨೬ ಛಂದಸ್ಸುಗಳು, ಮದನವತಿ ಮುಂತಾದ ಅಚ್ಚಗನ್ನಡ ಮಟ್ಟುಗಳ ಹೆಸರುಗಳು – ಮುಂತಾದುವನ್ನು ಕುರಿತ ವಿಚಾರವಿದೆ. ಲಕ್ಷ್ಯ – ಲಕ್ಷಣಗಳೆರಡೂ ಒಂದೇ ಕಡೆ ಸಾಧಿತವಾಗುವಂತೆ ವೃತ್ತ ಸ್ವರೂಪವನ್ನು ವಿವರಿಸುವ ವಿಧಾನವು ವಿಶಿಷ್ಟವಾದುದು. ಪಂಚಮಾಧಿಕಾರದಲ್ಲಿ 'ಕರ್ಣಾಟಕವಿಷಯ ಜಾತಿ' ವೃತ್ತಗಳನ್ನು ಬ್ರಹ್ಮ , ವಿಷ್ಣು, ರುದ್ರಗಣಗಳ ಸ್ವರೂಪವನ್ನು ಐದು ಅಕ್ಕರಗಳನ್ನು ತ್ರಿಪದೀ ಭೇದಗಳನ್ನು 'ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ,

ಉತ್ಸಾಹ, ಷಟ್ಪದ – ಎಂಬಿವನ್ನು ಲಕ್ಷ್ಯ – ಲಕ್ಷಣಪೂರ್ವಕವಾಗಿ ವಿವರಿಸಿದೆ. ಕನ್ನಡ ಛಂದಸ್ಸಿನ ಚರಿತ್ರೆಗೆ ಈ ಪ್ರಕರಣ ಉಪಯುಕ್ತವಾದುದು. ಷಷ್ಠಾಧಿಕಾರದಲ್ಲಿ 'ಷಟ್ಪ್ರತ್ಯಯ ವಿಚಾರವಿದೆ. ಒಟ್ಟಿನಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ, ಛಂದಸ್ಸುಗಳ ಅತ್ಯಗತ್ಯವಾದ ಎಲ್ಲ ವಿಷಯಗಳನ್ನೂ ಸಂಗ್ರಹಿಸಿ ವಿವರಿಸಿದ್ದಾನೆ.

ಛಂದೋಂಬುಧಿ ಜನಪ್ರಿಯ ಗ್ರಂಥ. ಆದ್ದರಿಂದ ಪಾಠಾಂತರಗಳು ವಿಪುಲ. ಕನ್ನಡ ಛಂದಸ್ಸು ವಿಸ್ತರಿಸಿದಂತೆ ಮಾರ್ಪಾಡುಗೊಂಡಂತೆ ಛಂದೋಂಬುಧಿಯ ಪಾಠವೂ ಬಗೆಬಗೆಯಾಗಿ ರೂಪಗೊಂಡಿದೆ. ಇಲ್ಲಿಯ ಪಾಠಭೇದಗಳ ಚರಿತ್ರೆ ಕನ್ನಡ ಛಂದಸ್ಸಿನ ಚರಿತ್ರೆಯ ಒಂದು ಬಗೆಯ ಪ್ರತೀಕವೇ ಆಗಿದೆ. ಜಯಕೀರ್ತಿ (ಸು. ೧೧ನೆಯ ಶತಕ)ಯೂ, ವೇಮುಲವಾಡ ಭೀಮಕವಿ(ಸು.೧೩-೧೪ನೆಯ ಶತಕ)ಯೂ, ಈಶ್ವರಕವಿ (ಸು.೧೫ನೆಯ ಶತಕ)ಯೂ ಛಂದೋಂಬುಧಿಯನ್ನು ಅನುಸರಿಸಿ ತಂತಮ್ಮ ಗ್ರಂಥಗಳಲ್ಲಿ ಬಳಸಿಕೊಂಡಂತೆ ತಿಳಿದುಬರುತ್ತದೆ.

(೪) ಛಂದೋವಿಚಿತಿ :

೨ನೆಯ ನಾಗವರ್ಮನು (ಸು. ೧೦೪೦) 'ಛಂದೋವಿಚಿತಿ' ಎಂಬ ಛಂದಶ್ಶಾಸ್ತ್ರ ಗ್ರಂಥವನ್ನು ಬರೆದಿದ್ದಂತೆ ಅವನ ಕಾವ್ಯಾವಲೋಕನದಿಂದ ತಿಳಿದುಬರುತ್ತದೆ. ಇದು ಉಪಲಬ್ಧವಿಲ್ಲ, ಈ ಗ್ರಂಥವು ೧ನೆಯ ನಾಗವರ್ಮನ 'ಛಂದೋಂಬುಧಿ 'ಯಲ್ಲಿಯೇ ಐಕ್ಯವಾಗಿರಬೇಕೆಂಬ ಅಭಿಪ್ರಾಯವಿದೆ. ಯಾಕಂದರೆ ೧೭ನೆಯ ಶತಕ ಕವಿಜಿಹ್ವಾಬಂಧನದ ಕೆಲವು ಭಾಗಗಳೂ ಇನ್ನಿತರ ಲಕ್ಷ್ಯ-ಲಕ್ಷಣ ಪದ್ಯಗಳೂ ಛಂದೋಂಬುಧಿಯಲ್ಲಿವೆ. ಇದಾವುದೂ ಖಚಿತವಾಗಿಲ್ಲ.

೫) ಕವಿಜಿಹ್ವಾ ಬಂಧನ :

ಈಶ್ವರಕವಿ(ಸು.೧೫೦೦)ಯ ಈ ಗ್ರಂಥವು ಕಾವ್ಯೋಪಯುಕ್ತ ಅನೇಕ ವಿಷಯಗಳನ್ನೊಳಗೊಂಡಿದೆ. ಛಂದಶ್ಶಾಸ್ತ್ರವು ಇದರ ಮುಖ್ಯ ವಿಷಯ. ಛಂದಸ್ಸಿಗೆ ಸಂಬಂಧಪಟ್ಟ ವಿಷಯಗಳೊಂದಿಗೆ ತೆಲುಗಿಗೆ ವಿಶಿಷ್ಟವಾದ 'ವಡಿ' ಯ ಲಕ್ಷಣ ಮತ್ತು ಅದರ ಪ್ರಭೇದಗಳನ್ನೂ ಹೇಳಿದೆ. ಇದು ಅಷ್ಟೊಂದು ಉಪಯುಕ್ತ ಗ್ರಂಥವಲ್ಲವಾದರೂ ತೆಲುಗು ಛಂದೋಗ್ರಂಥಗಳ ಪದ್ಧತಿಯನ್ನೂ ವಿವರಗಳನ್ನೂ ಒಳಗೊಂಡುದರಿಂದ ಒಂದು ವಿಶಿಷ್ಟ ಗ್ರಂಥ ಎನಿಸಿದೆ. ಈಶ್ವರಕವಿ ತೆಲುಗಿನ 'ಕವಿಜನಾಶ್ರಯಮು' ಛಂದೋಗ್ರಂಥವನ್ನು ಕನ್ನಡದ 'ಛಂದೋಂಬುಧಿ' ಮತ್ತು 'ಶಬ್ದಮಣಿದರ್ಪಣ' ಗಳನ್ನು ಉಪಯೋಗಿಸಿಕೊಂಡಿರುವಂತೆ ಕಾಣುತ್ತದೆ.

೬) ಛಂದಸ್ಸಾರ : (ಸು. ೧೬೫೦)

ಗುಣಚಂದ್ರನೆಂಬ ಜೈನ ಕವಿಯ ಗ್ರಂಥವಿದು. ಐದು ಅಧಿಕಾರಗಳಲ್ಲಿ ಸಂಗ್ರಹವಾಗಿ ರಚಿತವಾದ ಛಂದೋಗ್ರಂಥ. ಛಂದಸ್ಸಂಬಂಧಿಯಾದ ಎಲ್ಲ ವಿಷಯಗಳನ್ನು ಲಕ್ಷ್ಯ-ಲಕ್ಷಣ ಸಮನ್ವಯ ಪದ್ಧತಿಯಿಂದ ಸೂತ್ರ ರೂಪದಲ್ಲಿ ವಿವರಿಸಿದ್ದಾಗಿದೆ.

ಗ್ರಂಥಕಾರನ ದೃಷ್ಟಿ ಸಂಸ್ಕೃತ ಛಂದಸ್ಸಿನ ವಿಷಯ ವಿವೇಚನೆಯ ಕಡೆಗೇ ಇದೆ. ಸಂಸ್ಕೃತ ಛಂದಸ್ಸಿನ ಮಟ್ಟಿಗೆ ಕೇದಾರಭಟ್ಟನ 'ವೃತ್ತ ರತ್ನಾಕರ' ವನ್ನು ಅನುಸರಿಸಿದಂತೆ ತೋರುತ್ತದೆ. ಅನೇಕ ಲಕ್ಷಣ ಪದ್ಯಗಳು ವೃತ್ತ ರತ್ನಾಕರದ ಅನುವಾದಗಳೇ ಆಗಿವೆ ಎಂದು ಗ್ರಂಥ ಸಂಪಾದಕರ ಅಭಿಪ್ರಾಯ. ಕನ್ನಡ ಛಂದಸ್ಸಿನ ಅಂಶಗಣಗಳ ಮಟ್ಟುಗಳ ವಿಷಯವೇ ಇಲ್ಲಿ ಇಲ್ಲ, ಆದರೆ ಮಾತ್ರಾಷಟ್ಪದಿಗಳು, ಮಾತ್ರಾತ್ರಿಪದಿ (ಮಾತ್ರೆಗಳ ತ್ರಿಪುಡೆ), ರಗಳೆಯ ಭೇದಗಳು, ಲಾವಣಿ, ಸೀಸಪದ್ಯ ಇವುಗಳ ಪ್ರಸ್ತಾಪವಿರುವುದು ಗಮನಾರ್ಹಸಂಗತಿ. ಕನ್ನಡ ಛಂದಸ್ಸಿನ ವಿಚಾರವಿಲ್ಲದ್ದರಿಂದ ಗುಣಚಂದ್ರನು ಬಹುಶಃ ನಾಗವರ್ಮನ ಛಂದೋಂಬುಧಿಯನ್ನು ನೋಡಿರಲಾರನೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

೭) 'ಷಟ್ಪ್ರತ್ಯಯ'

ಶಾಲ್ಯದ ಕೃಷ್ಣರಾಜ (ಸು. ೧೭೪೮)ಕೃತ ಹಲವಾರು ಗ್ರಂಥಗಳಲ್ಲಿ 'ಷಟ್ಪ್ರತ್ಯಯ' ವೂ ಒಂದು. ಇದರಲ್ಲಿ ಛಂದಸ್ಸಿನ ಗಣಿತ ವಿಚಾರವಾದ ಪ್ರಸ್ತಾರ ಮೊದಲಾದ ಆರು ಪ್ರತ್ಯಯಗಳ ವಿವರಣೆಯಿದೆಯೆಂದು ಭಾವಿಸಲಾಗಿದೆ. ಈ ಗ್ರಂಥ ಪ್ರಕಟವಾಗಿಲ್ಲ.

೮) 'ವೃತ್ತ ರತ್ನಾಕರ ಟೀಕೆ' (ಸು. ೧೭೭೫)

ಇದು ಕೇದಾರಭಟ್ಟನ 'ವೃತ್ತರತ್ನಾಕರ'ದ ಟೀಕೆಯೆಂದು ಹೇಳಲಾಗಿದೆ.

೯) 'ನಂದಿ ಛಂದಸ್ಸು' : (ಸು. ೧೯ನೆಯ ಶತಕ)

ಈ ಗ್ರಂಥದ ಕರ್ತೃವಾಗಲಿ ಆತನ ಕಾಲ–ದೇಶಗಳಾಗಲಿ ತಿಳಿದುಬಂದಿಲ್ಲ. ಗ್ರಂಥದ ಹೆಸರಿನ ಮೇಲಿಂದ ನಂದಿ ಎಂಬವನು ಇದರ ಕರ್ತೃವಿರಬೇಕೆಂದೂ ಆತನು ವೀರಶೈವನಿರಬಹುದೆಂದೂ ಭಾವಿಸಲಾಗಿದೆ. ಈಶ್ವರ ಕವಿಯೇ ಇದರ ಕರ್ತೃವಿರಬೇಕೆಂದೂ 'ಕವಿ ಜಿಹ್ವಾ ಬಂಧನ' ದ ಒಂದು ಭಾಗವೇ ಇದಾಗಿರಬೇಕೆಂದೂ ಪಂ.ಎಚ್. ಶೇಷಯ್ಯಂಗಾರ್ಯರು ಭಾವಿಸಿದ್ದರೆ, ಇದು ಕೊಲ್ಲಿ ಪಾಕಿಯ ವೀರಭದ್ರ ಕವಿಕೃತವೆಂದು ಆರ್.ಎಸ್. ಪಂಚಮುಖಿಯವರು ಹೇಳಿದ್ದಾರೆ.

ನಂದೀ ಛಂದಸ್ಸೂ ಚಿಕ್ಕಕೃತಿ. ಬಹುಶಃ ಅಸಮಗ್ರಕೃತಿ. ಗ್ರಂಥ ಸ್ವರೂಪವು ಛಂದೋಂಬುಧಿಯ ಮಾದರಿಯಲ್ಲಿದೆ. ವೃತ್ತ ರಚನೆಯಲ್ಲಿ ಶೈಥಿಲ್ಯ, ಅಸಹಜತೆಯ ದೋಷಗಳು ಕಂಡುಬರುತ್ತವೆ. ಲಕ್ಷ್ಯಲಕ್ಷಣ ಪದ್ಯಗಳಲ್ಲಿ ಯತಿಸ್ಥಾನದಲ್ಲಿ ತೆಲುಗು ಛಂದಸ್ಸಿನ 'ವಡಿ' ನಿಯತವಾಗಿ ಪಾಲಿತವಾಗಿರುವುದು ಒಂದು ವಿಶೇಷ.ಬಹುಶಃ ಈ ಗ್ರಂಥದ ಕರ್ತೃ ತೆಲುಗು ದೇಶದವನೂ ತೆಲುಗು ಬಲ್ಲವನೂ ಆಗಿರಬೇಕು.

ಕನ್ನಡದಲ್ಲಿ 'ಕರ್ಣಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ' (೧೮೮೫), ಛಂದಸ್ಸಾರ (೧೮೯೦), ಛಂದೋಮಾಲಿಕೆ (೧೮೯೫) ಛಂದೋದರ್ಪಣ (೧೯೧೩) – ಇವೇ ಮೊದಲಾದ ಸಾಮಾನ್ಯ ಛಂದೋ ಗ್ರಂಥಗಳೂ ಛಂದಸ್ಸಿನ ಕೈಪಿಡಿಗಳೂ ಬಂದಿವೆ. ಸಮರ್ಪಕ ಹಾಗೂ ಸಮಗ್ರ ವಿವೇಚನೆ ಇವಾವ ಗ್ರಂಥಗಳಲ್ಲೂ ಇಲ್ಲ.

೪. ಸಂಸ್ಕೃತ ಛಂದೋಗ್ರಂಥಗಳಲ್ಲಿ ಕನ್ನಡ ಛಂದಸ್ಸಿನ ವಿಚಾರಗಳು

೧) ಜಯಕೀರ್ತಿಯ 'ಛಂದೋನುಶಾಸನ' ದ ವಿಚಾರವನ್ನು ಈ ಮೊದಲೇ ಹೇಳಿದೆ.

೨) ೩ನೆಯ ಸೋಮೇಶ್ವರನ 'ಮಾನಸೋಲ್ಲಾಸ' (ಸು. ೧೧೨೯) ಕಲ್ಯಾಣ ಚಾಲುಕ್ಯವಂಶದ ರಾಜನಾದ ೩ನೆಯ ಸೋಮೇಶ್ವರನು 'ಅಭಿಲಷಿತಾರ್ಥ ಚಿಂತಾಮಣಿ' ಅಥವಾ 'ಮಾನಸೋಲ್ಲಾಸ' ಎಂಬ ಗ್ರಂಥದ ಕರ್ತೃ. ಇದೊಂದು ಚಿಕ್ಕ ವಿಶ್ವಕೋಶ. ಇದರ ೧೬ನೆಯ ಅಧ್ಯಾಯದಲ್ಲಿ ಛಂದಸ್ಸಿನ ವಿಚಾರಗಳು ನಿರೂಪಿತವಾಗಿವೆ. ಇಲ್ಲಿ ಬಂದಿರುವ ಛಂದಸ್ಸಿನ ವಿಚಾರಗಳು ಸಂಸ್ಕೃತ, ಪ್ರಾಕೃತ, ಕನ್ನಡ ಛಂದಸ್ಸುಗಳಿಗೆ ಸಂಬಂಧಪಟ್ಟುವು. ತ್ರಿಪದಿ, ಷಟ್ಪದಿ, ಕಂದಪದ್ಯ ಇವುಗಳ ವಿವರಣೆ ವಿಶದವಾಗಿ ಬಂದಿದೆ. ಕನ್ನಡ ಛಂದಸ್ಸಿನ ವಿಶೇಷ ಪರಿಜ್ಞಾನಕ್ಕೆ ಬೇಕಾಗುವ ಅನೇಕ ಉಪಯುಕ್ತ ವಿಷಯ ವಿವೇಚನೆ ಇಲ್ಲಿದೆ.

೩) ಶಾಂರ್ಗದೇವನ 'ಸಂಗೀತ ರತ್ನಾಕರ' : ಈ ಗ್ರಂಥವು ಸಂಗೀತ ಶಾಸ್ತ್ರವನ್ನು ಕುರಿತುದು.ಶಾಂರ್ಗದೇವನು ದೇವಗಿರಿ ಯಾದವಮನೆತನದ ಸಿಂಘಣರಾಜನ ಆಶ್ರಿತ ಸೋಢಲನೆಂಬವನ ಮಗ. ಇವನ ಪೂರ್ವಿಕರು ಕಾಶ್ಮೀರ ಪ್ರದೇಶಕ್ಕೆ ಸೇರಿದವರು. ಕರ್ನಾಟಕದಲ್ಲಿ ನೆಲಸಿ ಗ್ರಂಥರಚನೆ ಮಾಡಿದ್ದು ಒಂದು ವಿಶೇಷ. ಈ ಗ್ರಂಥದ ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ಛಂದಸ್ಸಿನ 'ಎಳೆ, ತ್ರಿಪದಿ, ಷಟ್ಪದಿಗಳ ವಿವರಣೆ ಬಂದಿದೆ. ಇವುಗಳನ್ನು ಹಾಡುವ ವಿಧಾನವನ್ನೂ ಇವುಗಳ ಸಾಮಾನ್ಯ ಲಕ್ಷಣಗಳನ್ನೂ ಇಲ್ಲಿ ಹೇಳಿದೆ. ಈ ಮಟ್ಟುಗಳು ಕರ್ನಾಟ ಭಾಷೆಗೆ ಸೇರಿದುವೆಂದೂ ಹೇಳಲಾಗಿದೆ. ಶಾಂರ್ಗದೇವನು 'ಮಾನಸೋಲ್ಲಾಸ' ವನ್ನೂ ಪರಿಶೀಲಿಸಿ ಅದರಿಂದ ನೆರವು ಪಡೆದಿರಬೇಕೆಂದು ತಿಳಿದುಬರುತ್ತದೆ.

ಜಯಕೀರ್ತಿ, ೩ನೆಯ ಸೋಮೇಶ್ವರ, ಶಾಂರ್ಗದೇವ ಈ ಮೂವರೂ ಸಂಸ್ಕೃತ ಶಾಸ್ತ್ರಗ್ರಂಥಕರ್ತರಾಗಿದ್ದರೂ ಕನ್ನಡನಾಡಿನಲ್ಲಿ ನೆಲಸಿ ವಿಶೇಷ ಆಸಕ್ತಿಯಿಂದ ಕನ್ನಡ ಛಂದಸ್ಸಿನ ವಿಷಯಗಳನ್ನು ಪ್ರತಿಪಾದಿಸಿದ್ದಾರೆ. ಇವರ ವಿಚಾರಗಳು 'ಛಂದೋಂಬುಧಿ'ಯ ವಿಚಾರಗಳಿಗೆ ಸರಿಹೊಂದುವಂಥವಾಗಿವೆ. ಛಂದೋಂಬುಧಿಯಲ್ಲಿ ಪಾಠಾಂತರಗಳ ಕ್ಲೇಶಗಳು ವಿಪುಲವಾಗಿರುವುದರಿಂದ ಅವುಗಳ ಪರಿಹಾರಕ್ಕೆ ಈ ಮೂವರ ಗ್ರಂಥಗಳ ಪರಿಶೀಲನೆಯಿಂದ ವಿಶೇಷ ನೆರವು ದೊರೆಯುತ್ತದೆ. ಅಲ್ಲದೆ ಈ ಮೂವರೂ 'ಛಂದೋಂಬುಧಿ' ಗೆ ಪೂರಕವಾಗುವ ಅನೇಕ ಅಂಶಗಳನ್ನೂ ಹೇಳಿದ್ದಾರೆಂಬುದೂ ಒಂದು ವಿಶೇಷಾಂಶ.

★★★

ಕೃತಿಕಾರರ ಪರಿಚಯ



ಪೂರ್ಣಹೆಸರು ಸೇತುರಾಮ ರಾಘವೇಂದ್ರ ಮಳಗಿ (ಎಸ್.ಆರ್.ಮಳಗಿ) ಜನ್ಮಸ್ಥಳ : ಬಿಜಾಪುರ ಜಿಲ್ಲೆಯ ಖ್ಯಾತವೆಂಬ ಗ್ರಾಮ. ಶೈಕ್ಷಣಿಕ ಪದವಿ ಕನ್ನಡ-ಸಂಸ್ಕೃತ ಎಂ.ಎ. (೧೯೩೭), ಬಿ.ಟಿ. (೧೯೪೦) ಮುಂಬಯಿ ವಿಶ್ವವಿದ್ಯಾಲಯ.

ಅಧ್ಯಾಪಕ ವೃತ್ತಿ : ನ್ಯೂ ಇಂಗ್ಲಿಷ್ ಹೈಸ್ಕೂಲ್, ಹುಬ್ಬಳ್ಳಿ (೧೯೩೮-೪೨), ಕನ್ನಡ ಲೆಕ್ಚರರ್, ರೀಡರ್-ಕರ್ನಾಟಕ ಕಾಲೇಜು ಧಾರವಾಡ (೧೯೪೨-೬೧); ಕನ್ನಡ ರೀಡರ್, ಸೆಂಟ್ರಲ್ ಕಾಲೇಜು ಹಾಗೂ ಬೆಂಗಳೂರು ವಿ.ವಿ. (೧೯೬೧-೯೯). ನಿವೃತ್ತಿಯ ನಂತರ ಪ್ರಾಂಶುಪಾಲ, ಲಾಲಬಹದ್ದೂರ್ ಶಾಸ್ತ್ರಿ ಕಾಲೇಜ್, ಸಾಗರ (ಶಿವಮೊಗ್ಗ) (೧೯೬೯-೭೧); ಪ್ರಾಧ್ಯಾಪಕ ಸೇಂಟ್ ಜಾನ್ಸ್ ಜ್ಯೂನಿಯರ್ ಕಾಲೇಜ್, ಬೆಂಗಳೂರು (೧೯೭೧-೭೩); ಯು.ಜಿ.ಸಿ ಪ್ರಾಧ್ಯಾಪಕ, ಬೆಂಗಳೂರು ವಿ.ವಿ. (೧೯೭೫-೭೯).

ಸಾಹಿತ್ಯ ಕೃತಿಗಳು : ಪ್ರಕಟಿತ : ಛಂದೋದರ್ಶನ ಬ್ರಹ್ಮರ್ಷಿ ದೈವರಾತ ಕೃತ; ವೈದಿಕ ಸಂಸ್ಕೃತದಿಂದ ಇಂಗ್ಲಿಷ್‌ಗೆ ಅನುವಾದಿತ ಬಿಡುಗಡೆಯ ಬೆಳ್ಳಿ (ಸ್ವಾತಂತ್ರ್ಯ ಸಂಗ್ರಾಮ ವಾಕ್ಯಮಾಣಿಕ್ಯಕೋಶ; ಹರಿಶ್ಚಂದ್ರ ಕಾವ್ಯಕಥೆ; ಕನ್ನಡ ಕವಿಕಾವ್ಯ ಪರಿಚಯ (ಇಂಗ್ಲಿಷಿನಲ್ಲಿ)-ಕೇಂದ್ರ ಸಾಹಿತ್ಯ ಅಕಾಡೆಮಿಯ ಎನ್‌ಸೈಕ್ಲೊಪೀಡಿಯ ಸಂಪುಟಕ್ಕಾಗಿ ಬರೆದುದು ; ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ-ಮರಾಠಿ ಜ್ಞಾನಕೋಶಕ್ಕಾಗಿ (ಡಾ. ಗೌರೀಶ ಕಾಯ್ಕಿಣಿಯವರಿಂದ ಮರಾಠಿಗೆ ಅನುವಾದಿತ). ಕನ್ನಡ ಎಂ.ಎ. ವರ್ಗದ ಅಧ್ಯಯನಕ್ಕೋಸ್ಕರ ಎಂಟು ಸಂಪುಟಗಳು-ಸಾಹಿತ್ಯ ವಿಮರ್ಶೆ, ವ್ಯಾಕರಣ, ಛಂದಸ್ ಶಾಸ್ತ್ರ , ಕಾವ್ಯಮೀಮಾಂಸೆ, ಭಾಷಾಶಾಸ್ತ್ರ ಇತ್ಯಾದಿ, ಕನ್ನಡ ಗ್ರಂಥ ಸಂಪಾದನಾಶಾಸ್ತ್ರ (ಬೆಂಗಳೂರು ವಿ.ವಿ. ಅಂಚೆ ತೆರಪಿನ ಯೋಜನೆಯನ್ವಯ); ವೀರಮಾತೆ ಗುತ್ತಲ ಗುರುಪಾದತಾಯಿ (ಜೀವನ ಚರಿತ್ರೆ); ಶ್ರೀ ಅರವಿಂದ-ಪ್ರವೇಶಿಕೆ; ಬಾಳದಾರಿಯಲಿ (ಕವಿತಾಸಂಕಲನ-೨೦೦೫);

ಸಂಪಾದಿತ ಕೃತಿಗಳು; ಕೇಶಿರಾಜನ ಶಬ್ದಮಣಿ ದರ್ಪಣ ಸಂಗ್ರಹಂ (೧೯೭೦); ಕವಿ-ಕಾವ್ಯದರ್ಶನ (೧೯೭೦); ಸೃಜನಶೀಲ ಪ್ರತಿಭೆ (ವ್ಯಕ್ತಿ ಚಿತ್ರಣ); ವಂಶವೃಕ್ಷ (ಕವನ ಸಂಗ್ರಹ); ಭೃಂಗನಾದ (ಕವನ ಸಂಗ್ರಹ)-೧೯೫೪-೫೯ ಇತ್ಯಾದಿ ಒಂಭತ್ತು ಸಾಹಿತ್ಯಕೃತಿಗಳು.

ಪತ್ರಿಕಾಸಂಪಾದನೆ ; ಪಾಂಡಿಚೆರಿಯ ಶ್ರೀ ಅರವಿಂದ ಸೊಸೈಟಿಯ 'ಅಖಿಲ ಭಾರತ ಪತ್ರಿಕೆ'ಯ ಪ್ರಧಾನ ಸಂಪಾದಕ (೧೯೭೧-೯೬).


ಸಾಹಿತ್ಯಿಕ ಪ್ರಶಸ್ತಿಗಳು : ವಿದ್ಯಾರ್ಥಿದಿಶೆಯಲ್ಲಿ ಮತ್ತು ಅನಂತರ ಹಲವಾರು ಪ್ರಬಂಧ ಸ್ಪರ್ಧೆಗಳ ಪ್ರಶಸ್ತಿಗಳೊಂದಿಗೆ ಅಖಿಲ ಕರ್ನಾಟಕ 'ವರ್ತ್ ಪ್ರೈಜ್' (೧೯೩೨); ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೧).

ವಿಳಾಸ : ಪ್ರೊ. ಎಸ್.ಆರ್. ಮಳಗಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು
೧೦೧೧, ೧ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - ೫೬೦ ೦೧೦
ದೂರವಾಣಿ: ೦೮೦-೨೩೫೨೯೪೮೪

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೮ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮